ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಇಂದು ಚಿತ್ರಸಂತೆ

ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಭಾನುವಾರ ಚಿತ್ರಸಂತೆ ನಡೆಯಲಿದ್ದು, ಕಲಾವಿದ ತನ್ನ ಕಲಾಕೃತಿಗೆ ಅಂತಿಮ ಸ್ಪರ್ಶ ನೀಡಿದರು



ಕಣಿವೆ ವ್ಯಾಪ್ತಿಯಲ್ಲಿ ಕೊಳಚೆ ನೀರು ನಿಯಂತ್ರಣಕ್ಕೆ ಪ್ರಥಮ ಹಂತದಲ್ಲಿ ಸಮಗ್ರ ಯೋಜನೆ

ವೃಷಭಾವತಿ: ಪುನಶ್ಚೇತನಕ್ಕೆ ಆರಂಭಿಕ ಹೆಜ್ಜೆ

● ಆರ್. ಮಂಜುನಾಥ್

ಬೆಂಗಳೂರು: ನಗರದ ಹೊರವಲಯಕ್ಕೆ ಹೊಂದಿಕೊಂಡಂತೆ ಹರಿಯುವ ಸುವರ್ಣಮುಖಿ ನದಿ ಪುನಶ್ಚೇತನಕ್ಕೆ ಕ್ರಮ ಕೈಗೊಂಡಿರುವಂತೆ ವೃಷಭಾವತಿ ನದಿ ಪುನಶ್ಚೇತನಕ್ಕೂ ಯೋಜನೆ ರೂಪಿಸಬೇಕು ಎಂಬ ಸರ್ಕಾರದ ಸೂಚನೆ ಮೇರೆಗೆ ಬಿಬಿಎಂಪಿ ಆರಂಭದ ಹೆಜ್ಜೆ ಇರಿಸಿದೆ.

ಶಾಲಿನಿ ರಜನೀಶ್ ಅವರು ಅಭಿವೃದ್ಧಿ ಆಯುಕ್ತರಾಗಿದ್ದಾಗ 2024ರ ಮೇ ತಿಂಗಳಲ್ಲಿ ಸುವರ್ಣಮುಖಿ ನದಿಯನ್ನು ಪುನಶ್ಚೇತನಗೊಳಿಸಲು ಎಲ್ಲ ಇಲಾಖೆಗಳ ಅಧಿಕಾರಿಗಳು ಸೇರಿದ ಸಮಿತಿಯನ್ನು ರಚಿಸಿದ್ದರು. 'ಸುವರ್ಣಮುಖಿ ನದಿ ಜಲಾನಯನ ಪುನಶ್ಚೇತನ ಯೋಜನೆ' ಜಾರಿಗೆ ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಪಿ.ಸಿ. ರೇ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿದ್ದರು. ಆ ಯೋಜನೆ ಕಾರ್ಯಗತವಾಗುತ್ತಿರುವ ಸಂದರ್ಭದಲ್ಲಿ, ಬಹುದಶಕಗಳಿಂದ ನಿರೀಕ್ಷಿಸಲಾಗಿದ್ದ ಬೆಂಗಳೂರಿನ ವೃಷಭಾವತಿ ನದಿ ಪುನಶ್ಚೇತನಕ್ಕೆ ಯೋಜನೆ ಸಿದ್ಧಪಡಿಸಲು ಸರ್ಕಾರ, ಬಿಬಿಎಂಪಿಗೆ ಸೂಚಿಸಿದೆ.

ಈ ಸೂಚನೆಯ ಹಿನ್ನೆಲೆಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನೇತೃತ್ವದಲ್ಲಿ ಬಿಬಿಎಂಪಿ ಹಿರಿಯ ಅಧಿಕಾರಿಗಳು, ಎಂಜಿನಿಯರ್‌ಗಳು, ಜಲಮಂಡಳಿ, ರಾಜ್ಯಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು, ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗಳ ಸಭೆ ಶನಿವಾರ ನಡೆದಿದೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಅಭಿವೃದ್ಧಿ ಆಗಿರುವ ಅಥವಾ ಆಗಿರದ ಕೆರೆಗಳಲ್ಲಿರುವ ನೀರು ಕುಡಿಯಲು ಅಥವಾ ಸ್ನಾನ ಮಾಡಲು ಯೋಗ್ಯವಾಗಿಲ್ಲ. ಸಂಸ್ಕರಣೆ ಮಾಡಿದ ನಂತರವೂ ಕುಡಿಯುವ ಗುಣಮಟ್ಟವನ್ನು ಹೊಂದಿಲ್ಲ. ಎಲ್ಲ ಕೆರೆಗಳು ಮಾಲಿನ್ಯ 'ಇ ದರ್ಜೆ'ಯಲ್ಲಿದ್ದು, ಯಾವುದಕ್ಕೂ ಬಳಸಲು ಯೋಗ್ಯವಲ್ಲ' ಎಂದು ಸಭೆಯಲ್ಲಿ ಪ್ರಸ್ತುತಪಡಿಸಿದ ವರದಿಯಲ್ಲಿ ವಿವರವಾಗಿ ತಿಳಿಸಲಾಗಿದೆ.

ವೃಷಭಾವತಿ ನದಿ ಅಥವಾ ಕಣಿವೆಯಲ್ಲಿ ಕುಡಿಯಲು ಯೋಗ್ಯವಾದ ನೀರು ಹರಿಸುವಂತೆ ಮಾಡಲಾಗಿದ್ದರೂ, ಮಾಲಿನ್ಯರಹಿತ ನೀರನ್ನು ಹರಿಸಿ ಅಂತರ್ಜಲ ಕಲುಷಿತವಾಗದಂತೆ ನಿರ್ವಹಣೆ ಮಾಡುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಎಲ್ಲ ರೀತಿಯಲ್ಲೂ ಸಾಧ್ಯವಾಗುವ ಸಮಗ್ರ ವರದಿಯನ್ನು ಇನ್ನೊಂದು ತಿಂಗಳಲ್ಲಿ ತಯಾರಿಸುವ ಜವಾಬ್ದಾರಿಯನ್ನು ಅಧಿಕಾರಿಗಳಿಗೆ ವಹಿಸಲಾಗಿದೆ.

ವೃಷಭಾವತಿ ಕಣಿವೆ ಮಾಲಿನ್ಯದಿಂದ ಮುಕ್ತವಾಗಬೇಕಾದರೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಾಚರಣೆ ಅತಿ ಪ್ರಮುಖವಾಗಿದೆ. ಆದ್ದರಿಂದ ವೃಷಭಾವತಿ ನದಿಯನ್ನು ಮಾಲಿನ್ಯ ಮುಕ್ತಗೊಳಿಸಲು ಸಮಗ್ರವಾದ ವರದಿ ಸಲ್ಲಿಸುವಂತೆ ಜಲಮಂಡಳಿಗೆ ಸೂಚಿಸಲಾಗಿದೆ.

56 ಕೆರೆಗಳಲ್ಲಿ 14 ಕೆರೆ ನಾಶ

ವೃಷಭಾವತಿ, ಕೋರಮಂಗಲ– ಚಲ್ಲಘಟ್ಟ, ಹೆಬ್ಬಾಳ ಹಾಗೂ ಅರ್ಕಾವತಿ ಕಣಿವೆ ನಗರದಲ್ಲಿವೆ. ನಾಲ್ಕು ಕಣಿವೆಗಳಲ್ಲಿ ವೃಷಭಾವತಿ ಕಣಿವೆ ಶೇ 32ರಷ್ಟು ವ್ಯಾಪ್ತಿ ಹೊಂದಿದೆ. ಈ ಕಣಿವೆ ವ್ಯಾಪ್ತಿಯಲ್ಲಿ 56 ಕೆರೆಗಳಿವೆ ಎಂಬುದು ಹಳೆಯ ಭೂದಾಖಲೆಗಳಲ್ಲಿವೆ ಎಂಬುದನ್ನು 'ವೃಷಭಾವತಿ ನದಿ ಪುನಶ್ಚೇತನ ಯೋಜನೆ'ಯ ಪ್ರಾಥಮಿಕ ವರದಿಯಲ್ಲಿ ದಾಖಲಿಸಲಾಗಿದೆ.

ಸಾಣೆಗುರುವನಹಳ್ಳಿ, ಶಿವನಹಳ್ಳಿ ಸೇರಿದಂತೆ 14 ಕೆರೆಗಳು ವೃಷಭಾವತಿ ಕಣಿವೆ ವ್ಯಾಪ್ತಿಯಲ್ಲಿ ಪ್ರಸ್ತುತ ಮುಚ್ಚಿಹೋಗಿವೆ. ನೀರಿರುವ 42 ಕೆರೆಗಳನ್ನು ಗುರುತಿಸಲಾಗಿದ್ದರೂ, ಅರಮನೆ ಮೈದಾನ ಕೆರೆ, ಕೆಂಪಾಂಬುದಿ ಕೆರೆ, ಬಸವಪ್ಪನಕಟ್ಟೆ, ಶ್ರೀಗಂಧದ ಕಾವಲು, ವರಾಹಸಂದ್ರ ಕೆರೆಗಳ ಸರ್ವೆ ಕಾರ್ಯದ ಮಾಹಿತಿಗಳೇ ವರದಿಯಲ್ಲಿಲ್ಲ.

ಪಿಳ್ಳಪ್ಪನಹಳ್ಳಿ, ನಾಗರಬಾವಿ, ಕೆಂಚೇನಹಳ್ಳಿ, ಹೊಸಕೆರೆಹಳ್ಳಿ, ಯಡಿಯೂರು, ಗೌಡನಪಾಳ್ಯ, ಬಿಕಾಸಿಪುರ, ಗುಬ್ಬಲಾಳು, ಮೈಲಸಂದ್ರ, ಬ್ಯಾಪನಪಾಳ್ಯ ಕುಂಟೆ ಕೆರೆಗಳಲ್ಲಿ ನೀರಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ. ಈ ಕೆರೆಗಳಲ್ಲಿ ಹಲವು ಕೆರೆಗಳನ್ನು ಬಿಬಿಎಂಪಿ ಅಭಿವೃದ್ಧಿ ಮಾಡಿದೆ. ಆದರೆ, ಕಂದಾಯ ಇಲಾಖೆಯ ಎಡವಟ್ಟಿನಿಂದ ಸರ್ವೆಗಳು, ದಾಖಲೆಗಳು ಲಭ್ಯವಾಗುತ್ತಿಲ್ಲ.

ವೃಷಭಾವತಿ ನದಿ/ ಕಣಿವೆ ಮಾಹಿತಿ

39.53 ಕಿ.ಮೀ; ಬಿಬಿಎಂಪಿ ವ್ಯಾಪ್ತಿಯಲ್ಲಿ ನದಿ ಹರಿವು

326 ಕಾಲುವೆ; ಪಾಲಿಕೆ ವ್ಯಾಪ್ತಿಯಲ್ಲಿರುವ ಕಣಿವೆಗಳ ಸಂಖ್ಯೆ


327 ಕಿ.ಮೀ ಬಿಬಿಎಂಪಿ ವ್ಯಾಪ್ತಿಯಲ್ಲಿ ಕಣಿವೆಗಳ ಒಟ್ಟು ಉದ್ದ

42 ಕೆರೆಗಳು ಪಾಲಿಕೆ ವ್ಯಾಪ್ತಿಯಲ್ಲಿ ಕಣಿವೆ ಅಚ್ಚುಕಟ್ಟು ಪ್ರದೇಶದಲ್ಲಿರುವವು

192.70 ಚ.ಕಿ.ಮೀ; ಬಿಬಿಎಂಪಿ ವ್ಯಾಪ್ತಿಯಲ್ಲಿನ ನದಿ ಅಚ್ಚುಕಟ್ಟು ಪ್ರದೇಶ

19.8 ಕಿ.ಮೀ ಬಿಬಿಎಂಪಿ ವ್ಯಾಪ್ತಿಯಿಂದ ಬೈರಮಂಗಲ ಜಲಾಶಯಕ್ಕೆ ನದಿ ಹರಿವು

ವೃಷಭಾವತಿ ನದಿ/ ಕಣಿವೆ ನಕ್ಷೆ



ವೃಷಭಾವತಿ ಕಣಿವೆ ಹರಿವು

14.04 ಕಿ.ಮೀ ಸ್ಯಾಂಕಿ ಕೆರೆಯಿಂದ ಬೆಂಗಳೂರು ವಿಶ್ವವಿದ್ಯಾಲಯ

14.04 ಕಿ.ಮೀ ಗೊರಗುಂಟೆ ಪಾಳ್ಯದಿಂದ (ಪೀಣ್ಯ ಮೆಟ್ರೊ ನಿಲ್ದಾಣ) ಬೆಂಗಳೂರು ವಿಶ್ವವಿದ್ಯಾಲಯ

11.45 ಕಿ.ಮೀ ಬೆಂಗಳೂರು ವಿಶ್ವವಿದ್ಯಾಲಯದಿಂದ ಕೆಂಗೇರಿವರೆಗೆ (ನೈಸ್ ರಸ್ತೆ)

58.88 ಚದರ ಕಿ.ಮೀ ಅಚ್ಚುಕಟ್ಟು ಪ್ರದೇಶ

32.85 ಚದರ ಕಿ.ಮೀ ಅಚ್ಚುಕಟ್ಟು ಪ್ರದೇಶ

160 ಚದರ ಕಿ.ಮೀ ಅಚ್ಚುಕಟ್ಟು ಪ್ರದೇಶ

ಸಮಗ್ರ ಯೋಜನೆ ರೂಪಿಸಲು ಸೂಚನೆ

'ವೃಷಭಾವತಿ ಕಣಿವೆಗೆ ಕೊಳಚೆ ನೀರು ಸೇರಿ ಕಲುಷಿತ ಆಗುವುದನ್ನು ತಪ್ಪಿಸುವ ಸಲುವಾಗಿ ಸಮಗ್ರ ಯೋಜನೆ ರೂಪಿಸಲು ಪಾಲಿಕೆ, ಮಾಲಿನ್ಯ ನಿಯಂತ್ರಣ ಮಂಡಳಿ, ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ತಿಳಿಸಿದ್ದಾರೆ.

'ವೃಷಭಾವತಿ ಕಣಿವೆಗೆ ಎಲ್ಲೆಲ್ಲಿ ಕೊಳಚೆ ನೀರು ಬರುತ್ತಿದೆ ಎಂಬುದನ್ನು ಪರಿಶೀಲಿಸಿ ಪಟ್ಟಿ ಮಾಡಬೇಕು. ಅಲ್ಲದೆ, ನದಿ ಪಕ್ಕದಲ್ಲಿ ಎಷ್ಟು ಅಪಾರ್ಟ್‌ಮೆಂಟ್‌ಗಳಿವೆ, ಅವುಗಳಲ್ಲಿ ಎಷ್ಟು ಕೊಳಚೆ ನೀರು ನದಿಗೆ ನೇರವಾಗಿ ಬರುತ್ತಿದೆ ಎಂಬುದನ್ನು ಪರಿಶೀಲಿಸಬೇಕು. ತ್ಯಾಜ್ಯನೀರು ಸಂಸ್ಕರಣೆ ಘಟಕಗಳು (ಎಸ್‌ಟಿಪಿ) ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪರಿಶೀಲನೆ ನಡೆಸಲೂ ಸೂಚಿಸಲಾಗಿದೆ' ಎಂದರು. 'ಜಲಮಂಡಳಿ ವತಿಯಿಂದ ಎಷ್ಟು ಎಸ್‌ಟಿಪಿ ಕಾರ್ಯನಿರ್ವಹಿಸುತ್ತಿವೆ. ಎಷ್ಟು ಹೊಸ ಎಸ್‌ಟಿಪಿಗಳ ಅಗತ್ಯವಿದೆ ಎಂಬುದರ ಮಾಹಿತಿ ಜೊತೆಗೆ, ಕೊಳಚೆ ನೀರು ಪೈಪ್ ಮೂಲಕವೇ ಎಸ್‌ಟಿಪಿಗೆ ಹೋಗುವಂತೆ ಎಲ್ಲೆಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂಬ ಮಾಹಿತಿ ನೀಡಲು ಹೇಳಲಾಗಿದೆ' ಎಂದರು. 'ವೃಷಭಾವತಿ ಕಣಿವೆಗೆ ಹೊಂದಿಕೊಂಡಂತೆ 42 ಕೆರೆಗಳಿದ್ದು, ಅವುಗಳಲ್ಲಿರುವ ಒತ್ತುವರಿಯನ್ನು ಸಮೀಕ್ಷೆ ನಡೆಸಿ, ಜಿಲ್ಲಾಧಿಕಾರಿಯಿಂದ ಆದೇಶ ಪಡೆದು ಒತ್ತುವರಿ ತೆರವುಗೊಳಿಸಲು ಹೇಳಲಾಗಿದೆ' ಎಂದರು.

ಸುದ್ದಿ 2 ನಿಮಿಷ

'ಕುರ್ಚಿಗಾಗಿ ತಂತ್ರ, ಜನ ಅತಂತ್ರ'

ಬೆಂಗಳೂರು: ಕಾಂಗ್ರೆಸ್ ಸರ್ಕಾರದಲ್ಲಿ ಒಬ್ಬರು ಕುರ್ಚಿ ಉಳಿಸಿಕೊಳ್ಳಲು, ಇನ್ನೊಬ್ಬರು ಕುರ್ಚಿ ಕಿತ್ತುಕೊಳ್ಳಲು ತಂತ್ರ ಹೆಣೆಯುತ್ತಿದ್ದಾರೆ. ಊಟ, ರಹಸ್ಯ ಸಭೆಗಳ ಮೂಲಕ ಕಾಲಹರಣ ಮಾಡುತ್ತಾ ಜನರ ಹಿತ ಮರೆತಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, ಇಬ್ಬರ ನಡುವೆ ಅತಂತ್ರವಾಗಿರುವ ಮಂತ್ರಿಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಕಸರತ್ತು ನಡೆಸಿದ್ದಾರೆ. ರೈತರ ಕಷ್ಟ ಕೇಳುವವರೇ ಇಲ್ಲವಾಗಿದೆ ಎಂದಿದ್ದಾರೆ.



ಮಂಡ್ಯದಲ್ಲಿ ಭತ್ತ ಖರೀದಿ ಕೇಂದ್ರಗಳು ಆರಂಭವಾಗದ ಕಾರಣ ರೈತರು ಬೆಂಬಲ ಬೆಲೆಗಿಂತ ಕಡಿಮೆ ದರಕ್ಕೆ ದಲ್ಲಾಳಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಕ್ವಿಂಟಲ್ ಭತ್ತಕ್ಕೆ ₹3 ಸಾವಿರ ಬೆಂಬಲ ಬೆಲೆ ನಿಗದಿಯಾಗಿದ್ದರೂ, ಖರೀದಿ ಕೇಂದ್ರಗಳನ್ನು ತೆರೆದಿಲ್ಲ. ಹಾಗಾಗಿ, ನಷ್ಟ ಅನುಭವಿಸುತ್ತಿದ್ದಾರೆ. ಕೃಷಿ ಸಚಿವರ ತವರಿನಲ್ಲೇ ಈ ಸ್ಥಿತಿ ಎದುರಾಗಿದೆ ಎಂದಿದ್ದಾರೆ.

ಕಲ್ಯಾಣ ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆಯಾದ ತೊಗರಿ ಬೆಲೆಯೂ ಇಳಿಯುತ್ತಿದೆ. ತೊಗರಿ ಖರೀದಿ ಕೇಂದ್ರಕ್ಕಾಗಿ ರೈತರು ಎದುರು ನೋಡುತ್ತಿದ್ದಾರೆ. 1.82 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದ ತೊಗರಿ ಬೆಳೆ ನಾಶವಾಗಿದ್ದರೂ, ರಾಜ್ಯ ಸರ್ಕಾರ ಪರಿಹಾರದ ಭರವಸೆ ನೀಡುತ್ತಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಚಕಾರ ಎತ್ತುತ್ತಿಲ್ಲ. ಈ ಸರ್ಕಾರ ಬದಲಾಗುವವರೆಗೂ ಜನರಿಗೆ ನೆಮ್ಮದಿ ಇಲ್ಲ ಎಂದು ಟೀಕಿಸಿದ್ದಾರೆ.

ನಗರದಲ್ಲಿ ಮತ್ತೆ ಹೆಚ್ಚಿದ ಚಳಿ

ಬೆಂಗಳೂರು: ನಗರದಲ್ಲಿ ವಾರದಿಂದ ಗರಿಷ್ಠ ಹಾಗೂ ಕನಿಷ್ಠ ತಾಪಮಾನ ಕುಸಿತ ಕಂಡಿದೆ. ಇದರಿಂದಾಗಿ ಚಳಿ ಹೆಚ್ಚಳವಾಗುತ್ತಿದೆ.

ವಿವಿಧೆಡೆ ಮುಂಜಾನೆ ದಟ್ಟವಾದ ಮಂಜು ಕಾಣಿಸಿಕೊಳ್ಳುತ್ತಿದೆ. ಕೆಲವೆಡೆ ಶೀತ ಗಾಳಿ ಬೀಸುತ್ತಿದೆ. ಪರಿಣಾಮ ತಾಪಮಾನ ತಗ್ಗುತ್ತಿದೆ. ವಾರದಿಂದ ಗರಿಷ್ಠ ಉಷ್ಣಾಂಶ 27 ಡಿಗ್ರಿ ಸೆಲ್ಸಿಯಸ್ ವರದಿಯಾಗುತ್ತಿದ್ದರೆ, ಕನಿಷ್ಠ ಉಷ್ಣಾಂಶ 14 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ.

ಡಿಸೆಂಬರ್ ಮೂರನೇ ವಾರದಲ್ಲಿ ಗರಿಷ್ಠ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದ್ದರೆ, ಕನಿಷ್ಠ ಉಷ್ಣಾಂಶ 15.5 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿತ್ತು. ಬಳಿಕ ಮಳೆ-ಬಿಸಿಲಿನಿಂದಾಗಿ ತಾಪಮಾನ ಏರಿಕೆಯಾಗುವ ಜತೆಗೆ ಚಳಿಯೂ ಕಡಿಮೆಯಾಗಿತ್ತು. ಈ ತಿಂಗಳು ಆರಂಭದಲ್ಲಿಯೇ ಚಳಿ ಹೆಚ್ಚಿದ್ದು, ಹವಾಮಾನ ಇಲಾಖೆ ಪ್ರಕಾರ 'ಲಾ-ನಿನಾ' ಪರಿಸ್ಥಿತಿಯಿಂದಾಗಿ ಈ ತಿಂಗಳು ಚಳಿಯ ತೀವ್ರತೆ ಹೆಚ್ಚುವ ಸಾಧ್ಯತೆಯಿದೆ.

ಮುಂದಿನ ಒಂದು ವಾರ ಗರಿಷ್ಠ ಉಷ್ಣಾಂಶ ಮತ್ತಷ್ಟು ಕುಸಿತವಾಗುವ ಸಂಭವದ ಬಗ್ಗೆ ಮುನ್ಸೂಚನೆ ನೀಡಿರುವ ಇಲಾಖೆ, ಗರಿಷ್ಠ ಉಷ್ಣಾಂಶ 25ರಿಂದ 24 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 11ರಿಂದ 10 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯುವ ಸಂಭವವಿದೆ ಎಂದು ತಿಳಿಸಿದೆ.

ಬಿಎಂಟಿಸಿ ಪ್ರಯಾಣ ದರ ಪರಿಷ್ಕರಣೆ ಪಟ್ಟಿ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್‌ಗಳ ಪ್ರಯಾಣ ದರ ಶೇ 15ರಷ್ಟು ಏರಿಕೆಯಾಗಿದ್ದು, ಜ.5ರ ಮುಂಜಾನೆಯಿಂದ ಹೊಸ ದರಗಳು ಜಾರಿಯಾಗಲಿವೆ. ರಾತ್ರೋರಾತ್ರಿ ಎಲ್ಲ ಇಟಿಎಂ ಮಷಿನ್‌ಗಳನ್ನು ಅಪ್‌ಡೇಟ್ ಮಾಡಲಾಗುವುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸಾಮಾನ್ಯ ಬಸ್‌ಗಳ ಟಿಕೆಟ್ ದರ

ಸ್ಟೇಜ್	ಕಿ.ಮೀ.	ಇಲ್ಲಿವರೆಗಿನ ದರ	ಪರಿಷ್ಕೃತ ದರ
1	2	₹5	₹6
2	4	₹10	₹12
3	6	₹15	₹18
4	8	₹20	₹23
5	10	₹20	₹23
6	12	₹20	₹24
7	14	₹25	₹30
8	16	₹25	₹30
9	18	₹30	₹35
10	20	₹30	₹35
11	22	₹30	₹35
12	24	₹30	₹35
13	26	₹30	₹35
14	28	₹30	₹38
15	30	₹30	₹38
16	32	₹30	₹38
17	34	₹30	₹38
18	36	₹30	₹38
19	38	₹35	₹40
20	40	₹35	₹40
21	42	₹35	₹40
22	44	₹35	₹40
23	46	₹35	₹40
24	48	₹35	₹43
25	50	₹35	₹43
26	52	₹35	₹43
27	54	₹40	₹43
28	56	₹40	₹43
29	58	₹40	₹46
30	60	₹40	₹46
31	62	₹40	₹46
32	64	₹40	₹46
33	66	₹40	₹46

'ಉ.ಕ: ಸಿಕೆಪಿ ಶಾಖೆ ಪ್ರಾರಂಭಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಚಿತ್ರಕಲಾ ಪರಿಷತ್ತಿನ (ಸಿಕೆಪಿ) ಶಾಖೆಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಪ್ರಾರಂಭಿಸುವುದಾದರೆ ಅಗತ್ಯ ಸ್ಥಳಾವಕಾಶ ಒದಗಿಸಲಾಗುವುದು' ಎಂದು ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ ಭರವಸೆ ನೀಡಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಐವರು ಕಲಾವಿದರಿಗೆ 'ಚಿತ್ರಕಲಾ ಸಮ್ಮಾನ್ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

'ಚಿತ್ರಕಲಾ ಪರಿಷತ್ತು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಇದರ ಕಾರ್ಯವ್ಯಾಪ್ತಿ ವಿಸ್ತರಿಸಲು ಶಾಖೆಗಳನ್ನು ಪ್ರಾರಂಭಿಸುವುದಾದರೆ ಗದಗದಲ್ಲಿ ಸ್ಥಳಾವಕಾಶ ಕಲ್ಪಿಸಲಾಗುತ್ತದೆ. ಗದಗವು ಸಂಗೀತ ಸೇರಿ ವಿವಿಧ ಕಲೆಗಳಿಗೆ ಕೊಡುಗೆ ನೀಡಿದೆ. ಆದ್ದರಿಂದ ಪರಿಷತ್ತಿನ ಶಾಖೆ ಪ್ರಾರಂಭಕ್ಕೆ ಗದಗ ಅರ್ಹವಾಗಿದೆ' ಎಂದು ಹೇಳಿದರು.

> **ಸಾಂಸ್ಕೃತಿಕ ಲೋಕದಲ್ಲಿ ದೃಶ್ಯಕಲೆ ಕಡೆಗಣಿಸಲ್ಪಡುತ್ತಿದೆ. ಅಕ್ಷರದ ತಾಯಿಯಾಗಿರುವ ದೃಶ್ಯಕಲೆಯ ಸಂರಕ್ಷಣೆ ಅಗತ್ಯ**
> **ಎಂ.ಎಸ್. ಮೂರ್ತಿ,** ಕಲಾವಿದ

'ಪರಿಷತ್ತು ಕಲಾವಿದರಿಗೆ ಕಲಾಕೃತಿಗಳ ಪ್ರದರ್ಶನಕ್ಕೆ ವೇದಿಕೆಗಳನ್ನು ನಿರ್ಮಿಸಿಕೊಡುವ ಜತೆಗೆ ಯಾವುದೇ ಶುಲ್ಕ ಪಡೆಯದೇ ಮಾರಾಟಕ್ಕೂ ಅವಕಾಶ ನೀಡುತ್ತಿದೆ. ಕಲೆ ಹಾಗೂ ಕಲಾವಿದರ ಪ್ರೋತ್ಸಾಹಕ್ಕೆ ಇದು ಸಹಕಾರಿಯಾಗಿದೆ. ಚಿತ್ರಕಲಾ ಪರಿಷತ್ತನ್ನು ಪ್ರವಾಸಿ ತಾಣವಾಗಿ ಗುರುತಿಸಲಾಗಿದೆ. ಇಲ್ಲಿಗೆ ಈ ಹಿಂದೆ ಇದ್ದ ಇಲಾಖೆಯ ಬಸ್ ಸೇವೆಯನ್ನು ಪುನಃ ಪ್ರಾರಂಭಿಸಲಾಗುತ್ತದೆ. ಚಿತ್ರಸಂತೆಗೂ ಇಲಾಖೆ ವತಿಯಿಂದ ಅಗತ್ಯ ಪ್ರೋತ್ಸಾಹ ನೀಡಲಾಗುವುದು' ಎಂದು ಅವರು ಭರವಸೆ ನೀಡಿದರು.

ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, 'ಪರಿಷತ್ತಿನ ಶಾಖೆಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಪ್ರಾರಂಭಿಸಲು ಸರ್ಕಾರ ನೆರವು ಒದಗಿಸಬೇಕಿದೆ. ಶಿಗ್ಗಾವಿ, ಕಲಬುರಗಿ, ಬಾಗಲಕೋಟೆಯಲ್ಲಿಯೂ ಶಾಖೆ ಪ್ರಾರಂಭಿಸಬೇಕೆಂಬ ಪ್ರಸ್ತಾವವಿದೆ' ಎಂದರು.

'ಈ ಬಾರಿಯ ಚಿತ್ರಸಂತೆಗೆ 3 ಸಾವಿರಕ್ಕೂ ಅಧಿಕ ಕಲಾವಿದರು ಅರ್ಜಿ ಸಲ್ಲಿಸಿದ್ದರು. ಅಷ್ಟು ಮಂದಿಗೆ ಭೌತಿಕ ಪ್ರದೇಶಕ್ಕೆ ಅವಕಾಶ ಕಲ್ಪಿಸುವುದು ಕಷ್ಟಸಾಧ್ಯವಾದ್ದರಿಂದ ಆನ್‌ಲೈನ್ ವೇದಿಕೆಯಲ್ಲಿಯೂ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ' ಎಂದು ಹೇಳಿದರು.

ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯದ (ಎನ್‌ಜಿಎಂಎ) ಮಹಾನಿರ್ದೇಶಕ ಸಂಜೀವ್ ಕಿಶೋರ್ ಗೌತಮ್ ಉಪಸ್ಥಿತರಿದ್ದರು.

ಎನ್‌ಆರ್‌ಐ ಒಕ್ಕಲಿಗ ವೇದಿಕೆ ಅಗತ್ಯ: ಆರತಿ ಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವದಾದ್ಯಂತ ಒಕ್ಕಲಿಗ ಸಮುದಾಯವನ್ನು ಸಂಪರ್ಕಿಸುವ ಮತ್ತು ಬೆಂಬಲಿಸುವಂತಹ ಎನ್‌ಆರ್‌ಐ ಒಕ್ಕಲಿಗ ವೇದಿಕೆಯನ್ನು ನಿರ್ಮಿಸುವ ಅಗತ್ಯವಿದೆ ಎಂದು ಅನಿವಾಸಿ ಭಾರತೀಯ ಫೋರಂ ಉಪಾಧ್ಯಕ್ಷೆ ಆರತಿ ಕೃಷ್ಣ ಹೇಳಿದರು.


ಆರತಿ ಕೃಷ್ಣ

ಉದ್ಯಮಿ ಒಕ್ಕಲಿಗ ಎಕ್ಸ್‌ಪೊ 2025ರ ಕಾರ್ಯಕ್ರಮದಲ್ಲಿ ಶನಿವಾರ ಭಾಗವಹಿಸಿ ಅವರು ಮಾತನಾಡಿದರು.

ವಿದೇಶದಲ್ಲಿ ನೆಲಸಿರುವ ಒಕ್ಕಲಿಗ ಸಮುದಾಯಗಳಿಗೆ ಮೀಸಲಾದ ಸೆಲ್ ರಚಿಸಬೇಕು. ಇದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಭಾರತದ ಹೊರಗಿರುವ ಒಕ್ಕಲಿಗರ ನಿಖರ ಸಂಖ್ಯೆಯನ್ನು ತಿಳಿದುಕೊಳ್ಳಲು ಸಹಾಯ ಮಾಡಲಿದೆ. ಅನಿವಾಸಿ ಒಕ್ಕಲಿಗರನ್ನು ಸಂಪರ್ಕಿಸಲು, ಅಗತ್ಯ ಸಲಹೆಗಳನ್ನು ನೀಡಲು ಮತ್ತು ಮಾಹಿತಿ ಕಲೆ ಹಾಕಲು ಸಂಪನ್ಮೂಲವಾಗಿ ಕಾರ್ಯನಿರ್ವಹಿಸಲು ಉಪಯೋಗವಾಗಲಿದೆ ಎಂದು ಅವರು ಹೇಳಿದರು.

'ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಎನ್‌ಆರ್‌ಐ ಫೋರಂ ಸ್ಥಾಪಿಸಲಾಗಿತ್ತು. ನಾನು ಉಪಾಧ್ಯಕ್ಷಳಾಗಿದ್ದೆ. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ಅಡಿಯಲ್ಲಿ ಎನ್‌ಆರ್‌ಐ ಸಮಿತಿಯನ್ನು ಪುನಃ ಸಕ್ರಿಯಗೊಳಿಸಲಾಗಿದೆ. ಈ ನಿಟ್ಟಿನಲ್ಲಿ ಎನ್‌ಆರ್‌ಐ ಕನ್ನಡಿಗರ ಅಗತ್ಯತೆಯನ್ನು ಪರಿಹರಿಸಲು ಶಾಶ್ವತವಾಗಿ ಮೀಸಲಾದ ಸಚಿವಾಲಯವನ್ನು ಸೃಷ್ಟಿಸುವ ಅಗತ್ಯವಿದೆ' ಎಂದು ತಿಳಿಸಿದರು.

ಮಹಿಳಾ ಉದ್ಯಮಿಗಳ ವಿಚಾರ ಸಂಕಿರಣದಲ್ಲಿ ರಾಯಲ್ ಕಾನ್ಕರ್ಡ್ ಇಂಟರ್‌ನ್ಯಾಷನಲ್ ಸ್ಕೂಲ್ ಮ್ಯಾನೇಜಿಂಗ್ ಟ್ರಸ್ಟಿ ಶ್ರುತಿ ಚೇತನ್ ಗೌಡ, ದೆಹಲಿ ಪಬ್ಲಿಕ್ ಇಂಟರ್‌ನ್ಯಾಷನಲ್ ಸ್ಕೂಲ್ ಚೇರ್ ಪರ್ಸನ್ ಸುನೀತಾ ಗೌಡ, ಪ್ರಯಾಗ್ ಮಾಂಟೆಸ್ಸರಿಯ ಸ್ಥಾಪಕರಾದ ಅಮಿತಾ ಪ್ರಶಾಂತ್, ಆರ್‌ಆರ್‌ಆರ್ ಕ್ರಿಯೇಷನ್ಸ್ ನಿರ್ದೇಶಕಿ ಸ್ವಪ್ನಾ ಕೃಷ್ಣ, ಎಕ್ಸ್‌ಪೊ ಸಂಘಟಕಿ ಪುಣ್ಯವತಿ ಸಿ. ನಾಗರಾಜ್, ಇಂದಿರಾ ಫುಡ್ಸ್ ಸಂಸ್ಥಾಪಕಿ ಸಿ.ಇಂದಿರಾ ಚನ್ನೇಗೌಡ, ಪವಿತ್ರಾ ಹಳೆಕೋಟೆ, ಶಿಲ್ಪಾ ಗೌಡ, ಸವಿತಾ ರಮೇಶ್ ಉಪಸ್ಥಿತರಿದ್ದರು.

ಐಎಎಸ್ ಅಧಿಕಾರಿಗಳಿಗೆ ಹೆಚ್ಚುವರಿ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂವರು ಐಎಎಸ್ ಅಧಿಕಾರಿಗಳಿಗೆ ಹೆಚ್ಚುವರಿ ಹೊಣೆಗಾರಿಕೆ ವಹಿಸಿ ಹಾಗೂ ಓರ್ವ ಐಎಎಸ್ ಅಧಿಕಾರಿಯನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ಹೆಚ್ಚುವರಿ ಹೊಣೆಗಾರಿಕೆ: ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಏಕ್‌ರೂಪ್ ಕೌರ್ ಅವರಿಗೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕೆಪಿಎಸ್‌ಸಿ ಕಾರ್ಯದರ್ಶಿ ರಮಣ್‌ದೀಪ್ ಚೌಧರಿ ಅವರಿಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸರ್ಕಾರದ ಕಾರ್ಯದರ್ಶಿ, ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಕಾರ್ಯಕಾರಿ ನಿರ್ದೇಶಕ ಪಿ. ಕಾಂತರಾಜು ಅವರಿಗೆ ಡಾ.ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರವೀಣ್ ಪಿ. ಬಾಗೇವಾಡಿ ಅವರನ್ನು ಕೋಲಾರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಮರಗಳ ಬುಡಕ್ಕೆ ಬೆಂಕಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮೈಸೂರು ರಸ್ತೆಗೆ ಹೊಂದಿಕೊಂಡಂತಿರುವ ಅರಣ್ಯ ನೌಕರರ ಬಡಾವಣೆಯ ರಸ್ತೆ ಬದಿಯಲ್ಲಿರುವ ಮರಗಳ ಬುಡಗಳಿಗೆ ಕಸ ಹಾಕಿ, ಬೆಂಕಿ ಇಡಲಾಗುತ್ತದೆ. ಹತ್ತಾರು ಮರಗಳು ಇದರಿಂದ ನಾಶವಾಗುತ್ತಿವೆ.

ಮೈಸೂರು ರಸ್ತೆಯ ಜಯರಾಮ್ ದಾಸ್ ಕಾರ್ಖಾನೆ ಬಳಿಯ ರೈಲ್ವೆಗೇಟ್ ಮೂಲಕ ಬಡಾವಣೆಗೆ ಹೋಗುವ ಹಾದಿಯ ಎರಡೂ ಬದಿ ಮರಗಳ ಬುಡಕ್ಕೆ ಕಸ ಹಾಕಿ ಬೆಂಕಿ ಹಚ್ಚುತ್ತಿದ್ದಾರೆ. ಇದರಿಂದ ಮರಗಳು ಸುಟ್ಟು-ಹೋಗುತ್ತಿವೆ ಎಂದು ಸ್ಥಳೀಯರು ದೂರಿದರು.


'ಮರಗಳು ಬೆಳೆಸಿ, ಪರಿಸರ ಉಳಿಸಿ, ಆರೋಗ್ಯವಂತ ಸಮಾಜ ನಿರ್ಮಾಣ ಮಾಡಿ ಎಂದು ಸರ್ಕಾರ, ಬಿಬಿಎಂಪಿ, ಅರಣ್ಯ ಇಲಾಖೆ ದೊಡ್ಡ ಮಟ್ಟದಲ್ಲಿ ಜಾಹಿರಾತು ನೀಡಿ ಪ್ರಚಾರ ಪಡೆಯುತ್ತವೆ. ಆದರೆ, ರಸ್ತೆಬದಿಯಲ್ಲಿ ಕಸ ಹಾಕಿ ಬೆಂಕಿ ಹಾಕುವವರ ಮೇಲೆ ಕ್ರಮ ಕೈಗೊಳ್ಳುವುದಿಲ್ಲ' ಎಂದು ಆರೋಪಿಸಿದರು.

'ರಾತ್ರೋರಾತ್ರಿ ಕಸ, ಒಣಗಿದ ಕಡ್ಡಿ, ಬಟ್ಟೆ, ಪ್ಲಾಸ್ಟಿಕ್ ತಂದು ಮರಗಳ ಬಳಿ ಸುರಿಯಲಾಗುತ್ತಿದೆ. ನಂತರ ಬೆಂಕಿ ಹಚ್ಚಿ ಹೋಗುತ್ತಾರೆ' ಎಂದು ಶ್ಯಾಮಲ, ಜೆ.ರಮ್ಯಾ ಆರೋಪಿಸಿದರು.

ಬಿಬಿಎಂಪಿ ಅರಣ್ಯ ವಿಭಾಗದ ಜಗದೀಶ್ ಮಾತನಾಡಿ, 'ರಸ್ತೆ ಬದಿ ಕಸ ಹಾಕಬಾರದು ಎಂದು ಹಲವು ಬಾರಿ ತಿಳಿಸಿದ್ದರೂ ಅದು ನಿಂತಿಲ್ಲ. ಕಸ ಸುರಿಯುವುದರಿಂದ ಕಿಡಿಗೇಡಿಗಳು ಬೆಂಕಿ ಹಾಕುತ್ತಿದ್ದಾರೆ' ಎಂದು ಹೇಳಿದರು.


ಅರಣ್ಯ ನೌಕರರ ಬಡಾವಣೆಯಲ್ಲಿ ಮರಗಳ ಬುಡಕ್ಕೆ ಕಸ ಸುರಿದು ಬೆಂಕಿ ಹಚ್ಚಿರುವುದು

ನಗರದಲ್ಲಿ ಇಂದು



ಉಸ್ತಾದ್ ಜಾಕಿರ್ ಹುಸೇನ್ ಅವರ ಸ್ಮರಣೆ 'ಲಯ ಶ್ರದ್ಧಾಂಜಲಿ': ಭಾಗವಹಿಸುವವರು: ತೇಜಸ್ವಿನಿ ಅನಂತಕುಮಾರ್, ರೇಖಾ ಗೋವಿಂದ್, ಪ್ರವೀಣ್ ಗೋಡ್ಖಿಂಡಿ, ಮೃತ್ಯುಂಜಯ ಶೆಟ್ಟರ್, ಲಯ ಗೌರವ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ವಿದ್ಯಾರ್ಥಿಗಳು, ಗಾನ ಗೌರವ: ನಾಗೇಂದ್ರ ರಾಣಾಪೂರ್ ಮತ್ತು ಗುರುಕುಮಾರ ಪಂಚಾಕ್ಷರೇಶ್ವರ ಕಲಾವೇದಿಕೆ ವಿದ್ಯಾರ್ಥಿಗಳು, ನೃತ್ಯ ಗೌರವ: ಪೂರ್ಣ ಆಚಾರ್ಯ ಮತ್ತು ಅಲಂಕೃತ ಸೆಂಟರ್ ಫಾರ್ ಪರ್‌ಫಾರ್ಮಿಂಗ್ ಆರ್ಟ್ಸ್‌ನ ವಿದ್ಯಾರ್ಥಿಗಳು, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಅಬಾಕಸ್–ಬೌದ್ಧಿಕ ಅಂಕಗಣಿತ ಸ್ಪರ್ಧೆ, ಬುದ್ಧಿಮತ್ತೆಯ ಪ್ರದರ್ಶನ: ಅತಿಥಿಗಳು: ಐಶ್ವರ್ಯ ಶಿಂದೋಗಿ, ವಿಜಯಲಕ್ಷ್ಮಿ, ಪ್ರಿಯಾ ಎಸ್., ಆಯೋಜನೆ: ಎಸ್‌ಐಪಿ ಅಬಾಕಸ್, ಸ್ಥಳ: ಮಾಣಿಕ್ಯ ಹಾಲ್, ಚಾಮರವಜ್ರ ಅರಮನೆ ಮೈದಾನ, ಬೆಳಿಗ್ಗೆ 8ರಿಂದ

ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9ರಿಂದ


ಗೀತಾ ಜಯಂತಿ ಅಂಗವಾಗಿ '32ನೇ ವರ್ಷದ ಶ್ರೀಮದ್ ಭಗವದ್ಗೀತಾ ಪಾರಾಯಣ ಯಜ್ಞ': ಆಯೋಜನೆ: ವಿಶ್ವ ಹಿಂದೂ ಪರಿಷತ್, ಸ್ಥಳ: ದಕ್ಷಿಣ ಅಯೋಧ್ಯ ಮೈದಾನ, ಕೋದಂಡರಾಮ ದೇವಾಲಯ ರಸ್ತೆ, ಕಾಚರಕಾನಹಳ್ಳಿ, ಹೆಣ್ಣೂರು ರಸ್ತೆ, ಬೆಳಿಗ್ಗೆ 9ರಿಂದ

ಎ. ರಾಜಮ್ಮ ಕೇಶವಮೂರ್ತಿ ಅವರಿಗೆ 'ರಾಜ–ನಾದನಮನಾಂಜಲಿ' ಗೌರವ ಸಮರ್ಪಣೆ: ಅತಿಥಿಗಳು: ಬಿ.ಕೆ. ಅನಂತರಾಮ್, ಕೆ.ಎಸ್. ಶ್ರೀಲಕ್ಷ್ಮಿ, ಆಯೋಜನೆ: ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಬೆಳಿಗ್ಗೆ 9.30

ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ 2025 ಸಮಾರೋಪ ಸಮಾರಂಭ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಅತಿಥಿಗಳು: ಡಾ.ಸಿ. ಎನ್. ಅಶ್ವತ್ಥನಾರಾಯಣ, ಸದಾನಂದಗೌಡ, ಶೋಭಾ ಕರಂದ್ಲಾಜೆ, ಆರ್. ಅಶೋಕ, ಆಯೋಜನೆ: ಫಸ್ಟ್ ಸರ್ಕಲ್, ಸ್ಥಳ: ಗೇಟ್ ಸಂಖ್ಯೆ 4, ಗಾಯತ್ರಿ ಗ್ರ್ಯಾಂಡ್ ಮತ್ತು ಗಾಯತ್ರಿ ವೃಕ್ಷ ಅರಮನೆ ಮೈದಾನ, ಬೆಳಿಗ್ಗೆ 10ರಿಂದ

ಕೆ.ಎಸ್. ನರಸಿಂಹಸ್ವಾಮಿ ಅವರ ಸಂಸ್ಮರಣಾರ್ಥ 'ಮಲ್ಲಿಗೆಯ ಕವಿಗೆ ಕಾವ್ಯ ನಮನ': ಚಾಲನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಅಂಬರೀಷ್ ಜಿ., ಉಪಸ್ಥಿತಿ: ಸತೀಶ್ ಕಂಭಾವಿ ಮಠ, ರಾಮಲಿಂಗೇಶ್ವರ, ಧರ್ಮರಾಜ್, ಆಯೋಜನೆ: ಪುಷ್ಕರ್ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

ಸಾರ್ಥಕ ಸಂಭ್ರಮ–2025: ಅತಿಥಿಗಳು: ಡಾ.ಸಿ. ಎನ್. ಮಂಜುನಾಥ್, ವಿ. ಷಡಕ್ಷರಿ, ಟಿ.ಎಸ್. ನಾಗಾಭರಣ, ಎಸ್. ಎನ್. ಮೂರ್ತಿ, ಸುಚೇಂದ್ರಪ್ರಸಾದ್, ವೈ.ಕೆ. ಮುದ್ದುಕೃಷ್ಣ, ವಿ. ಮನೋಹರ್, ಎಸ್.ಎನ್. ಗೋಪಿನಾಥ್, ಕೆ.ಆರ್. ರಂಗನಾಥ್, ವಿ.ಬಿ. ಕೌಂಡಿನ್ಯ, ಆಯೋಜನೆ: ಪ್ರೇರಣ ರಿಸೋರ್ಸ್ ಸೆಂಟರ್, ಸ್ಥಳ: ಆರ್.ವಿ. ಟೀಚರ್ಸ್ ಕಾಲೇಜಿನ ಸಭಾಂಗಣ, ಎರಡನೇ ಬ್ಲಾಕ್ ಜಯನಗರ, ಲಾಲ್‌ಬಾಗ್ ಮೆಟ್ರೊ ನಿಲ್ದಾಣದ ಹತ್ತಿರ, ಬೆಳಿಗ್ಗೆ 10.30ರಿಂದ


ನಾಗಾಭರಣ

ಬೆಂಗಳೂರಿನಲ್ಲಿರುವ ಮಲೆನಾಡಿಗರ 21ನೇ ವರ್ಷದ ವಾರ್ಷಿಕ ಕ್ರೀಡಾಕೂಟ–2025: ಉದ್ಘಾಟನೆ: ಜಿ.ಎ. ಪುರುಷೋತ್ತಮಗೌಡ, ಆಯೋಜನೆ: ಸಹ್ಯಾದ್ರಿ ಸಂಘ ಬೆಂಗಳೂರು, ಸ್ಥಳ: ಒಕ್ಕಲಿಗರ ಸಂಘ ಪ್ರೌಢಶಾಲೆಯ ಆವರಣ, ಶ್ರೀಗಂಧಕಾವಲ್, ಸುಂಕದಕಟ್ಟೆ, ಬೆಳಿಗ್ಗೆ 10ರಿಂದ

ಸಂವಿಧಾನ ದಿನಾಚರಣೆ: ಉದ್ಘಾಟನೆ: ಬಿ.ಎಸ್. ಯಡಿಯೂರಪ್ಪ, ಅಧ್ಯಕ್ಷತೆ: ಎಂ. ಮಲ್ಲೇಶ್ ಬಾಬು, ಪ್ರಾಸ್ತಾವಿಕ ನುಡಿ: ವೈ. ಸಂಪಂಗಿ, ಅತಿಥಿಗಳು: ಛಲವಾದಿ ನಾರಾಯಣಸ್ವಾಮಿ, ಎ. ನಾರಾಯಣಸ್ವಾಮಿ, ಎನ್. ಮಹೇಶ್, ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ರೇಣುಕಾಚಾರ್ಯ, ಹರತಾಳು ಹಾಲಪ್ಪ, ಎಸ್. ಮುನಿಸ್ವಾಮಿ, ಶೈಲೇಂದ್ರ ಬೆಲ್ದಾಳೆ, ಆಯೋಜನೆ: ಕರ್ನಾಟಕ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಸಮಿತಿ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10 (ವೇದಿಕೆ ಕಾರ್ಯಕ್ರಮ ಮಧ್ಯಾಹ್ನ 12.30ಕ್ಕೆ)

ವಿದ್ಯಾರ್ಥಿವೇತನ ವಿತರಣೆ, ಪ್ರತಿಭಾ ಪುರಸ್ಕಾರ ಸಮಾರಂಭದ ಉದ್ಘಾಟನೆ: ಬಾಬು ಹಿರಣ್ಣಯ್ಯ, ಅತಿಥಿಗಳು: ರವಿಶಂಕರ್, ವೆಂಕಟಕೃಷ್ಣ, ಅಧ್ಯಕ್ಷತೆ: ಎಚ್.ವಿ. ಸತ್ಯನಾರಾಯಣ, ಆಯೋಜನೆ: ಹೊಯ್ಸಳ ಕರ್ನಾಟಕ ಸಂಘ, ಸ್ಥಳ: ಹೊಯ್ಸಳ ಕರ್ನಾಟಕ ಸಂಘದ ಆವರಣ, ಮೂರನೇ ಅಡ್ಡರಸ್ತೆ, ಹೊಂಬೇಗೌಡನಗರ, ಬೆಳಿಗ್ಗೆ 10.30

ಹೊಸ ವರ್ಷ, ಸಂಕ್ರಾಂತಿ ಕವಿಗೋಷ್ಠಿ: ಅತಿಥಿಗಳು: ಗಾಯತ್ರಿ ಕೇಶವ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30


ಶ್ರೀಸಿದ್ಧಲಿಂಗೇಶ್ವರ ಜಯಂತಿ, ತೋಂಟದ ಸಿದ್ಧಲಿಂಗಶ್ರೀ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಚರಮೂರ್ತಿ ಸಚ್ಚಿದಾನಂದ ಸ್ವಾಮೀಜಿ, ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಪ್ರಶಸ್ತಿ ಪ್ರದಾನ: ವಿ. ಸೋಮಣ್ಣ, ಪ್ರಶಸ್ತಿ ಪುರಸ್ಕೃತರು: ಮುಮ್ಮಡಿ ನಿರ್ವಾಣ ಸ್ವಾಮೀಜಿ, ಅಧ್ಯಕ್ಷತೆ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಬಿ.ಎಸ್. ಯಡಿಯೂರಪ್ಪ, 'ಯೋಗಸ್ಥ' ಪುಸ್ತಕ ಬಿಡುಗಡೆ: ಎಂ.ಬಿ. ಪಾಟೀಲ, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಬೆಳಿಗ್ಗೆ 10.30ರಿಂದ

ಆಂಗ್ಲ ಶೀಘ್ರಲಿಪಿ ಪಿತಾಮಹ ಸರ್ ಐಸಾಕ್ ಪಿಟ್‌ಮನ್ ಅವರ ಜಯಂತಿ, ಕನ್ನಡ ಶೀಘ್ರಲಿಪಿ ಸಂಶೋಧ ಫಾರೆವರೆಂಡ್ ಬಿ. ಲೂಥಿ ಅವರ ಸಂಸ್ಮರಣೆ, ಸಂಸ್ಥಾಪನಾ ದಿನಾಚರಣೆ: ಅತಿಥಿ: ವಿ. ಶ್ರೀಕಂಠಮೂರ್ತಿ, ಅಧ್ಯಕ್ಷತೆ: ಶಿವಣ್ಣ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಶೀಘ್ರಲಿಪಿಗಾರರ ಸಂಘ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಳಿಗ್ಗೆ 11.30

ಸಾಮೂಹಿಕ ಸತ್ಯನಾರಾಯಣ ಪೂಜೆ: ಸಾನ್ನಿಧ್ಯ: ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಸ್ವಾಮೀಜಿ, ಅತಿಥಿಗಳು: ಆರ್.ಬಿ. ರಾಯ್ಕರ್, ಸಂತೋಷ ಮಧುಕರ್ ಶೇಟ್, ಜಿತೇಂದರ್ ರೇವಣಕರ್, ಅಧ್ಯಕ್ಷತೆ: ಮಹೇಶ್ ಜಿ. ಶೇಟ್, ಆಯೋಜನೆ: ಬೆಂಗಳೂರು ದೈವಜ್ಞ ಯುವಕ ಸಂಘ, ಸ್ಥಳ: ಧರ್ಮಸ್ಥಳ ಮಂಜುನಾಥಸ್ವಾಮಿ ಕಲ್ಯಾಣ ಮಂಟಪ, ದೊಡ್ಡಗಣಪತಿ ದೇವಸ್ಥಾನದ ಪಕ್ಕ, ದೊಡ್ಡಬಸವಣ್ಣ ರಸ್ತೆ, ಬಸವನಗುಡಿ, ಬೆಳಿಗ್ಗೆ 11.30



ಸ್ವರಾಂಜಲಿ: ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ಸಿರಿ ಗಿರೀಶ್, ಪಿಟೀಲು: ಅಮಿತ್ ರಾವ್, ಮೃದಂಗ: ಕೃಷ್ಣ ವೇದಾಂತ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯನ: ವಾಣಿ ಮರದೂರ್, ಹಾರ್ಮೋನಿಯಂ: ಗುಂಡಪ್ಪ ಕೆ., ತಬಲಾ: ವಿಕಾಸ್ ನರೇಗಲ್, ಉಪಸ್ಥಿತಿ:ಮೋಹನ್ ಕುಮಾರ್, ಪುರುಷೋತ್ತಮ, ಡಿ.ಸಿ. ಯತೀಶ್, ಬೆಳಕವಾಡಿ ಆರ್. ಶ್ರೀಧರ್, ಆಯೋಜನೆ: ಆಕಾಂಕ್ಷ, ಸಂಗೀತ ಸಂವಾದ ಮ್ಯೂಸಿಕ್, ಸ್ಥಳ: ಡಾ. ಅಂಬೇಡ್ಕರ್ ಕ್ರೀಡಾಂಗಣ, ಬಸವೇಶ್ವರನಗರ, ಸಂಜೆ 5ರಿಂದ



44ನೇ ವರ್ಷದ ನೃತ್ಯೋತ್ಸವ: ಅತಿಥಿಗಳು: ಎ. ರಾಧಾಕೃಷ್ಣ ರಾಜು, ಸುದರ್ಶನ ಸಂಪತ್, ಆಯೋಜನೆ: ಪದ್ಮಾವತಿ ಕಲಾನಿಕೇತನ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ, ವೈಯಾಲಿ ಕಾವಲ್, ಸಂಜೆ 6

ಸಾಧನೋತ್ಸವ–2025: ರಾಮಾಯಣ ನೃತ್ಯ ರೂಪಕ ಪ್ರದರ್ಶನ: ಭಾವನ, ಉದ್ಘಾಟನೆ: ಸಿ. ಸೋಮಶೇಖರ್, ಅನುರಾಧ ಶ್ರೀಧರ್, ಅತಿಥಿಗಳು: ವೈ.ಕೆ. ಸಂಧ್ಯಾಶರ್ಮ, ಬಿ.ಎಂ. ಉಮೇಶ್ ಕುಮಾರ್, ಜಿ.ಎಸ್. ಲತ ಜಯಪ್ರಕಾಶ್, ಆಯೋಜನೆ: ಸಾಧನ ಡಾನ್ಸ್ ಸೆಂಟರ್, ಸ್ಥಳ: ವಿವೇಕ ಸಭಾಂಗಣ, ಯುವಪಥ, ನಾಲ್ಕನೇ ಬ್ಲಾಕ್ ಜಯನಗರ, ಸಂಜೆ 6.30

ಬೃಹತ್ ಮೊಗವೀರ ಸಮಾವೇಶ, ಸಾಂಸ್ಕೃತಿಕ ಉತ್ಸವ, ಸುವರ್ಣ ಪಥ ಸಮಾರೋಪ, ಪ್ರಶಸ್ತಿ ಪುರಸ್ಕಾರ, ಸ್ಮರಣ ಸಂಚಿಕೆ ಬಿಡುಗಡೆ: ನೃತ್ಯೋತ್ಸವ: ಶುಭಾ ಧನಂಜಯ, ಭಾವನ ರಾಮಣ್ಣ, ವಿಸ್ಮಯ ಜಾದು: ಪ್ರಕಾಶ್ ಹೆಮ್ಮಾಡಿ, ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಅತಿಥಿಗಳು: ಶಿವರಾಜ ತಂಗಡಗಿ, ಮಂಕಾಳ ಎಸ್. ವೈದ್ಯ, ಪ್ರಾಸ್ತಾವಿಕ: ಜಿ. ಶಂಕರ್, ಪಿ.ಸಿ. ಮೋಹನ್, ಆಯೋಜನೆ: ಮೊಗವೀರ ಸಂಘ, ಸ್ಥಳ: ವೈಟ್ ಪೆಟಲ್ಸ್ ಗೇಟ್ ನಂ. 03, ಅರಮನೆ ಮೈದಾನ, ಮಧ್ಯಾಹ್ನ 2ರಿಂದ

'ಬಿ.ಆರ್. ನಾಗಲತಾ ಸ್ಮರಣಾರ್ಥವಾಗಿ ಪ್ರಶಸ್ತಿ' ಪ್ರದಾನ, ನಾಲ್ಕನೇ ವಿಶ್ವಚೇತನ ಕನ್ನಡ ಸಾಹಿತ್ಯ ಸಮ್ಮೇಳನ: ಸಮ್ಮೇಳನಾಧ್ಯಕ್ಷ: ಬಿ. ರಮೇಶ್, ಉದ್ಘಾಟನೆ: ಅರಳುಮಲ್ಲಿಗೆ ಪಾರ್ಥಸಾರಥಿ, ಅಧ್ಯಕ್ಷತೆ: ಆರ್. ವಾದಿರಾಜು, ಅತಿಥಿಗಳು: ಎಸ್. ಅಂಬುಜಾ ಪ್ರಕಾಶ್, ಜೆ. ಪಟ್ಟಮ್ಮಣ್ಣಿ, ಎಸ್.ಪಿ. ಮನೋಹರ್, ವಾಸುದೇವ ಅಗ್ನಿಹೋತ್ರಿ, ಆಯೋಜನೆ: ವಿಶ್ವಚೇತನ ಬಳಗ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 2.30

'ತತ್ತ್ವಧಾರ' ಪ್ರವಚನ ಮಾಲಿಕೆ: 'ಶ್ರೀಶಂಕರ ಭಗವತ್ಪಾದರು' ಪ್ರವಚನ: ಜಿ. ಶಿವರಾಮ ಅಗ್ನಿಹೋತ್ರಿ, ಆಯೋಜನೆ: ಧರ್ಮಚಕ್ರ ಟ್ರಸ್ಟ್, ವಿಷ್ಣುಗುಪ್ತ ವಿಶ್ವವಿದ್ಯಾಪೀಠಮ್ ಶೋಧ ಕೇಂದ್ರ, ಸ್ಥಳ: ಶ್ರೀರಾಮಾಶ್ರಮ ಗಿರಿಗನಗರ, ಸಂಜೆ 5.30

ಅನಿಲ್ ಗುನ್ನಾಪೂರ್ ಅವರ 'ಸರ್ವೆ ನಂಬರ್–97' ಪುಸ್ತಕ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ರಘುನಾಥ ಚ.ಹ., ಅತಿಥಿಗಳು: ಕರೀಗೌಡ, ಜ.ನಾ. ತೇಜಶ್ರೀ, ಆಯೋಜನೆ: ನ್ಯಾಯ ಸ್ಪಂದನ ಬೆಂಗಳೂರು, ಓದು ಗೆಳೆಯರ ಬಳಗ ಬಾಗಲಕೋಟೆ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30


ಮೂಡ್ನಾಕೂಡು ಚಿನ್ನಸ್ವಾಮಿ

ವಾರ್ಷಿಕೋತ್ಸವ: 'ಭಕ್ತ ನಾಗಮಹಾಶಯ' ಹರಿಕಥೆ: ಎಸ್.ಪಿ. ಗುರುದಾಸ್, ತಬಲಾ: ಅಭಯ್ ದಾಮ್ಲೆ, ಹಾರ್ಮೋನಿಯಂ: ರಮೇಶ್ ಹೆಬ್ಬಾರ್, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣಮಠ, ಬಸವನಗುಡಿ, ಸಂಜೆ 5.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಭಾನುವಾರ, ಜನವರಿ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 5 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಹೊಸಕೋಟೆ
ದಮ್ ಬಿರಿಯಾನಿ
ಲೋಕದೊಳಗಿಂದ ಬಂದ
ನುಡಿಚಿತ್ರ



ಪಟಾಕಿ ಕಾರ್ಖಾನೆ ಸ್ಫೋಟ: 6 ಸಾವು 9
ಸರಕು ಸಾಗಣೆ ಸಾಧನೆ ಸೂಚ್ಯಂಕ ಬಿಡುಗಡೆ
ಮಸೀದಿ ನಿರ್ಮಾಣಕ್ಕೆ ಹಿಂದೂ, ಕ್ರೈಸ್ತರ ನೆರವು 4
ಕರ್ನಾಟಕಕ್ಕೆ 'ಸಾಧಕ' ಸ್ಥಾನ 8

39 ಚಾರಣ ಪಥಗಳನ್ನು ಗುರುತಿಸಿದ ರಾಜ್ಯ ಅರಣ್ಯ ಇಲಾಖೆ • ಪರಿಸರವಾದಿಗಳಿಂದ ತೀವ್ರ ವಿರೋಧ

ಕಾಳಿ ರಕ್ಷಿತಾರಣ್ಯದಲ್ಲಿ ಚಾರಣಕ್ಕೆ ದಾರಿ


• ಮಂಜುನಾಥ ಹೆಬ್ಬಾರ್

ನವದೆಹಲಿ: ಉತ್ತರ ಕನ್ನಡ ಜಿಲ್ಲೆಯ ಕಾಳಿ ಹುಲಿ ಸಂರಕ್ಷಣಾ ಪ್ರದೇಶದಲ್ಲಿ ಅರಣ್ಯವಾಸಿಗಳನ್ನು ಸ್ಥಳಾಂತರಿಸಿ ಹುಲಿಗಳಿಗೆ ಮಾನವ ಚಟುವಟಿಕೆರಹಿತ ಪ್ರದೇಶ ಸೃಷ್ಟಿಸಿದ್ದೇವೆ ಎಂದು ಬಿಂಬಿಸಿಕೊಂಡಿದ್ದ ಅರಣ್ಯ ಇಲಾಖೆಯು ಪ್ರವಾಸೋದ್ಯಮ ಅಭಿವೃದ್ಧಿ ಹೆಸರಿನಲ್ಲಿ 39 ಚಾರಣ ಪಥಗಳನ್ನು ಗುರುತಿಸಿದೆ. ಅರಣ್ಯ ಇಲಾಖೆಯ ಈ ನಡೆಗೆ ಪರಿಸರವಾದಿಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

'2024-34ರ ಕರಡು ಹುಲಿ ಸಂರಕ್ಷಣಾ ಯೋಜನೆ'ಯನ್ನು ಹುಲಿ ಯೋಜನೆಯ ಹಿಂದಿನ ನಿರ್ದೇಶಕ ಮರಿಯಾ ಕ್ರಿಸ್ತು ರಾಜ ಸಿದ್ಧಪಡಿಸಿ ಅನುಮೋದನೆಗಾಗಿ ಅರಣ್ಯ ಇಲಾಖೆಗೆ ಕಳುಹಿಸಿದ್ದರು. ಇದಕ್ಕೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಸಹಮತ ವ್ಯಕ್ತಪಡಿಸಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ (ಎನ್‌ಟಿಸಿಎ) ಸಲ್ಲಿಸಿದ್ದಾರೆ. ಪ್ರಾಧಿಕಾರದ ಅನುಮತಿ ಸಿಕ್ಕ ಬಳಿಕ ಹುಲಿ ಕಾಡಿನಲ್ಲಿ ಚಾರಣಕ್ಕೆ 'ರಹದಾರಿ' ಸಿಗಲಿದೆ.

ಸಂರಕ್ಷಿತ ಪ್ರದೇಶದ ಕುಂಬಾರವಾಡ ವಲಯದಲ್ಲಿ ಹೊಸದಾಗಿ 20 ಚಾರಣ ಪಥಗಳನ್ನು ಗುರುತು ಮಾಡಲಾಗಿದೆ.

4ನೇ ಪುಟ ನೋಡಿ



ಅರಣ್ಯವಾಸಿಗಳನ್ನು ಸ್ಥಳಾಂತರ ಮಾಡಿದ ಸುಳಾವಳಿ ಗ್ರಾಮವಿದ್ದ ಪ್ರದೇಶ
ಆಧಾರ: ರಾಜ್ಯ ಅರಣ್ಯ ಇಲಾಖೆ ವೆಬ್‌ಸೈಟ್

ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಾಡಿಗೆ ಹಾನಿ ಮಾಡುತ್ತಿರುವುದು ಅರಣ್ಯ ಇಲಾಖೆ ಅಧಿಕಾರಿಗಳೇ ಹೊರತು ಜನರಲ್ಲ. ಕಳೆದ ಕೆಲವು ವರ್ಷಗಳಲ್ಲಿ ಅರಣ್ಯ ಇಲಾಖೆ ಕೈಗೊಂಡ ಕ್ರಮಗಳು ಅರಣ್ಯ ನಾಶಕ್ಕೆ ಕಾರಣವಾಗಿವೆ. ಹುಲಿ ಸಂರಕ್ಷಿತ ಪ್ರದೇಶದಲ್ಲಿ ಚಾರಣಕ್ಕೆ ಅವಕಾಶ ಮಾಡಿ ಕೊಟ್ಟಿರುವುದು ಅಕ್ಷಮ್ಯ. ಇದರ ವಿರುದ್ಧ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ಆಕ್ಷೇಪಣೆ ಸಲ್ಲಿಸುತ್ತೇವೆ.

ರವೀಂದ್ರ ರೇಡ್ಕರ್, ಸಂಸ್ಥಾಪಕ ಅಧ್ಯಕ್ಷ, ಸಂಜೀವಿನಿ ಸೇವಾ ಟ್ರಸ್ಟ್

ಹುಲಿ ಯೋಜನೆ ಮಾರ್ಗಸೂಚಿಗಳ ಪ್ರಕಾರ ವನವಾಸಿಗಳು ಸ್ಥಳಾಂತರಗೊಂಡು ಬಿಟ್ಟುಹೋದ ಅರಣ್ಯಗಳಲ್ಲಿ ಪ್ರವಾಸೋದ್ಯಮಕ್ಕೆ ಅವಕಾಶವಿಲ್ಲ. ಕರಡು ಯೋಜನೆಯ ಲೋಪದೋಷ ಗುರುತಿಸಿ ಎನ್‌ಟಿಸಿಎಗೆ ದೂರು ಸಲ್ಲಿಸುತ್ತೇವೆ

ಚೇತನ್ ಕುಮಾರ್, ಕುಂಬಾರವಾಡಿ ನಿವಾಸಿ

ಇ.ಡಿ ಸೋಗಿನಲ್ಲಿ ನುಗ್ಗಿ ₹30 ಲಕ್ಷ ದೋಚಿದರು

ಪ್ರಜಾವಾಣಿ ವಾರ್ತೆ

ವಿಟ್ಲ (ದಕ್ಷಿಣ ಕನ್ನಡ): ಆರು ಜನರ ತಂಡವೊಂದು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಸೋಗಿನಲ್ಲಿ ಬಂಟ್ವಾಳ ತಾಲ್ಲೂಕಿನ ಕೊಳ್ನಾಡು ಗ್ರಾಮದ ನಾರ್ಶದ ಬೀಡಿ ಉದ್ಯಮಿ ಸುಲೇಮಾನ್ ಅವರ ಮನೆಗೆ ತೆರಳಿದ್ದು, ಪರಿಶೀಲನೆ ನಡೆಸುವ ನೆಪದಲ್ಲಿ ₹30 ಲಕ್ಷ ನಗದು ಹಾಗೂ ಐದು ಮೊಬೈಲ್‌ಗಳೊಂದಿಗೆ ಪರಾರಿಯಾಗಿದೆ.

'ತಮಿಳುನಾಡಿನ ನೋಂದಣಿ ಸಂಖ್ಯೆ ಹೊಂದಿದ್ದ ಕಾರಿನಲ್ಲಿ ಆರು ಮಂದಿ ಅಪರಿಚಿತರು ಶುಕ್ರವಾರ ರಾತ್ರಿ ಬಂದರು. ತಮ್ಮನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳೆಂದು ಪರಿಚಯಿಸಿಕೊಂಡರು. ಮನೆಯನ್ನು ಪರಿಶೀಲನೆ ನಡೆಸಲು ಆದೇಶವಾಗಿದೆ ಎಂದು ತಿಳಿಸಿ ರಾತ್ರಿ 8.10ರ ಸುಮಾರಿಗೆ ಮನೆ ಒಳಗೆ ಬಂದರು. ಮನೆಯಲ್ಲಿದ್ದ 5 ಮೊಬೈಲ್ ಫೋನ್‌ಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಬಳಿಕ ಮನೆಯನ್ನು ಹುಡುಕಾಡಿದರು ಎಂದು ಸುಲೇಮಾನ್ ಅವರ ಮನೆಯವರು ತಿಳಿಸಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಮನೆಯ ಕೊಠಡಿಯೊಂದರ ಕಪಾಟಿನಲ್ಲಿ ವ್ಯವಹಾರಕ್ಕಾಗಿ ಇಟ್ಟಿದ್ದ ₹25 ಲಕ್ಷದಿಂದ ₹30 ಲಕ್ಷ ನಗದನ್ನು ಪಡೆದುಕೊಂಡ ಅಪರಿಚಿತರು, 'ಇಷ್ಟೊಂದು ಹಣವನ್ನು ನಿಮ್ಮಲ್ಲಿ ಇಟ್ಟುಕೊಳ್ಳಲು ಅವಕಾಶವಿಲ್ಲ. ನಿಮ್ಮನ್ನು ಬಂಧಿಸಿ ಕಸ್ಟಡಿ ತೆಗೆದುಕೊಳ್ಳುತ್ತೇವೆ' ಎಂದು ತಿಳಿಸಿದರು. ರಾತ್ರಿ 10.30 ಗಂಟೆ ಸುಮಾರಿಗೆ ಮನೆಯಿಂದ ಹೊರಟರು. ಮನೆಯಲ್ಲಿ ಪತ್ತೆಯಾದ ಹಣಕ್ಕೆ ಸೂಕ್ತ ದಾಖಲೆಗಳನ್ನು ನೀಡಿ, ಬೆಂಗಳೂರಿನಲ್ಲಿರುವ ಕಚೇರಿಯಿಂದ ಪಡೆದುಕೊಳ್ಳುವಂತೆ ಹೇಳಿ ಹಣದೊಂದಿಗೆ ಹೊರಟು ಹೋದರು ಎಂದು ಆ ಮನೆಯವರು ಮಾಹಿತಿ ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕೃತ್ಯ ನಡೆದ ಮನೆಗೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್. ಶನಿವಾರ ಭೇಟಿ ನೀಡಿ ಪರಿಶೀಲಿಸಿದರು. 'ತಂಡವು ಭೇಟಿ ನೀಡಿದ ಸಂದರ್ಭದಲ್ಲಿ ಮನೆಯಲ್ಲಿ ಸುಲೇಮಾನ್, ಅವರ ಪತ್ನಿ, ಮಗ ಹಾಗೂ ಸೊಸೆ ಮಾತ್ರ ಇದ್ದರು.

4ನೇ ಪುಟ ನೋಡಿ

ಬಸ್ ಪ್ರಯಾಣ ದರ ಹೆಚ್ಚಳ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ಪ್ರಯಾಣ ದರ ಏರಿಕೆ ಎಲ್ಲ ನಾಲ್ಕು ನಿಗಮಗಳಲ್ಲಿ ಶನಿವಾರ (ಜ.4) ಮಧ್ಯರಾತ್ರಿಯಿಂದಲೇ ಜಾರಿಯಾಗಿದೆ.



ಬಸ್‌ಗಳ ಟಿಕೆಟ್ ದರವನ್ನು ಶೇ 15ರಷ್ಟು ಏರಿಸಲು ರಾಜ್ಯ ಸಚಿವ ಸಂಪುಟ ಸಭೆ ಗುರುವಾರ ಒಪ್ಪಿಗೆ ನೀಡಿತ್ತು. ಜ.4ರ ಮಧ್ಯರಾತ್ರಿ 12 ಗಂಟೆಯ ಬಳಿಕ (ಜ.5) ಹೊರಡುವ ಬಸ್‌ಗಳಿಗೆ ಅನ್ವಯವಾಗಿದೆ. ಬೆಂಗಳೂರು ನಗರದಲ್ಲಿ ವಿಮಾನ ನಿಲ್ದಾಣಕ್ಕೆ ಸಂಚರಿಸುವ ಬಿಎಂಟಿಸಿ ಬಸ್‌ಗಳನ್ನು ಹೊರತುಪಡಿಸಿ (₹37 ಹೆಚ್ಚಳ) ಉಳಿದವುಗಳಲ್ಲಿ ಕನಿಷ್ಠ ₹1 ಮತ್ತು ಗರಿಷ್ಠ ₹8 ಹೆಚ್ಚಳವಾಗಿದೆ. ಮೊದಲ ಸ್ಟೇಜ್‌ಗೆ ಸದ್ಯ ₹5 ದರ ಇದ್ದು, ಈಗ ₹6 ಆಗಿದೆ. ಎರಡನೇ ಸ್ಟೇಜ್‌ನಿಂದ ದರ ಇದೇ ಮಾದರಿಯಲ್ಲಿ ಹೆಚ್ಚಾಗಿದೆ. ₹10 ಇದ್ದಿದ್ದು ₹12, ₹20 ಇದ್ದಿದ್ದು ₹23, ₹25 ಇದ್ದಿದ್ದು ₹28, ₹30 ಇದ್ದಿದ್ದು ₹ 32 ಆಗಿದೆ.

4ನೇ ಪುಟ ನೋಡಿ

ಎಲ್ಲ ಬಸ್‌ಗಳಿಗೂ ಅನ್ವಯ

ಸಾಮಾನ್ಯ, ವೇಗದೂತ ಬಸ್‌ಗಳ ಟಿಕೆಟ್ ದರ ಏರಿಕೆಯನ್ನು ಸರ್ಕಾರ ನಿರ್ಧರಿಸುತ್ತದೆ. ಪ್ರತಿಷ್ಠಿತ ಬಸ್‌ಗಳ ಪ್ರಯಾಣ ದರ ಏರಿಕೆಯನ್ನು ನಿಗಮಗಳ ಮಟ್ಟದಲ್ಲಿಯೇ ನಿರ್ಧಾರವಾಗುತ್ತದೆ. ಆದರೂ, ಶೇ 15 ಬೆಲೆ ಏರಿಕೆ ಎಲ್ಲ ಬಸ್‌ಗಳಿಗೂ ಅನ್ವಯವಾಗಲಿದೆ.

'ಐಷಾರಾಮಿ ಬಸ್‌ಗಳ ಟಿಕೆಟ್ ದರವನ್ನು ಹೆಚ್ಚಿಸದೇ ಐದು ವರ್ಷಗಳಾಗಿವೆ. ಹಾಗಾಗಿ ಅವುಗಳ ದರಗಳು ಸಾಮಾನ್ಯ ಬಸ್‌ಗಳ ಜೊತೆಗೇ ಆಗಲಿವೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಹೇಳಿದರು.



ಪ್ರಿಯಾಂಕ್ ನಿವಾಸಕ್ಕೆ ಮುತ್ತಿಗೆಗೆ ಬಿಜೆಪಿ ಯತ್ನ

ಕಲಬುರಗಿ: ರಾಜೀನಾಮೆಗೆ ಒತ್ತಾಯಿಸಿ ಸಚಿವ ಪ್ರಿಯಾಂಕ್ ಖರ್ಗೆ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿ ಬಿಜೆಪಿಯ 70 ಕ್ಕೂ ಹೆಚ್ಚು ಮುಖಂಡರನ್ನು ಶನಿವಾರ ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು. 4

'ಬಾಣಂತಿಯರ ಸಾವು ತಜ್ಞವೈದ್ಯರ ತಂಡ ರಚಿಸಿ'

ಬೆಂಗಳೂರು: 'ವೈದ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿ ನಿರ್ಲಕ್ಷ್ಯದಿಂದಲೇ ಬಾಣಂತಿಯರ ಸಾವು ಸಂಭವಿಸುತ್ತಿ- ದ್ದಲ್ಲಿ ತಜ್ಞ ವೈದ್ಯರ ತಂಡ ರಚಿಸಿ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ. 7

ಶಾಲೆ ತೊರೆವ ಮಕ್ಕಳ ಸಂಖ್ಯೆ ಹೆಚ್ಚಳ 5

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಯುವಿಸಿಇ ಹಳೆ ವಿದ್ಯಾರ್ಥಿಗಳ ಸಂಘದ ಚುನಾವಣೆ

ಹೈಕೋರ್ಟ್ ಮಧ್ಯಂತರ ತಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ (ಯುವಿಸಿಇ) ಹಳೆಯ ವಿದ್ಯಾರ್ಥಿಗಳ ಸಂಘದ ನೂತನ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಸುವ ಕುರಿತು ಕೈಗೊಳ್ಳಲಾಗಿರುವ ಸಂಘದ ಠರಾವಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಚುನಾವಣೆ ನಡೆಸಲು ಹಾಲಿ ಪದಾಧಿಕಾರಿಗಳ ಸಂಘದ ಅಡಿಯಲ್ಲಿ ಕೈಗೊಂಡ ಠರಾವನ್ನು ಪ್ರಶ್ನಿಸಿ ಸಂಘದ ಸದಸ್ಯರೂ ಆದ ಮಾಗಡಿ ರಸ್ತೆಯಲ್ಲಿರುವ ವೃಷಭ ಅಪ್ಪಗ್ರಾಮ ಬಡಾವಣೆಯ ಹಿರಿಯ ನಾಗರಿಕ ಬಿ.ಎನ್.ಆನಂದ ಅವರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ ವಕೀಲ ಎ.ವಿ.ಅಮರನಾಥನ್ ವಾದ ಆಲಿಸಿದ ನ್ಯಾಯಪೀಠ; ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಸಹಕಾರ ಸಂಘಗಳ ಜಿಲ್ಲಾ ರಿಜಿಸ್ಟ್ರಾರ್, ಮಲ್ಲೇಶ್ವರ ವಿಭಾಗದ ಸಹಕಾರ ಅಭಿವೃದ್ಧಿ ಅಧಿಕಾರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದ್ದು, ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿದೆ.

‘ಠರಾವು ಸ್ವೀಕರಿಸಿದ 2024ರ ಡಿಸೆಂಬರ್ 7ರಂದು ಕೈಗೊಂಡ ನಿರ್ಣಯಗಳನ್ನು ದಾಖಲಿಸಿಕೊಂಡ ದಸ್ತಾವೇಜು ಪುಸ್ತಕವನ್ನು ಇದೇ 6ರೊಳಗೆ ಕೋರ್ಟ್‌ಗೆ ಹಾಜರುಪಡಿಸಬೇಕು’ ಎಂದು ಪ್ರತಿವಾದಿಯೂ ಆದ ಸಂಘದ ಕಾರ್ಯದರ್ಶಿಗೆ ನಿರ್ದೇಶಿಸಿದೆ.

ಅರ್ಜಿಯಲ್ಲಿ ಏನಿದೆ?: ‘ಯುವಿಸಿಇ (ಯೂನಿವರ್ಸಿಟಿ ಆಫ್ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು) ಹಳೆಯ ವಿದ್ಯಾರ್ಥಿಗಳ ಈ ಸಂಘವು 1950ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ರಾಜ್ಯದ ಮೊದಲ ಎಂಜಿನಿಯರಿಂಗ್ ಕಾಲೇಜಾಗಿದ್ದು ಇಲ್ಲಿನ ಹಳೆಯ ವಿದ್ಯಾರ್ಥಿಗಳ ಸಂಘವು ಪ್ರತಿಷ್ಠಿತ ಹಳೆಯ ವಿದ್ಯಾರ್ಥಿಗಳ ಸಂಘಗಳಲ್ಲಿ ಒಂದೆನಿಸಿದೆ. ಸಂಘದ ಸದಸ್ಯರಲ್ಲಿ ಹಲವು ಪ್ರತಿಭಾನ್ವಿತ ಮತ್ತು ಖ್ಯಾತನಾಮರು ಇದ್ದು, ಅವರೆಲ್ಲಾ ವಿಶ್ವದೆಲ್ಲೆಡೆ ನೆಲಸಿದ್ದು ತಂತಮ್ಮ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಾ ರಾಜ್ಯಕ್ಕೆ ಕೀರ್ತಿಪ್ರಾಯರಾಗಿದ್ದಾರೆ. ಇಂತಹ ಸಂಘದ ಹಾಲಿ ಕಾರ್ಯದರ್ಶಿ ನೇತೃತ್ವದಲ್ಲಿ ಸಂಘದ ಬೈ-ಲಾಗೆ ತರಲಾಗಿರುವ ತಿದ್ದುಪಡಿ; ಕರ್ನಾಟಕ ಸೊಸೈಟಿಗಳ ನೋಂದಣಿ ಕಾಯ್ದೆ-1960ಕ್ಕೆ ವಿರುದ್ಧವಾಗಿದೆ. ಆದ್ದರಿಂದ, ಸಾಮಾನ್ಯ ಸಭೆ ಮತ್ತು ಚುನಾವಣಾ ಅಧಿಸೂಚನೆ ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನ, ಫೆ.3ರಿಂದ ಹಳಗನ್ನಡ ಮತ್ತು ಮಧ್ಯಕಾಲೀನ ಕನ್ನಡ ಕಾವ್ಯ ರಸಗ್ರಹಣ ತರಗತಿಗಳನ್ನು ಆರಂಭಿಸುತ್ತಿದೆ.

ಆಸಕ್ತರು ಪ್ರತಿಷ್ಠಾನದ ಇ-ಮೇಲ್ ಮೂಲಕ ಅರ್ಜಿ ಸಲ್ಲಿಸಬಹುದು. ಜ. 31 ಅರ್ಜಿ ಸಲ್ಲಿಕೆಗೆ ಕೊನೆ ದಿನ.


ಪ್ರತಿ ಸೋಮವಾರ ಮತ್ತು ಗುರುವಾರ ಸಂಜೆ 5.30ರಿಂದ 7ರ ವರೆಗೆ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ತರಗತಿಗಳು ನಡೆಯಲಿವೆ. 8 ತಿಂಗಳು ತರಗತಿಗಳು ನಡೆಯಲಿವೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: ಮೊಬೈಲ್-9972812127 ಅಥವಾ ಇಮೇಲ್: bmsritrust@gmail.com

ಶಿಕ್ಷಣ ಪುರವಣಿ ಓದಿರಿ...

ನಿಧನ ವಾರ್ತೆ

ಆರ್. ರಾಜಶೇಖರ್



ಬೆಂಗಳೂರು: ನಗರದ ಯಡಿಯೂರು ನಿವಾಸಿ ಆರ್.ರಾಜಶೇಖರ್ (68) ಶನಿವಾರ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ. ಇವರು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಪ್ಯಾಕಿಂಗ್ ವಿಭಾಗದಲ್ಲಿ 38 ವರ್ಷ ಕಾರ್ಯ ನಿರ್ವಹಿಸಿ, 2014 ರಲ್ಲಿ ನಿವೃತ್ತಿಯಾಗಿದ್ದರು. ಭಾನುವಾರ ಮಧ್ಯಾಹ್ನ 12 ಗಂಟೆಗೆ ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಜಿ.ಎಚ್.ಸಿದ್ದಗಂಗಮ್ಮ

ನೆಲಮಂಗಲ: ಮಾಜಿ ಸಚಿವ ದಿವಂಗತ ಚೆನ್ನಿಗಪ್ಪ ಅವರ ಪತ್ನಿ ಜಿ.ಎಚ್.ಸಿದ್ದಗಂಗಮ್ಮ(70) ಅವರು



ಅನಾರೋಗ್ಯದಿಂದ ಶನಿವಾರ ಸಂಜೆ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಮೃತರಿಗೆ ಮಾಜಿ ಶಾಸಕ ಗೌರಿಶಂಕರ್ ಸೇರಿ ಮೂವರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ. ಭಾನುವಾರ ಮಧ್ಯಾಹ್ನ 3 ಗಂಟೆಗೆ ತಾಲ್ಲೂಕಿನ ಬೈರನಾಯಕನಹಳ್ಳಿಯಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಇಂದು ಕುಮಾರಕೃಪಾ ರಸ್ತೆಯಲ್ಲಿ ಚಿತ್ರಸಂತೆ • ಹೆಣ್ಣು ಮಗುವಿಗೆ ಸಮರ್ಪಣೆ

ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾವಿರಾರು ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವ ಹಾಗೂ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೆ ಅವಕಾಶ ಒದಗಿಸುವ 22ನೇ 'ಚಿತ್ರಸಂತೆ'ಯನ್ನು ಕರ್ನಾಟಕ ಚಿತ್ರಕಲಾ ಪರಿಷತ್ತು ಇದೇ ಭಾನುವಾರ ಕುಮಾರಕೃಪಾ ರಸ್ತೆಯಲ್ಲಿ ಹಮ್ಮಿಕೊಂಡಿದೆ.

ಈ ಬಾರಿಯ ಚಿತ್ರಸಂತೆಯನ್ನು 'ಹೆಣ್ಣು ಮಗುವಿಗೆ' ಸಮರ್ಪಣೆ ಮಾಡಲಾಗಿದೆ. ಬೆಳಿಗ್ಗೆ 6ರಿಂದ ರಾತ್ರಿ 9ರವರೆಗೆ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಈ ಸಂತೆಗೆ ಪರಿಷತ್ತು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದು, ಪ್ರವೇಶ ದ್ವಾರದಲ್ಲಿಯೇ ಬಾಲಕಿಯ ಬೃಹದಾಕಾರದ ಕಲಾಕೃತಿ ನಿರ್ಮಿಸಲಾಗಿದೆ. ಉದ್ಘಾಟನಾ ಕಾರ್ಯಕ್ರಮದ ವೇದಿಕೆ ಹಾಗೂ ವಿವಿಧ ಕಲಾಕೃತಿಗಳಿಗೆ ಕಲಾವಿದರು ಶನಿವಾರ ಅಂತಿಮ ಸ್ಪರ್ಶ ನೀಡಿದರು.



ಚಿತ್ರಸಂತೆ ಪ್ರಯುಕ್ತ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಕಲಾವಿದರು ಕಲಾಕೃತಿಗಳಿಗೆ ಶನಿವಾರ ಅಂತಿಮ ಸ್ಪರ್ಶ ನೀಡಿದರು ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಬೆಳಿಗ್ಗೆ 10 ಗಂಟೆಗೆ ಪರಿಷತ್ತಿನ ಆವರಣದಲ್ಲಿ ಚಿತ್ರಸಂತೆ ಉದ್ಘಾಟಿಸುತ್ತಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಕಲಾ ಪ್ರದರ್ಶನ'ಕ್ಕೆ ಚಾಲನೆ ನೀಡುತ್ತಾರೆ.

ದೇಶದ ವಿವಿಧ ಭಾಗಗಳಿಂದ 1,500 ಕಲಾವಿದರು ಚಿತ್ರಸಂತೆಯಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ಪ್ರದರ್ಶಿಸಲಿದ್ದಾರೆ. ಕರ್ನಾಟಕದ ಜತೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ ಸೇರಿದಂತೆ ವಿವಿಧ ರಾಜ್ಯಗಳ ಕಲಾವಿದರು ಪಾಲ್ಗೊಳ್ಳುತ್ತಿದ್ದಾರೆ. ಪರಿಷತ್ತಿನ ಗ್ಯಾಲರಿಗಳಲ್ಲಿ ಹಿರಿಯ ಹಾಗೂ ಹೆಸರಾಂತ ಕಲಾವಿದರು ರಚಿಸಿದ ಕಲಾಕೃತಿಗಳ ಪ್ರದರ್ಶನ ನಡೆಯಲಿವೆ.

'ಹಿರಿಯ ಕಲಾವಿದರು ಹಾಗೂ ಅಂಗವಿಕಲರಿಗೆ ಆಯ್ದ ಸ್ಥಳದಲ್ಲಿ ಅಗತ್ಯ ಸೌಲಭ್ಯ ಒದಗಿಸಿ ಕೊಡಲಾಗುವುದು. ಪರಿಷತ್ತಿನ ಆವರಣದ ಹೊರಗೆ ಕೆನರಾ ಬ್ಯಾಂಕ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಂಚಾರಿ ಎಟಿಎಂ ಇರಲಿವೆ. ಈ ಚಿತ್ರಸಂತೆಯಲ್ಲಿ ₹ 100 ರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಕಲಾಕೃತಿಗಳು ಇರಲಿವೆ' ಎಂದು ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದ್ದಾರೆ.

6 ಲಕ್ಷ ಮಂದಿ ಭೇಟಿ ನಿರೀಕ್ಷೆ

ಈ ಬಾರಿಯ ಚಿತ್ರಸಂತೆಗೆ ಐದು ಲಕ್ಷರಿಂದ ಆರು ಲಕ್ಷ ಮಂದಿ ಭೇಟಿ ನೀಡುವರು ಎಂದು ನಿರೀಕ್ಷಿಸಲಾಗಿದೆ. ಚಿತ್ರಸಂತೆಯಲ್ಲಿ ವ್ಯಂಗ್ಯಚಿತ್ರ ಪ್ರದರ್ಶನಕ್ಕೆ ಅವಕಾಶ ನೀಡಲಾಗಿದೆ. ಕುಂಚ ಅಥವಾ ಪೆನ್ಸಿಲ್‌ಗಳಿಂದ ಕಲಾರಸಿಕರ ಭಾವಚಿತ್ರಗಳನ್ನು ಸ್ಥಳದಲ್ಲಿಯೇ ರಚಿಸಿಕೊಡುವ ಕಲಾವಿದರು ಇರುತ್ತಾರೆ.

ಮೈಸೂರು ಸಾಂಪ್ರದಾಯಿಕ ಶೈಲಿ, ರಾಜಸ್ಥಾನಿ ಶೈಲಿ, ಮಧುಬನಿಯ ಶೈಲಿ, ತೈಲ ಮತ್ತು ಜಲವರ್ಣದ ಕಲಾಕೃತಿಗಳು ಚಿತ್ರಸಂತೆಯಲ್ಲಿ ಲಭ್ಯವಿರುತ್ತವೆ. ಇವಲ್ಲದೆ, ಅಕ್ರಲಿಕ್, ಕೊಲಾಜ್, ಲಿಥೋಗ್ರಾಫ್ ಮೊದಲಾದ ಪ್ರಕಾರಗಳ ಕಲಾಕೃತಿಗಳು ದೊರೆಯುತ್ತವೆ ಎಂದು ಪರಿಷತ್ತು ತಿಳಿಸಿದೆ.

ಯುವ ಜನರಿಗೆ ಗುರಿ ಇರಲಿ: ನಟ ಶ್ರೀನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುವ ಸಮುದಾಯ ಒಂದೇ ಗುರಿ ಇಟ್ಟುಕೊಂಡು, ಅದರಂತೆ ನಡೆದರೆ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ' ಎಂದು ನಟ ಶ್ರೀನಾಥ್ ಹೇಳಿದರು.

ಬಿಬಿಎಂಪಿ ನೌಕರರ ಸಹಕಾರ ಸಂಘದ 111ನೇ ಸಂಸ್ಥಾಪನಾ ದಿನಾಚರಣೆ ಮತ್ತು ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಾನು ಶಾಲೆಯಲ್ಲಿ ಶೇಕಡ 90ರಷ್ಟು ಗೈರಾಗಿದ್ದೆ. ನಾನು ಶಿಕ್ಷಣ ಪಡೆದಿದ್ದರೆ ಉನ್ನತ ಅಧಿಕಾರಿಯಾಗಬಹುದಿತ್ತು. ತಂದೆ, ತಾಯಿ ನಿಮ್ಮ ಮೇಲೆ ಬಹಳ ಆಸೆಯಿಟ್ಟುಕೊಂಡಿರುತ್ತಾರೆ. ಅದನ್ನು ಪೂರ್ಣಗೊಳಿಸಲು ಮಕ್ಕಳು ಶ್ರದ್ಧೆಯಿಂದ ಕಲಿಯಬೇಕು' ಎಂದು ಕಿವಿಮಾತು ಹೇಳಿದರು.

ನಟಿ ವಿನಯಾ ಪ್ರಸಾದ್ ಮಾತನಾಡಿ, 'ಇಂದಿನ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಒತ್ತಡವಿದೆ. ವಿದ್ಯಾರ್ಥಿಗಳಿಗೆ ಶಿಕ್ಷಕರು ಶಿಕ್ಷೆ ನೀಡಲು ಸಾಧ್ಯವಿಲ್ಲ. ಇದೆಲ್ಲವನ್ನೂ ಅರಿತುಕೊಂಡು ಮಕ್ಕಳು ತಂದೆ-ತಾಯಿ ಹಿರಿಯರ ಮಾತು ಕೇಳಿ, ವಿಧೇಯತೆಯಿಂದ ನಡೆದುಕೊಳ್ಳಬೇಕು' ಎಂದರು. 'ಬಿಬಿಎಂಪಿಯ ಅಧಿಕಾರಿ ಮತ್ತು ನೌಕರರ ಮಕ್ಕಳು ಐಎಎಸ್, ಎಂಜಿನಿಯರ್, ವೈದ್ಯರಾಗಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಮೂಲಕ ಇನ್ನಷ್ಟು ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವುದು ನಮ್ಮ ಉದ್ದೇಶವಾಗಿದೆ' ಎಂದು ಸಂಘದ ಅಧ್ಯಕ್ಷ ಎ.ಅಮೃತ್ ರಾಜ್ ಹೇಳಿದರು.

ಎಸ್ಸೆಸ್ಸೆಲ್ಸಿ, ಪಿಯುಸಿ, ಸ್ನಾತಕೋತ್ತರ ಪದವಿಯಲ್ಲಿ ಉತ್ತಮ ಅಂಕ ಪಡೆದ ಪ್ರತಿಭಾವಂತ 172 ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಭಾಗ್ಯಶ್ರೀ ಗೌಡ ಅವರ ಸಂಗೀತ ಸಂಜೆ, ಮಿಮಿಕ್ರಿ ಗೋಪಿಯವರು ಹಾಸ್ಯಸಂಜೆ ಹಾಗೂ ಶುಭಲಕ್ಷ್ಮಿ ಅವರಿಂದ ಸ್ಯಾಕ್ಸೋಫೋನ್ ವಾದನ ಕಾರ್ಯಕ್ರಮ ನಡೆಯಿತು.



ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಟ ಶ್ರೀನಾಥ್, ಪೂರ್ವ ವಲಯ ಆಯುಕ್ತೆ ಸ್ನೇಹಲ್ ಅವರು ಪುರಸ್ಕಾರ ವಿತರಿಸಿದರು. ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್, ಆಡಳಿತ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರ, ನಟಿ ವಿನಯಾ ಪ್ರಸಾದ್ ಉಪಸ್ಥಿತರಿದ್ದರು

'ಚರಿತ್ರೆಯ ಕಾಯಂ ವಿದ್ಯಾರ್ಥಿ ಜ್ಯೋತ್ಸ್ನಾ'

ಬೆಂಗಳೂರು: 'ಜ್ಯೋತ್ಸ್ನಾ ಕಾಮತ ಅವರು ಚರಿತ್ರೆಯ ಕಾಯಂ ವಿದ್ಯಾರ್ಥಿಯಾಗಿದ್ದರು' ಎಂದು ಲೇಖಕಿ ನೇಮಿಚಂದ್ರ ಹೇಳಿದರು.

ಹೊನ್ನಾವರದ ಕೃಷ್ಣಾನಂದ ಕಾಮತ ಪ್ರತಿಷ್ಠಾನದ ಶನಿವಾರ ಆಯೋಜಿಸಿದ್ದ 'ಕೃಷ್ಣಾನಂದ ಕಾಮತ ಜ್ಯೋತ್ಸ್ನಾ ಕಾಮತ ಸಂಸ್ಮರಣೆ' ಕಾರ್ಯಕ್ರಮದಲ್ಲಿ ಅವರು ಜ್ಯೋತ್ಸ್ನಾ ಅವರ ಅನುಭವ ಕಥನಗಳ ಬಗ್ಗೆ ಮಾತನಾಡಿದರು.

'ಜ್ಯೋತ್ಸ್ನಾ ಅವರು ಕನ್ನಡ, ಇಂಗ್ಲಿಷ್, ಕೊಂಕಣಿ ಮೂರು ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡುತ್ತಿದ್ದರು. ಅವರ ಅನುಭವ ಕಥನಗಳಲ್ಲಿ ವಿಸ್ಮೃತಿಗೆ ಸರಿದುಹೋಗಿರುವ ಹಲವಾರು ಘಟನೆಗಳನ್ನು, ದಿವಂಗತ ವ್ಯಕ್ತಿಗಳನ್ನು ಜೀವಂತವಾಗಿಸಿದ್ದಾರೆ' ಎಂದು ಹೇಳಿದರು.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, 'ಕೃಷ್ಣಾನಂದ ಕಾಮತ ಅವರು ಮೂಲತಃ ಕೀಟ ವಿಜ್ಞಾನ ಪರಿಸರದಲ್ಲಿ ಅಗಾಧವಾದ ಪ್ರೀತಿ, ಆಸಕ್ತಿ ಹೊಂದಿದ್ದರು. ಕನ್ನಡದ ಎಲ್ಲ ಪತ್ರಿಕೆಗಳಲ್ಲಿ ಕೃಷ್ಣಾನಂದ ಅವರ ಲೇಖನಗಳು ಇರುತ್ತಿದ್ದವು. ಒಬ್ಬ ಲೇಖಕನಿಗೆ ಇರುವ ಜವಾಬ್ದಾರಿ ಏನು ಎಂಬುದನ್ನು ಕೃಷ್ಣಾನಂದ ಅವರ ವಿಚಾರಗಳಲ್ಲಿ ನಾವು ಅರ್ಥ ಮಾಡಿಕೊಳ್ಳಬಹುದು' ಎಂದರು.

ಸಂಶೋಧಕ ಶೇಷಶಾಸ್ತ್ರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಜಯಂತ ಕಾಯ್ಕಿಣಿ ಅವರು ಕಾಮತ ದಂಪತಿಗಳ ವ್ಯಕ್ತಿತ್ವ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಬಗ್ಗೆ ಮಾತನಾಡಿದರೆ, ಕೃಷ್ಣಾನಂದ ಕಾಮತ ಅವರ ಪರಿಸರ ಮತ್ತು ವೈಜ್ಞಾನಿಕ ಸಾಹಿತ್ಯದ ಬಗ್ಗೆ ವಿಜ್ಞಾನ ಬರಹಗಾರ ನಾಗೇಶ ಹೆಗಡೆ ಅವರು ಮಾತನಾಡಿದರು.

ಮಹಾತ್ಮ ಗಾಂಧಿ ರಾಷ್ಟ್ರಪಿತರಲ್ಲ ಚಿಂತಕಿ ಮೀನಾಕ್ಷಿ ಸೆಹರಾವತ್

ಪ್ರಜಾವಾಣಿ ವಾರ್ತೆ

ಉಡುಪಿ: 'ಮಹಾತ್ಮ ಗಾಂಧಿ ಅವರನ್ನು ಭಾರತದ ರಾಷ್ಟ್ರಪಿತ ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಗಾಂಧಿ ಹುಟ್ಟುವ ಮೊದಲೇ ಭಾರತ ಇತ್ತು. ಭಾರತದಲ್ಲಿ ಹುಟ್ಟಿದ ಗಾಂಧಿ, ರಾಷ್ಟ್ರಕ್ಕೆ ತಂದೆಯಾಗಲು ಸಾಧ್ಯವಿಲ್ಲ' ಎಂದು ಚಿಂತಕಿ ಡೆಹ್ರಾಡೂನ್‌ನ ಮೀನಾಕ್ಷಿ ಸೆಹರಾವತ್ ಪ್ರತಿಪಾದಿಸಿದರು.

ಅದಮಾರು ಮಠದ ಆಶ್ರಯದ ಶ್ರೀಕೃಷ್ಣ ಸೇವಾ ಬಳಗದ ನೇತೃತ್ವದಲ್ಲಿ ವಿಶ್ವಾರ್ಪಣಂ ಕಾರ್ಯಕ್ರಮದ ಅಂಗವಾಗಿ ಶನಿವಾರ ಪೂರ್ಣಪ್ರಜ್ಞ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪಲಿಮಾರು ಮಠದ ಹಿರಿಯ ಯತಿ ವಿದ್ಯಾಧೀಶತೀರ್ಥ ಶ್ರೀಪಾದರ ಅಭಿನಂದನೆ ಕಾರ್ಯಕ್ರಮದಲ್ಲಿ 'ಬಾಂಗ್ಲಾ-ಪಾಠ' ವಿಷಯದ ಕುರಿತು ಅವರು ಮಾತನಾಡಿದರು.

'ಜಿನ್ನಾ ಜೊತೆ ಸೇರಿ ಗಾಂಧಿ ಅವರು ಪಾಕಿಸ್ತಾನವನ್ನು ಹುಟ್ಟುಹಾಕಿದ್ದಾರೆ. ಆ ಕಾರಣಕ್ಕೆ ಅವರನ್ನು ಪಾಕಿಸ್ತಾನದ ಪಿತ ಎನ್ನಬಹುದು' ಎಂದರು.

'ಭಾರತ ದೇಶಕ್ಕೆ ಯಾರೂ ಪಿತರಿಲ್ಲ. ಭಾರತವು ನಮ್ಮ ಮಾತೆ. ಗಾಂಧಿ ಅವರು ಅಹಿಂಸೆಯ ಪಾಠ ಮಾಡಿದ್ದಾರೆ. 20 ಲಕ್ಷ ಹಿಂದೂಗಳ ಹತ್ಯೆಯಾದಾಗ ಅವರ ಅಹಿಂಸೆ ಪಾಠ ನಿಂತು ಹೋಯಿತು. ಈ ಅಹಿಂಸೆಯ ಪಾಠದಿಂದಾಗಿಯೇ ನಮ್ಮ ದೇಶದ ಯುವಜನರು ನಪುಂಸಕರಂತಾಗಿದ್ದಾರೆ' ಎಂದು ಹೇಳಿದರು.

'ನಮ್ಮ ತಾಯಿ, ತಂಗಿಯರ ರಕ್ಷಣೆಗಾಗಿ ಹಿಂಸೆಗಿಂತ ದೊಡ್ಡ ಕಾರ್ಯ ಬೇರೆ ಇಲ್ಲ. ಅಹಿಂಸೆ ಒಳ್ಳೆಯದೇ ಆದರೆ ದುಷ್ಟರನ್ನು ಶಿಕ್ಷಿಸಲು ಹಿಂಸೆಯಿಂದಲೇ ಸಾಧ್ಯ' ಎಂದರು.

ವಕ್ಫ್ ರದ್ದಾಗಲಿ ಎನ್ನುವವರೇ ನಿಜವಾದ ಸ್ವಾಮೀಜಿ: ಯತ್ನಾಳ

ಪ್ರಜಾವಾಣಿ ವಾರ್ತೆ

ಕಂಪ್ಲಿ (ಬಳ್ಳಾರಿ ಜಿಲ್ಲೆ): 'ವಕ್ಫ್ ಎಂಬ ಕಾನೂನು ರದ್ದಾಗಬೇಕು ಎನ್ನುವವರೇ ನಿಜವಾದ ಸ್ವಾಮೀಜಿ. ಅವರ ಪಾದಕ್ಕೆ ನಮಸ್ಕರಿಸುವೆ ಹೊರತು ಪುಕ್ಸಟ್ಟೆ ಸ್ವಾಮೀಜಿಗಳಿಗಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಕಂಪ್ಲಿಯಲ್ಲಿ ಶನಿವಾರ 'ವಕ್ಫ್ ಹಠಾವೋ ದೇಶ ಬಚಾವೋ' ಎರಡನೇ ಹಂತದ ಹೋರಾಟದಲ್ಲಿ ಮಾತನಾಡಿದ ಅವರು, 'ವಕ್ಫ್ ನೋಟಿಸ್ ಕುರಿತು ಒಬ್ಬ ಸ್ವಾಮೀಜಿಯು ಬಾಯಿ ಬಿಚ್ಚಲಿಲ್ಲ. ಇಂಥ ಸ್ವಾಮೀಜಿಗಳು ನಮಗೆ ಬೇಕೆ' ಎಂದರು.

'ಸಿದ್ದರಾಮಯ್ಯ ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟುವುದಾಗಿ ಹೇಳುತ್ತಾರೆ. ಅದರೆ, ಸಂಗೊಳ್ಳಿ ರಾಯಣ್ಣ ಆಗಿ ಹುಟ್ಟುವುದಾಗಿ ಹೇಳಲ್ಲ. ನಾನು ಮುಂದಿನ ಜನ್ಮದಲ್ಲೂ ಹಿಂದೂ ಆಗುತ್ತೇನೆ. ತಪ್ಪಿಯೂ ಮುಸ್ಲಿಂ ಆಗುವುದಿಲ್ಲ' ಎಂದರು.

ಮಾಜಿ ಸಂಸದ ಪ್ರತಾಪ ಸಿಂಹ ಮಾತನಾಡಿ, 'ರಾಜಕಾರಣಿಗಳು ರಾಜಕೀಯದ ಕಾರಣಕ್ಕೇ ಎಲ್ಲವನ್ನೂ ಮಾಡುತ್ತಾರೆ. ಕರ್ನಾಟಕದ ತುಂಬಾ ಹೊಂದಾಣಿಕೆ ರಾಜಕಾರಣಿಗಳೇ ತುಂಬಿದ್ದಾರೆ. ರೈತರು ಮಠ ಮಾನ್ಯಗಳ, ದೇಗುಲಗಳ ಆಸ್ತಿ ರಕ್ಷಣೆಗೆ ಹೋರಾಟ ಮಾಡುತ್ತಿದ್ದೇವೆ. ಅದಕ್ಕಾಗಿಯೇ ಈ ಅಭಿಯಾನ' ಎಂದರು.

ಶಾಸಕ ರಮೇಶ ಜಾರಕಿಹೊಳಿ, ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿದರು. ಕಂಪ್ಲಿ ಕಲ್ಮಠದ ಪ್ರಭುಸ್ವಾಮೀಜಿ, ಹಂಪಿ ಮಾತಂಗ ಪರ್ವತದ ಪೂರ್ಣಾನಂದ ಸ್ವಾಮೀಜಿ, ಪ್ರಮುಖರಾದ ಜೆ.ಎಂ. ಸಿದ್ದೇಶ್ವರ, ಕುಮಾರ ಬಂಗಾರಪ್ಪ ಇದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Airport Road

**"30X40-CORNER 60`FEET-ROAD** BIAPPA`approved E-Katha`before International Airport`near KIABD`& Bagalur`Police station 23`houses built`families staying`in`Layout 65`Lakhs`only genuine`buyers. 9845286505"

Electronic City

40×60 NORTH site for sale @ Lingapura, KHB 2nd face, Suryacity: Electronic City block- 9738643338

Gnanabharathi

DIRECT OWNER 30x40 E/F BDA Site Sale 'JNANABHARATHI' Nagadevanahalli 2nd Block, Close to Ring-Road. 9886634578

Hennur

HENNUR MAIN Road Near By 40000 Sqft Land For Sale Call: 9845623970/ 9739400838 Brokers Excuse

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Indiranagar

INDIRANAGAR 40X66 WEST FACING SITE FOR SALE. GENUINE BUYERS AND PROPERTY SELLERS CALL:NITI ESTATES 9900001973

J P Nagar

CLEAR TITLE 4700 Sqft A & E Khata South West Corner Sites with two Houses in Doctor Colony Konankunte for Immediate Sale Rs14000 Per Sqft Negotiable. 9449852743

Kengeri

PREMIUM VILLA PLOT The Green Valley Address Gated community 80.1 X 60 West BDA approved eKhatha contact 9243113714

Koramangala

KORAMANGALA SEMI Commercial, North West Corner Vacant Site 2,200 sft. with Borewell 35,000/- David- 9845855663.

"COMMERCIAL SITE Corner`BDA Koramangala 4th-Block ST.Bed 900 Sqft 60 feet Road "Sri Ganesh Estate" 9845286505"

Kempegowda Layout

***NADAPRABHU* KEMPEGOWDA** LAYOUT 7th Block F-Sector 50x80 W/F and 8th-Block D-sector 163X100 W/F(BDA NOC), Contact:9686469799

KEMPEGOWDA LAYOUT, Commercial BDA Site for Sale 20x30, 30x40, 40x60, 50x80, Contact: Kumar 9945119449

Malleshwaram

WANTED 30X50 SITE IN MALLESHWARAM VYALIKAVAL SADASHIVANAGAR LOWER PALACE ORCHARDS KUMARAPARK SANJAYNAGAR. SITE OWNERS:CALL 9900001973

Kengeri

SITE FOR sale 30*45 EF A katha with 30 ft road Rs.15500/- slightly negotiable KHB Layout near to metro station and Surana College Kengeri Satellite town. Contact: 9916826976

Mysore

SITES @MYSORE DTCP Facing State Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD Kote Road, 10Minutes to Airport,Ring Road, 15Minutes to Palace, 9845287802 /8050001571

Rajarajeshwari Nagar

40X77 (3080.SQFT.) East`Facing, A & E Khata, BBMP`Site Sale`at SrinivasaNagar Near_Krishnappa Layout,RR.Nagar Price:_3.10.Cr. Call:_9167979901.

RMV

RMV NEW BEL Road Semi Commercial 40x65 Site Sale Call: 9845623970/ 9739400838/ Broker's Excuse

Uttarahalli

SITE FOR Sale 30x40,East Facing Poorna pragna Layout,Genuine Buyers 9448508410/ 9844216344 Brokers Excuse

Vishweshwariah Layout

"AVAILABLE VISHVESHWARIAH Layout 5th Block 30x40 West 40'feet Road, Good location, Genuine buyers Contact: 9632788913"

SIR M.VISHVESHWARIAH Layout 8th Block 30x40 South facing Site, Good Location, Ready to Construct Your Sweet dream Home. Serious Buyers only 9945564769

"30X40 RESIDENTIAL BDA SITES SALE, 30x40 NEWLY BUILT RENTAL HOUSE 4TH BLOCK VISHWESHWARAIH LAYOUT- 9845143579"

BDA SITE SALE VISHWESHWARIAH LAYOUT 1ST BLOCK 30x40 SOUTH FACE 80FT ROAD PARALLEL OWNER MEETING CONTACT: 8892901567

"VISVESHWARAIAH 6TH-BLOCK 30x40_East facing Site for sale Allotte site Genuine buyers only Contact: 9945662333"

30X40 NORTH Facing Semi-Commercial Site For Sale @ SMVL Layout 6th Block,Near KLE College. Contact: 9972220339

Vidyaranyapura

SINGAPURA GARDEN, before Sambram College, DC Conversion,BBMP A Katha 30x40 East Facing Site. Genuine Buyer Call 9945564769

R T Nagar

SALE!! RT.NAGAR- Residential Site- 4000sft- Clear Documents- Going cheap-Excellent Investment Call: FEROZE'S: 9845018800

Agricultural Land

Out-Station

9LAKHS PER_ACRE suitable for agriculture Solar Poultry, (Hiriyur Challakere) 35acre and 5acre Immediately Settlement 8951240669

Commercial Land

J C Road

COMMERCIAL SITE 1372 Sqft 6th CROSS. H.SIDDIAH ROAD WITH BOREWELL, KAVERI WATER AND POWER RS 23000/= NEGOTIABLE BROKERS EXCUSE CALL 9742577172/ 9486666181

Commerical

Jayanagar

SALE COMMERCIAL 45x80, With old House, On 60feet, Jayanagar Excellent Location Contact: 9066399102.

WEEKEND CORNER ಕ್ಲಾಸಿಫೈಡ್ಸ್











Old Madras Road

PRIME OFFICE/ Showroom Sale 1638sft, 1st`Floor, on Old Madras`Road, Opp.RMZ Infinity,Near Gopalan Signature Mall`& Metro-Station, inside ORR: -9948661379

Vishweshwariah Layout

FOR SALE 50x80 BDA Commercial Site On 100 feet Road. East facing, at 6th BLOCK, Sir M.V. Layout Contact: 9880956229

Flat

RMV

RMV EXTENSION 3 BHK Flat Sanjaynagar, MLA Layout East Facing According to Vastu Contact: 8310093665

House

Basavanagudi

SALE (OLD HOUSE) Good Residential area West Facing 45x60 N.R.Colony Basavanagudi Call Vani Estates: 9845012548

Jayanagar

SALE JAYANAGAR 9th Block 30x45 With 2BHK old House on 30feet Road Excellent Location Ct: 9844134068 8073859758

SALE 26X35 Jayanagar 4th 'T' Block With 2BHK Ground Floor & 4BHK Duplex Excellent Location Ct: 9844134068 8073859758

J P Nagar

J.P.NAGAR 2ND Phase 40x60- 6,24,00,000/- behind Central Mall near Raggigudda Metro Station, suitable Residential / Semi-commercial 9731775536.

J.P.NAGAR_4TH Dollars Layout 50x80,_4 unit House with Lift, 4,70,000/- monthly Rental income, Sale- 11,50,00,000/- 9731775536.

J.P.NAGAR_3RD Near Mini Forest Corner 40x40 House, 5,50,00,000/-2nd, 30x40 North House 3,60,00,000/- 9731775536.

SALE SEMI COMMERCIAL 30x40 With old House J.P.Nagar 5th Phase Good Location Contact: 9066399102

Industrial & Factory

Doddabalapur

1 ACRE Land For Sale Near Doddaballapur Industrial Area Contact: 99161 19936

Peenya

SALE, PEENYA, KIADB Land, Prime Location. Available 5000, 10000, 20000 sqft. 40 feet Road. Rs 10000/- sqft. 'PEENYA ESTATES' 9844039416

Tumkur Road

SALE 9.5 Acres Industrial Converted Land Opposite to KIADB near Hotel Namaste Bangalore. 9141326970, 9972636255

Joint Development

Multiple Locations

BUILDERS ONLY Rajarajeshwari Nagar 14000sft Sale Banglore North and South 10acre Jointventure banglore out-station 3acre 8951240669

REAL ESTATE BUYING

Sites

Anjanapura

BDA-SITES WANTED @ Banashankari 6th Stage Anjanapura 20x30, 30x40, 40x60 50x80 Immediate Settlement Call Rajesh: 9945610779.

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

BANASHANKARI 6TH Stage 50x80 Wanted Sites Any Facing, Brokers Excuse, Only Genuine Owners Contact: 8105688602.

Hosur Road

WANTED KARNATAKA Housing Board (KHB) Plots, Lands in Surya City Phase-1, 2 & 3, Chandapura Hosur Road, Bangalore. Call: 9900640887

Kanakapura Road

WANTED SITE 30x40 40x60 Anjanapura BDA, Banashankari 6th Stage, Narayan`Nagar BCCHS Layout, Gubblala, Agent Excuse. Call: 9008259222.

WANTED KANAKAPURA ROAD SITE 30x40 Harohalli, ABM Layout, any BMRDA approved Dayanand Sagar Hospital Near. 9740148870.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

R T Nagar

WANTED/ AVAILABLE, Site/ Flats in and around R.T.Nagar Atmananda Colony, Sulthan Palya, Kanakanagar for immediate Settlement. Ph: 9845575731.

Vishweshwariah Layout

***WANTED* HOUSE,SITES,** FLATS VISHVESHWARAIAH LAYOUT NAGARBHAVI, MALLATHAHALLLI ,BSK 6th Stage.20x30,30x40,40x60. ABHILASHA CONSULTANT. 9480565758

BUILDERS ESSENTIAL

Roofing Materials

"WE-FIX" LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL PROPERTY 700sqft Ground Floor,300Sqft First Floor For Rent Sarjapur Road Near Wipro: 9844002912

YELAHANKA SEMICOMMERCIAL 20000 Sqft Land, Building Suitable Educational Institutes, Hospital, Warehouse, Conventionhall Near Sambhram College: 9035304455

OFFICE SPACE For Rent16,000 sqft HBR layout 4th Block Facing Ring Road Contact: 8861817913/ 9008025761

BUILDING FOR Lease/ Rent GF 3200Sqft at Puttenahalli Yelahanka New Town Doddabalapur Road Bangalore: 8951231466

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

FOR RENT:- Industrial Converted Land 4Acres Available for Rent Near Nelamangala. 1 km from the State Highway 74, 40ft Wide Road with a Compound wall North Facing Property as Per Vastu. 9845038343 reddymrr@gmail.com

MATRIMONIAL

Brides Wanted

Kannada

93' BORN IRS boy from Bangalore seeks a suitable qualified match for early marriage. Father is retired RTI commissioner (Caste is a no bar for family) (080-69074952)

Bride Required Others

BRIDE REQUIRED
Caste no bar, NAIDU BDS Surgeon London, MBA Present Admin in Repted Hospt., BLR born 1981, Divorcce no Issue, Seeks - Rich or Prof Qld Bride Willing to Migrate New Zealand.
Contact : Veejay Naidu
98867 82390

ENGINEER, 52, 6 feet, own company, Bangalore, unmarried seeks graduate below 47. Mob 8698966952.

PUBLIC NOTICE

PUBLIC NOTICE

My Client Mrs. **PREMA NAGENDRAPRASAD**, Resident of No. 879, 6th Cross, 6th Block, Koramangala Bengaluru- 560095, has entered into Agreememt to purchase from SRI. VENUGOPALAN. K.A No. 44/1, behind Government School, Sarakki Village, J.P.Nagar, Bengaluru- 560078, **Sy.No. 34/3, 35/1, 36/1, 36/2B, 36/2A2, Guntas 4, 33. 36, 27. 32** at **PADAVANAGERE VILLAGE,** Maralawadi Hobil, Kanakapura Taluk, Ramanagara District and none has any right, title, interest over the same. Our Legal Consultant further any quires :

Contact: Mr. Anand, having address at No.360, 18th F, 6th Block, Koramangala, Bengaluru 560095.

EDUCATIONAL

Admission

BECOME A GRADUATE and Upgrade to MBA All Specialisations. Direct Private 10th & 12th: 9341273990

Diploma Courses

KARNATAKA SANSKRIT University Diploma PG Diploma courses at Jnana Jyothi Yoga Study Centre Bangalore Admission last date 15 January 9743233939/9483141411

ಸಾರ್ವಜನಿಕ ಪ್ರಕಟಣೆ

ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾದ ಡೆಲವೇರ್‌ನ ಕಾನೂನುಗಳ ಅಡಿಯಲ್ಲಿ ಸಂಘಟಿತ ಮತ್ತು ಅಸ್ತಿತ್ವದಲ್ಲಿರುವ ಸೀಮಿತ ಹೊಣೆಗಾರಿಕೆ ಕಂಪನಿಯಾದ ಪೋಲೆನ್ ಕ್ಯಾಪಿಟಲ್ ಮ್ಯಾನೇಜ್‌ಮೆಂಟ್, ಎಲ್‌ಎಲ್‌ಸಿ ಪರವಾಗಿ ಈ ಸೂಚನೆಯನ್ನು ನೀಡಲಾಗುತ್ತಿದೆ (ಇನ್ನು ಮುಂದೆ, 'ನಾವು'). ಹೂಡಿಕೆ ಯೋಜನೆಗಳನ್ನು ನೀಡಲು https://m.metapolen.com/ ಅಂತಹ ವೆಬ್‌ಸೈಟ್‌ಗಳನ್ನು ಮತ್ತು 'Polen CM' ಹೆಸರಿನ ಮೊಬೈಲ್ ಅಪ್ಲಿಕೇಶನ್‌ಗಳನ್ನು ರಚಿಸುವ ಮೂಲಕ ಕೆಲವು ಅಪರಿಚಿತ ವಂಚಕರು ನಮ್ಮನ್ನು ಸೋಗು ಹಾಕುತ್ತಿದ್ದಾರೆ ಎಂಬುದು ನಮ್ಮ ನಿರ್ವಹಣೆಯ ಗಮನಕ್ಕೆ ಬಂದಿದೆ.

ಈ ವೆಬ್‌ಸೈಟ್‌ಗಳು ಅಥವಾ ಮೊಬೈಲ್ ಅಪ್ಲಿಕೇಶನ್‌ಗಳಿಗೆ ನಾವು ಯಾವುದೇ ರೀತಿಯಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಸಂಪರ್ಕ ಹೊಂದಿಲ್ಲ ಮತ್ತು ಹೂಡಿಕೆದಾರರನ್ನು ವಂಚಿಸಲು ನಮ್ಮ ಅನುಮತಿಯಿಲ್ಲದೆ ವಂಚಕರು ನಮ್ಮ ಹೆಸರು ಮತ್ತು ಟ್ರೇಡ್‌ಮಾರ್ಕ್‌ಗಳನ್ನು ಬಳಸುತ್ತಿದ್ದಾರೆ ಎಂದು ನಮ್ಮ ಎಲ್ಲಾ ಗ್ರಾಹಕರು, ಗ್ರಾಹಕರು ಮತ್ತು ಸಾರ್ವಜನಿಕರಿಗೆ ತಿಳಿಸುವುದು ಇದರ ಉದ್ದೇಶವಾಗಿದೆ. ಹೀಗಾಗಿ, ನಮ್ಮ ಅಧಿಕೃತ ವೆಬ್‌ಸೈಟ್ https://www.polencapital.com/ ಹೊರತುಪಡಿಸಿ ಯಾವುದೇ ವೆಬ್‌ಸೈಟ್ ಅಥವಾ ಮೊಬೈಲ್ ಅಪ್ಲಿಕೇಶನ್ ಬಳಸಿ ಯಾವುದೇ ಹೂಡಿಕೆ ಮಾಡುವಾಗ ಎಚ್ಚರಿಕೆಯಿಂದ ಇರಲು ಮತ್ತು ಜಾಗರೂಕರಾಗಿರಲು ನಾವು ನಿಮ್ಮನ್ನು ಬಲವಾಗಿ ಒತ್ತಾಯಿಸುತ್ತೇವೆ.

ಅಂತಹ ನಕಲಿ ವೆಬ್‌ಸೈಟ್‌ಗಳು ಅಥವಾ ಮೊಬೈಲ್ ಅಪ್ಲಿಕೇಶನ್‌ಗಳ ಬಳಕೆಯ ಮೂಲಕ ಯಾವುದೇ ರೀತಿಯಲ್ಲಿ ನಮ್ಮನ್ನು ಸೋಗು ಹಾಕುತ್ತಿರುವ ವಂಚಕರು / ನಿರ್ಲಜ್ಜ ವ್ಯಕ್ತಿಗಳು / ಘಟಕಗಳು ಮಾಡಿದ ಯಾವುದೇ ಮೋಸ ಅಥವಾ ನಷ್ಟ ಅಥವಾ ಹಾನಿಗೆ ನಾವು ಸಾರ್ವಜನಿಕರ ಯಾವುದೇ ಸದಸ್ಯರಿಗೆ ಜವಾಬ್ದಾರರಾಗಿರುವುದಿಲ್ಲ.

ಮೋಸದ ಹೂಡಿಕೆ ಯೋಜನೆಗಳಿಗೆ ಸಂಬಂಧಿಸಿದ ಯಾವುದೇ ಅನುಮಾನಾಸ್ಪದ ಚಟುವಟಿಕೆಯನ್ನು ಗಮನಿಸಿದರೆ ನಮ್ಮ ಪರಸ್ಪರ ಹಿತದೃಷ್ಟಿಯಿಂದ ಅದನ್ನು compliance@polencapital.comಗೆ ವರದಿ ಮಾಡಬೇಕು.



ಹೆಣ್ಣೂರು, ಹೆಬ್ಬಾಳ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತ

ಸಹೋದರಿಯರು ಸೇರಿ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಮುಖ್ಯಾಂಶಗಳು

- ಮೂರು ಕಡೆ ಪ್ರತ್ಯೇಕ ಅಪಘಾತ
- ಲಾರಿ ಚಾಲಕನನ್ನು ಬಂಧಿಸಿದ ಹೆಣ್ಣೂರು ಪೊಲೀಸರು
- ಸತ್ಯಸಾಯಿ ಬಸ್ ನಿಲ್ದಾಣದ ಬಳಿ ನಿಯಂತ್ರಣ ತಪ್ಪಿದ ಬೈಕ್

ಬೆಂಗಳೂರು: ಹೆಣ್ಣೂರು, ಮಹದೇವಪುರ ಹಾಗೂ ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ವಿವಿಧ ಕಡೆ ಶನಿವಾರ ಸಂಭವಿಸಿದ ಮೂರು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಅಕ್ಕ–ತಂಗಿ, ಕಂಪನಿಯೊಂದರ ವ್ಯವಸ್ಥಾಪಕ ಹಾಗೂ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ ಯುವಕ ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ.

ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಥಣಿಸಂದ್ರ ಮುಖ್ಯರಸ್ತೆಯ ಸರಾಯಿಪಾಳ್ಯದ ಬಳಿ ಬಿಬಿಎಂಪಿಗೆ ಸೇರಿದ ಕಸ ತುಂಬಿಸುವ ಲಾರಿ ಹಾಗೂ ದ್ವಿಚಕ್ರ ವಾಹನ ನಡುವೆ ಸಂಭವಿಸಿದ ಅಪಘಾತದಲ್ಲಿ ಅಕ್ಕ–ತಂಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗೋವಿಂದಪುರದ ನಿವಾಸಿಗಳಾದ ನಿಗಾರ್ ಸುಲ್ತಾನಾ (32) ಹಾಗೂ ನಿಗಾರ್ ಇರ್ಫಾನಾ (30) ಮೃತಪಟ್ಟವರು. ಇಬ್ಬರಿಗೂ ಮದುವೆ ಆಗಿತ್ತು. ಕೆಲಸದ ನಿಮಿತ್ತ ಸಹೋದರಿಯರು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಆಗ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ತಿಳಿಸಿದರು.

'ಸಹೋದರಿಯರು ಗೋವಿಂದಪುರದಿಂದ ಥಣಿಸಂದ್ರದ ಮಾರ್ಗವಾಗಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಮುಂದೆ ಸಾಗುತ್ತಿದ್ದ ಕಾರಿನ ಚಾಲಕ ಏಕಾಏಕಿ ನಿಲ್ಲಿಸಿದ್ದ. ಇದರಿಂದ ಗಾಬರಿಗೊಂಡ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದವರು, ಬಲಕ್ಕೆ ತನ್ನ ವಾಹವನ್ನು ತಿರುಗಿಸಿದ್ದರು. ಅದೇ ಸಂದರ್ಭದಲ್ಲಿ ಹಿಂದಿನಿಂದ ವೇಗವಾಗಿ ಬಂದ ಬಿಬಿಎಂಪಿಗೆ ಸೇರಿದ ಕಸ ತುಂಬಿಸುವ ಲಾರಿ ಇವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಆಗಿದೆ. ಸಹೋದರಿಯರಿಬ್ಬರು ನೆಲದ ಮೇಲೆ ಉರುಳಿದ್ದಾರೆ. ಬಳಿಕ ಚಾಲಕನ ನಿಯಂತ್ರಣಕ್ಕೆ ಸಿಗದೇ ಲಾರಿಯ ಚಕ್ರಗಳು ಅವರ ಮೇಲೆ ಹರಿದಿವೆ. ಪರಿಣಾಮ ಇಬ್ಬರೂ ಸಹ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.



ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಲಾರಿ

ಘಟನೆಯಿಂದ ಆಕ್ರೋಶಗೊಂಡ ಸ್ಥಳೀಯರು ಪ್ರತಿಭಟಿಸಿದರು. ತಕ್ಷಣವೇ ಲಾರಿ ಚಾಲಕ ಗಾದಿಲಿಂಗನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಬಳ್ಳಾರಿ ಮೂಲದ ಗಾದಿಲಿಂಗನನ್ನು ಹೆಣ್ಣೂರು ಪೊಲೀಸರು ಬಂಧಿಸಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

'ನನ್ನ ಹಿರಿಯ ಮಗನ ಜನ್ಮದಿನಕ್ಕೆ ಶಾಪಿಂಗ್ ಮಾಡಲು ಸಹೋದರಿಯರು ತೆರಳಿದ್ದರು. ನಂತರ, ಆಸ್ಪತ್ರೆಗೆ ಹೋಗಿ ಬರಲು ಹೊರಟಿದ್ದರು. ಮನೆಯಿಂದ ಬಂದ ಅರ್ಧಗಂಟೆಯಲ್ಲಿ ಅಪಘಾತವಾಗಿದೆ. ಚಾಲಕ ಮದ್ಯ ಸೇವಿಸಿ ಲಾರಿ ಚಲಾಯಿಸುತ್ತಿದ್ದ. ಚಾಲಕನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಮೃತ ನಿಗಾರ್ ಇರ್ಫಾನಾ ಪತಿ ಇಮ್ರಾನ್ ಸೈಯ್ಯದ್ ತಿಳಿಸಿದ್ದಾರೆ.

ಕ್ಯಾಂಟರ್ ಡಿಕ್ಕಿ: ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಖಾಸಗಿ ಕಂಪನಿ ವ್ಯವಸ್ಥಾಪಕ, ರಾಮಚಂದ್ರಪುರ ನಿವಾಸಿ ಮನೋಹರ್ ವಿನಾಯಕ್ ರೋಖಡೆ(42) ಮೃತಪಟ್ಟಿದ್ದಾರೆ.

'ಮನೋಹರ್ ಅವರು ಶನಿವಾರ ಬೆಳಿಗ್ಗೆ 9.15ರ ಸುಮಾರಿಗೆ ತಮ್ಮ ಎಲೆಕ್ಟ್ರಿಕ್ ಬೈಕ್‌ನಲ್ಲಿ ಹೆಲ್ಮೆಟ್ ಧರಿಸಿಕೊಂಡು ಮನೆಯಿಂದ ದೇವನಹಳ್ಳಿ ಕಡೆ ಇರುವ ಕಚೇರಿಗೆ ತೆರಳುತ್ತಿದ್ದರು. ಹೆಬ್ಬಾಳ ಮೇಲ್ಸೇತುವೆಯಲ್ಲಿ ಹೋಗುವಾಗ ಹಿಂದಿನಿಂದ ವೇಗವಾಗಿ ಬಂದ ಕ್ಯಾಂಟರ್ ಚಾಲಕ, ಬೈಕ್‌ಗೆ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ ಕೆಳಗೆ ಬಿದ್ದ ಮನೋಹರ್ ಮೈಮೇಲೆ ಕ್ಯಾಂಟರ್ ಚಕ್ರಗಳು ಹರಿದಿವೆ. ಕೂಡಲೇ ಸ್ಥಳೀಯರು ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಅವರು ಮೃತಪಟ್ಟಿದ್ದಾರೆ' ಎಂದು ಸಂಚಾರ ಪೊಲೀಸರು ತಿಳಿಸಿದರು.

ಆರೋಪಿ ಕ್ಯಾಂಟರ್ ಚಾಲಕ ರಮೇಶ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ನೋಟಿಸ್ ಕೊಟ್ಟು ಕಳುಹಿಸಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಮತ್ತೊಂದು ಪ್ರಕರಣದಲ್ಲಿ ವೇಗವಾಗಿ ಹೋಗುತ್ತಿದ್ದ ಬೈಕ್, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದುಕೊಂಡು ಹಿಂಬದಿ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಮಹದೇವಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮಾರತ್‌ಹಳ್ಳಿ ನಿವಾಸಿ ವೀರೇಶ್(30) ಮೃತಪಟ್ಟವರು.

ಘಟನೆಯಲ್ಲಿ ಬೈಕ್ ಚಾಲಕ ಕುಂದಲಹಳ್ಳಿ ನಿವಾಸಿ ಜಗದೀಶ್ ಅವರಿಗೆ ಗಂಭೀರ ಗಾಯವಾಗಿದ್ದು, ಖಾಸಗಿ ಆಸ್ಪತ್ರೆಯ ತುರ್ತುನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಫುಡ್ ಡೆಲಿವರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ವೀರೇಶ್ ಮತ್ತು ಜಗದೀಶ್ ಶನಿವಾರ ಮುಂಜಾನೆ 4ರ ಸುಮಾರಿಗೆ ಚಿಕ್ಕಬಳ್ಳಾಪುರದ ನಂದಿಬೆಟ್ಟಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದರು. ಆಗ ಬೈಕ್ ನಿಯಂತ್ರಣ ತಪ್ಪಿ ಬಿಗ್‌ಬಜಾರ್ ಸಮೀಪದ ಸತ್ಯಸಾಯಿ ಬಸ್ ನಿಲ್ದಾಣ ಬಳಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿತ್ತು. ಮಹದೇವಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿಕ್ಷಕನ ಬಂಧನ

ಬೆಂಗಳೂರು: ಪಿಡಿಒ, ಕೆಎಎಸ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾಸು ಮಾಡಿಸುವುದಾಗಿ ನಂಬಿಸಿ ಅಭ್ಯರ್ಥಿಗಳು ಹಾಗೂ ಅವರ ಪೋಷಕರಿಂದ ಲಕ್ಷಾಂತರ ರೂಪಾಯಿ ಪಡೆದು ವಂಚಿಸುತ್ತಿದ್ದ ಮತ್ತೊಬ್ಬ ಆರೋಪಿಯನ್ನು ನಗರದ ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಪ್ರೌಢಶಾಲಾ ಶಿಕ್ಷಕ ಸಿಕಂದರ್ ಚೌಧರಿ(44) ಬಂಧಿತ ಆರೋಪಿ. ಈತನಿಂದ ₹25 ಲಕ್ಷ ನಗದು, ಮೊಬೈಲ್ ಹಾಗೂ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ.


ಈ ಹಿಂದೆ ವಿಜಯನಗರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ರೈಲ್ವೆ ಇಲಾಖೆಯ ಪ್ರಧಾನ ಟಿಕೆಟ್ ಇನ್‌ಸ್ಪೆಕ್ಟರ್ ಗೋವಿಂದರಾಜ್ ಹಾಗೂ ಇಬ್ಬರು ಮಧ್ಯವರ್ತಿಗಳನ್ನು ಬಂಧಿಸಿದ್ದರು. ವಂಚನೆ ಜಾಲದಲ್ಲಿ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ.

'ಗಾಂಧಿನಗರದ ಸಜ್ಜನ್ ಲಾಡ್ಜ್‌ನಲ್ಲಿ ತಂಗಿದ್ದ ಸಿಕಂದರ್ ಚೌಧರಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಬಂಧಿಸಲಾಯಿತು. ಮಧ್ಯವರ್ತಿಗಳ ಮೂಲಕ ಕೆಎಎಸ್, ಪಿಡಿಒ, ಪಿಎಸ್‌ಐ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುತ್ತಿರುವ ಪರೀಕ್ಷಾರ್ಥಿಗಳನ್ನು ಸಂಪರ್ಕಿಸುತ್ತಿದ್ದ. ಲಾಡ್ಜ್‌ನಲ್ಲಿ ಕುಳಿತು ಕಾರ್ಯಾಚರಣೆ ನಡೆಸುತ್ತಿದ್ದ' ಎಂದು ಪೊಲೀಸರು ಹೇಳಿದರು.

ಮರದ ಕಂಬ ಬಿದ್ದು ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ನ್ಯಾಷನಲ್ ಕಾಲೇಜು ಬಳಿ ನಿರ್ಮಾಣ ಹಂತದ ಕಟ್ಟಡದ ಸೆಂಟ್ರಿಂಗ್‌ಗೆ ಬಳಸಿದ್ದ ಮರದ ಕಂಬ ಬಿದ್ದು ವಿದ್ಯಾರ್ಥಿನಿ ಮೃತಪಟ್ಟಿದ್ದಾಳೆ.



ತೇಜಸ್ವಿನಿ

ತೇಜಸ್ವಿನಿ(15) ಮೃತ ವಿದ್ಯಾರ್ಥಿನಿ. ಘಟನೆ ಸಂಬಂಧ ನಿರ್ಲಕ್ಷ್ಯ ವಹಿಸಿದ ಆರೋಪದಡಿ ಕಟ್ಟಡದ ಮಾಲೀಕರ ವಿರುದ್ಧ ವಿ.ವಿ ಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ತೇಜಸ್ವಿನಿ, ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಓದುತ್ತಿದ್ದಳು. ಶನಿವಾರ ಮಧ್ಯಾಹ್ನ ಶಾಲೆ ಮುಗಿಸಿ, ನಡೆದು ಮನೆಯತ್ತ ತೆರಳುತ್ತಿದ್ದಳು. ಆಗ ಮರದ ಕಂಬ ವಿದ್ಯಾರ್ಥಿನಿಯ ತಲೆಯ ಮೇಲೆ ಬಿದ್ದಿದೆ. ಸ್ಥಳದಲ್ಲಿದ್ದವರು ವಿದ್ಯಾರ್ಥಿನಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾಳೆ ಎಂದು ಮೂಲಗಳು ತಿಳಿಸಿವೆ.

ವಿ.ವಿ ಪುರ ಠಾಣೆಯ ಸಮೀಪವೇ ಬಹುಮಹಡಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿತ್ತು. ನಾಲ್ಕನೇ ಮಹಡಿಯಲ್ಲಿ ಸೆಂಟ್ರಿಂಗ್ ಕೆಲಸಕ್ಕೆಂದು ಮರದ ಕಂಬಗಳನ್ನು ಅಳವಡಿಸಲಾಗಿತ್ತು. ಕಂಬವೊಂದು ವಿದ್ಯಾರ್ಥಿನಿಯ ತಲೆ ಮೇಲೆ ಬಿದ್ದಿದೆ. ಬಾಲಕಿಯ ತಂದೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

'ಕಾಮಗಾರಿ ವೇಳೆ ಕಟ್ಟಡದ ಮಾಲೀಕ ಹಾಗೂ ಗುತ್ತಿಗೆದಾರ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ' ಎಂದು ಪೊಲೀಸರು ತಿಳಿಸಿದರು.

ಪ್ರತಿಭಟನೆ– ಆಕ್ರೋಶ: ಕಟ್ಟಡದ ಮಾಲೀಕರು ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ವಿದ್ಯಾರ್ಥಿನಿ ಕುಟುಂಬಸ್ಥರು ಹಾಗೂ ಸ್ಥಳೀಯರು ಪ್ರತಿಭಟನೆ ನಡೆಸಿದರು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಭರವಸೆ ನೀಡಿದ ನಂತರ ಪ್ರತಿಭಟನೆ ಕೈಬಿಡಲಾಯಿತು.

'ಅಪ್ಪು' ಡಾನ್ಸ್ ಅಕಾಡೆಮಿಯಲ್ಲಿ ತೇಜಸ್ವಿನಿ ನೃತ್ಯ ತರಬೇತಿ ಪಡೆಯುತ್ತಿದ್ದಳು. ನೃತ್ಯ ಕ್ಷೇತ್ರದಲ್ಲಿ ಸಾಧನೆ ಮಾಡುವ ಆಸೆಯಿತ್ತು. ಹಲವು ನೃತ್ಯ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಬಹುಮಾನ ಗಳಿಸಿದ್ದಳು' ಎಂದು ಕುಟುಂಬಸ್ಥರು ಕಣ್ಣೀರು ಹಾಕಿದರು.

ವ್ಯವಸ್ಥಾಪಕ ಸೇರಿದಂತೆ ಮೂವರ ವಿರುದ್ಧ ಎಫ್‌ಐಆರ್ ದಾಖಲು

ಮದ್ಯ ಕುಡಿಸಿ ಯುವತಿಗೆ ಲೈಂಗಿಕ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬ್ರಿಗೇಡ್ ರಸ್ತೆಯ ಪಬ್‌ವೊಂದರಲ್ಲಿ ಡಿ.31ರಂದು ಕಂಪನಿಯೊಂದು ಆಯೋಜಿಸಿದ್ದ 'ಈವೆಂಟ್ ಪ್ರಮೋಟ್' ಕಾರ್ಯಕ್ರಮದಲ್ಲಿ ಕರ್ತವ್ಯ ನಿರತ ಯುವತಿಗೆ ಬಲವಂತದಿಂದ ಮದ್ಯ ಕುಡಿಸಿ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಮೂವರು ಆರೋಪಿಗಳ ವಿರುದ್ಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

22 ವರ್ಷದ ಸಂತ್ರಸ್ತೆ ನೀಡಿದ ದೂರಿನ ಅನ್ವಯ ಕಂಪನಿಯ ವ್ಯವಸ್ಥಾಪಕ ಹೇಮಂತ್, ಸಹೋದ್ಯೋಗಿಗಳಾದ ಪುನೀತ್ ಹಾಗೂ ಅಜಿತ್ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಕಂಪನಿಯ ಪರವಾಗಿ ಬ್ರಿಗೇಡ್ ರಸ್ತೆಯ ಪಬ್‌ವೊಂದರಲ್ಲಿ ಸಿಗರೇಟ್ ಪ್ರಮೋಷನ್ ಕೆಲಸ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ ಜತೆಗಿದ್ದ ಕಂಪನಿಯ ವ್ಯವಸ್ಥಾಪಕ ಹೇಮಂತ್ 'ತನ್ನನ್ನು ಏಕಾಂಗಿಯಾಗಿ ಭೇಟಿ ಆಗುವಂತೆ' ಸೂಚಿಸಿದ್ದ. ರಾತ್ರಿ 10.30ರ ಸುಮಾರಿಗೆ ಹೇಮಂತ್‌ನನ್ನು ಭೇಟಿ ಮಾಡಿದ್ದೆ. ಆಗ ಹೇಮಂತ್ ಮದ್ಯ ಸೇವಿಸುವಂತೆ ಒತ್ತಾಯಿಸಿದ್ದ. ಕೆಲಸದ ಸಮಯವಾದ ಕಾರಣ ನಿರಾಕರಿಸಿದ್ದೆ. ತಾನೂ ವ್ಯವಸ್ಥಾಪಕ ಆಗಿರುವುದರಿಂದ ಸಂಪೂರ್ಣ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎಂದು ಹೇಳಿ, ಬಲವಂತದಿಂದ ಮದ್ಯಪಾನ ಮಾಡಿಸಿದ್ದ. ಮದ್ಯದ ನಶೆಯಲ್ಲಿ ಹೇಮಂತ್ ನನ್ನ ಜತೆಗೆ ಅಸಭ್ಯವಾಗಿ ವರ್ತಿಸಿದ್ದ. ನಂತರ, ಪುನೀತ್ ಹಾಗೂ ಅಜಿತ್ ಜತೆಗೆ ಸೇರಿಕೊಂಡು, ಕಾರಿನಲ್ಲಿ ಸುತ್ತಾಡಿಸಿ ರಸ್ತೆಯಲ್ಲೇ ಬಿಟ್ಟು ಹೋಗಿದ್ದರು. ತಾಯಿಗೆ ಕರೆ ಮಾಡಿ ಸ್ಥಳಕ್ಕೆ ಕರೆಸಿಕೊಂಡು ಮನೆಗೆ ತೆರಳಿದ್ದೆ' ಎಂಬುದಾಗಿ ಸಂತ್ರಸ್ತೆ ನೀಡಿರುವ ದೂರು ಆಧರಿಸಿ, ಎಫ್‌ಐಆರ್ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

ಮದ್ಯದ ನಶೆಯಲ್ಲಿ ಇರುವಾಗ ನನ್ನನ್ನು ತಬ್ಬಿಕೊಂಡು ಅಸಭ್ಯ ವರ್ತನೆ ತೋರಿದ ಹೇಮಂತ್ ಹಾಗೂ ರಸ್ತೆಗಳಲ್ಲಿ ಸುತ್ತಾಡಿಸಿ ಜವಾಬ್ದಾರಿಯಿಲ್ಲದೇ ಬಿಟ್ಟು ಹೋದ ಪುನೀತ್ ಹಾಗೂ ಅಜಿತ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂತ್ರಸ್ತೆ ದೂರು ನೀಡಿದ್ದಾರೆ.

ಮಹಿಳೆ ಜತೆ ಅಸಭ್ಯ ವರ್ತನೆ: ಆಟೊ ಚಾಲಕನ ಬಂಧನ

ಮಹಿಳಾ ಪ್ರಯಾಣಿಕರೊಬ್ಬರ ಜತೆಗೆ ಅಸಭ್ಯ ವರ್ತನೆ ತೋರಿದ ಆರೋಪದಡಿ ಆಟೊ ಚಾಲಕನನ್ನು ಅಮೃತಹಳ್ಳಿ ಠಾಣೆ ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.

ರಾಯಚೂರು ಜಿಲ್ಲೆಯ ಲಿಂಗಸುಗೂರು ಮೂಲದ ಆಟೊ ಚಾಲಕ ಸುನಿಲ್ ಬಂಧಿತ ಆರೋಪಿ. ಒಂದೂವರೆ ತಿಂಗಳ ಹಿಂದೆ ಈತ ನಗರಕ್ಕೆ ಬಂದಿದ್ದ. ಆಟೊ ಚಾಲಕನ ವೃತ್ತಿ ಮಾಡುತ್ತಿದ್ದ.

ಥಣಿಸಂದ್ರದ ನಿವಾಸಿಯಾಗಿದ್ದ ಮಹಿಳೆ, ಗುರುವಾರ ರಾತ್ರಿ ಕೆಲಸದ ನಿಮಿತ್ತ ಮನೆಯಿಂದ ಹೊರಕ್ಕೆ ಹೋಗಿದ್ದರು. ವಾಪಸ್ ತೆರಳಲು ಹೊರಮಾವಿನಿಂದ ಥಣಿಸಂದ್ರಕ್ಕೆ 'ನಮ್ಮ ಯಾತ್ರಿ' ಆ್ಯಪ್‌ನಲ್ಲಿ ಆಟೊ ಬುಕ್ ಮಾಡಿದ್ದರು. ರಾತ್ರಿ 8.55ರ ಸುಮಾರಿಗೆ ಪಿಕಪ್ ಲೊಕೇಷನ್‌ಗೆ ಆಟೊ ಬಂದಿತ್ತು. ಆಟೊ ಚಾಲಕನು ಮಹಿಳೆಯನ್ನು ಥಣಿಸಂದ್ರ ಮಾರ್ಗಕ್ಕೆ ಕರೆದೊಯ್ಯದೇ ಬೇರೊಂದು ಮಾರ್ಗದಲ್ಲಿ ಕರೆದೊಯ್ಯುತ್ತಿದ್ದ. ಇದರಿಂದ ಗಾಬರಿಗೊಂಡಿದ್ದ ಮಹಿಳೆ ಕಿರುಚಿಕೊಂಡು ಆಟೊದಿಂದ ಜಿಗಿದು ಪಾರಾಗಿದ್ದರು. ಮಹಿಳೆಯ ಪತಿ ಅಜರ್ ಖಾನ್ ಅವರು 'ಎಕ್ಸ್' ಖಾತೆಯಲ್ಲಿ ಘಟನೆ ಕುರಿತು ಮಾಹಿತಿ ಹಂಚಿಕೊಂಡಿದ್ದರು. ಅಲ್ಲದೇ ಅದನ್ನು ನಗರ ಪೊಲೀಸರಿಗೆ ಟ್ಯಾಗ್ ಮಾಡಿದ್ದರು. ಅದನ್ನು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಅಮೃತಹಳ್ಳಿ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದರು.

'ಆಟೊ ಚಾಲಕ ಇತ್ತೀಚೆಗಷ್ಟೇ ಬೆಂಗಳೂರಿಗೆ ಬಂದಿದ್ದ. ಕೆಲವು ಸ್ಥಳಗಳ ವಿಳಾಸ ಆತನಿಗೆ ಗೊತ್ತಿರಲಿಲ್ಲ. ಗೂಗಲ್ ಮ್ಯಾಪ್ ಪರಿಶೀಲನೆ ನಡೆಸಿದಾಗ ಆಟೊ ಹೆಬ್ಬಾಳ ಮೇಲ್ಸೇತುವೆಯಲ್ಲಿ ಸಾಗಿರುವುದು ಪತ್ತೆಯಾಗಿದೆ. ಮಹಿಳೆ ನೀಡಿದ್ದ ವಿಳಾಸದಂತೆ ಸಾಗದೇ ಬೇರೊಂದು ಮಾರ್ಗದಲ್ಲಿ ತೆರಳಿದ್ದ ಕಾರಣಕ್ಕೆ ಆಕೆ ಭಯಗೊಂಡು ಆಟೊ ನಿಲ್ಲಿಸುವಂತೆ ಹೇಳಿದ್ದರು. ಮೇಲ್ಸೇತುವೆಯಿಂದ ಕೆಳಕ್ಕೆ ಇಳಿದ ಮೇಲೆ ಮಹಿಳೆ ಆಟೊದಿಂದ ಕೆಳಕ್ಕೆ ಇಳಿದು, ಹಣ ಪಾವತಿಸಿ ಹೋಗಿದ್ದಾರೆ. ಬಳಿಕ ಪತಿಗೆ ಕರೆ ಮಾಡಿ ಬೇರೊಂದು ಆಟೊ ಪಡೆದು ಮನೆಗೆ ಹೋಗಿದ್ದರು. ಸದ್ಯ ಮಹಿಳೆಯ ಪತಿ ನೀಡಿರುವ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಪ್ರಕರಣದ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಪತ್ನಿ, ಅತ್ತೆ, ಬಾಮೈದನಿಗೆ ಜಾಮೀನು

ಸಾಫ್ಟ್‌ವೇರ್ ಉದ್ಯೋಗಿ ಅತುಲ್ ಆತ್ಮಹತ್ಯೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಉದ್ಯೋಗಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಆತನ ಪತ್ನಿ ನಿಖಿತಾ ಸಿಂಘಾನಿಯಾ ಸೇರಿದಂತೆ ಮೂವರಿಗೆ 29ನೇ ಸಿಟಿ ಸಿವಿಲ್ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜನವರಿ 4ರಂದೇ ಜಾಮೀನು ಅರ್ಜಿಯನ್ನು ಇತ್ಯರ್ಥಗೊಳಿಸಬೇಕು ಎಂದು ಹೈಕೋರ್ಟ್ ಸೂಚಿಸಿತ್ತು. ಇದಕ್ಕೂ ಮುನ್ನ ಜಾಮೀನು ಬಗ್ಗೆ ವಾದ, ಪ್ರತಿವಾದ ಆಲಿಸಿದ್ದ ನ್ಯಾಯಾಲಯವು, ಜಾಮೀನು ಅರ್ಜಿ ಪುರಸ್ಕರಿಸಿ, ಮೂವರು ಆರೋಪಿತರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿದೆ.

ಭಾನುವಾರದ ರಜೆಯ ಕಾರಣ ಆರೋಪಿಗಳು ಸೋಮವಾರ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಾರತ್ ಹಳ್ಳಿ ಪೊಲೀಸರಿಂದ ಬಂಧಿತರಾಗಿದ್ದ ಅತುಲ್ ಪತ್ನಿ ನಿಖಿತಾ ಸಿಂಘಾನಿಯಾ, ಅತ್ತೆ ನಿಶಾ ಸಿಂಘಾನಿಯಾ ಹಾಗೂ ಬಾಮೈದ ಅನುರಾಗ್ ಸಿಂಘಾನಿಯಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ನಡೆಸಿತ್ತು. ಇದಕ್ಕೆ ಆಕ್ಷೇಪಿಸಿದ್ದ ಸರ್ಕಾರದ ಪರ ಅಭಿಯೋಜಕಿ ಭಾಗ್ಯಲಕ್ಷ್ಮೀ ಅವರು ಆರೋಪಿತರಿಗೆ ಜಾಮೀನು ನೀಡಬಾರದೆಂದು ತಕರಾರು ಅರ್ಜಿ ಸಲ್ಲಿಸಿ ವಾದ ಮಂಡಿಸಿದ್ದರು.

ಪತ್ನಿ ಹಾಗೂ ಮನೆಯವರು ಕಿರುಕುಳ ನೀಡುತ್ತಿರುವುದಾಗಿ ಆರೋಪಿಸಿ ಮರಣ ಪತ್ರ ಬರೆದು ಡಿಸೆಂಬರ್ 9ರಂದು ಮಾರತ್ ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯಲ್ಲಿ ಅತುಲ್ ಸುಭಾಷ್ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸಂಬಂಧ ಭಾರತೀಯ ನ್ಯಾಯ ಸಂಹಿತೆ 108ರ ಆತ್ಮಹತ್ಯೆ ಪ್ರಚೋದನೆಯಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಡಿ.20ರಂದು ನಿಖಿತಾಳನ್ನು ಹರಿಯಾಣದ ಗುರುಗ್ರಾಮ ಹಾಗೂ ತಾಯಿ ಹಾಗೂ ಸಹೋದರರನ್ನು ಉತ್ತರಪ್ರದೇಶದ ಪ್ರಯಾಗ್‌ರಾಜ್‌ನ ಹೋಟೆಲ್‌ವೊಂದರಲ್ಲಿ ಬಂಧಿಸಿದ್ದರು.

ಎಎಸ್‌ಐ ಸೆರೆ

ಬೆಂಗಳೂರು: ಜಪ್ತಿ ಮಾಡಿದ್ದ ಆಟೊ ಬಿಡುಗಡೆಗೆ ₹40 ಸಾವಿರ ಲಂಚ ಪಡೆದ ಸಂಜಯ ನಗರ ಠಾಣೆಯ ಎಎಸ್‌ಐ ಮತ್ತು ಮಧ್ಯವರ್ತಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕೆ.ಜಿ.ಹಳ್ಳಿ ನಿವಾಸಿ ಮೊಹಮದ್ ಸುಜತ್ ಅವರ ಆಟೊ ಜಪ್ತಿ ಮಾಡಲಾಗಿತ್ತು. ಆಟೊ ಬಿಡುಗಡೆ ಮಾಡಲು ₹50 ಸಾವಿರಕ್ಕೆ ಬೇಡಿಕೆ ಇರಿಸಿದ್ದರು. ಈ ಸಂಬಂಧ ಮೊಹಮದ್ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಮಧ್ಯವರ್ತಿ ಸೈಯದ್ ರಿಜ್ವಾನ್ ಮೂಲಕ ₹ 40 ಸಾವಿರ ಹಣ ಪಡೆಯುವ ವೇಳೆ ಡಿವೈಎಸ್‌ಪಿ ನಾಗೇಶ್ ಹಸ್ಲಾರ್ ನೇತೃತ್ವದ ತಂಡ ದಾಳಿ ನಡೆಸಿ, ಹಣದ ಸಮೇತ ಎಎಸ್‌ಐ ಮತ್ತು ಮಧ್ಯವರ್ತಿಯನ್ನು ಬಂಧಿಸಿದೆ. ತನಿಖೆ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಚಾರ ಸಂಕಿರಣದಲ್ಲಿ ಬೇಲಿ ಮಠದ ಶಿವರುದ್ರ ಸ್ವಾಮೀಜಿ ಕಿವಿಮಾತು

'ಒಗ್ಗಟ್ಟಿನಿಂದ ಹೋರಾಡಿದರೆ ಸವಲತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಣ್ಣ ಸಮುದಾಯಗಳು ಒಗ್ಗಟ್ಟಾಗಿ ಹೋರಾಟ ಮಾಡಿದಾಗ ಮಾತ್ರ ಹಕ್ಕು ಮತ್ತು ಸವಲತ್ತು ಪಡೆಯಲು ಸಾಧ್ಯ ಎಂದು ಬೇಲಿ ಮಠದ ಶಿವರುದ್ರ ಸ್ವಾಮೀಜಿ ಹೇಳಿದರು.

ನಗರದಲ್ಲಿ ಶನಿವಾರ ಮೂಲ ಮಾದಿಗ ಮೂಮೆಂಟ್ ಆಯೋಜಿಸಿದ್ದ ಮಾದಾರ ಚೆನ್ನಯ್ಯರವರ ಜಯಂತಿ, ಮತಾಂತರ ಮತ್ತು ಒಳ ಮೀಸಲಾತಿ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಬತ್ತಿ, ಎಣ್ಣೆ, ದೀಪವು ಒಂದಾದಾಗ ಮಾತ್ರ ಬೆಳಕನ್ನು ಕಾಣಬಹುದು. ಸಮುದಾಯಗಳು ಒಂದೊಂದು ದಿಕ್ಕಿನಲ್ಲಿ ಹೋರಾಟ ನಡೆಸಿದರೆ ಏನು ಮಾಡಲು ಆಗುವುದಿಲ್ಲ. ಮಾದಿಗ ಸಮುದಾಯ ತನ್ನ ಸ್ವಾಭಿಮಾನವನ್ನು ಉಳಿಸಿಕೊಂಡು ತಮ್ಮದೇ ಹೋರಾಟಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.



ನಗರದಲ್ಲಿ ಮೂಲ ಮಾದಿಗ ಮೂಮೆಂಟ್ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ದಲಿತ ಸಂಘರ್ಷ ಸಮಿತಿ ಮುಖಂಡ ಎನ್. ಮೂರ್ತಿ, ಬೇಲಿ ಮಠದ ಶಿವರುದ್ರ ಸ್ವಾಮೀಜಿ, 'ಮುಖ್ಯಮಂತ್ರಿ' ಚಂದ್ರು ಮತ್ತು ಕೆ.ಎಂ.ವಸುಂಧರ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಬಸವಣ್ಣ ಅವರು ತಮ್ಮ ಹಲವಾರು ವಚನಗಳಲ್ಲಿ ಮಾದಾರ ಚೆನ್ನಯ್ಯ ಅವರ ಬಗ್ಗೆ ಪ್ರಸ್ತಾಪಿಸಿದ್ದಾರೆ ಎಂದರು.

ದಲಿತ ಸಂಘರ್ಷ ಸಮಿತಿ ಮುಖಂಡ ಎನ್.ಮೂರ್ತಿ, ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಮಾತನಾಡಿದರು.

ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕಿ ಕೆ.ಎಂ.ವಸುಂಧರ, ಶಿರಾ ಕೆ.ಎಸ್. ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಸ್.ಬಿ. ನರಸಿಂಹ ಮೂರ್ತಿ, ಒಕ್ಕೂಟದ ಸಂಚಾಲಕ ಎಚ್.ಎಂ.ಸುಬ್ಬರಾಜ್, ಜೆ.ಸಿ. ಪ್ರಕಾಶ್ ಪಾಲ್ಗೊಂಡಿದ್ದರು.

ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣ • ಸಚಿವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಬೃಹತ್ ಪ್ರತಿಭಟನೆ

ಪ್ರಿಯಾಂಕ್ ನಿವಾಸಕ್ಕೆ ಮುತ್ತಿಗೆಗೆ ಯತ್ನ

ಪ್ರಜಾವಾಣಿ ವಾರ್ತೆ



ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜೀನಾಮೆ ನೀಡಲು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಕಲಬುರಗಿಯಲ್ಲಿ ಸಚಿವ ಪ್ರಿಯಾಂಕ್ ಮನೆಗೆ ಮುತ್ತಿಗೆ ಹಾಕಲು ಮೆರವಣಿಗೆಯಲ್ಲಿ ಸಾಗಿದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿ: ರಾಜೀನಾಮೆಗೆ ಒತ್ತಾಯಿಸಿ ಸಚಿವ ಪ್ರಿಯಾಂಕ್ ಖರ್ಗೆ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿ ಬಿಜೆಪಿಯ 70ಕ್ಕೂ ಹೆಚ್ಚು ಮುಖಂಡರನ್ನು ಶನಿವಾರ ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

‘ಬೀದರ್‌ನ ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆಗೆ ಸಚಿವ ಪ್ರಿಯಾಂಕ್ ಖರ್ಗೆ ಕಾರಣರಾಗಿದ್ದು, ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು’ ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಜಗತ್ ವೃತ್ತದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಬಿಜೆಪಿ ಕಾರ್ಯಕರ್ತರು ಪ್ರತಿಭಟನಾ ಸಭೆ ನಡೆಸಿದರು. ಬಳಿಕ ನಗರದ ಐವಾನ್ ಇ ಶಾಹಿ ಬಡಾವಣೆಯಲ್ಲಿರುವ ಪ್ರಿಯಾಂಕ್ ಖರ್ಗೆ ಮನೆಯತ್ತ ಧಾವಿಸಿದರು. ಸುಮಾರು ಎರಡು ಕಿ.ಮೀ ಪಾದಯಾತ್ರೆಯಲ್ಲಿ ಬಂದ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ಜಿಲ್ಲಾಧಿಕಾರಿ ಕಚೇರಿ ಎದುರು ತಡೆದರು. ಈ ವೇಳೆ ಭಾರಿ ತಳ್ಳಾಟ ನಡೆಯಿತು. ಛಲವಾದಿ ನಾರಾಯಣಸ್ವಾಮಿ, ಮಾಜಿ ಸಂಸದ ಡಾ. ಉಮೇಶ್ ಜಾಧವ್ ಅವರು ಅಕ್ಷರಶಃ ಪೊಲೀಸ್ ಬ್ಯಾರಿಕೇಡ್‌ಗಳನ್ನು ಪಕ್ಕಕ್ಕೆ ತಳ್ಳಿದರು. ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿದ ಪೊಲೀಸರನ್ನೂ ನೂಕಿದರು. ಬಂದೋಬಸ್ತ್‌ಲ್ಲಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರು ನೆಲಕ್ಕೆ ಬಿದ್ದರು. ನಂತರ ಮತ್ತೊಂದು ಸುತ್ತಿನ ಬ್ಯಾರಿಕೇಡ್ ಕೋಟೆಯನ್ನು ದಾಟಿದ ಮುಖಂಡರನ್ನು ಪೊಲೀಸರು ಮುನ್ನೆಚ್ಚರಿಕಾ ಕ್ರಮವಾಗಿ ವಶಕ್ಕೆ ಪಡೆದು ಬಸ್‌ಗೆ ಹತ್ತಿಸಿಕೊಂಡು ಕರೆದೊಯ್ದರು.

ಆರ್.ಅಶೋಕ, ವಿಧಾನಪರಿಷತ್ ಸದಸ್ಯರಾದ ಸಿ.ಟಿ.ರವಿ, ಎನ್. ರವಿಕುಮಾರ್, ಶಾಸಕರಾದ ಬಸವರಾಜ ಮತ್ತಿಮಡು, ಡಾ.ಸಿದ್ದಲಿಂಗಪ್ಪ ಪಾಟೀಲ, ಡಾ. ಅವಿನಾಶ್ ಜಾಧವ್ ಹಾಗೂ ಮತ್ತಿತರ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು. ಪ್ರಿಯಾಂಕ್ ಅವರ ಮನೆ ಸಂಪರ್ಕಿಸುವ ಕೆಕೆಆರ್‌ಡಿಬಿ ಕಚೇರಿಯ ಬಳಿಯೂ ಭಾರಿ ಪೊಲೀಸ್ ಭದ್ರತೆಯನ್ನು ಒದಗಿಸಲಾಗಿತ್ತು.

ಪೊಲೀಸ್ ಕಮಿಷನರ್, ನಾಲ್ವರು ಎಸ್ಪಿ, 13 ಎಸಿಪಿಗಳ ನೇತೃತ್ವದಲ್ಲಿ 1,200ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

> ಸಿ.ಟಿ. ರವಿ ಸದನದಲ್ಲಿ ಏನು ಹೇಳಿದ್ದಾರೆ ಎಂಬುದು ಸ್ಪಷ್ಟವಾಗದಿದ್ದರೂ ತಕ್ಷಣ ಬಂಧಿಸಲಾಯಿತು. ಪ್ರಿಯಾಂಕ್ ವಿರುದ್ಧ ಡೆತ್ ನೋಟ್‌ನಲ್ಲಿ ಹೆಸರಿದ್ದರೂ ಸಚಿವರಾಗಿ ಹೇಗೆ ಮುಂದುವರೆದಿದ್ದಾರೆ?
> **ಛಲವಾದಿ ನಾರಾಯಣಸ್ವಾಮಿ**
> ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

> ಕೆ.ಎಸ್. ಈಶ್ವರಪ್ಪ ಅವರು ಲಂಚ ತೆಗೆದುಕೊಳ್ಳದಿದ್ದರೂ ಹೈಕಮಾಂಡ್ ಸೂಚನೆ ಮೇರೆಗೆ ರಾಜೀನಾಮೆ ಕೊಟ್ಟರು. ಪ್ರಿಯಾಂಕ್ ಖರ್ಗೆ ಹೆಸರು ಡೆತ್ ನೋಟ್‌ನಲ್ಲಿದ್ದರೂ ರಾಜೀನಾಮೆ ಪಡೆಯುತ್ತಿಲ್ಲವೇಕೆ?
> **ಆರ್.ಅಶೋಕ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

ವಿಜಯೇಂದ್ರ ಗೈರು: ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದಲ್ಲಿ ಮೊದಲಿನಿಂದಲೂ ಕಾಂಗ್ರೆಸ್ ಸರ್ಕಾರವನ್ನು ಟೀಕಿಸುತ್ತಿರುವ ಬಿಜೆಪಿ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಟನೆಗೆ ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳಿಂದ ಪಕ್ಷದ ಮುಖಂಡರು, ಕಾರ್ಯಕರ್ತರು ಬಂದಿದ್ದರು. ಆದರೆ, ಪ್ರಕರಣದ ಬಳಿಕ ಪ್ರಿಯಾಂಕ್ ಖರ್ಗೆ ವಿರುದ್ಧ ನಿರಂತರವಾಗಿ ವಾಗ್ದಾಳಿ ನಡೆಸುತ್ತಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳದಿರುವುದು ಕಂಡುಬಂತು.

ಕಾಂಗ್ರೆಸ್‌ನಿಂದ ಎಳನೀರು, ಚಹಾ ವ್ಯವಸ್ಥೆ

ಸಚಿವರ ಮನೆಗೆ ಮುತ್ತಿಗೆ ಹಾಕಲು ಬರುವ ಬಿಜೆಪಿ ಕಾರ್ಯಕರ್ತರಿಗೆ ವಿತರಿಸಲು ಕಾಂಗ್ರೆಸ್ ಕಾರ್ಯಕರ್ತರು ಸಚಿವರ ಮನೆ ಆವರಣದಲ್ಲಿ ಎಳನೀರು, ಚಹಾ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು. ಆದರೆ, ಮುತ್ತಿಗೆ ಹಾಕಲು ಪೊಲೀಸರು ಅವಕಾಶ ಕಲ್ಪಿಸಲಿಲ್ಲ. ಹೀಗಾಗಿ, ಬಿಜೆಪಿ ಕಾರ್ಯಕರ್ತರಿಗೆ ಎಳನೀರು, ಚಹಾ ಸಿಗಲಿಲ್ಲ.

ಕಾಂಗ್ರೆಸ್ ಕಾರ್ಯಕರ್ತರು ಗಾಂಧಿ ಟೋಪಿ ಧರಿಸಿ, ‘ಬಿಜೆಪಿ ಗೂಂಡಾಗಿರಿಗೆ ನಮ್ಮ ಗಾಂಧಿಗಿರಿ’ ಎಂಬ ಬ್ಯಾನರ್ ಹಾಕಿಕೊಂಡು, ಎಳನೀರು, ಚಹಾದೊಂದಿಗೆ ಕಾಯುತ್ತಿದ್ದರು. ಮುತ್ತಿಗೆ ಯತ್ನ ವಿಫಲವಾದ ಬಳಿಕ ಅವುಗಳನ್ನು ಪೊಲೀಸರು ಹಾಗೂ ಪಕ್ಷದ ಕಾರ್ಯಕರ್ತರಿಗೆ ವಿತರಿಸಿದರು.

ಪ್ರಿಯಾಂಕ್ ರಾಜೀನಾಮೆಗೆ ಬಿಜೆಪಿ ಆಗ್ರಹ

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿ ಆಡಳಿತಾರೂಢ ಕಾಂಗ್ರೆಸ್‌ನ ‘ಬಹಿರಂಗ ಸುಲಿಗೆ’ಯು ಗುತ್ತಿಗೆದಾರರೊಬ್ಬರ ಆತ್ಮಹತ್ಯೆಗೆ ಕಾರಣವಾಗಿದೆ ಎಂದು ಬಿಜೆಪಿ ಶನಿವಾರ ಆರೋಪಿಸಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರ ಪುತ್ರ ಮತ್ತು ರಾಜ್ಯ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದೆ.

ಸಿದ್ದರಾಮಯ್ಯ ಸರ್ಕಾರ ಕರ್ನಾಟಕದ ಇತಿಹಾಸದಲ್ಲೇ ಅತ್ಯಂತ ಭ್ರಷ್ಟ ಸರ್ಕಾರ ಎಂದು ಸಾಬೀತಾಗಿದೆ ಎಂದು ಬಿಜೆಪಿ ನಾಯಕ ಜಿವಿಎಲ್ ನರಸಿಂಹರಾವ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಗುತ್ತಿಗೆದಾರ ಸಚಿನ್ ಪಾಂಚಾಳ್ ಅವರ ಆತ್ಮಹತ್ಯೆಗೆ ಸಚಿವ ಪ್ರಿಯಾಂಕ್ ಖರ್ಗೆ ಅವರ ನಿಕಟವರ್ತಿ, ಸುಲಿಗೆಕೋರ ರಾಜು ಕಾಪನೂರ ಕಾರಣವಾಗಿರುವ ಆರೋಪ ಇದೆ. ಪ್ರಿಯಾಂಕ್ ಖರ್ಗೆ ಅಧಿಕಾರದಲ್ಲಿದ್ದರೆ, ಕಪನೂರ ಅವರನ್ನು ರಕ್ಷಿಸುವ ಪ್ರಯತ್ನಗಳು ನಿಸ್ಸಂದೇಹವಾಗಿ ನಡೆಯುತ್ತವೆ. ಹಾಗಾಗಿ, ಪ್ರಿಯಾಂಕ್ ಅವರ ರಾಜೀನಾಮೆಯನ್ನು ಕಾಂಗ್ರೆಸ್ ಹೈಕಮಾಂಡ್ ಪಡೆಯಬೇಕು ಎಂದು ಅವರು ಒತ್ತಾಯಿಸಿದ್ದಾರೆ.

‘ನಾವು ಬೀದಿಗಿಳಿದರೆ ಬಿಜೆಪಿಯವರು ಮನೆ ಖಾಲಿ ಮಾಡಬೇಕಾಗುತ್ತದೆ’



ಪ್ರಿಯಾಂಕ್ ಖರ್ಗೆ

ಬೆಂಗಳೂರು: ‘ನಾವು ಬೀದಿಗೆ ಇಳಿದರೆ ನೀವು ಮನೆ ಖಾಲಿ ಮಾಡಬೇಕಾಗುತ್ತದೆ. ನಾಲಿಗೆ ಮೇಲೆ ಹಿಡಿತ ಇಟ್ಟುಕೊಂಡು ಮಾತನಾಡಿ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಎಚ್ಚರಿಕೆ ನೀಡಿದರು.

‘ಸುಪಾರಿ ಕೊಟ್ಟಿದ್ದಾರೆ’ ಎಂಬ ಬಿ.ವೈ. ವಿಜಯೇಂದ್ರ ಹೇಳಿಕೆ ವಿಚಾರವಾಗಿ ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಪ್ರಿಯಾಂಕ್, ‘ನಿಮ್ಮ ತಂದೆ ಏನು ಮಾಡಿದ್ದಾರೆ? ಪೂಜ್ಯ ತಂದೆ ಅಂದುಬಿಟ್ಟ ಮಾತ್ರಕ್ಕೆ ಪೂಜ್ಯ ಆಗುವುದಿಲ್ಲ. ನಾವು ಬುದ್ಧ, ಬಸವ, ಅಂಬೇಡ್ಕರ್ ಮೇಲೆ ನಂಬಿಕೆ ಇಟ್ಟವರು’ ಎಂದರು.

‘ಅಧ್ಯಕ್ಷ ಸ್ಥಾನಕ್ಕೆ ಗೌರವ ಕೊಡುತ್ತೇವೆ ಅಂದ ಮಾತ್ರಕ್ಕೆ ಬಾಯಿಗೆ ಬಂದಂತೆ ಮಾತನಾಡುವುದಲ್ಲ’ ಎಂದೂ ವಾಗ್ದಾಳಿ ನಡೆಸಿದರು.

‘ಪ್ರತಿಭಟನೆಗೆ ಬರುವಂತೆ ಮೃತ ಗುತ್ತಿಗೆ ದಾರ ಸಚಿನ್ ಪಾಂಚಾಳ ಕುಟುಂಬದ ವರಿಗೆ ಬಿಜೆಪಿ ಯವರು ಬಲವಂತ ಮಾಡು ತ್ತಿದ್ದಾರೆ. ಪದೇ ಪದೇ ಸರ್ಕಾರದ ವಿರುದ್ಧ ಹೇಳಿಕೆ ಕೊಡಿಸುತ್ತಿದ್ದಾರೆ. ಸಚಿನ್ ಆತ್ಮಹತ್ಯೆ ಪ್ರಕರಣ ಸಂಬಂಧ ಸಿಐಡಿ ತನಿಖೆ ಆರಂಭವಾಗಿ ಎರಡು ದಿನ ಆಗಿದೆ. ಈಗಾಗಲೇ ಮಹಜರು ಮಾಡಿದ್ದಾರೆ. ಪಾರದರ್ಶಕವಾಗಿ ತನಿಖೆ ನಡೆಸುವುದು ಸರ್ಕಾರದ ಕರ್ತವ್ಯ. ಸಿಬಿಐಗೆ ವಹಿಸಬೇಕೆಂದು ಬಿಜೆಪಿಯವರು ಹೇಳಿದಾಗಲೆಲ್ಲ ಕೇಳಲು ಆಗುವುದಿಲ್ಲ’ ಎಂದರು.

‘ಗಂಗಾ ಕಲ್ಯಾಣ ಹಗರಣ, ಪಿಎಸ್ಐ ನೇಮಕಾತಿ ಹಗರಣವನ್ನು ಬಿಜೆಪಿಯವರು ಸಿಬಿಐಗೆ ಕೊಟ್ಟಿದ್ದಾರೆಯೇ? ಅವರ ಅವಧಿಯಲ್ಲಿ ಎಷ್ಟು ಕೇಸ್‌ಗಳನ್ನು ಸಿಬಿಐಗೆ ಕೊಟ್ಟಿದ್ದಾರೆ? ಮಾನವ ಸಂಪನ್ಮೂಲ ಇಲ್ಲ, ಸುಮ್ಮನೆ ವಹಿಸಬೇಡಿ ಎಂದು ಸಿಬಿಐನವರೇ ಹೇಳಿದ್ದಾರೆ. ಬಿಜೆಪಿಯವರ ಸ್ಕ್ರಿಪ್ಟ್‌ಗೆ ಕುಣಿಯಲು ಆಗುತ್ತದೆಯೇ? ಪ್ರತಿಪಕ್ಷದಲ್ಲಿ ಇರುವವರು ಜವಾಬ್ದಾರಿಯುತವಾಗಿ ಇರಬೇಕು’ ಎಂದರು.

‘ಆಪ್ತರದಲ್ಲ, ಅಹಿಂದ ಸಚಿವರ ಸಭೆ’

ಅಹಿಂದ ಸಚಿವರು ತಮ್ಮ ಸಮಸ್ಯೆ ಚರ್ಚಿಸಿದ್ದಾರೆ, ತಪ್ಪೇನಿದೆ: ಸಚಿವ ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸತೀಶ ಜಾರಕಿಹೊಳಿ ಮನೆಯಲ್ಲಿ ನಡೆದ ಔತಣಕೂಟದಲ್ಲಿ ಅಹಿಂದ ಸಚಿವರು ತಮ್ಮ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಆಪ್ತ ಸಚಿವರ ಸಭೆ ಎಂದು ಅಲ್ಲ, ಅಹಿಂದ ಸಚಿವರೂ ಇದ್ದರು. ತಮ್ಮ ಸಮಸ್ಯೆಗಳ ಬಗ್ಗೆ ಮಾತನಾಡಿರುವುದರಲ್ಲಿ ತಪ್ಪೇನಿದೆ’ ಎಂದು ಪ್ರಶ್ನಿಸಿದರು.

‘ನಾಳೆ ನಾವು, ಲಿಂಗಾಯತ ಶಾಸಕರು ಸಭೆ ಸೇರುತ್ತೇವೆ. ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತೇವೆ. ಅದನ್ನು ತಪ್ಪು ಎನ್ನಲು ಆಗುತ್ತದೆಯೇ? ಒಕ್ಕಲಿಗ ನಾಯಕರೂ ಕೂಡ ಅವರ ಸಮಸ್ಯೆಗಳ ಚರ್ಚೆಗೆ ಸೇರಿರುತ್ತಾರೆ. ಅದಕ್ಕೆ ಬೇರೆ ಅರ್ಥ ಏಕೆ’ ಎಂದೂ ಕೇಳಿದರು.

ವಿಪಕ್ಷಗಳು ರಾಜಕೀಯ ಮಾಡುತ್ತಿವೆ: ‘ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣ ಮುಂದಿಟ್ಟು ಬಿಜೆಪಿಯವರು ಪ್ರಿಯಾಂಕ್ ಖರ್ಗೆ ವಿರುದ್ಧ ಯಾಕೆ ಪ್ರತಿಭಟನೆ ಮಾಡಬೇಕು? ಆತ್ಮಹತ್ಯೆಗೂ ಪ್ರಿಯಾಂಕ್ ಅವರಿಗೂ ಏನು ಸಂಬಂಧ? ಪ್ರಕರಣದ ತನಿಖೆ ನಡೆಯುತ್ತಿದೆ. ಸತ್ಯ ಹೊರಬರಲಿದೆ. ವಿಪಕ್ಷಗಳು ಸುಮ್ಮನೆ ರಾಜಕೀಯ ಮಾಡುತ್ತಿವೆ’ ಎಂದರು.

ಸಂಪುಟ ಪುನಾರಚನೆ ಬಗ್ಗೆ ಮುಖ್ಯಮಂತ್ರಿ ನೀಡಿದ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಪಾಟೀಲ, ‘ಆ ಬಗ್ಗೆ ನನಗೆ ಗೊತ್ತಿಲ್ಲ. ಅದು ಮುಖ್ಯಮಂತ್ರಿಯ ಪರಮಾಧಿಕಾರ. ಹೈಕಮಾಂಡ್ ನಾಯಕರ ಜೊತೆ ಚರ್ಚಿಸಿ ತೀರ್ಮಾನಿಸುತ್ತಾರೆ’ ಎಂದರು.

‘ಹೈಕಮಾಂಡ್ ಹೇಳಿದರೆ ಡಿಕೆಶಿ ಮುಂದುವರಿಯಲಿ’

‘ನಮ್ಮ ಹೈಕಮಾಂಡ್ ಗಟ್ಟಿಯಾಗಿದೆ. ಹೈಕಮಾಂಡ್ ಹೇಳಿದರೆ ಡಿ.ಕೆ.ಶಿವಕುಮಾರ್ ಅವರೇ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಲಿ’ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ, ಸಚಿವ ಸ್ಥಾನ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಏನೇ ಆದರೂ ಎಲ್ಲವೂ ಹೈಕಮಾಂಡ್‌ಗೆ ಬಿಟ್ಟಿದ್ದು. ಬದಲಾವಣೆ ಮಾಡುವುದು, ಬಿಡುವುದು ವರಿಷ್ಠರ ತೀರ್ಮಾನ. ನನಗಂತೂ ಯಾವ ಹುದ್ದೆಯೂ ಬೇಡ. ಬೇಕಿದ್ದರೆ ಮಂತ್ರಿ ಸ್ಥಾನವೂ ಬೇಡ’ ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ‘ಒಬ್ಬರಿಗೆ ಒಂದೇ ಹುದ್ದೆ ಎಂಬ ಚರ್ಚೆ ಎಲ್ಲ ಕಾಲದಲ್ಲಿಯೂ ಇದೆ. ದೇವರಾಜ ಅರಸು ಕಾಲದಲ್ಲಿಯೂ ಕೂಡ ಒಬ್ಬರಿಗೆ ಒಂದೇ ಹುದ್ದೆ ಎಂದಿತ್ತು. ಅರಸು ಎರಡರಲ್ಲೂ ಮುಂದುವರಿಯುತ್ತೇನೆ ಎಂದಾಗ ಅವರನ್ನೇ ಪಕ್ಷ ತೆಗೆದುಬಿಟ್ಟಿತ್ತು’ ಎಂದರು.

‘ಮುಖ್ಯಮಂತ್ರಿಯವರೂ ಭಾಗವಹಿಸಿದ್ದ ಔತಣಕೂಟದಲ್ಲಿ ರಾಜಕೀಯವಾಗಿ ಯಾವುದೇ ಚರ್ಚೆ ಆಗಿಲ್ಲ. ಎಲ್ಲವೂ ಮಾಧ್ಯಮಗಳ ಸೃಷ್ಟಿ’ ಎಂದರು.

‘ರಾಜಕೀಯ ಮಹತ್ವ ನೀಡುವ ಅಗತ್ಯ ಇಲ್ಲ’

‘ಔತಣಕೂಟದಲ್ಲಿ ಎಲ್ಲರೂ ಊಟಕ್ಕೆ ಮಾತ್ರ ಸೇರಿದ್ದರು. ಕೆಪಿಸಿಸಿ ಅಧ್ಯಕ್ಷ ಸ್ಥಾನವೂ ಸೇರಿದಂತೆ ಯಾವ ವಿಷಯದ ಬಗ್ಗೆಯೂ ಚರ್ಚೆ ಮಾಡಿಲ್ಲ. ಇದಕ್ಕೆ ರಾಜಕೀಯ ಮಹತ್ವ ನೀಡುವ ಅಗತ್ಯ ಇಲ್ಲ’ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರರು, ‘ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಅವಾಚ್ಯ ಪದ ಬಳಸಿದ ಆರೋಪದ ಪ್ರಕರಣದಲ್ಲಿ ಸಭಾಪತಿ ಅನುಮತಿ ನೀಡಿದರೆ ಮಾತ್ರ ಸದನದೊಳಗೆ ಹೋಗಿ ಮಹಜರು ನಡೆಸಲು ಸಾಧ್ಯ. ಪ್ರಕರಣದ ಸ್ವರೂಪ ಯಾವ ರೀತಿಯದ್ದು ಎಂಬುದನ್ನು ಪರಿಶೀಲಿಸಿ ಸಭಾಪತಿ ನಿರ್ಧಾರ ತೆಗೆದುಕೊಳ್ಳುತ್ತಾರೆ’ ಎಂದರು.

ಸುದ್ದಿ 2 ನಿಮಿಷ

ರೈತರ ಹೋರಾಟ ಬೆಂಬಲಿಸಿ ಬಿ.ಆರ್.ಪಾಟೀಲ ಧರಣಿ

ಬೆಂಗಳೂರು: ನಿರಶನನಿರತ ರೈತ ಜಗಜೀತ್ ಸಿಂಗ್ ಡಲ್ಲೇವಾಲ್ ಅವರ ಬೇಡಿಕೆಗಳಿಗೆ ಕೇಂದ್ರ ಸರ್ಕಾರ ಸ್ಪಂದಿಸಬೇಕು ಎಂದು ಒತ್ತಾಯಿಸಿ ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಬಳಿ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯೂ ಆಗಿರುವ ಶಾಸಕ ಬಿ.ಆರ್. ಪಾಟೀಲ ಅವರು ಏಕಾಂಗಿಯಾಗಿ ಶನಿವಾರ ಪ್ರತಿಭಟನೆ ನಡೆಸಿದರು.

ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತರಿ ನೀಡಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಡಲ್ಲೇವಾಲ್ ನ. 26ರಿಂದ ಪಂಜಾಬ್–ಹರಿಯಾಣ ಗಡಿಯಲ್ಲಿ ನಿರಶನ ನಡೆಸುತ್ತಿದ್ದಾರೆ.

‘ಡಲ್ಲೇವಾಲ್ ಅವರ ಆರೋಗ್ಯ ಸ್ಥಿತಿ ತೀವ್ರ ಹದಗೆಟ್ಟಿದೆ. ಆದರೂ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ’ ಎಂದು ಪಾಟೀಲ ಆಕ್ರೋಶ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್‌ನ ಆದೇಶದ ಮೇರೆಗೆ ಡಲ್ಲೇವಾಲ್ ಅವರನ್ನು ಪಂಜಾಬ್ ಪಕ್ಕದ ಖನೌರಿ ಬಾರ್ಡರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೇಂದ್ರ ಸರ್ಕಾರ ಅವರ ಹಕ್ಕೊತ್ತಾಯಕ್ಕೆ ತಕ್ಷಣ ಸ್ಪಂದಿಸಬೇಕು. ಎಂಎಸ್‌ಪಿ ಕಾನೂನು ರಕ್ಷಣೆ ನೀಡಿ ರೈತರನ್ನೂ ಉಳಿಸಬೇಕು ಎಂದೂ ಆಗ್ರಹಿಸಿದರು.

ಪಾಟೀಲ ಅವರ ಪ್ರತಿಭಟನೆಗೆ ರೈತ ಹೋರಾಟಗಾರ ವೀರಸಂಗಯ್ಯ ಬೆಂಬಲ ಸೂಚಿಸಿದರು.



ಆರೋಗ್ಯ ವಿ.ವಿ. ಸಿಂಡಿಕೇಟ್ ಚುನಾವಣೆಗೆ ರಾಜ್ಯಪಾಲರ ತಡೆ

ಬೆಂಗಳೂರು: ಇದೇ 16ಕ್ಕೆ ನಿಗದಿಯಾಗಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್ ಚುನಾವಣೆಯನ್ನು ಮುಂದಿನ ಆದೇಶದವರೆಗೆ ತಡೆ ಹಿಡಿಯುವಂತೆ ಕುಲಾಧಿಪತಿಯೂ ಆಗಿರುವ ರಾಜ್ಯಪಾಲರು ಆದೇಶಿಸಿದ್ದಾರೆ.

‘ಚುನಾವಣೆಯಲ್ಲಿ ವ್ಯಾಪಕ ಅಕ್ರಮಗಳನ್ನು ಎಸಗುವ ಸಾಧ್ಯತೆ ಇದೆ’ ಎಂದು ಕೆಂಪೇಗೌಡ ನರ್ಸಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಪಿ.ಅರ್ಪಿತಾ ಮತ್ತು ವೈದೇಹಿ ವೈದ್ಯಕೀಯ ಕಾಲೇಜಿನ ಡಾ.ಜಿ.ಟಿ.ಹರ್ಷ 2024 ಡಿಸೆಂಬರ್ 30ರಂದು ರಾಜ್ಯಪಾಲರಿಗೆ ದೂರು ನೀಡಿದ್ದರು.

‘ದೂರಿನ ಹಿನ್ನೆಲೆಯಲ್ಲಿ ಸಿಂಡಿಕೇಟ್ ಚುನಾವಣೆಯನ್ನು ಮುಂದಿನ ಆದೇಶದವರೆಗೆ ಅಮಾನತಿನಲ್ಲಿ ಇರಿಸುವಂತೆ ಆದೇಶಿಸಲಾಗಿದೆ’ ಎಂದು ರಾಜ್ಯಪಾಲರ ಸಚಿವಾಲಯ ತಿಳಿಸಿದೆ. ಅಂತೆಯೇ, '15 ದಿನಗಳ ಒಳಗಾಗಿ ದೂರಿಗೆ ಸಂಬಂಧಿಸಿದಂತೆ ಸೂಕ್ತ ವಿವರಣೆ ನೀಡಿ’ ಎಂದು ಎದುರುದಾರರಿಗೆ ಸೂಚಿಸಲಾಗಿದೆ.

ಇ.ಡಿ ಅಧಿಕಾರಿಗಳ ಸೋಗಿನಲ್ಲಿ ನುಗ್ಗಿ, ₹ 30 ಲಕ್ಷ ದೋಚಿದರು



ಕೃತ್ಯ ನಡೆದ ಕೊಳ್ನಾಡಿನ ಬೀಡಿ ಉದ್ಯಮಿ ಸುಲೇಮಾನ್ ಅವರ ಮನೆ

ಒಂದನೇ ಪುಟದಿಂದ...

ಸುಲೇಮಾನ್ ಅವರು ಬೀಡಿ ಉದ್ದಿಮೆ ನಡೆಸುತ್ತಾರೆ. ಶನಿವಾರ ಕಾರ್ಮಿಕರಿಗೆ ಬಟವಾಡೆ ಮಾಡುವ ಸಲುವಾಗಿ ಅಷ್ಟೊಂದು ಪ್ರಮಾಣದಲ್ಲಿ ಹಣವನ್ನು ತಂದಿಟ್ಟುಕೊಂಡಿದ್ದಾಗಿ ತಿಳಿಸಿದ್ದಾರೆ. ತಂಡವು ನಿರ್ಗಮಿಸಿದ ಬಳಿಕ ಮನೆಯಲ್ಲಿದ್ದವರಿಗೆ ಅವರ ಚಲನವಲನದ ಸಂದೇಹ ಮೂಡಿತ್ತು. ಬಳಿಕ ದೂರು ನೀಡಿದ್ದಾರೆ. ಈ ಬಗ್ಗೆ ತನಿಖೆ ಆರಂಭಿಸಿದ್ದೇವೆ. ಬಂದವರು ಯಾರು, ಎಲ್ಲಿಂದ ಬಂದರು, ಯಾವ ಕಡೆ ತೆರಳಿದ್ದಾರೆ ಎಂಬ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಎಸ್‌ಪಿ ತಿಳಿಸಿದರು.

‘ಯಾವುದಾದರೂ ಇಲಾಖೆ ಅಧಿಕಾರಿಗಳ ಸೋಗಿನಲ್ಲಿ ತಪಾಸಣೆ ನಡೆಸಲು ಯಾರೇ ಬಂದರೂ ತಕ್ಷಣ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಿ. ಬಂದವರು ನಿಜಕ್ಕೂ ಅಧಿಕಾರಿಗಳು ಹೌದೋ ಅಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಲು ಇದರಿಂದ ನೆರವಾಗುತ್ತದೆ’ ಎಂದು ಅವರು ತಿಳಿಸಿದರು.

ಈ ಕೃತ್ಯದ ಕುರಿತು ಸುಲೇಮಾನ್ ಅವರ ಮಗ ಮಹಮ್ಮದ್ ಇಕ್ಬಾಲ್ ದೂರು ನೀಡಿದ್ದು, ವಿಟ್ಲ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 319(2) (ವಂಚನೆ) ಮತ್ತು 318(4)ರ (ನಂಬಿಕೆ ದ್ರೋಹವೆಸಗಿ ವಂಚನೆ) ಅಡಿ ಪ್ರಕರಣ ದಾಖಲಾಗಿದೆ.

ಬಸ್ ಪ್ರಯಾಣ ದರ ಹೆಚ್ಚಳ ಜಾರಿ

ಒಂದನೇ ಪುಟದಿಂದ...

ಕೆಎಸ್‌ಆರ್‌ಟಿಸಿ, ವಾಯವ್ಯ ಕರ್ನಾಟಕ ಎಸ್‌ಆರ್‌ಟಿಸಿ (ಎನ್‌ಡಬ್ಲ್ಯುಆರ್‌ಟಿಸಿ), ಕಲ್ಯಾಣ ಕರ್ನಾಟಕ ಎಸ್‌ಆರ್‌ಟಿಸಿ (ಕೆಕೆಆರ್‌ಟಿಸಿ) ಬಸ್‌ಗಳಲ್ಲಿ ವಿವಿಧ ಜಿಲ್ಲಾ ಕೇಂದ್ರಗಳಿಗೆ ಸಾಮಾನ್ಯ ಮತ್ತು ವೇಗದೂತ ಬಸ್‌ಗಳಲ್ಲಿ ಕನಿಷ್ಠ ₹ 11 (ಹತ್ತಿರದ ಜಿಲ್ಲೆ), ಗರಿಷ್ಠ ₹ 115ರವರೆಗೆ (ದೂರದ ಜಿಲ್ಲೆ) ಹೆಚ್ಚಳವಾಗಲಿದೆ. ಇದೇ ಮಾದರಿಯಲ್ಲಿ ಪ್ರತಿಷ್ಠಿತ ಬಸ್‌ಗಳಲ್ಲಿ ಅವುಗಳ ಈಗಿನ ದರದಲ್ಲಿ ಶೇ 15 ಹೆಚ್ಚಳವಾಗಲಿದೆ.

ನಾಲ್ಕು ನಿಗಮಗಳಲ್ಲಿ ತಿಂಗಳ ವರಮಾನವು ₹ 1,052 ಕೋಟಿ ಇದ್ದು, ಬೆಲೆ ಏರಿಕೆಯಾದ ಬಳಿಕ ಪ್ರತಿ ತಿಂಗಳು ಹೆಚ್ಚುವರಿಯಾಗಿ ₹ 74.85 ಕೋಟಿ ಸಂಗ್ರಹವಾಗಲಿದೆ.

ಭೂ ಒಡೆತನ ಯೋಜನೆ ₹16.84 ಕೋಟಿ ಅಕ್ರಮ ಪತ್ತೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ಕಚೇರಿಯಲ್ಲಿ ಭೂ ಒಡೆತನ ಯೋಜನೆಯಡಿ ₹ 16.84 ಕೋಟಿ ಅನುದಾನ ದುರ್ಬಳಕೆ ಆಗಿರುವುದು ಲೋಕಾಯುಕ್ತ ಪೊಲೀಸರು ಪತ್ತೆ ಮಾಡಿದ್ದಾರೆ.

ಭೂ ರಹಿತ, ಪರಿಶಿಷ್ಟ ಜಾತಿ ಮಹಿಳಾ ಕಾರ್ಮಿಕರಿಗೆ ಯೋಜನೆಯಡಿ ಜಮೀನು ಹಂಚದೇ, ಫಲಾನುಭವಿಗಳ ಹೆಸರಲ್ಲಿ ನಕಲಿ ಕಾಗದ ಪತ್ರ ಸೃಷ್ಟಿಸಿ ಹಣ ದುರ್ಬಳಕೆ ಆಗಿರುವ ದೂರಿನ ಕಾರಣ ಲೋಕಾಯುಕ್ತ ಪೊಲೀಸರು ನಿಗಮದ ಕಚೇರಿ ಮತ್ತು ನಿವೃತ್ತ ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆಸಿದ್ದರು.

‘ಕಾರ್ಯಾಚರಣೆ ವೇಳೆ 33 ನಕಲಿ ಖರೀದಿ ಪತ್ರಗಳು, ನಕಲಿ ನೋಂದಣಾಧಿಕಾರಿಗಳ ಚಲನ್‌ಗಳ ಸೃಷ್ಟಿ ಮತ್ತು ₹ 16.84 ಮೌಲ್ಯದ ಅವ್ಯವಹಾರಗಳು ಪತ್ತೆಯಾಗಿವೆ’ ಎಂದು ಲೋಕಾಯುಕ್ತ ವಿಜಯಪುರ ಜಿಲ್ಲಾ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘2014ರಿಂದ 2018ನೇ ಸಾಲಿನಲ್ಲಿ ಜಮೀನು ಹಂಚಿಕೆ ಆಗಿಲ್ಲ. ಖರೀದಿಸಿದ ಭೂಮಿಯ ಕಾಗದಪತ್ರಗಳನ್ನು ನಿಗಮದ ಹೆಸರಿನಲ್ಲಿ ಒತ್ತೆ (ಭೋಜಾ) ಇಡಲಿಲ್ಲ. ನಿಯಮಗಳನ್ನು ಉಲ್ಲಂಘಿಸಿ, ಹಣ ದುರ್ಬಳಕೆ ಮಾಡಲಾಗಿದೆ’ ಎಂದು ಆರೋಪಿಸಿ ವಿಜಯಪುರದ ಶಾಸ್ತ್ರಿ ಸಂಗಮ್ಮ ಹೊಸಮನಿ ದೂರು ನೀಡಿದ್ದರು.

ಅದರ ಆಧಾರದಲ್ಲಿ ಮೇಲೆ ಲೋಕಾಯುಕ್ತ ಪೊಲೀಸರು ನಿಗಮದ ಜಿಲ್ಲಾ ವ್ಯವಸ್ಥಾಪಕಿಯಾಗಿದ್ದ ರೇಣುಕಾ ಸಾತರ್ಲೆ ಅವರ ಮನೆ, ನಿವೃತ್ತ ಜಿಲ್ಲಾ ವ್ಯವಸ್ಥಾಪಕ ಎಸ್.ಜಿ.ಹಡಪದ, ನಿವೃತ್ತ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಎಸ್.ಎಸ್.ಮಣ್ಣಿಗೇರಿ ಮತ್ತು ನಿಗಮದ ವ್ಯವಸ್ಥಾಪಕ ನಿರ್ದೇಶಕರ ಬೆಂಗಳೂರು ಕಚೇರಿ ಮತ್ತು ವಿಜಯಪುರ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಮೇಲೆ ದಾಳಿ ನಡೆಸಿದ್ದರು.

ಪರಮಾಣು ವಿದ್ಯುತ್ ಸ್ಥಾವರಕ್ಕೆ ಭೂಮಿ ಪರಿಶೀಲನೆಗೆ ವಿರೋಧ

ಹೆದ್ದಾರಿ ತಡೆದು ಗ್ರಾಮಸ್ಥರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಗಂಗಾವತಿ ತಾಲ್ಲೂಕಿನ ಹೇಮಗುಡ್ಡ ಬಳಿ ಶನಿವಾರ ಪ್ರತಿಭಟನೆ ನಡೆಯಿತು

ಗಂಗಾವತಿ (ಕೊಪ್ಪಳ ಜಿಲ್ಲೆ): ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಗಂಗಾವತಿ ತಹಶೀಲ್ದಾರ್ ತಾಲ್ಲೂಕಿನ ಹಿರೇಬೆಣಕಲ್ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಭೂಮಿ ಪರಿಶೀಲನೆ ನಡೆಸಿ ವರದಿ ನೀಡಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಗ್ರಾಮಸ್ಥರು, ಶನಿವಾರ ಹೇಮಗುಡ್ಡ ಟೋಲ್ ಬಳಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟಿಸಿದರು.

ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ‘ಪರಮಾಣು ವಿದ್ಯುತ್ ಸ್ಥಾವರ ಸಂಬಂಧ ಗುರುತಿಸಿರುವ ಜಾಗದ ಸುತ್ತಲೂ ಹೇಮಗುಡ್ಡ ದುರ್ಗಾದೇವಿ, ಮೊರೆರಬೆಟ್ಟ, ಅಂಜನಾದ್ರಿ, ತುಂಗಭದ್ರಾ ನದಿ ಹೀಗೆ ಅನೇಕ ಪ್ರಮುಖ ಸ್ಥಳಗಳು ಇವೆ. ಇಂಥ ಐತಿಹಾಸಿಕ ಸ್ಥಳದಲ್ಲಿ ಭೂಮಿ ಗುರುತಿಸಿದ್ದು ಸರಿಯಲ್ಲ’ ಎಂದು ಆಕ್ಷೇಪಿಸಿದರು.

ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಎಲ್ಲ ತಹಶೀಲ್ದಾರ್‌ಗಳಿಗೂ ಪತ್ರ ಬರೆದು, ಒಂದೇ ಕಡೆ ಸಮತಟ್ಟಾದ 1,200 ಎಕರೆ ಭೂಮಿ ಗುರುತಿಸುವಂತೆ ಹೇಳಿದ್ದರು. ಅದರಂತೆ ಗಂಗಾವತಿ ತಹಶೀಲ್ದಾರ್ ಹಿರೇಬೆಣಕಲ್ ಹಾಗೂ ಸುತ್ತಮುತ್ತಲು ಜಾಗವಿದ್ದು, ಅದು ಅರಣ್ಯ ಇಲಾಖೆಗೆ ಸೇರಿದೆ’ ಎಂದು ವರದಿ ನೀಡಿದ್ದಾರೆ. ಇದು ಸ್ಥಳೀಯರನ್ನು ಆತಂಕಕ್ಕೆ ಒಳಗಾಗುವಂತೆ ಮಾಡಿದೆ.

ವಿಧಾನ ಪರಿಷತ್ ಮಾಜಿ ಸದಸ್ಯರೂ ಆದ ಪರಮಾಣು ವಿದ್ಯುತ್ ಸ್ಥಾವರ ನಿರ್ಮಾಣ ವಿರೋಧಿ ಹೋರಾಟ ಸಮಿತಿ ಸಂಚಾಲಕ ಎಚ್.ಆರ್. ಶ್ರೀನಾಥ್ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ನೂರಾರು ಸಂಖ್ಯೆಯಲ್ಲಿ ರೈತರು, ಗ್ರಾಮಸ್ಥರು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಎಚ್.ಆರ್. ಶ್ರೀನಾಥ್ ಮಾತನಾಡಿ, ‘ಬೆಣಕಲ್ ಭಾಗದ ಭೂಮಿ ರೈತರ ಬದುಕಾಗಿದೆ. ಫಲವತ್ತತೆಯಾದ ಈ ಭೂಮಿಯನ್ನು ಬಳಸಿಕೊಂಡು ಕೇಂದ್ರ ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದೆ. ಎಲ್ಲಿಯೂ ನಮಗೆ ಸ್ಥಾವರದ ಅಗತ್ಯವಿಲ್ಲ’ ಎಂದರು.

ಕೊಡಗು ಜಿಲ್ಲೆ ಪೊನ್ನಂಪೇಟೆಯಲ್ಲಿ ವಿಶಿಷ್ಟ ಶೈಲಿಯ ಮಸೀದಿ ಉದ್ಘಾಟನೆ

ಮಸೀದಿ ನಿರ್ಮಾಣಕ್ಕೆ ಹಿಂದೂ, ಕ್ರೈಸ್ತರ ನೆರವು

ಪ್ರಜಾವಾಣಿ ವಾರ್ತೆ



ಪೊನ್ನಂಪೇಟೆಯಲ್ಲಿ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಶಾಫಿ ಜುಮಾ ಮಸೀದಿಯ ಕಟ್ಟಡ

ಮಡಿಕೇರಿ: ಎರಡು ಶತಮಾನಗಳಿಗೂ ಅಧಿಕ ಇತಿಹಾಸವುಳ್ಳ ಮಸೀದಿಯೊಂದು ಶಿಥಿಲಾವಸ್ಥೆಯಲ್ಲಿದ್ದಾಗ, ಅದರ ಅಭಿವೃದ್ಧಿಗೆ ಮುಸ್ಲಿಮರೊಂದಿಗೆ ಟೊಂಕ ಕಟ್ಟಿ ನಿಂತವರು 50ಕ್ಕೂ ಅಧಿಕ ಹಿಂದೂಗಳು ಹಾಗೂ 8ಕ್ಕೂ ಅಧಿಕ ಕ್ರೈಸ್ತರು.

ಧರ್ಮ ಭೇದದ ಭಾವವಿಲ್ಲದೇ ಎಲ್ಲರೂ ಒಗ್ಗಟ್ಟಾಗಿ ನಿಂತು ಹೊಸ ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ಕೈಜೋಡಿಸಿದ್ದರಿಂದ ಪೊನ್ನಂಪೇಟೆಯಲ್ಲಿ ಶಾಫಿ ಜುಮಾ ಮಸೀದಿ ಶನಿವಾರ ಉದ್ಘಾಟನೆಗೊಂಡಿತು.

‘ಬಿಬಿಎಂಪಿ ಮಾಜಿ ಸದಸ್ಯ ಬಿಜೆಪಿಯ ನಾರಾಯಣರಾಜು ಅವರು ಮಸೀದಿಗಾಗಿ ₹ 2.5 ಲಕ್ಷವನ್ನು ಉದಾರವಾಗಿ ದೇಣಿಗೆ ನೀಡಿದ್ದಾರೆ. ಸುರೇಶ್ ಎಂಬುವವರು ಮಸೀದಿಗೆ ಬೇಕಾದ ಪೀಠೋಪಕರಣಗಳನ್ನು ತಯಾರಿಸಿದ್ದಾರೆ. ಕ್ರೈಸ್ತ ಧರ್ಮದ ರಾಜು ಪಿಳ್ಳೆ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಹೀಗೆ ಅನೇಕ ಮಂದಿ ವಿವಿಧ ಧರ್ಮೀಯರು ನಮ್ಮೊಂದಿಗೆ ಕೈ ಜೋಡಿಸಿದ್ದರಿಂದ ಇಂತಹ ಭವ್ಯವಾದ ಮಸೀದಿ ನಿರ್ಮಾಣ ಸಾಧ್ಯವಾಯಿತು’ ಎಂದು ಮಸೀದಿಯ ಪ್ರಧಾನ ಕಾರ್ಯದರ್ಶಿ ಪಿ.ಎ.ಅಸೀಸ್ ‘ಪ್ರಜಾವಾಣಿ’ಗೆ ತಿಳಿಸಿದರು.

ಇಂತಹ ಅಪರೂಪದ ಕೋಮುಸೌಹಾರ್ದದ ಶಾಫಿ ಜುಮಾ ಮಸೀದಿಯು ಮಿನಾರ್ ರಹಿತ ವಿಭಿನ್ನವಾದ ಆರಾಧನಾಲಯವಾಗಿದೆ. ನಿರ್ಮಾಣಕ್ಕೆ ₹ 2 ಕೋಟಿಗೂ ಅಧಿಕ ವೆಚ್ಚವಾಗಿದೆ. ಏಕಕಾಲಕ್ಕೆ 600 ಮಂದಿ ಪ್ರಾರ್ಥನೆ ಸಲ್ಲಿಸಬಹುದಾದಷ್ಟು ವಿಸ್ತಾರವಾಗಿರುವ ಇದು ಪೊನ್ನಂಪೇಟೆ ತಾಲ್ಲೂಕಿನಲ್ಲೇ ಅತ್ಯಂತ ದೊಡ್ಡ ಮಸೀದಿ ಎಂಬ ಹೆಸರು ಪಡೆದಿದೆ.

ಮಸೀದಿಯು ಈ ಭಾಗದಲ್ಲಿ ಇದುವರೆಗೂ ಸಹಾಯ ಕೇಳಿ ಬಂದವರಿಗೆ ಇಲ್ಲ ಎಂದಿಲ್ಲ. ಯಾವುದೇ ಧರ್ಮದವರು ಸಹಾಯ ಕೇಳಿ ಬಂದಲ್ಲಿ ಅವರಿಗೆ ಸಹಾಯ ಮಾಡುವ ಮೂಲಕ ಎಲ್ಲ ಧರ್ಮೀಯರ ವಿಶ್ವಾಸಕ್ಕೆ ಮಸೀದಿ ಪಾತ್ರವಾಗಿದೆ.

ಭ್ರಾತೃತ್ವದ ಸಂಕೇತದಂತಿರುವ ಮಸೀದಿಯನ್ನು ಸಮಸ್ತ ಕೇಂದ್ರ ಮುಶಾವರದ ಅಧ್ಯಕ್ಷ ಸೈಯದ್ ಜಿಫ್ರಿ ಮುತ್ತುಕೋಯ ತಂಗಳ್ ಅವರು ಶನಿವಾರ ಉದ್ಘಾಟಿಸಿ ಪ್ರಾರ್ಥನೆಗೆ ಮುಕ್ತಗೊಳಿಸಿದರು.

ಕಾಳಿ ರಕ್ಷಿತಾರಣ್ಯದಲ್ಲಿ ಚಾರಣಕ್ಕೆ ದಾರಿ

ಒಂದನೇ ಪುಟದಿಂದ...

ಅರಣ್ಯವಾಸಿಗಳು ಸಂಪೂರ್ಣ ಸ್ಥಳಾಂತರಗೊಂಡಿರುವ ಸುಳಾವಳಿ ಪ್ರದೇಶದಲ್ಲಿ ಎರಡು ಚಾರಣ ಪಥಗಳನ್ನು ಅಂತಿಮಗೊಳಿಸಲಾಗಿದೆ. ಕೆಲ ಕುಟುಂಬಗಳು ಸ್ಥಳಾಂತರಗೊಂಡಿರುವ ಡೇರಿಯ ಮತ್ತು ಕರಂಜೆ ಗ್ರಾಮಗಳ ಅರಣ್ಯಗಳಲ್ಲೂ ಐದು ಕಡೆಗಳಲ್ಲಿ ಚಾರಣಕ್ಕೆ ಅನುವು ಮಾಡಿಕೊಡಲು ಅರಣ್ಯ ಇಲಾಖೆ ತೀರ್ಮಾನಿಸಿದೆ.

ಕರಂಜೆ ಚಾರಣ ಪಥ 21.1 ಕಿ.ಮೀ, ಕ್ಯಾಸಲ್‌ರಾಕ್ ಚಾರಣಪಥ 12 ಕಿ.ಮೀ, ಮರ್ಡಿ–ವಾಕಿ ಚಾರಣಪಥ 10 ಕಿ.ಮೀ. ಉದ್ದ ಇವೆ. ಉಳಿದೆಲ್ಲವೂ 2 ಕಿ.ಮೀ.ಯಿಂದ 8 ಕಿ.ಮೀ. ವರೆಗೆ ಇವೆ.

ಕಾಳಿ ಹುಲಿ ಯೋಜನೆ ವ್ಯಾಪ್ತಿಯಲ್ಲಿ ಹತ್ತಾರು ಹಳ್ಳಿಗಳಿದ್ದು ಗವಳಿ, ಕುಣಬಿ, ಮರಾಠಾ, ಹವ್ಯಕ ಸೇರಿದಂತೆ ವಿವಿಧ ಸಮುದಾಯಗಳ ಸಾವಿರಾರು ಕುಟುಂಬಗಳು ವಾಸಿಸುತ್ತಿವೆ. ಹುಲಿ ಯೋಜನೆಯ ಬಿಗಿ ನಿಯಮಗಳ ಕಾರಣದಿಂದ ಅನೇಕ ಗ್ರಾಮಗಳ ನಿವಾಸಿಗಳು ಸಮರ್ಪಕ ರಸ್ತೆ ಹಾಗೂ ವಿದ್ಯುತ್ ಸೌಲಭ್ಯ ಇಲ್ಲದೆ ಪಡಿಪಾಟಲು ಪಡುತ್ತಿದ್ದಾರೆ. ಅನೇಕ ಗ್ರಾಮಗಳಿಗೆ 4ನೇ ತಲೆಮಾರಿನ (4ಜಿ) ಇಂಟರ್‌ನೆಟ್ ಸೇವೆ ಈವರೆಗೆ ಲಭ್ಯವಾಗಿಲ್ಲ. ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಕೆಲವು ಪ್ರದೇಶಗಳಲ್ಲಿ ಮೊಬೈಲ್ ಟವರ್‌ಗಳ ಅಳವಡಿಕೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಅನುಮತಿ ನಿರಾಕರಿಸಿದ್ದುಂಟು. ಹುಲಿಗಳ ನಿರ್ಭೀತ ಸಂಚಾರಕ್ಕೆ ಅನುವು ಮಾಡಿಕೊಡಲು ಸ್ವಯಂಪ್ರೇರಿತ ಪುನರ್ವಸತಿ ಯೋಜನೆಯಡಿ ಅನೇಕ ಕುಟುಂಬಗಳಿಗೆ ಪ್ಯಾಕೇಜ್ ನೀಡಿ ಸ್ಥಳಾಂತರಿಸಲಾಗಿತ್ತು. ಅರಣ್ಯದ ಸುತ್ತಲಿನ ಸಾವಿರಾರು ಹೆಕ್ಟೇರ್ ಪ್ರದೇಶವು ಮಾನವ ಚಟುವಟಿಕೆಗಳಿಂದ ಮುಕ್ತವಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳಿಕೊಂಡಿದ್ದರು.

‘ದಶಕಗಳಿಂದ ಅರಣ್ಯ ಸಂರಕ್ಷಣೆಯ ಕಾಯಕದಲ್ಲಿ ತೊಡಗಿದ್ದ ಅರಣ್ಯವಾಸಿಗಳನ್ನು ಮುಲಾಜಿಲ್ಲದೆ ಎತ್ತಂಗಡಿ ಮಾಡಿದ ಅರಣ್ಯ ಇಲಾಖೆಯ ಅಧಿಕಾರಿಗಳು ಇದೀಗ ಕಾಡಿನಲ್ಲಿ ಮೋಜುಮಸ್ತಿಗೆ ಅವಕಾಶ ನೀಡಲು ಹೊರಟಿರುವುದು ನಾಚಿಕೆಗೇಡಿತನದ ಸಂಗತಿ. ಇದು ವನವಾಸಿಗಳಿಗೆ ಮಾಡಿದ ಮಹಾ ವಂಚನೆ. ಕಾಡಿನಲ್ಲಿ ಇಂತಹ ಚಟುವಟಿಕೆಗೆ ಅವಕಾಶ ಮಾಡಿಕೊಡುತ್ತಿರುವ ಅರಣ್ಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಪರಿಸರವಾದಿಗಳು ಆಗ್ರಹಿಸಿದ್ದಾರೆ.

ವಿವಾದ ಇದೇ ಮೊದಲಲ್ಲ: ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅನಧಿಕೃತವಾಗಿ ಕಾಮಗಾರಿಗಳನ್ನು ನಡೆಸಲಾಗಿದೆ ಎಂದು ಆರೋಪಿಸಿ ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಈ ಹಿಂದೆ ದೂರುಗಳು ಸಲ್ಲಿಕೆಯಾಗಿದ್ದವು. ತಪ್ಪೆಸಗಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಚಿವಾಲಯವು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

‘ನುಜ್ಜಿ ನರ್ಸರಿ ಪ್ರದೇಶದಲ್ಲಿ ಆರ್ಕಿಡೇರಿಯಂ ನಿರ್ಮಾಣ, ಕ್ಯಾಸಲ್ ರಾಕ್ ವಲಯದಲ್ಲಿ ಜಂಗಲ್ ರೈಡ್ ಹೆಸರಿನಲ್ಲಿ ಕೆನೋಪಿ ವಾಕ್ ಪ್ರದೇಶ, ಪಾಪುಲ್ವಾಡಿ ಜಲಪಾತ ಪ್ರದೇಶದಲ್ಲಿ ಜಂಗಲ್ ಸಫಾರಿ ಆರಂಭ, ಶಿವಪುರ ಬಳಿ ತೂಗು ಸೇತುವೆ ನಿರ್ಮಾಣ –ಎಲ್ಲವೂ ನಿಯಮಬಾಹಿರವಾಗಿವೆ. ಹಲವು ಕಡೆಗಳಲ್ಲಿ ಅನಧಿಕೃತವಾಗಿ ಚಾರಣಕ್ಕೆ ಅವಕಾಶ ನೀಡಲಾಗಿದೆ. ನೀಲಿ ಜಲಪಾತದ ಬಳಿಯಲ್ಲಿ ಅನಧಿಕೃತವಾಗಿ ಪ್ರವಾಸೋದ್ಯಮ ಚಟುವಟಿಕೆಗೆ ಅವಕಾಶ ಕಲ್ಪಿಸಲಾಗಿದೆ’ ಎಂದು ಸಚಿವಾಲಯಕ್ಕೆ ದೂರು ಸಲ್ಲಿಕೆಯಾಗಿತ್ತು.

ಈ ಬಗ್ಗೆ ಪ್ರತಿಕ್ರಿಯೆಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಲಭ್ಯರಾಗಲಿಲ್ಲ.





‘ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ 2025’ದಲ್ಲಿ ಶನಿವಾರ ಡಿ.ವಿ.ಸದಾನಂದಗೌಡ – ಜಯರಾಮ್ ರಾಯಪುರ ಚರ್ಚೆಯಲ್ಲಿ ತೊಡಗಿದ್ದರು. ಇನ್ನೊಂದೆಡೆ ಸಚಿವ ಡಾ.ಎಂ.ಸಿ.ಸುಧಾಕರ್ – ಎಸ್‌.ವಿ. ಸುರೇಶ್ ವಿಚಾರ ಹಂಚಿಕೊಂಡರು (ಎಡಚಿತ್ರ) ಎಕ್ಸ್‌ಪೊದಲ್ಲಿರುವ ಪ್ರದರ್ಶನ ಮಳಿಗೆಗಳಿಗೆ ಶನಿವಾರ ಆಸಕ್ತರು ಭೇಟಿ ನೀಡಿದರು ಪ್ರಜಾವಾಣಿ ಚಿತ್ರಗಳು

‘ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ 2025’ರ 2ನೇ ದಿನ ವೇದಿಕೆಯಲ್ಲಿ ಗಂಭೀರ ಚರ್ಚೆ

‘ಕೃಷಿಗೆ ನವೀನ ತಂತ್ರಜ್ಞಾನದ ಸ್ಪರ್ಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿಯಲ್ಲಿ ತಾಂತ್ರಿಕತೆಯನ್ನು ಬಳಸಿಕೊಳ್ಳುವುದು, ಮೌಲ್ಯವರ್ಧನೆ ಮಾಡುವುದು, ಉದ್ಯಮಶೀಲರಾಗುವುದು ಹೇಗೆ ಎಂಬ ಬಗ್ಗೆ ‘ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ–2025’ರ ಎರಡನೇ ದಿನವಾದ ಶನಿವಾರ ಗಂಭೀರ ಚರ್ಚೆಗಳು ನಡೆದವು.

ಕೃಷಿ ಬಗೆಗಿನ ವಿವಿಧ ಗೋಷ್ಠಿಗಳು ಮುಖ್ಯ ವೇದಿಕೆಯಲ್ಲಿ ನಡೆದರೆ, ವಿವಿಧ ವಿಷಯಗಳ ಬಗ್ಗೆ ಬಿಸಿನೆಸ್ ವೇದಿಕೆಯಲ್ಲಿ ವಿಚಾರಮಂಡನೆಗಳಾದವು.

ಕಾರ್ಯಕ್ರಮ ಉದ್ಘಾಟಿಸಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ‘ಸಮುದಾಯದ ಸಾಂಪ್ರದಾಯಿಕ ಶಕ್ತಿಯನ್ನು ಉಳಿಸಿಕೊಂಡು ಆಧುನಿಕ ಸವಾಲುಗಳೊಂದಿಗೆ ಕೃಷಿಯನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಕೃಷಿ ನಮ್ಮ ಅಭಿಮಾನ. ಆದರೆ, ಜಾಗತೀಕರಣವು ಹಲವಾರು ಸವಾಲು ಮತ್ತು ಅವಕಾಶಗಳನ್ನು ಒಡ್ಡಿದೆ. ಮುಂದಿನ ಪೀಳಿಗೆಯನ್ನು ಬೆಂಬಲಿಸಲು ಸಂಪ್ರದಾಯದೊಂದಿಗೆ ಹೊಸತನವನ್ನು ಸಂಯೋಜಿಸಬೇಕು’ ಎಂದು ಸಲಹೆ ನೀಡಿದರು.

ಚಿಕ್ಕಬಳ್ಳಾಪುರ ಮತ್ತು ಕೋಲಾರದಂತಹ ಜಿಲ್ಲೆಗಳಲ್ಲಿ ನೀರಿನ ಕೊರತೆಯನ್ನು ನೀಗಿಸಲು ಮತ್ತು ವೈವಿಧ್ಯ ಬೆಳೆಗಳನ್ನು ಬೆಳೆಯಲು ರೈತರು ಸುಧಾರಿತ ತಂತ್ರಜ್ಞಾನಗಳನ್ನು ಬಳಸುತ್ತಿದ್ದಾರೆ. ಕಡಿಮೆ ನೀರಿನ ಬೆಳೆಗಳಾದ ಡ್ರ್ಯಾಗನ್, ಖರ್ಜೂರಗಳನ್ನು ಹನಿ ನೀರಾವರಿ ತಂತ್ರಗಳ ಮತ್ತು ಇಸ್ರೇಲಿ ತಂತ್ರಜ್ಞಾನ ಅಳವಡಿಸಿಕೊಂಡು ಬೆಳೆಯುತ್ತಿದ್ದಾರೆ ಎಂದು ವಿವರಿಸಿದರು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಮಾತನಾಡಿ, ‘ಆರ್ಥಿಕ ಸುಬಲೀಕರಣವೇ ಎಲ್ಲದರ ಹಿಂದಿನ ಮೂಲತತ್ವವಾಗಿದೆ. ಹಿಂದೆ ಕೃಷಿ ಸಾಕ್ಷರತೆ, ಆನಂತರ ಉದ್ಯಮಗಳು ಬೇಕಾದವು. ಈಗ ಕೃಷಿ ಉದ್ಯಮಗಳು ಪ್ರಾಧಾನ್ಯ ಪಡೆಯುತ್ತಿವೆ’ ಎಂದರು.

‘ತಾಂತ್ರಿಕ ಪ್ರಗತಿ ಮತ್ತು ಜಾಗತೀಕರಣದೊಂದಿಗೆ ನಾವು ಸ್ಪರ್ಧಾತ್ಮಕವಾಗಿ ಉಳಿಯಲು ಇತರ ಕ್ಷೇತ್ರಗಳನ್ನು ಅನ್ವೇಷಿಸಬೇಕು. ನಮ್ಮ ಸಮುದಾಯದ ಯುವಕರನ್ನು ಪ್ರೇರೇಪಿಸಲು ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗದಂತಹ ವೇದಿಕೆಗಳು ಅಗತ್ಯ. ಎಫ್‌ಸಿ ನೆಕ್ಸ್ಟ್ ಆ್ಯಪ್‌ನಲ್ಲಿ ಎಲ್ಲ ವಿವರಗಳು ಸಮುದಾಯದ ಯುವಪೀಳಿಗೆಗೆ ಸಿಗುತ್ತಿದೆ’ ಎಂದು ಶ್ಲಾಘಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್, ಎಫ್‌ಸಿ ರಾಜ್ಯಾಧ್ಯಕ್ಷ ಸಂದೀಪ್ ರಾಜೇಗೌಡ, ಜೀನಿ ಪ್ರಾಡಕ್ಟ್ಸ್ ವ್ಯವಸ್ಥಾಪಕ ನಿರ್ದೇಶಕ ದಿಲೀಪ್ ಕುಮಾರ್, ಮಂಡ್ಯದ ಜಂಟಿ ಕೃಷಿ ನಿರ್ದೇಶಕ ವಿ.ಎಸ್ ಅಶೋಕ್, ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಮಂಜುನಾಥ್ ಗೌಡ, ಕೆಎಸ್‌ಟಿಪಿಎಸ್ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಹೊನ್ನೇಗೌಡ, ನಾಗರಾಜ್ ಗೌಡ ಉಪಸ್ಥಿತರಿದ್ದರು.

ಆಕರ್ಷಣೆಯ ಕೇಂದ್ರ

ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊದಲ್ಲಿರುವ ಪ್ರದರ್ಶನಗಳು ಆಕರ್ಷಣೆಯ ಕೇಂದ್ರಗಳಾಗಿದ್ದವು.

ಕೃಷಿ, ಆಗ್ರಿಟೆಕ್, ಮಹಿಳಾ ಉದ್ಯಮಶೀಲತೆ, ಆಹಾರ ಮತ್ತು ಆತಿಥ್ಯ, ರಿಯಲ್ ಎಸ್ಟೇಟ್, ನಿರ್ಮಾಣ, ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯಂತಹ ಪ್ರಮುಖ ಕ್ಷೇತ್ರಗಳ ವ್ಯಾಪಾರ ಅವಕಾಶಗಳು ಮತ್ತು ಚಟುವಟಿಕೆಗಳನ್ನು ಒಂದೇ ಕಡೆ ಪ್ರದರ್ಶಿಸುತ್ತಿದ್ದರೆ, ಗ್ರಾಮೀಣ ಜನಜೀವನ ಶೈಲಿಯನ್ನು ಅನಾವರಣಗೊಳಿಸುವ ಮಳಿಗೆ ಸಾಕಷ್ಟು ಕಿರು ಮತ್ತು ಮಧ್ಯಮ ಉದ್ಯಮಿಗಳಿಗೆ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಮಳಿಗೆ ವ್ಯವಸ್ಥೆ ರೂಪಿಸಿದೆ.

ಸಾಂಪ್ರದಾಯಿಕ ಎತ್ತಿನ ಗಾಣ ಎಕ್ಸ್‌ಪೊದ ಪ್ರಮುಖ ಆಕರ್ಷಣೆಯಾಗಿದೆ. ಮಂಡ್ಯ ಬೆಲ್ಲ, ಸಾವಯವ ತರಕಾರಿ, ನೈಸರ್ಗಿಕ ಆಹಾರ ಉತ್ಪನ್ನಗಳು ವೀಕ್ಷಕರನ್ನು ಸೆಳೆಯುತ್ತಿವೆ. ಆಹಾರ ಮಳಿಗೆಗಳಲ್ಲಿ ಜನರು ಸಸ್ಯಾಹಾರ ಮತ್ತು ಮಾಂಸಾಹಾರದ ವಿವಿಧ ಸವಿಗಳನ್ನು ಸವಿದರು.

‘ಉದ್ಯಮಶೀಲರಾಗಲು ಬೇಕು ಬೆಂಬಲಿತ ಪರಿಸರ’

‘ಉದ್ಯಮಿ ಒಕ್ಕಲಿಗ ವೇದಿಕೆಯು ಒಕ್ಕಲಿಗ ಸಮುದಾಯಕ್ಕೆ ಪರಿವರ್ತನ ವೇದಿಕೆಯನ್ನು ರಚಿಸುತ್ತಿದೆ. ಕೃಷಿಯಲ್ಲಿ ಬೇರುಗಳು ಆಳವಾಗಿ ಹುದುಗಿವೆ. ಅದನ್ನು ಉಳಿಸಿಕೊಂಡೇ ಉದ್ಯಮಶೀಲರಾಗಲು, ಕೈಗಾರಿಕೆ ಸೇರಿ ಇತರ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಇದು ಒಳ್ಳೆಯ ಸಮಯ’ ಎಂದು ಫಸ್ಟ್ ಸರ್ಕಲ್‌ನ ಮುಖ್ಯ ಮಾರ್ಗದರ್ಶಕ ಜಯರಾಮ್ ರಾಯಪುರ ತಿಳಿಸಿದರು.

‘ಸಮುದಾಯವು ಉತ್ಪಾದಕರು ಮತ್ತು ಪೂರೈಕೆದಾರರನ್ನು ಉತ್ತೇಜಿಸುವ, ಬೆಂಬಲಿಸುವ ಮೂಲಕ ಸಾಮೂಹಿಕ ಬೆಳವಣಿಗೆ ಕಾಣಬಹುದು. ಒಕ್ಕಲಿಗ ಉದ್ಯಮಿಗಳ ನಡುವೆ ಆತ್ಮವಿಶ್ವಾಸ ಮತ್ತು ಸಹಕಾರವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವು ಮಹತ್ವದ ಹೆಜ್ಜೆಯಾಗಿದೆ. 10 ಚಿಂತನಾ ಸಭೆಗಳ ಮೂಲಕ ನೆಟ್‌ವರ್ಕಿಂಗ್ ಮತ್ತು ಜ್ಞಾನ-ಹಂಚಿಕೆಯನ್ನು ಸುಗಮಗೊಳಿಸಲಿದೆ. 14 ಪ್ರಮುಖ ಕ್ಷೇತ್ರಗಳಲ್ಲಿ ಒಕ್ಕಲಿಗ ಉದ್ಯಮಿಗಳನ್ನು ಸಂಘಟಿಸಲಾಗುವುದು’ ಎಂದರು.

2022–23ನೇ ಸಾಲಿಗಿಂತ 4.72 ಲಕ್ಷ ದಾಖಲಾತಿ ಕಡಿಮೆ

ಶಾಲೆ ತೊರೆವ ಮಕ್ಕಳ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕುಸಿತವಾಗುತ್ತಿದ್ದು, ಎಂಟನೇ ತರಗತಿಯ ನಂತರ ಶಾಲೆ ತೊರೆಯುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವಾಲಯ ಬಿಡುಗಡೆ ಮಾಡಿದ 2023-24ನೇ ಸಾಲಿನ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ (ಯುಡೈಸ್) ವರದಿ ಹೇಳಿದೆ.

ಶಾಲೆ ತೊರೆಯುವವರ ಪ್ರಮಾಣ ಮೂರರಿಂದ ಐದನೇ ತರಗತಿಯ ನಡುವೆ ಶೇ 2, ಆರರಿಂದ ಎಂಟನೇ ತರಗತಿಯ ನಡುವೆ ಶೇ 2.7 ಹಾಗೂ 8ನೇ ತರಗತಿಯ ನಂತರ ಶೇ 18.7ರಷ್ಟಿದೆ. 2022-23ನೇ ಸಾಲಿಗೆ ಹೋಲಿಸಿದರೆ 4.72 ಲಕ್ಷ ದಾಖಲಾತಿ ಕಡಿಮೆಯಾಗಿದೆ. ಪೂರ್ವ ಪ್ರಾಥಮಿಕದಿಂದ 12ನೇ ತರಗತಿಯವರೆಗೆ ರಾಜ್ಯದ ಎಲ್ಲ ಶಾಲೆಗಳೂ ಸೇರಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 1,19,26,303 ಇದೆ.

ಸರ್ಕಾರಿ ಶಾಲೆಗಳಲ್ಲಿ 2023-24ನೇ ಸಾಲಿನಲ್ಲಿ 49,85,661 ದಾಖಲಾತಿ ಇದೆ. 2022-23ಕ್ಕೆ ಹೋಲಿಸಿದರೆ 3,41,560 ಕಡಿಮೆಯಾಗಿದೆ. ಖಾಸಗಿ ಶಾಲೆಗಳ ಪ್ರವೇಶದಲ್ಲಿಯೂ ಇಳಿಮುಖವಾಗಿದೆ. 2022-23ರಲ್ಲಿ 55,59,281 ವಿದ್ಯಾರ್ಥಿಗಳು ಇದ್ದರೆ, 2023-24ನೇ ಸಾಲಿನಲ್ಲಿ 54,80,677 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಒಂದನೇ ತರಗತಿಗೆ ಪ್ರವೇಶದಲ್ಲಿ ಏರಿಕೆ

ರಾಜ್ಯದ ಅಂಗನವಾಡಿ, ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಆರಂಭವಾದ ನಂತರ ಒಂದನೇ ತರಗತಿಗೆ ಪ್ರವೇಶದಲ್ಲಿ ಹೆಚ್ಚಳವಾಗುತ್ತಿದೆ. 2023-24ರಲ್ಲಿ 9,45,325 ಮಕ್ಕಳು ಒಂದನೇ ತರಗತಿಗೆ ಪ್ರವೇಶ ಪಡೆದಿದ್ದಾರೆ. ಅವರಲ್ಲಿ 3,91,940 ಮಕ್ಕಳು ಅಂಗನವಾಡಿಗಳಿಂದ ಬಂದಿದ್ದಾರೆ. ವರದಿ ಪ್ರಕಾರ ರಾಜ್ಯದಲ್ಲಿ 1,572 ಶಾಲೆಗಳಲ್ಲಿ ಕಾಯಂ ಶಿಕ್ಷಕರು, 7,821 ಏಕ ಶಿಕ್ಷಕ ಶಾಲೆಗಳು, ಏಕ ಶಿಕ್ಷಕರ ಶಾಲೆಗಳಲ್ಲಿ 2,74,814 ಮಕ್ಕಳು ದಾಖಲಾಗಿದ್ದಾರೆ. 1,078 ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಶೂನ್ಯವಾಗಿದೆ.



ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಪ್ರಾಂಶುಪಾಲ ಬಂಧನ

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಮನಗೂಳಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದ ಮೇಲೆ ಪ್ರಾಂಶುಪಾಲ ಸಚಿನ್ ಕುಮಾರ ಪಾಟೀಲ ಎಂಬವರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.



ಸಚಿನ್ ಕುಮಾರ ಪಾಟೀಲ

‘ಆರೋಪಿಯು ವಿದ್ಯಾರ್ಥಿನಿಯರ ಜೊತೆ ಅಸಭ್ಯವಾಗಿ ವರ್ತಿಸಿ, ಕೊಠಡಿಗೆ ಕರೆಯುವುದು, ಪ್ರೀತಿಸುವಂತೆ ಒತ್ತಾಯಿಸುವುದು ಸೇರಿ ಹಲವು ರೀತಿ ಕಿರುಕುಳ ಕೊಡುತ್ತಿದ್ದ ಎಂಬ ದೂರು ಬಂದ ಕಾರಣ ಬಂಧಿಸ ಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಕೃಷಿ ವಿ.ವಿ ಭೂಮಿ: ಅಯ್ಯಪ್ಪ ಮೂರ್ತಿಗೆ ಶೆಡ್ ನಿರ್ಮಾಣ

ಪ್ರಜಾವಾಣಿ ವಾರ್ತೆ

ಧಾರವಾಡ: ಕೃಷಿ ವಿಶ್ವವಿದ್ಯಾಲಯದ ಹೊಲದಲ್ಲಿ ಅಪರಿಚಿತರು ಅಯ್ಯಪ್ಪಸ್ವಾಮಿ ಮೂರ್ತಿ ತಂದಿಟ್ಟ ಸ್ಥಳದಲ್ಲಿ ಶುಕ್ರವಾರ ತಡರಾತ್ರಿ ಶೆಡ್ ನಿರ್ಮಿಸಲಾಗಿದೆ. ಮೂರ್ತಿ ಇರುವ ಕಟ್ಟೆಯ ನಾಲ್ಕು ಕಡೆ ಸಿಮೆಂಟ್ ಕಂಬ ನಿಲ್ಲಿಸಿ ಚಾವಣಿಗೆ ಶೀಟ್ ಅಳವಡಿಸಲಾಗಿದೆ. ತಳಿರು ತೋರಣ ಕಟ್ಟಲಾಗಿದೆ.

ಮಾಲಾಧಾರಿಗಳು ಅಯ್ಯಪ್ಪ ಸ್ವಾಮಿ ಮೂರ್ತಿಗೆ ಶನಿವಾರ ಪೂಜೆ ನೆರವೇರಿಸಿದರು. ಭಕ್ತರಿಗೆ ಪ್ರಸಾದ ವಿತರಿಸಿದರು. ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್, ಗಂಗಾಧರ ಕುಲಕರ್ಣಿ ಇತರರು ಪಾಲ್ಗೊಂಡಿದ್ದರು.

‘ಮೂರ್ತಿಯನ್ನು ತೆರವುಗೊಳಿಸಿದರೆ ಪ್ರತಿಭಟನೆ ನಡೆಸಲಾಗುವುದು’ ಎಂದು ಪ್ರಮೋದ ಮುತಾಲಿಕ್ ಎಚ್ಚರಿಕೆ ನೀಡಿದರು. ‘ಅಯ್ಯಪ್ಪ ಸ್ವಾಮಿ ಮೂರ್ತಿ ಇಟ್ಟಿರುವುದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗೆ ದೂರು ನೀಡಿದ್ದೇನೆ. ಜಿಲ್ಲಾಡಳಿತ ಮತ್ತು ಪೊಲೀಸರೊಂದಿಗೆ ಚರ್ಚಿಸಿ ಕ್ರಮ ವಹಿಸುವೆ’ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪಿ.ಎಲ್. ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಿಶ್ವವಿದ್ಯಾಲಯದ ಜಾಗದಲ್ಲಿ ಮೂರ್ತಿ ಇಟ್ಟಿದ್ದಾರೆ. ವಿಶ್ವವಿದ್ಯಾಲಯದವರು ಕ್ರಮ ವಹಿಸಬೇಕು. ಜಿಲ್ಲಾಡಳಿತದ ಸಹಕಾರ ಕೋರಿದರೆ ನೀಡಲಾಗುವುದು’ ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ತಿಳಿಸಿದರು.



ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಹೊಲದಲ್ಲಿ ಅಯ್ಯಪ್ಪ ಸ್ವಾಮಿ ಮೂರ್ತಿ ಇಟ್ಟಿರುವ ಸ್ಥಳದಲ್ಲಿ ಶೆಡ್ ನಿರ್ಮಿಸಿರುವುದು

ಕೆ–ಸೆಟ್: 6,302 ಅಭ್ಯರ್ಥಿಗಳು ಅರ್ಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆ-ಸೆಟ್) ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶನಿವಾರ ಪ್ರಕಟಿಸಿದೆ.

ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗದ ಒಟ್ಟು 41 ವಿಷಯಗಳಿಗೆ ನ. 24ರಂದು ಪರೀಕ್ಷೆ ನಡೆಸಲಾಗಿತ್ತು. ಒಟ್ಟು 6,302 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

1,06,433 ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದರು. 89,416 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಅರ್ಹತೆ ಪಡೆದ 6,302 ಅಭ್ಯರ್ಥಿಗಳಲ್ಲಿ 3,275 ಪುರುಷರು, 3,020 ಮಹಿಳೆಯರು ಹಾಗೂ 7 ತೃತೀಯ ಲಿಂಗಿಗಳು, 293 ಅಂಗವಿಕಲರು ಇದ್ದಾರೆ. ಅರ್ಹತೆ ಹೊಂದಿದ ಅಭ್ಯರ್ಥಿಗಳ ಸಂಖ್ಯೆ ಶೇ 6ರಷ್ಟಿದೆ ಎಂದು ಅವರು ವಿವರಿಸಿದ್ದಾರೆ.

ಯುಜಿಸಿ ಹಾಗೂ ರಾಜ್ಯದ ಮೀಸಲಾತಿ ನಿಯಮಗಳ ಪ್ರಕಾರ ಅರ್ಹತಾ ಪಟ್ಟಿ ಸಿದ್ಧಪಡಿಸಲಾಗಿದೆ. ದಾಖಲೆಗಳ ಪರಿಶೀಲನೆ ಬಳಿಕ ಅರ್ಹರಿಗೆ ಪ್ರಮಾಣಪತ್ರ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಲಸಿಕೆ ಪಡೆದ ಮತ್ತೊಂದು ಶಿಶು ಸಾವು

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ನಗರದ ಆರೋಗ್ಯ ಕೇಂದ್ರದಲ್ಲಿ ಲಸಿಕೆ (ಪೆಂಟಾವಲೆಂಟ್ ವ್ಯಾಕ್ಸಿನ್) ಪಡೆದ ಎರಡು ತಿಂಗಳ ಹೆಣ್ಣು ಮಗು ಶುಕ್ರವಾರ ರಾತ್ರಿ ಮೃತಪಟ್ಟಿದೆ.

ಕುಣಿಗಲ್ ಹೊಸ ಬಡಾವಣೆಯ ವಿನೋದ್ ಮತ್ತು ರಂಜಿತಾ ದಂಪತಿಯ ಎರಡು ತಿಂಗಳ ಹೆಣ್ಣು ಮಗು ಯಶಿಕಾಗೆ ಕೋಟೆ ಪ್ರದೇಶದ ನಗರ ಆರೋಗ್ಯ ಕೇಂದ್ರದಲ್ಲಿ ಗುರುವಾರ ಲಸಿಕೆ ಹಾಕಲಾಗಿತ್ತು.

ತಾಲ್ಲೂಕಿನ ಭಕ್ತರಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗುರುವಾರ ಲಸಿಕೆ ಪಡೆದ ಎರಡೂವರೆ ತಿಂಗಳ ಗಂಡು ಮಗು ಕೂಡ ಶುಕ್ರವಾರ ಮೃತಪಟ್ಟಿತ್ತು. ಇದುವರೆಗೆ ತಾಲ್ಲೂಕಿನಲ್ಲಿ ಪೆಂಟಾವಲೆಂಟ್ ಲಸಿಕೆ ಪಡೆದ ಎರಡು ಮಕ್ಕಳು ಮೃತಪಟ್ಟಂತಾಗಿದೆ.

ಎರಡು ಪ್ರಕರಣ ವರದಿಯಾದ ಬೆನ್ನಲ್ಲೇ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ರಾಜ್ಯ ನೋಡಲ್ ಅಧಿಕಾರಿಗಳು ಶನಿವಾರ ಎರಡೂ ಆಸ್ಪತ್ರೆಗಳಿಗೆ ಭೇಟಿ ನೀಡಿ ಲಸಿಕೆಯ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ಚುಚ್ಚುಮದ್ದಿನ ಮೂಲಕ ಮಕ್ಕಳಿಗೆ ನೀಡುವ ಪೆಂಟಾವಲೆಂಟ್ ಲಸಿಕೆ ಐದು ರೋಗಗಳನ್ನು ತಡೆಗಟ್ಟಲು ನೆರವಾಗುತ್ತದೆ.

‘ಶುಕ್ರವಾರ ಮಗುವಿನ ಆರೋಗ್ಯದಲ್ಲಿ ವ್ಯತ್ಯಾಸ ಕಂಡುಬಂತು. ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸುವ ಸಮಯದಲ್ಲಿ ಮಗು ಮೃತಪಟ್ಟಿತು’ ಎಂದು ಪೋಷಕರು ತಿಳಿಸಿದ್ದಾರೆ.

ಲಂಚ: ಡಿಡಿಪಿಐ ಲೋಕಾಯುಕ್ತ ಬಲೆಗೆ

ಹಾಸನ: ಶಿಕ್ಷಕಿಯೊಬ್ಬರ ವರ್ಗಾವಣೆ ಮಾಡಲು ₹40 ಸಾವಿರ ಲಂಚ ಪಡೆಯುತ್ತಿದ್ದ ಇಲ್ಲಿನ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಚ್.ಕೆ. ಪಾಂಡು ಹಾಗೂ ಕಚೇರಿ ಅಧೀಕ್ಷಕ ಎ.ಎಸ್. ವೇಣುಗೋಪಾಲ್ ಶನಿವಾರ ತಮ್ಮ ಕಚೇರಿಯಲ್ಲೇ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದರು.



ಎಚ್.ಕೆ. ಪಾಂಡು

ಲಂಚ ಕೊಡುವಂತೆ ಡಿಡಿಪಿಐ ಅವರು ಅಧೀಕ್ಷಕರ ಮೂಲಕ ಕೇಳಿದ್ದಾರೆ ಎಂದು ಶಿಕ್ಷಕಿಯ ಪತಿ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಲೋಕಾಯುಕ್ತ ಇನ್‌ಸ್ಪೆಕ್ಟರ್‌ಗಳಾದ ಬಾಲು ಹಾಗೂ ಶಿಲ್ಪಾ ನೇತೃತ್ವದ ತಂಡವು ಆರೋಪಿಗಳಿಬ್ಬರನ್ನೂ ಹಣದ ಸಮೇತ ಬಂಧಿಸಿತು.

ಸಂಬಂಜವೆಂಬುದು...

ಸುದೀರ್ಘ ಸಾಂಗತ್ಯಕ್ಕೂ ಪಾಠ...



ತರಬೇತಿಗೆ ಶುಲ್ಕವೆಷ್ಟು? ಅಗತ್ಯವೇನು?

ರಿಲೇಷನ್‌ಶಿಪ್ ಕೋಚ್ ಆಗಿರುವ ಬೆಂಗಳೂರಿನ ಎಚ್‌ಎಸ್‌ಆರ್ ಬಡಾವಣೆಯ ರಾಧಿಕಾ ಮೊಹ್ತಾ ಈ ನಿಟ್ಟಿನಲ್ಲಿ 2017ರಿಂದಲೇ ತರಬೇತಿ ನೀಡುವುದನ್ನೇ ವೃತ್ತಿಯಾಗಿಸಿಕೊಂಡಿದ್ದಾರೆ. ಭೇಟಿ ಮತ್ತು ಸಮಾಲೋಚನೆಗೆ ₹2499ರಿಂದ ₹11,499ರವರೆಗೂ ಶುಲ್ಕ ನಿಗದಿ ಮಾಡಿದ್ದಾರೆ. ತರಬೇತಿಗೆ ಬರುವ ಯುವಕ ಯುವತಿಯರಿಗೆ ಅವರು ತಮ್ಮ ಸಂಗಾತಿಯಿಂದ ಏನು ಬಯಸುತ್ತಾರೆ ಎಂಬ ಬಗ್ಗೆ ಸ್ಪಷ್ಟ ಕಲ್ಪನೆ ಬರುವಂತೆ ಮಾಡಲಾಗುತ್ತದೆ. ನಂತರ ಹೇಗೆ ವರ್ತಿಸಬೇಕು, ಮಾತಾಡಬೇಕು ಎಂಬುದನ್ನೂ ಹೇಳಿಕೊಡಲಾಗುತ್ತದೆ ಎನ್ನುತ್ತಾರೆ.

ಬಹುತೇಕ ಡೇಟಿಂಗ್ ಆ್ಯಪ್‌ಗಳಲ್ಲಿ ಸಿಗುವ ಸಂಗಾತಿಗಳು ಅಥವಾ ಇಷ್ಟ ಪಟ್ಟ ಸಂಗಾತಿಗಳಿಗೂ ಮುಂದುವರಿಯುವುದು ಕಷ್ಟವಾಗುತ್ತದೆ. ಬಹುತೇಕ ಸಾಂಗತ್ಯಗಳು ಟೆಕ್ಸ್‌ಟಿಂಗ್, ಸೆಕ್ಸ್‌ಟಿಂಗ್‌ಗಳಲ್ಲಿಯೇ ಮುಗಿದುಹೋಗುತ್ತವೆ. ನಿಜವಾಗಿಯೂ ಸುದೀರ್ಘಕಾಲದ ಸಾಂಗತ್ಯ ಬಯಸುವವರಿಗೆ, ಒಬ್ಬರಿಗೆ ಒಬ್ಬರು ಅರ್ಥ ಮಾಡಿಕೊಳ್ಳುವ ಮತ್ತು ಮಾಡಿಸಿಕೊಳ್ಳುವ ನಿಟ್ಟಿನಲ್ಲಿ ಹೇಗೆ ಮುಂದುವರಿಯಬಹುದು ಎಂಬುದನ್ನು ಹೇಳಿಕೊಡಲಾಗುತ್ತದೆ. ಎಲ್ಲಕ್ಕೂ ಮಿಗಿಲಾಗಿ ಬ್ರೇಕಪ್ ಆಗಿ, ಬೇರ್ಪಟ್ಟು ಬಂದ ಯುವಜನರಲ್ಲಿ ಆತಂಕವೂ ಇರುತ್ತದೆ. ಮತ್ತೊಂದು ಹೊಸ ಅಧ್ಯಾಯ ಆರಂಭಿಸಲು, ಹಿಂದಿನ ಅನುಭವಗಳನ್ನು, ನೆನಪುಗಳನ್ನು ಬದಿಗಿರಿಸಿ ಮುಂದುವರೆಯುವ ಬಗೆಯನ್ನು ಹೇಳಿಕೊಡಲಾಗುತ್ತದೆ ಎಂದು ತರಬೇತಿಯ ಕುರಿತು ವಿವರಿಸಿದರು.

ಬರುವ ಎಲ್ಲರೂ ಸುದೀರ್ಘ ಸಾಂಗತ್ಯವನ್ನು ಪಡೆದಿದ್ದಾರೆ ಎಂದು ಹೇಳುವುದು ಈಗಲೇ ಕಷ್ಟವಾಗುತ್ತದೆ. ಆದರೆ, ಜಗಳ, ಕಹಿಯಾದ ನೆನಪುಗಳು, ಅತಿರೇಕದ ಹಚ್ಚಿಕೊಳ್ಳುವಿಕೆ, ಮನಸು ಮುರಿದು ಮುದುಡಿ ಹೋಗುವುದು ಇಂಥವಂತೂ ಕಡಿಮೆಯಾಗಿವೆ. ಕೇವಲ ಸಂಬಂಧಗಳಲ್ಲಿ ಅಷ್ಟೇ ಅಲ್ಲ, ವೃತ್ತಿಗೆ ಸಂಬಂಧಿಸಿದಂತೆಯೂ ಅವರ ವ್ಯಕ್ತಿತ್ವ ಬದಲಾಗುತ್ತದೆ. ಬದುಕನ್ನು ನೋಡುವ ಕ್ರಮವೇ ಬದಲಾಗುತ್ತದೆ ಎನ್ನುತ್ತಾರೆ ಅವರು.



'ಸಂಬಂಧಗಳನ್ನು ಆದ್ಯತೆಗಳನ್ನಾಗಿ ಮಾಡಬೇಕು. ಏಕೆಂದರೆ ಜೀವನ ಎಂದರೆ ಪ್ರೀತಿಸುವುದು ಮತ್ತು ಪ್ರೀತಿಸುತ್ತಲೇ ಇರುವುದು'

ರಾಧಿಕಾ ಮೊಹ್ತಾ, ಮ್ಯಾಚ್ ಮೇಕರ್ ಮತ್ತು ರಿಲೇಶನ್‌ಶಿಪ್ ಕೋಚ್, ಎಚ್.ಎಸ್.ಆರ್. ಲೇಔಟ್ ಬೆಂಗಳೂರು

● ರಶ್ಮಿ ಎಸ್., ಮಂಜುನಾಥ ಭದ್ರಶೆಟ್ಟಿ

ಭಾರತೀಯ ಪುರುಷರು ರೋಮ್ಯಾಂಟಿಕ್ ಆಗಿಲ್ಲ. ಅವರಿಗೆ ವಾದಗಳನ್ನು ನಿಭಾಯಿಸುವುದೂ ಗೊತ್ತಿಲ್ಲ. ನಿರ್ಣಾಯಕ ಅಂಶಗಳಿಗೆ ಬಂದಾಗ, ಹೆಣ್ಣುಮಕ್ಕಳನ್ನು ಜರೆದು ಇಲ್ಲವೇ ಹಿಂಸಿಸಿ, ಅವಹೇಳನ ಮಾಡಿ ವಾದಗಳಿಂದ ದೂರ ಸರಿಯುತ್ತಾರೆ. ನಾನು ಭಾರತೀಯ ಪುರುಷರೊಂದಿಗೆ ಡೇಟಿಂಗ್ ಮಾಡುವುದನ್ನು ನಿಲ್ಲಿಸಿದ್ದೇನೆ ಎಂದು ಲೈಫ್ ಕೋಚ್ ಒಬ್ಬರು ತಮ್ಮ ಇನ್‌ಸ್ಟಾಗ್ರಾಂ ನ ಪೋಸ್ಟ್‌ನಲ್ಲಿ ಹೇಳಿಕೊಂಡಿದ್ದರು.

ದೇಶದಾದ್ಯಂತ ಇದು ಸುದ್ದಿ ಆಯಿತು. ಕೆಲವರು ಜರೆದರು. ಇನ್ನೂ ಕೆಲವರು ಅವರ ವಾದವನ್ನು ಸಮರ್ಥಿಸಿದರು.

ಜೆನ್ ಝೀ ಅಥವಾ ಮಿಲೇನಿಯಲ್ ಎಂದು ಕರೆಯಲಾಗುವ ತಲೆಮಾರಿನ ಸಮಸ್ಯೆಗಳೇ ಭಿನ್ನವಾಗಿವೆ. ಪ್ರೀತಿಸುವುದನ್ನೂ, ತಿರಸ್ಕಾರವನ್ನೂ, ತಿಳಿಹೇಳಬೇಕಾಗಿದೆ ಎಂದು ಮೂಗುಮುರಿಯುವ ಹಿರಿಯರ ನಡುವೆಯೇ ಇದೇ ತಲೆಮಾರಿನವರು ಬಾಂಧವ್ಯದ ಬೆಸುಗೆಗೆ ಅನುಕೂಲವಾಗಲಿ ಎಂದು ಕೋಚಿಂಗ್ ನೀಡುತ್ತಿದ್ದಾರೆ.

ಡೇಟಿಂಗ್ ಆ್ಯಪ್ಸ್ ಬಂದವು. ಎಡಕ್ಕೆ, ಬಲಕ್ಕೆ ಸ್ವೈಪ್ ಮಾಡುತ್ತ ಯಾರು ಹೊಂದಾಣಿಕೆಯಾದಾರು ಎಂದು ನೋಡುವುದರಲ್ಲಿಯೇ ಯಾವ ಬಾಂಧವ್ಯಗಳೂ ಹೆಚ್ಚುದಿನ ನಿಲ್ಲುತ್ತಿಲ್ಲ ಎಂಬ ಸತ್ಯವೂ ಅರಿವಾಗತೊಡಗಿತು. ಒಂದೇ ಪದದಲ್ಲಿ ಇವಕ್ಕೆ ಉತ್ತರವೆಂಬಂತೆ 'ಕಾಂಪಿಟ್ಯಬಿಲಿಟಿ' ಇಲ್ಲ ಎನ್ನತೊಡಗಿದರು. ಸಮಸ್ಯೆ ಗೊತ್ತಾಯಿತು. ಪರಿಹಾರ ಕೇಳುವುದು ಯಾರಲ್ಲಿ?

ಇದಕ್ಕೆಂದೇ ಈಗ ಕೋಚ್‌ಗಳು ಇದ್ದಾರೆ. ಒಂದು ಬಾಂಧವ್ಯದಲ್ಲಿ ಏನನ್ನು ನಿರೀಕ್ಷಿಸಬೇಕು ಎಂಬುದೇ ಮೊದಲ ಪಾಠವಾಗುತ್ತಿದೆ ಎಂಬುದು ಬಹುತೇಕ ಕೋಚ್‌ಗಳ ಅಭಿಪ್ರಾಯವಾಗಿದೆ.

ನನ್ನನ್ನು ಯಾರೂ ಪ್ರೀತಿಸಲಾರರೆ? ಎಂಬ ಪ್ರಶ್ನೆಯೊಂದಿಗೆ ಬಂದಿದ್ದ ತರುಣ್ (ಹೆಸರು ಬದಲಿಸಲಾಗಿದೆ) ಖಿನ್ನತೆಗೆ ಜಾರಿದ್ದ. ಹುಡುಗಿಯರು ಅವನನ್ನು ತಿರಸ್ಕರಿಸುತ್ತಾರೆ, ಮತ್ತು ತಾನು ಪ್ರೀತಿಸಲ್ಪಡದವ ಎಂಬುದೇ ಅವನ ಸಮಸ್ಯೆಯಾಗಿತ್ತು ಎಂದು ಸಮಾಲೋಚಕ ಮತ್ತು ಚಿಕಿತ್ಸಕ ಡಾ.ಡಿ.ಎಂ. ಹೆಗಡೆ ಅವರು ವಿವರಿಸಿದರು.

ಕೋವಿಡ್‌ನಂತರ ಕೆಲಸಕ್ಕೆ ಸೇರುವ, ಕೆಲಸದಲ್ಲಿರುವ ಯುವಜನಾಂಗದ ಅತಿದೊಡ್ಡ ಒತ್ತಡವೆಂದರೆ ತಾವೂ ರಿಲೇಷನ್‌ಶಿಪ್‌ನಲ್ಲಿರಬೇಕು. ಪರಸ್ಪರ ಪ್ರೀತಿಸಲ್ಪಡಬೇಕು. ಯಾವ ಶರತ್ತುಗಳೂ ಇರಕೂಡದು. ಇವು ಹುಡುಗರ ಕಡೆಯ ನಿರೀಕ್ಷೆ.

ಹುಡುಗಿಯರು, ಹುಡುಗ ಖರ್ಚು ಮಾಡುವುದಿಲ್ಲ. ಮಹತ್ವಾಕಾಂಕ್ಷೆ ಇಲ್ಲ. ಈಗಲೂ ಅಡುಗೆ ಬರುತ್ತದೆಯೇ ಎಂಬ ಪ್ರಶ್ನೆಯಿಂದಲೇ ಆರಂಭಿಸುತ್ತಾರೆ. ಜಗತ್ತು ಸುತ್ತಬೇಕು, ಪ್ರವಾಸ ಮಾಡಬೇಕು ಎಂಬ ಆಸೆಗಳೇ ಇಲ್ಲ. ಸಾಂಗತ್ಯಕ್ಕಾಗಿ ನೋಡುವವರು ಕೇವಲ ದೈಹಿಕ ಸುಖವನ್ನು ಮಾತ್ರ ಅಪೇಕ್ಷಿಸುತ್ತಾರೆ ಎಂದು ಹೇಳುತ್ತಾರೆ.

ಈ ಎರಡೂ ಬೇಡಿಕೆಗಳು ಒಂದು ದಿಕ್ಕಿನಲ್ಲಿ ಸಾಗದೇ ಇರುವುದರಿಂದಲೇ ಯಾವ ಬಾಂಧವ್ಯವೂ ದೀರ್ಘಕಾಲದಲ್ಲಿ ಬಾಳುತ್ತಿಲ್ಲ.

ಎಂಜಿನಿಯರಿಂಗ್ ಪದವಿ ಮುಗಿಸಿ, ಕೆಲಸಕ್ಕೆ ಸೇರಿರುವ ನೀರಜ್‌ಗೆ ಸಹೋದ್ಯೋಗಿಗಳೆಲ್ಲ ತಮ್ಮ ಜೊತೆಗಾರರೊಂದಿಗೆ ಬರುತ್ತಾರೆ. ಶಾರ್ಟ್ ಟರ್ಮ್ ಡೇಟಿಂಗ್‌ಗಾದರೂ ಯಾರಾದರೂ ಸಿಗಲಿ ಎಂಬ ಆಸೆಯೇ, ಒತ್ತಡವಾಗಿ ಬದಲಾಗಿದೆಯಂತೆ. ಕಳೆದೆರಡು ವರ್ಷಗಳ ಹಿಂದೆ NeilsenIQ ಸಂಸ್ಥೆಯ ಅಧ್ಯಯನವೂ ಈ ವಾದವನ್ನು ಪುಷ್ಟೀಕರಿಸುತ್ತಿದೆ. ಭಾರತೀಯ ಯುವಜನಾಂಗಕ್ಕೆ ಮೊದಲ ಡೇಟಿಂಗ್, ಸಂಗಾತಿಯನ್ನು ಒಲಿಸಿಕೊಳ್ಳುವುದು, ಬಾಂಧವ್ಯದಲ್ಲಿ ಬಹುದೂರ ಸಾಗಬೇಕು ಎಂಬ ನಿರೀಕ್ಷೆಗಳೇ ಅತಿಹೆಚ್ಚು ಒತ್ತಡ ಸೃಷ್ಟಿಸುತ್ತಿವೆಯಂತೆ.

ಜಾಗತಿಕ ಮಟ್ಟದಲ್ಲಿಯೂ ಭಗ್ನಹೃದಯಿಗಳ ಸಂಖ್ಯೆಯು ಹೆಚ್ಚುತಿದೆ ಎಂದು ಅಧ್ಯಯನಗಳು ಹೇಳುತ್ತಿವೆ. ನ್ಯೂಜಿಲೆಂಡ್ ದೇಶದಲ್ಲಿ ಯುವಜನಾಂಗದಲ್ಲಿ ಭಗ್ನಪ್ರೇಮಿಗಳಾಗಿ, ಹೃದಯಭಗ್ನದಿಂದಾಗಿ ಖಿನ್ನತೆ ಮತ್ತು ಒತ್ತಡವನ್ನು ಅನುಭವಿಸುವವರ ಸಂಖ್ಯೆಯು ಹೆಚ್ಚಾಗಿದೆ. ಈ ಕಾರಣದಿಂದಲೇ ಅಲ್ಲಿಯ ಸರ್ಕಾರ 2022-23ರ ಸಾಲಿನಲ್ಲಿ 4 ದಶಲಕ್ಷ ಡಾಲರ್‌ಗಳಷ್ಟು ಹಣವನ್ನು ಸಮಾಲೋಚನೆಗೆ, ಚಿಕಿತ್ಸೆಗೆ, ಪರ್ಯಾಯ ಚಟುವಟಿಕೆಗಳಿಗಾಗಿ ಮೀಸಲಾಗಿರಿಸಿದೆ.

ಭಾರತೀಯರಲ್ಲಿ 'ಲವ್ ಗುರು' ಪರಿಕಲ್ಪನೆ ಒಡಮೂಡಿದ್ದು ಬಹು ಹಿಂದೆ. ಭಗ್ನಹೃದಯಿಗಳಿಗೆ ಸಮಾಧಾನ ಹೇಳುವ, ಸಮಾಲೋಚಿಸುವ ಕೆಲಸಗಳು ನಡೆದೇ ಇದ್ದವು. ಈಗ ಚಿಕಿತ್ಸೆಗಿಂತಲೂ ಮುನ್ನೆಚ್ಚರಿಕೆ ಒಳಿತು ಎಂಬ ವಾದಕ್ಕೆ ಬಂದು ನಿಂತಿದೆ.

ಈಗ ಏನಿದ್ದರೂ ರಿಲೇಷನ್‌ಶಿಪ್ ಕೋಚ್‌ಗಳ ಕಾಲ. ಎರಡು ದಿನಗಳ ಆನ್‌ಲೈನ್, ಆಫ್‌ಲೈನ್ ಕೋರ್ಸ್‌ಗಳಿಗೆ ಕನಿಷ್ಠ ₹4,500 ರೂಪಾಯಿಗಳ ಶುಲ್ಕದಿಂದ ಲಕ್ಷಾಂತರ ರೂಪಾಯಿ ಶುಲ್ಕ ವಿಧಿಸುವ ಕೋಚ್‌ಗಳಿದ್ದಾರೆ. ಕಾಸಿಗೆ ತಕ್ಕಂತೆ, ಇವರ ಪಾಠಗಳು ಆನ್‌ಲೈನ್, ಆಫ್‌ಲೈನ್, ದೇಶದ ಗಡಿ ಮೀರಿ ವಿದೇಶಗಳಲ್ಲಿಯೂ ಪ್ರೀತಿಯ ಪಾಠ ಹೇಳಿಕೊಡುತ್ತಿದ್ದಾರೆ.

ಇವರ ಬಳಿ ಬರುವ ಬಹುತೇಕ ಪ್ರಕರಣಗಳಲ್ಲಿ ನಿರೀಕ್ಷೆಗಳು ಹೊಂದಾಣಿಕೆಯಾಗುತ್ತಿಲ್ಲ ಎಂದೇ ಹೇಳುತ್ತಾರೆ. ಆದರೆ ಈ ಸತ್ಯ ತಿಳಿಯುವಾಗ ಬಹುತೇಕ ಜೋಡಿಗಳು ಮಾನಸಿಕವಾಗಿ, ದೈಹಿಕವಾಗಿ ಅತ್ಯಾಪ್ತರಾಗಿರುತ್ತಾರೆ. ಹೊಂದಾಣಿಕೆ ಆಗದು ಎಂಬುದು ತಿಳಿದಾಗಲೂ ವಿದಾಯವೆಂಬುದು ಸಹಜವಾಗುವುದಿಲ್ಲ. ಸರಳವಾಗುವುದಿಲ್ಲ. ಕೆಲವೆಡೆ ಜಗಳಗಳೊಂದಿಗೆ ವಿದಾಯ ಹೇಳಿದ್ದರೆ, ಇನ್ನೂ ಕೆಲವೆಡೆ ಯಾವ ಉತ್ತರಗಳನ್ನೂ ಹೇಳದೆಯೇ ತಿರಸ್ಕಾರಕ್ಕೆ ಒಳಗಾಗಿರುತ್ತಾರೆ. ನಿರ್ಲಕ್ಷಿಸುತ್ತಲೇ ಬೇರೆ ಬೇರೆ ದಾರಿ ಎಂಬ ಉತ್ತರಗಳನ್ನೂ ಹೇಳಿರುತ್ತಾರೆ. ಈ ಮಾನಸಿಕ ಒತ್ತಡವನ್ನು ಸ್ವೀಕರಿಸುವುದು ಅಥವಾ ನಿಭಾಯಿಸುವುದು ಎರಡೂ ಸಾಧ್ಯವಾಗುತ್ತಿಲ್ಲ.

ಭಗ್ನಪ್ರೇಮಿಗಳಾಗುವ ಬದಲು, ಬಾಂಧವ್ಯ ಬೆಸೆಯುವ ಬಗೆ ಹೇಗೆ ಎಂಬತ್ತ ಯುವಜನಾಂಗ ಹೆಚ್ಚು ಗಮನವಹಿಸುತ್ತಿರುವುದರಿಂದಲೇ ಈ ರಿಲೇಷನ್‌ಶಿಪ್ ಕೋಚ್‌ಗಳ ಸಂಖ್ಯೆ ಹೆಚ್ಚುತ್ತಲಿದೆ. ವ್ಯಕ್ತಿತ್ವ ನಿರ್ಮಾಣದಂತೆಯೇ ಇಲ್ಲಿ ಬಾಂದವ್ಯ ನಿರ್ಮಾಣ ಮಾಡಿಕೊಡಲಾಗುತ್ತಿದೆ ಎನ್ನುತ್ತಾರೆ ರಿಲೇಷನ್‌ಶಿಪ್ ಕೋಚ್ ಕ್ಷೇತ್ರದಲ್ಲಿ ಹೆಸರು ಮಾಡುತ್ತಿರುವ ಅರುಣವ್ ಜೈನ್, ರಾಧಿಕಾ ಮೊಹ್ತಾ.

ಬೇರ್ಪಡಲು ಕಾರಣಗಳು



ಸಂಬಂಧಗಳು ಮುರಿದುಬೀಳಲು ಮುಖ್ಯವಾದ ಕಾರಣಗಳೆಂದರೆ, ಏಕತಾನತೆ ಮೂಡುವುದು, ಮದುವೆಯಾಗಬೇಕು ಎನ್ನುವ ಒಬ್ಬರ ಇಚ್ಛೆಯನ್ನು ಮತ್ತೊಬ್ಬರು ಒಪ್ಪಿಕೊಳ್ಳದೆ ಇರುವುದು, ಬದಲಾದ ಅಭಿರುಚಿಗಳಿಂದಾಗಿ ಉದ್ಯೋಗದ ಬದಲಾವಣೆಯಿಂದ ಪರಸ್ಪರ ದೂರಾಗುವುದು. ಈ ಸಂಬಂಧದಲ್ಲಿ ಬೇರ್ಪಟ್ಟವರು ಹಿಂದಿರುಗಿ ಕೂಡಿಕೊಳ್ಳುವುದು ಅಪರೂಪ

ಮೊದಲೆಲ್ಲ ವಿಚ್ಛೇದನಕ್ಕೆ ಬಂದ ದಂಪತಿಗಳಿಗೆ ಸಮಾಲೋಚನೆಯ ಮೂಲಕ ಹಾಗೂ ಮಧ್ಯಸ್ಥಿಕೆಯ ಮೂಲಕ 60 % ಕುಟುಂಬವನ್ನು ಒಗ್ಗೂಡಿಸಬಹುದಾಗಿತ್ತು. ಆದರೆ ಈಗದು ಕ 30 ರಿಂದ 32 ಶೇಕಡಕ್ಕೆ ಇಳಿದಿದೆ.



ಅಂಜಲಿ ರಾಮಣ್ಣ, ವಕೀಲರು

ಸಲಿಂಗಿಗಳಾಗಿದ್ದರೆ...



ಹೊಂದಾಣಿಕೆ ಎಂಬುದು ಕೇವಲ ಎರಡು ಸ್ವಭಾವ ವ್ಯಕ್ತಿತ್ವಗಳಲ್ಲಿ ಅಲ್ಲ. ಆರ್ಥಿಕ ಹೊಂದಾಣಿಕೆ, ಭಾವನಾತ್ಮಕ, ಔದ್ಯೋಗಿಕ ಮತ್ತು ಕೌಟುಂಬಿಕ ಹೊಂದಾಣಿಕೆಗಳೂ ಈ 'ಕಾಂಪಿಟ್ಯಾಬಿಲಿಟಿ'ಯ ಆದ್ಯತೆಗಳಾಗಿವೆ. ಈಗ ಇದಕ್ಕೆ ಲೈಂಗಿಕ ಹೊಂದಾಣಿಕೆಯೂ ಹೊಸ ಸೇರ್ಪಡೆಯಾಗಿದೆ. ಇದೀಗ ಸಲಿಂಗಿಗಳಾಗಿದ್ದಲ್ಲಿ, ಸಾಮಾಜಿಕ ಕಟ್ಟುಪಾಡುಗಳಿಗೆ ಹೆದರಿ ಅಥವಾ ಮನೆಯ ಪ್ರತಿಷ್ಠೆಯ ಒತ್ತಡಕ್ಕೆ ಒಳಗಾಗಿ ನಾಮಕಾವಾಸ್ತೆ ಮದುವೆಯಾಗುವವರೂ ಇರುತ್ತಾರೆ. ಅವರೆಲ್ಲ ಮೊದಲೇ ತಮ್ಮ ಆದ್ಯತೆಯನ್ನು ಅರ್ಥ ಮಾಡಿಕೊಂಡರೆ ಸಂಗಾತಿಯನ್ನು ಹುಡುಕುವುದು ಸುಲಭವಾಗುತ್ತದೆ. ಈಗಾಗಲೇ ಇಂಥ ಇಬ್ಬದಿತನವನ್ನು ಅನುಭವಿಸುವ ಯುವಜನರೂ ಸಮಾಲೋಚಕರ ಬಳಿ ಹೋಗುತ್ತಿದ್ದಾರೆ. ಸಂಗಾತಿಯ ಎದುರು ತಮ್ಮ ಇಷ್ಟಗಳನ್ನು ಹೇಳುವುದು, ಹಾಗೆ ಒಪ್ಪಿಕೊಳ್ಳುವುದರಲ್ಲಿ ಯಾವ ಹಿಂಜರಿಕೆಯೂ ಇಲ್ಲದಂಥ ಧೈರ್ಯಪಡೆಯುವುದೂ ಸಾಧ್ಯವಾಗುತ್ತಿದೆ. ತಮ್ಮತನವನ್ನು, ತಮ್ಮ ಅಗತ್ಯಗಳನ್ನೂ, ತಮ್ಮ ಆದ್ಯತೆಗಳನ್ನೂ ಅರಿತುಕೊಂಡರೆ ಸಂಗಾತಿಯನ್ನು ಹುಡುಕುವುದು, ಹೊಂದಿಕೊಳ್ಳುವುದು, ಒಪ್ಪಿಕೊಳ್ಳುವುದು ಸುಲಭವಾಗುತ್ತಿವೆ ಎನ್ನುತ್ತಾರೆ ಸಮಾಲೋಚಕರು.

ಹುಡುಗರಿಗೆ ಮೊದಲು ಮಾತಾಡಿಸುವುದನ್ನು ಹೇಳಿಕೊಡಲಾಗುತ್ತದೆ. ಮೆಲುಧ್ವನಿಯಲ್ಲಿ, ಪರಸ್ಪರ ಅರಿಯುವ ಅರಕೆ ಇರುವ ಧಾಟಿಯಲ್ಲಿ ಮಾತಾಡಬೇಕು. ನಮ್ಮಲ್ಲಿ ಈಗಲೂ ನನಗೆ ಒಪ್ಪಿಗೆಯಾಗಿರುವುದರಿಂದ, ನನ್ನ ನಿರೀಕ್ಷೆಗಳನ್ನು ಕೇಳಬೇಕು ಎಂಬ ಧಾಟಿಯಲ್ಲಿಯೇ ಹುಡುಗರು ಮಾತಾಡುತ್ತಾರೆ. ಸ್ವಾವಲಂಬಿ ಮಹಿಳೆಯರಿಗೆ, ಸೂಕ್ಷ್ಮ ಹುಡುಗಿಯರಿಗೆ ಈ ಧ್ವನಿ, ಧಾಟಿ ಒಂದಿನಿತೂ ಇಷ್ಟವಾಗುವುದಿಲ್ಲ. ಕೆಲವು ಗಂಡುಮಕ್ಕಳು ಹೆಣ್ಮಕ್ಕಳ ಕಂಗಳನ್ನು ದಿಟ್ಟಿಸಿ ಮಾತಾಡುವುದಿಲ್ಲ. ದೃಷ್ಟಿ ಆಗಾಗ ಕತ್ತಿನ ಕೆಳಗೆ ಹೋಗುತ್ತಿರುತ್ತದೆ. ಇಲ್ಲವೇ ಬೇರೆಲ್ಲೋ ಮಾತಾಡುತ್ತಿರುತ್ತಾರೆ. ತಾವೆಷ್ಟು ಜಾಣರು ಎಂಬುದನ್ನು ತೋರಿಸಲೂ ಯತ್ನಿಸುತ್ತಾರೆ. ಫೋನು ಕರೆ ಸ್ವೀಕರಿಸಿ ಜೋರು ಮಾಡುವುದು, ಇಲ್ಲವೇ ಅತಿವಿನೀತರಾಗಿ ತೋರಿಸಿಕೊಳ್ಳುವುದೂ ಮಾಡುತ್ತಿರುತ್ತಾರೆ. ಇವೆಲ್ಲವೂ ತಮ್ಮ ಸಂಗಾತಿಯನ್ನು ಕಣ್ಣಳತೆಯಲ್ಲಿಯೇ ಮೌಲ್ಯಮಾಪನ ಮಾಡುವಂಥ ಹುಡುಗಿಯರಿಗೆ ನಕಾರಾತ್ಮಕ ಅಂಶಗಳಾಗಿ ಕಾಣುತ್ತವೆ.

ಇಂಥ ಸಣ್ಣ ಸಣ್ಣ ಕಾರಣಗಳೂ ಮುಂದಿನ ಭೇಟಿಯನ್ನು ಮುಂದೂಡುವಂತೆ ಅಥವಾ ನಿರಾಕರಿಸುವಂತೆ ಮಾಡುತ್ತವೆ.

'ಸಮಾಲೋಚಕರ ಪ್ರಕಾರ ಹುಡುಗರಲ್ಲಿ ಈಗಲೂ ಹಣ ಗಳಿಸುತ್ತೇನೆ. ನೌಕರಿ ಇದೆ. ಆಸ್ತಿ ಇದೆ. ಇನ್ನೇನು ಬೇಕು ಹುಡುಗಿಯರಿಗೆ, ಎಂಬ ಮನಸ್ಥಿತಿಯೇ ಇದೆ. ಹುಡುಗಿಯರಿಗೀಗ ಹಣಕ್ಕಿಂತಲೂ ಸ್ವಭಾವ ಹೊಂದಾಣಿಕೆ ಆಗಬೇಕು. ಇಬ್ಬರೂ ಒಟ್ಟಿಗಿದ್ದಾಗ ತಮ್ಮದೇ ಸಮಯವಾಗಿರಬೇಕು. ತಮ್ಮನ್ನು ಗೌರವಿಸಬೇಕು. ಹಾಸ್ಯ ಗೊತ್ತಿರಬೇಕು. ಅಪಹಾಸ್ಯ ಮಾಡಕೂಡದು. ತಮಗಿಂತಲೂ ಹೆಚ್ಚು ಗಳಿಸುವವನಿರಬೇಕು. ತಮ್ಮ ಸಂಬಳದ ಕುರಿತು ಹೆಚ್ಚು ಕೇಳಬಾರದು. ಆರ್ಥಿಕ ಸ್ವಾತಂತ್ರ್ಯ ಇರಬೇಕು ಎಂದು ಬಯಸುತ್ತಿದ್ದಾರೆ.


ಹುಡುಗಿಯರ ಕನಸುಗಳು, ಅವರ ಕೆರಿಯರ್ ಆದ್ಯತೆಗಳು, ಆರ್ಥಿಕ ಸ್ವಾತಂತ್ರ್ಯ ಇವೆಲ್ಲವೂ ಹುಡುಗರ ಮನಸಿನೊಳಗೆ ಆತಂಕ ಮೂಡಿಸುತ್ತಿವೆ. ಸ್ವಾತಂತ್ರ್ಯವನ್ನು ಸ್ವೇಚ್ಛೆ ಎಂದೇ ಭಾವಿಸುತ್ತಾರೆ. ಅನಗತ್ಯದ ಕೊಂಕುನುಡಿ, ಟೀಕೆಗಳನ್ನು ಸಹಿಸದ ಹುಡುಗಿಯರು 'ಇದು ಟಾಕ್ಸಿಕ್' ಮನಸ್ಥಿತಿ ಎಂಬ ತೀರ್ಮಾನಕ್ಕೆ ಬಂದು ದೂರವಾಗುತ್ತಾರೆ.

ಮದುವೆಯೆಂಬುದೇ ಜವಾಬ್ದಾರಿ. ಜೊತೆಗಿದ್ದರೆ ಖರ್ಚು ನಿಭಾಯಿಸಬೇಕು. ಮನೆ ನೋಡಿಕೊಳ್ಳಲು, ನಡೆಸಲು, ವಂಶ ಮುಂದುವರಿಸಲು ಎಂಬಂಥ ಸಾಂಪ್ರದಾಯಿಕ ಹೊಣೆಗಾರಿಕೆಯ ಒತ್ತಡವೇ ಗಂಡು ಮಕ್ಕಳಲ್ಲಿ ಹೆಚ್ಚಾಗಿದೆ. ವಿಹಾನ್ (ಹೆಸರು ಬದಲಿಸಲಾಗಿದೆ) ಲಿವ್ ಇನ್ ನಲ್ಲಿದ್ದು, ಇದೀಗ ಬೇರ್ಪಟ್ಟು ಒಂಟಿಯಾಗಿ ಬದುಕುತ್ತಿದ್ದಾನೆ. ಬಾಂಧವ್ಯಗಳಲ್ಲಿನ ಒಡಕು, ವಿಶ್ವಾಸವನ್ನೇ ಕೊಂದು ಹಾಕಿದೆ. ಒಂದೇ ಅನುಭವದಿಂದ ಇಂಥ ನಿರ್ಧಾರಕ್ಕೆ ಬರುವ ಗಂಡುಮಕ್ಕಳ ಸಂಖ್ಯೆ ಹೆಚ್ಚಿದೆ. ಬಾಂಧವ್ಯವೆಂಬುದು ಆರಂಭವಾಗುವುದೇ ನಾಲ್ವತ್ತರ ಬಳಿಕ. ನಾಲ್ವತ್ತರ ನಂತರವೂ ಅವರು ಒಟ್ಟಿಗಿದ್ದರೆ ಸುದೀರ್ಘ ಕಾಲದ ಸಾಂಗತ್ಯವನ್ನು ಹಂಚಿಕೊಳ್ಳುತ್ತಾರೆ. ಜೊತೆಗಿರುವುದು ಪರಸ್ಪರ ಬಳಸಿಕೊಳ್ಳಲು ಅಲ್ಲ, ಪರಸ್ಪರ ಅವಲಂಬಿತರಾಗಲು ಮತ್ತು ಬದುಕನ್ನು ಹಂಚಿಕೊಳ್ಳಲು ಎಂಬ ಔದಾರ್ಯ ಮೂಡುವವರೆಗೂ ಕಾಯಬೇಕಿದೆ' ಎನ್ನುತ್ತಾರೆ ಮಧ್ಯಸ್ಥಿಕೆ ಕೇಂದ್ರದಲ್ಲಿಯೂ ಸಮಾಲೋಚಕರಾಗಿರುವ ಡಿ.ಎಂ. ಹೆಗಡೆಯವರು. 'ಪ್ರೇಮ ಮತ್ತು ಕಾಮದ ಕಾವು ಇಳಿಯುವುದರಲ್ಲಿಯೇ ಬಾಂಧವ್ಯಗಳಲ್ಲಿ ಬಿರುಕು ಮೂಡುತ್ತಿರುವುದು ವಿಪರ್ಯಾಸ ಆಗುತ್ತಿದೆ' ಎನ್ನುತ್ತಾರೆ ಅವರು.

ಹುಡುಗರಿಗೆ ಈಗ ಎರಡು ಬಗೆಯ ಆತಂಕ ಕಾಡುತ್ತಿದೆ. ಒಂದು ಸೂಕ್ತ ಸಂಗಾತಿ ಸಿಗುತ್ತಿಲ್ಲ. ಸಿಕ್ಕರೂ ಸುದೀರ್ಘವಾಗಿ ಸಾಂಗತ್ಯ ಉಳಿಯುತ್ತಿಲ್ಲ. ಸಾಂಗತ್ಯ ಉಳಿಯದೇ ಬೇರ್ಪಟ್ಟರೆ, ವಿಚ್ಛೇದನಕ್ಕೆ ಮುಂದಾದರೆ ಪರಿಹಾರ ಮತ್ತು ಜೀವನಾಂಶ ನೀಡುವ ಕುರಿತೂ ಮಾನಸಿಕ ಒತ್ತಡ ಹೆಚ್ಚುತ್ತಿದೆ. ಹೊಸದಾಗಿ ಬದುಕು ಆರಂಭಿಸಬೇಕೆಂದರೆ ಆರ್ಥಿಕವಾಗಿ ಸಾಕಷ್ಟು ಸಬಲರಾಗಿರಬೇಕು. ಈ ಒತ್ತಡದಿಂದಾಚೆ ಬರಲೆಂದೇ ಸಾಕಷ್ಟು ಜನರು ಸುದೀರ್ಘ ಸಾಂಗತ್ಯಕ್ಕಾಗಿ ಹಪಹಪಿಸುತ್ತಿದ್ದಾರೆ. ಅದಕ್ಕಾಗಿ ಅದೆಷ್ಟು ಬದಲಾಗಬೇಕಿದೆ? ಅಥವಾ ತಮ್ಮ ಬಯಕೆಗಳನ್ನು ಸಂಗಾತಿಯ ಮುಂದೆ ಯಾವ ಪದಗಳಲ್ಲಿಟ್ಟರೆ ಹೊಂದಾಣಿಕೆಗೆ ಮುಂದಾಗಬಹುದು? ಎಂಬ ಪ್ರಶ್ನೆಗಳನ್ನಿರಿಸಿಕೊಂಡೇ ಈ ಸಮಾಲೋಚಕರ ಮುಂದೆ ಹುಡುಗರು ಕೂರುತ್ತಾರೆ.



ನನ್ನ ಬಳಿ ಬರುವ ಪುರುಷರಿಗೆ, ವಿವಿಧ ಸಂದರ್ಭಗಳಲ್ಲಿ ಮಹಿಳೆಯರ ಮನಸ್ಥಿತಿ ಹೇಗಿರುತ್ತದೆ ಹಾಗೂ ಅದನ್ನು ಹೇಗೆ ನಿಭಾಯಿಸಬೇಕು ಎಂಬುದರ ಬಗ್ಗೆ ಹೇಳಿಕೊಡಲಾಗುತ್ತದೆ. ಪ್ರತಿ ತಿಂಗಳು 40 ರಿಂದ 50 ಜನ ನನ್ನನ್ನು ಸಂಪರ್ಕಿಸುತ್ತಾರೆ. ವೃತ್ತಿಪರರಿಗೆ ಹಾಗೂ ಉದ್ಯಮಿಗಳಿಗೆ ಮಾತ್ರ ಹೇಳಿಕೊಡುತ್ತೇನೆ



ಅರುಣವ್ ಗುಪ್ತಾ, ಲೈಫ್‌ಸ್ಟೈಲ್ ಕೋಚ್

ಹುಡುಗರು ಮತ್ತು ಹುಡುಗಿಯರ ನಡುವೆ ಒಂದು ಕಂದರ ಬೆಳೆದು ಬಂದಿದೆ. ನವಪೀಳಿಗೆಯ ಹೆಣ್ಣುಮಕ್ಕಳಲ್ಲಿ ಸ್ವತಂತ್ರ ಯೋಚನೆ, ಕೆರಿಯರ್ ಮತ್ತು ಶಿಕ್ಷಣ, ಸ್ವಂತ ನಿರ್ಧಾರ ಮುಂತಾದ ಗುಣಗಳು ಹೆಚ್ಚಿವೆ. ಗಂಡುಮಕ್ಕಳನ್ನು ಬೆಳೆಸುವಲ್ಲಿ ಈಗಲೂ ಮನೆಯ ಜವಾಬ್ದಾರಿ ಹೊರುವಾತ, ವಂಶವನ್ನು ಮುಂದುವರಿಸುವಾತ. ಮನೆಯ ಯಜಮಾನ ಇಂಥ ಆಳುವ ಮತ್ತು ಜವಾಬ್ದಾರಿ ಹೊರುವ ಜೀವವಾಗಿಯೇ ಬೆಳೆಸಲಾಗಿದೆ. ಹುಡುಗರಿಗೂ ಧಾರಾಳಿಯಾಗುವುದು, ಹೆಣ್ಣುಮಕ್ಕಳು ಮದುವೆಯಾಗುವುದು ಬಾಂಧವ್ಯದಲ್ಲಿ ಜೊತೆಯಾಗುವುದು ಸಾಂಗತ್ಯಕ್ಕಾಗಿಯೇ ಹೊರತು ಅಡಿಯಾಳಾಗಿ ಬದುಕಲು ಅಲ್ಲ ಎಂಬ ಮನಃಸ್ಥಿತಿ ಮೂಡಿಸಬೇಕಾಗಿದೆ ಎನ್ನುವುದು ಈ ಕೋಚ್‌ಗಳ ಅಭಿಪ್ರಾಯ.

'ಬಂದಿ ಅಚ್ಛಿ ಹೈ.. ಕುಛ್ ಜಮ್ ನಹಿ ರಹಾ' ಉತ್ತರ ಭಾರತೀಯ ಹುಡುಗರ ಸಂಕಟ ಸಾಮಾನ್ಯವಾಗಿ ಹೀಗೆಯೇ ಇರುತ್ತದಂತೆ. 'ಹುಡುಗಿ ಒಳ್ಳೆಯವಳು. ಆದರೆ ಕೂಡಿ ಬರ್ತಿಲ್ಲ' ಏನಾದರೂ ಮಾಡಿ, ಅವಳು ಬಿಟ್ಟು ಹೋಗದಂತೆ ಇರುವುದು ಹೇಳಿಕೊಡಿ ಎನ್ನುತ್ತಾರೆ. ಕೆಲವರಿಗೆ ಇಲ್ಲಿ ಬರುವ ಮೊದಲು ಒಂದಷ್ಟು ಅಪನಂಬಿಕೆಗಳಿರುತ್ತವೆ. ನಾವಿಲ್ಲಿ ಮ್ಯಾಚ್ ಮೇಕಿಂಗ್ ಮಾಡ್ತೀವಿ ಅಂತ. ನಾವಿಲ್ಲಿ ಯಾರನ್ನೂ ಮ್ಯಾಚ್ ಮೇಕಿಂಗ್ ಮಾಡುವುದಿಲ್ಲ. ಬದಲಿಗೆ ಸಾಂಗತ್ಯಕ್ಕೆ ಸಿದ್ಧಪಡಸ್ತೀವಿ. ಯಾರು ಎಲ್ಲಿ ಹೇಗೆ ವರ್ತಿಸಬೇಕು? ಎಷ್ಟು ಮುನಿಸಿಕೊಳ್ಳಬಹುದು? ಸಂಗಾತಿ ಮುನಿಸಿಕೊಂಡರೆ ಕ್ಷಮಾಪಣೆ ಕೇಳುವುದರಿಂದ, ಒಲಿಸಿಕೊಳ್ಳುವವರೆಗೂ ದೇಹಭಾಷೆ, ಬಳಸುವ ಭಾಷೆ ಹೇಗಿರಬೇಕು, ಇವನ್ನೆಲ್ಲ ಹೇಳಿಕೊಡುತ್ತೇವೆ ಎನ್ನುತ್ತಾರೆ ಈ ಕೋಚ್‌ಗಳು.

ಈ ಇಡೀ ಬದುಕಿರುವುದು ಪ್ರೀತಿಸಲು ಮತ್ತು ಪ್ರೀತಿಸಲ್ಪಡಲು. ನಮ್ಮ ನಮ್ಮ ಖಾಸಗೀತನವನ್ನು ಗೌರವಿಸುತ್ತಲೇ ಬಾಂಧವ್ಯದೊಳಗೆ ಬೆಳೆಯುವುದು ಕಷ್ಟವೇನಲ್ಲ ಎನ್ನುತ್ತಾರೆ ರಾಧಿಕಾ. ಪ್ರತಿ ತಿಂಗಳೂ ಸರಾಸರಿ 30-35 ಜನರು ಇವರ ಬಳಿ ತರಬೇತಿ ಪಡೆಯಲು ಬರುತ್ತಾರೆ. ಮತ್ತೆ ಕೆಲವು ಸೆಷನ್‌ಗಳಿಗೆ ಮುಂದುವರಿಯುತ್ತಾರೆ. ಕೆಲವು ಸಮಾನ ಮನಸ್ಕರನ್ನು ಒಂದೆಡೆ ಸೇರಿಸಿಯೂ ಸಮಾಲೋಚನೆ ಮಾಡಲಾಗುತ್ತದೆ. ಅಲ್ಲಿಯೂ ಕೆಲವರು ತಮ್ಮ ಸಂಗಾತಿಯನ್ನು ಹುಡುಕಿಕೊಂಡ ಉದಾಹರಣೆಗಳೂ ಇವೆ ಎನ್ನುತ್ತಾರೆ.

ದೆಹಲಿಯ ಅರುಣವ್ ಗುಪ್ತಾ ಅವರ ಬಳಿಯೂ ಸಾಕಷ್ಟು ಬೆಂಗಳೂರಿಗರು ತರಬೇತಿ ಪಡೆಯುತ್ತಿದ್ದಾರಂತೆ. ಗೋಪ್ಯ ಕಾಪಾಡಬೇಕು ಎಂಬ ಮೊದಲ ಶರತ್ತಿನೊಂದಿಗೇ ದೂರದೂರಿನ ಸಮಾಲೋಚಕರ ಬಳಿ ಕನ್ನಡಿಗರು ಎಡತಾಕುತ್ತಿದ್ದಾರೆ.

ಬಾಂಧವ್ಯಗಳಲ್ಲಿ ಬಿರುಕು ಬರಲು ಹುಡುಗರೂ ಕಾರಣವಲ್ಲ, ಹುಡುಗಿಯರೂ ಕಾರಣರಲ್ಲ. ಬಿರುಕುಗಳು ಕಂದರವಾಗಲು ಅವರವರ ನಡುವೆ ಕಡಿಮೆಯಾಗುತ್ತಿರುವ ಮಾತುಕತೆಗಳಾಗಿವೆ. ಕೆಲವೆಡೆ ಮೌನ ಔಷಧಿಯ ಕೆಲಸ ಮಾಡುತ್ತದೆ. ಇನ್ನೂ ಕೆಲವೆಡೆ ಮಾತುಗಳು ಮುಲಾಮಿನ ಕೆಲಸ ಮಾಡುತ್ತವೆ. ಕಾಲ, ಸಂದರ್ಭ, ಸನ್ನಿವೇಶಗಳು ನೀಡುವ ಹೊಡೆತದ ಗಾಯಗಳಿಗೆ ಸಕಾಲದಲ್ಲಿ ಮಾಯಿಸಿಕೊಳ್ಳುವ ಚಿಕಿತ್ಸೆಯ ಕೆಲಸವನ್ನು ಈ ಸಮಾಲೋಚಕರು ಅಥವಾ ತಮ್ಮನ್ನೇ ತಾವು ಕರೆದುಕೊಳ್ಳುವಂತಹ ರಿಲೇಷನ್‌ಶಿಪ್ ಕೋಚ್‌ಗಳು ಮಾಡುತ್ತಿದ್ದಾರೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 05-01-2000

● **ತಬಲಾ ಮಾಂತ್ರಿಕ ಅಲ್ಲಾರಖಾಗೆ ಚೌಡಯ್ಯ ಪ್ರಶಸ್ತಿ**

ಬೆಂಗಳೂರು, ಜ.4– ರಾಜ್ಯ ಸರ್ಕಾರದ 1999ನೇ ಸಾಲಿನ ಪ್ರತಿಷ್ಠಿತ ಟಿ.ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿಗೆ ಪ್ರಖ್ಯಾತ ತಬಲಾ ವಾದಕ ಉಸ್ತಾದ್ ಅಲ್ಲಾರಖಾ ಖಾನ್ ಅವರನ್ನು ಆಯ್ಕೆ ಮಾಡಲಾಗಿದೆ.

ರಾಜ್ಯ ಸರ್ಕಾರದ 1999ನೇ ಸಾಲಿನ ಇತರೆ ಐದು ಪ್ರತಿಷ್ಠಿತ ಪ್ರಶಸ್ತಿಗಳನ್ನೂ ಪ್ರಕಟಿಸಿದ್ದು, 'ಕನಕ–ಪುರಂದರ' ಪ್ರಶಸ್ತಿಗೆ ಖ್ಯಾತ ತಬಲಾ ವಾದಕ ಧಾರವಾಡದ ಶೇಷಗಿರಿ ಹಾನಗಲ್, 'ಸಂತ–ಶಿಶುನಾಳ ಷರೀಫ್' ಪ್ರಶಸ್ತಿಗೆ ಹೆಸರಾಂತ ಗಾಯಕ ಶಿವಮೊಗ್ಗ ಸುಬ್ಬಣ್ಣ, 'ಡಾ. ಗುಬ್ಬಿ ವೀರಣ್ಣ' ಪ್ರಶಸ್ತಿಗೆ ಪ್ರಸಿದ್ಧ ವೃತ್ತಿ ನಾಟಕಕಾರ ಪುಂಡಲೀಕ ಬಸನಗೌಡ ಧುತ್ತರಗಿ ಅವರನ್ನು ಆಯ್ಕೆ ಮಾಡಲಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 05-01-1975

● **ಜೆ.ಪಿ. ಚಳವಳಿಯಿಂದ ಉದ್ಭವಿಸಿರುವ ಪರಿಸ್ಥಿತಿ: ಕೆಪಿಸಿಸಿ ಸಭೆಯಲ್ಲಿ ಬಿಚ್ಚುಮನಸ್ಸಿನ ಚರ್ಚೆ**

ಹುಬ್ಬಳ್ಳಿ, ಜ.4– ಜೆ.ಪಿ. ಚಳವಳಿಯಿಂದ ಕೆಲ ವರ್ಗಗಳು ಉಂಟು ಮಾಡಲು ಯತ್ನಿಸಿರುವ ರಾಜಕೀಯ ಪರಿಸ್ಥಿತಿ ಕುರಿತು ಇಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ (ಕೆಪಿಸಿಸಿ) ಕಾಂಗ್ರೆಸ್ಸಿಗರು ಇದೇ ಮೊದಲ ಬಾರಿಗೆ ಬಿಚ್ಚುಮನಸ್ಸಿ ನಿಂದ ಆತ್ಮಶೋಧನೆಗೆ ಯತ್ನಿಸಿದರು.

ಚರ್ಚೆಯು ಇಂಥ ಆತ್ಮಶೋಧನೆ ರೂಪ ತಳೆದಿದ್ದು ಇಂದಿನ ಕೆಪಿಸಿಸಿ ಸಭೆಯ ವೈಶಿಷ್ಟ್ಯ. ಪಟ್ಟಭದ್ರ ಹಿತಾಸಕ್ತಿಗಳಿಗೆ ರಾಜ್ಯದ ಹಲವು ಕಾಂಗ್ರೆಸ್ಸಿಗರೇ ಪೂರಕ ವಾಗಿರುವುದನ್ನು ಬಿಚ್ಚುಮನಸ್ಸಿನ ಚರ್ಚೆಯಲ್ಲಿ ಹಲವರು ಹೇಳಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜನವರಿ 5, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಷಷ್ಠಿ ಗಂ. 20-16 **ನಕ್ಷತ್ರ:** ಪೂರ್ವಾಭಾದ್ರ ಗಂ. 20-18 **ಯೋಗ:** ವ್ಯತೀಪಾತ ಗಂ. 07-32 ನಂತರ ವರಿಯಾನ್ ಗಂ. 28-51 **ಕರಣ:** ಕೌಲವ ಗಂ. 09-10, ಧನು ಮಾಸದ 20 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 3.

ರಾಹುಕಾಲ: ಸಾಯಂಕಾಲ 04-30 – 06-00

ಸೂರ್ಯೋದಯ: 06-59 **ಸೂರ್ಯಾಸ್ತ:** 06-13

ಮುಸ್ಲಿಂ ದಿನಾಂಕ: 04 ರಜಬ್ **ಅದೃಷ್ಟ ಸಂಖ್ಯೆ:** 11, 5

ಮೇಷ: ವ್ಯವಹಾರದಲ್ಲಿ ದಾಕ್ಷಿಣ್ಯ ಪ್ರವೃತ್ತಿಗೆ ಒಳಗಾಗದಂತೆ ನಿಸ್ಸಂಕೋಚತೆಯಿಂದ ಇರಬೇಕಾಗುತ್ತದೆ. ಬಂಧುಗಳ ಮನೆಯ ಔತಣಕೂಟಗಳಲ್ಲಿ ಭಾಗವಹಿಸುವಿರಿ. ಲಕ್ಷ್ಮಿನರಸಿಂಹನನ್ನು ಆರಾಧಿಸಿ ಶುಭವಾಗುವುದು.

ವೃಷಭ: ಹಳೆಯ ವಾಹನಗಳ ಕೊಡು–ಕೊಳ್ಳುವಿಕೆಯಲ್ಲಿ ದಾಖಲೆಗಳ ಬಗ್ಗೆ ಹೆಚ್ಚಿನ ಗಮನವಿರಲಿ. ಕುಟುಂಬದ ಆರ್ಥಿಕ ಆದಾಯವು ಸುಧಾರಿಸುವುದು. ಅಪೇಕ್ಷಿಸುತ್ತಿರುವ ವಸ್ತು ಕೈ ಸೇರುವುದು.

ಮಿಥುನ: ನಿರುದ್ಯೋಗಿಗಳಿಗೆ ಲೆಕ್ಕಪತ್ರಗಳ ಪರಿಶೀಲನೆಯ ಉದ್ಯೋಗ ಲಭಿಸುವ ಸಾಧ್ಯತೆ ಇದೆ. ಇಂದಿನ ಕೆಲ ಘಟನೆಗಳಿಂದಾಗಿ, ಯಾರನ್ನೂ ನಂಬಲಾಗದ ಪರಿಸ್ಥಿತಿ ನಿರ್ಮಾಣವಾಗಲಿದೆ. ಅದೃಷ್ಟದ ಪರೀಕ್ಷೆ ನಡೆಯಲಿದೆ.

ಕರ್ಕಾಟಕ: ವ್ಯವಹಾರಗಳನ್ನು ವಿಶ್ವಾಸಾರ್ಹ ವ್ಯಕ್ತಿಗಳೊಂದಿಗೆ ಮಾತ್ರವೇ ಮುಂದುವರೆಸಿಕೊಂಡು ಹೋಗುವುದು ಉತ್ತಮ. ಗಿಡಮೂಲಿಕೆಗಳ ಬಳಕೆಯಿಂದ ಉದರ ಸಂಬಂಧಿ ವ್ಯಾಧಿಗಳು ಗುಣವಾಗುವುದು.

ಸಿಂಹ: ಧಾರ್ಮಿಕ ಕಾರ್ಯಕ್ರಮಗಳ ಮುಂದಾಳತ್ವ ವಹಿಸಿ, ದೇವರ ಕೃಪೆಗೆ ಪಾತ್ರರಾದಂತಹ ಧನ್ಯತೆಯ ಮನೋಭಾವ ನಿಮ್ಮದಾಗುವುದು. ರಜೆಯ ದಿನವಾದರೂ, ಅನಿವಾರ್ಯವಾಗಿ ಕಾರ್ಯನಿರ್ವಹಿಸಬೇಕಾಗುವುದು.

ಕನ್ಯಾ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಹಾಗೂ ನ್ಯಾಯಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಕೃಷಿ ಭೂಮಿಯನ್ನು ವ್ಯವಸ್ಥಿತ ರೀತಿಯಲ್ಲಿ ಇಟ್ಟುಕೊಳ್ಳುವ ಬಗ್ಗೆ ಕಾರ್ಯಪ್ರವೃತ್ತರಾಗುವುದು ಉತ್ತಮ.

ತುಲಾ: ದೇವತಾ ಕಾರ್ಯಗಳಲ್ಲಿ ಭಾಗಿಯಾಗಲು ದೂರ ಪ್ರಯಾಣ ಮಾಡಬೇಕಾಗಬಹುದು. ಕೆಲಸಗಳು ನೆರವೇರಲು ಹೆಚ್ಚಿನ ಶ್ರಮ ವಹಿಸಬೇಕಾದೀತು. ಕುಟುಂಬದಲ್ಲಿ ಸಂತಸದ ವಾತಾವರಣವಿರುತ್ತದೆ.

ವೃಶ್ಚಿಕ: ವ್ಯವಹಾರದಲ್ಲಿನ ಹೆಚ್ಚಿನ ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ. ಕೆಲಸಗಾರರ ಅಸಹಕಾರದಿಂದ ನಷ್ಟ ಉಂಟಾಗಬಹುದು. ಪಾಲುದಾರಿಕೆ ವ್ಯವಹಾರವು ಪ್ರಗತಿ ಕಾಣಲಿದೆ.

ಧನು: ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ. ಕುಟುಂಬದ ಸದಸ್ಯರೊಂದಿಗೆ ಬಾಲ್ಯದ ದಿನಗಳನ್ನು ನೆನಪು ಮಾಡಿಕೊಳ್ಳುವಿರಿ. ಇಂಧನ ವ್ಯಾಪಾರಿಗಳಿಗೆ ಅಧಿಕ ಲಾಭ ಪ್ರಾಪ್ತಿಯಾಗುತ್ತದೆ.

ಮಕರ: ದೀರ್ಘಕಾಲದ ಕನಸುಗಳು ಈಡೇರುವುದರಿಂದ ಮನಸ್ಸಿಗೆ ಸಂತಸವಾಗುವುದು. ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಉತ್ಸಾಹದಿಂದ ಭಾಗವಹಿಸುವಿರಿ.

ಕುಂಭ: ಪೊಲೀಸ್ ಅಧಿಕಾರಿಗಳಿಗೆ ಸರಿ–ತಪ್ಪು ನಿರ್ಧರಿಸುವುದು ಕಷ್ಟವಾಗಲಿದೆ ಹಾಗೂ ವೃತ್ತಿಯಲ್ಲಿ ಒತ್ತಡ ಹೆಚ್ಚಲಿದೆ. ನೀಲಿವಸ್ತ್ರ ಅಥವಾ ಹರಳು ಕಾರ್ಯಸಾಧನೆಗೆ ಸಹಾಯಕವಾಗಲಿದೆ. ಸಾಲ ತೆಗೆದುಕೊಳ್ಳಬೇಡಿ.

ಮೀನ: ವಾಣಿಜ್ಯ ಬೆಳೆಗಳನ್ನು ದಾಸ್ತಾನು ಮಾಡಿಕೊಳ್ಳುವ ಯೋಚನೆ ಸರಿಯಾದ ನಿರ್ಧಾರ. ಆಟಿಕೆ ಸಾಮಾನುಗಳ ಮಾರಾಟಗಾರರಿಗೆ ಹೆಚ್ಚಿನ ಲಾಭವಾಗಲಿದೆ. ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸಿ.

ಪದಬಂಧ 5913


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ತಂದೆತಾಯಿಯಿರುವ ಊರು (3)
5.ಇನ್ನೂ ಮರಿ! ಈ ಹೆಣ್ಣುದುಂಬಿ (4)
6.ನೀರಾಗಿ ಹರಿಯುವಂತಹ ವಸ್ತು (2)
7.ದರಿಯಲ್ಲಿ ಬಂಧನ! (4)
9.ಮಣ್ಣಿನ ಹೆಂಟೆ (2)
10.ರೇಖಾಗಣಿತದಲ್ಲಿ ವರ್ತುಲವನ್ನು ಸಮನಾಗಿ ವಿಭಾಗಿಸುವ ರೇಖೆ (2)
12.ತೀಕ್ಷ್ಣವಾದ ಮಾತು (4)
15.ಎಡಭಾಗವು ಉಲ್ಟಾ ಆಗಿದೆ (2)
16.ಒಳ್ಳೆಯ ನಡತೆ (4)
17.ಚಿತ್ರ ಸಹಿತವಾದುದು (3)

ಮೇಲಿಂದ ಕೆಳಕ್ಕೆ

1.ನೆಲ್ಲಿಗಿಡ ಮತ್ತು ಅದರ ಕಾಯಿ (4)
2.ಹೂವಿನ ರಸ (4)
3.ತರಿಯನ್ನು ತರಲು ಕನ್ನಡಿಗನ ಅರ್ಜೆಂಟು! (4)
4.ಸುಡುಗಾಡು ಇಲ್ಲಿದೆ (4)
8.ಹೊಳಪಿನ ಲೇಪನ (3)
11.ಜೊತೆಯಲ್ಲಿ ವಾಸಿಸುವುದು (4)
12.ಸೂತ್ರವುಳ್ಳ ಡಾಬು! (4)
13.ನ್ಯಾಯಾಲಯದಲ್ಲಿ ತನ್ನ ಕಡೆಗೆ ತೀರ್ಪು ಪಡೆದಿರುವ ವ್ಯಕ್ತಿ (4)
14.ನಡುವೆ ವರನಿದ್ದರೆ ಇದು ಹೊದಿಕೆ! (4)



5912ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಭಾವಲಯ 3.ಪ್ರಭವ
5.ಜಕಾತಿ 7.ಉಚ್ಛ್ರಂಖಲ
8.ರಕ್ಷಾಕವಚ 11.ಪರಿಮಾಣ
13.ದರಗ 16.ಬುರುಜು
17.ಅಂಗರಕ್ಷಕ

ಮೇಲಿಂದ ಕೆಳಕ್ಕೆ:
1.ಪ್ರಭಂಜನ 2.ಲಡಿ
3.ಪ್ರಮುಖ 4.ವಕ್ರ
6.ತಿಸರ 7.ಉಪಕರಣ
9.ಚಕ್ಕಂದ 10.ಜಾಗರೂಕ
12.ರಿವಾಜು 14.ತೂಬು
15.ಖಗ

ಸುಡೊಕು 6298

5					7		1	4
8		7	6		4	2		9
			3					
2	4			1		9		
							7	
7	5			9		3	4	
	8							3
			4		8	5		
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6297 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಪರಿಣತ ವೈದ್ಯರ ತಂಡ ರಚಿಸಿ’

ಬಾಣಂತಿಯರ ಸಾವಿನ ಪ್ರಕರಣಗಳ ತನಿಖೆ • ಮಹಿಳಾ ಆಯೋಗ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿ ನಿರ್ಲಕ್ಷ್ಯದಿಂದಲೇ ಬಾಣಂತಿಯರ ಸಾವು ಸಂಭವಿಸುತ್ತಿದ್ದಲ್ಲಿ ತಜ್ಞ ವೈದ್ಯರ ತಂಡ ರಚಿಸಿ ತನಿಖೆ ನಡೆಸಬೇಕು. ತಂಡದ ವರದಿಯನ್ನು ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

16 ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿಗಳು ಮತ್ತು ಸಮಸ್ಯೆಗಳ ಕುರಿತು ತಯಾರಿಸಿರುವ ವರದಿ ಹಾಗೂ ಕೈಗೊಳ್ಳಬೇಕಾದ ಶಿಫಾರಸುಗಳನ್ನು ನಾಗಲಕ್ಷ್ಮಿ ಚೌಧರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶನಿವಾರ ಸಲ್ಲಿಸಿದರು.

ವರದಿಯಲ್ಲಿಯೇನಿದೆ?: ಬಾಣಂತಿಯರ ಸಾವು ನಿಯಂತ್ರಿಸಲು ಸ್ಕ್ಯಾನಿಂಗ್, ಪೋಲಿಕ್ ಆಸಿಡ್ ಮಾತ್ರೆ ತೆಗೆದುಕೊಳ್ಳುವುದು ಹಾಗೂ ಊಟೋಪಚಾರದ ಕುರಿತು ಗರ್ಭಿಣಿಯರಿಗೆ ಸರಿ ಯಾದ ಮಾಹಿತಿ ನೀಡಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ರಕ್ತ ಹಾಗೂ ಥೈರಾಯ್ಡ್ ಪರೀಕ್ಷೆಗಳನ್ನು ನಡೆಸಲು ಪ್ರಯೋಗಾಲಯ ಸ್ಥಾಪಿಸಬೇಕು. ಇದಕ್ಕೆ ಬೇಕಾದ ಸ್ತ್ರೀರೋಗ ತಜ್ಞರು ಸೇರಿದಂತೆ ಅಗತ್ಯ ಸಿಬ್ಬಂದಿ ನೇಮಿಸಬೇಕು.

ಹೆರಿಗೆ ನಂತರ ಅಧಿಕ ರಕ್ತ ಸ್ರಾವ ನಿರ್ವಹಣೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ‘ಬಕ್ರಿ ಬಲೂನ್’ ಅಳವಡಿಸಿಕೊಳ್ಳಬೇಕು. ಹೆರಿಗೆಯ ಎರಡು ವಾರಗಳ ಮುಂಚೆ ಅನಿಮಿಯಾ, ಎಚ್‌ಟಿಎನ್ ಪತ್ತೆ ಹಚ್ಚಬೇಕು. ರಾಜ್ಯದಲ್ಲಿ ಮೃತಪಟ್ಟಿರುವ ಬಾಣಂತಿಯರ ಮಕ್ಕಳಿಗೆ ಸರ್ಕಾರ ಉನ್ನತ ವಿದ್ಯಾಭ್ಯಾಸದವರೆಗೆ ಉಚಿತ ಶಿಕ್ಷಣ ನೀಡಬೇಕು.

ಸರ್ಕಾರ ನೀಡುವ ಮೊಟ್ಟೆ, ಪೌಷ್ಠಿಕ ಆಹಾರ ಗರ್ಭಿಣಿಯರಿಗೆ ಸರಿಯಾಗಿ ಹಂಚಿಕೆಯಾಗುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರಿಗೆ ಬಿಸಿನೀರು, ಶುದ್ಧ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ಸ್ವಚ್ಛ ಮತ್ತು ಸಮರ್ಪಕ ಶೌಚಾಲಯಗಳ ಕೊರತೆ, ಆಸ್ಪತ್ರೆ ಆವರಣದಲ್ಲಿ ತ್ಯಾಜ್ಯದ ರಾಶಿ ಹಾಕಿದೆ. ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಒಳಚರಂಡಿ ವ್ಯವಸ್ಥೆಯೇ ಇಲ್ಲ. ಈ ಎಲ್ಲ ಅಂಶಗಳನ್ನು ಆಸ್ಪತ್ರೆಗಳಿಗೆ ಭೇಟಿ ನೀಡಿದ ವೇಳೆ ಗಮನಕ್ಕೆ ಬಂದಿದೆ. ತಕ್ಷಣವೇ ಈ ಸಮಸ್ಯೆಗಳನ್ನು ಸರಿಪಡಿಸಬೇಕು.


ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿ ಸಲ್ಲಿಸಿದರು

ಮುಖ್ಯಮಂತ್ರಿಯವರು ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳ ಸ್ಥಿತಿಗತಿಗಳು ಹಾಗೂ ಸಮಸ್ಯೆಗಳು ಹಾಗೂ ಬಾಣಂತಿಯರ ಸಾವಿನ ಬಗ್ಗೆ ವಿವರವಾದ ವರದಿ ನೀಡುವಂತೆ ತಿಳಿಸಿದ್ದಾರೆ

ಡಾ.ನಾಗಲಕ್ಷ್ಮಿ ಚೌಧರಿ,
ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

‘ಕೇಂದ್ರ ಔಷಧ ಪ್ರಯೋಗಾಲಯ ಪೂರೈಸುವ ಔಷಧಿಗಳ ಗುಣಮಟ್ಟವನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಕೇಂದ್ರ ಸರ್ಕಾರ ಪೂರೈಸುವ ಔಷಧಿಗಳ ಅವಧಿಯನ್ನೂ ಪರಿಶೀಲಿಸಬೇಕು. ಔಷಧ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತಂದು ಅವಧಿ ಮುಗಿದ ಔಷಧಿ ಪೂರೈಸಿದ ಸಂಸ್ಥೆಗಳನ್ನು ಕಪ್ಪುಪಟ್ಟಿಗೆ ಸೇರಿಸಬೇಕು.

‘ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ವಚ್ಛತೆಯ ಕೊರತೆ’

‘ಸರ್ಕಾರಿ ಆಸ್ಪತ್ರೆಗಳಲ್ಲಿನ ಶಸ್ತ್ರ ಚಿಕಿತ್ಸಾ ಕೊಠಡಿ, ಐಸಿಯು, ವಾರ್ಡ್‌ಗಳಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ. ಕಾಲಕಾಲಕ್ಕೆ ಶಸ್ತ್ರಚಿಕಿತ್ಸೆ, ರಕ್ತ ಪರೀಕ್ಷೆಗೆ ಬಳಸುವ ಉಪಕರಣಗಳನ್ನು ಸ್ವಚ್ಛಗೊಳಿಸುತ್ತಿಲ್ಲ. ಸೋಂಕು ನಿವಾರಕ ದ್ರಾವಣಗಳಿಂದ ಉಪಕರಣಗಳನ್ನು ಸ್ವಚ್ಛಗೊಳಿಸಬೇಕು. ಆಟೋಕ್ಲೇವ್ ವಿಧಾನದ ಮೂಲಕ ಉಪಕರಣಗಳನ್ನು ಸ್ಟೆರಲೈಸೇಶನ್ ಮಾಡಬೇಕು’ ಎಂದು ವರದಿ ಶಿಫಾರಸು ಮಾಡಿದೆ.

‘ಸರ್ಕಾರಿ ಆಸ್ಪತ್ರೆಗಳಲ್ಲಿ ನೀರು ಸಂಗ್ರಹಿಸುವ ಟ್ಯಾಂಕ್‌ಗಳು ಪಾಚಿಕಟ್ಟಿಕೊಂಡಿವೆ. ನೀರು ಕಲುಷಿತಗೊಂಡಿದ್ದು, ಅದೇ ನೀರನ್ನು ಹೆರಿಗೆ ಕೊಠಡಿಗಳಿಗೆ ಸರಬರಾಜು ಮಾಡಲಾಗುತ್ತಿದೆ. ಈ ನೀರಿನಲ್ಲಿ ಬ್ಯಾಕ್ಟೀರಿಯಾಗಳು ಇರುವ, ಪ್ರಾಣಾಪಾಯದ ಸಾಧ್ಯತೆ ಇದೆ. ಕಾಲಕಾಲಕ್ಕೆ ನೀರಿನ ಟ್ಯಾಂಕ್ ಸ್ವಚ್ಛಗೊಳಿಸಬೇಕು ಹಾಗೂ ನೀರಿನ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಪರೀಕ್ಷಿಸಬೇಕು’ ಎಂಬುದಾಗಿಯೂ ವರದಿಯಲ್ಲಿ ಉಲ್ಲೇಖಿಸಿದೆ.

ಮಕ್ಕಳ ಮೇಲೆ ಬಿದ್ದ ಚಾವಣಿ ಕಾಂಕ್ರೀಟ್

ಪ್ರಜಾವಾಣಿ ವಾರ್ತೆ


ಬಂಗಾರಪೇಟೆ (ಕೋಲಾರ): ತಾಲ್ಲೂಕಿನ ದಾಸರಹೊಸಹಳ್ಳಿಯ ಅಂಗನವಾಡಿ ಕೇಂದ್ರದ ಚಾವಣಿಯ ಸಿಮೆಂಟ್ ತಳಪದರ (ಆರ್‌ಸಿಸಿ ಸೀಲಿಂಗ್ ಕಾಂಕ್ರೀಟ್) ಶನಿವಾರ ಕಳಚಿ ಬಿದ್ದು ನಾಲ್ವರು ಮಕ್ಕಳು ಗಾಯಗೊಂಡಿದ್ದಾರೆ.

ಗಾಯಗೊಂಡಿರುವ ಲಾಸ್ಯಾ, ಪರಿಣಿತಿ, ಲಿಖಿತಾ ಮತ್ತು ಚಾನ್ವಿ ಎಂಬ ಮಕ್ಕಳಿಗೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ನಾಲ್ಕೂ ಮಕ್ಕಳು ಮೂರರಿಂದ ನಾಲ್ಕು ವರ್ಷದವರಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಲಿಖಿತಾ ಮತ್ತು ಚಾನ್ವಿ ಎಂಬ ಮಕ್ಕಳ ತಲೆಗೆ ಪೆಟ್ಟು ಬಿದ್ದಿದ್ದು, ಸಾರ್ವಜನಿಕ ಆಸ್ಪತ್ರೆಯಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ. ಲಾಸ್ಯಾ ಕಾಲಿಗೆ ಏಟು ಬಿದ್ದಿದ್ದು ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಪರಿಣಿತಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಕೋಲಾರದ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ಈ ಅಂಗನವಾಡಿ ಕೇಂದ್ರದಲ್ಲಿ ಒಟ್ಟು ಏಳು ಮಕ್ಕಳಿದ್ದಾರೆ. ಚಾವಣಿಯ ಸಿಮೆಂಟ್ ಉದುರಲು ಆರಂಭ ಆಗುತ್ತಿದ್ದಂತೆಯೇ ಮೂವರು ಬಾಲಕರು ಹೊರಗೆ ಓಡಿ ಬಂದಿದ್ದಾರೆ. ನಾಲ್ವರು ಬಾಲಕಿಯರು ಹೆದರಿ ಕೊಠಡಿಯಲ್ಲಿಯೇ ಕುಳಿತಿದ್ದರು. ಈ ಘಟನೆ ನಡೆದಾಗ ಅಂಗನವಾಡಿ ಕಾರ್ಯಕರ್ತೆ ಕೇಂದ್ರದಲ್ಲಿ ಇರಲಿಲ್ಲ. ಅಂಗನವಾಡಿ ಅಕ್ಕಪಕ್ಕದ ಮನೆಯವರ ನೆರವಿನಿಂದ ಪೋಷಕರು ಮಕ್ಕಳನ್ನು ಆಸ್ಪತ್ರೆಗೆ ಕರೆದೊಯ್ದರು ಎಂದು ಸ್ಥಳೀಯರು ತಿಳಿಸಿದರು.

‘ಶಿಥಿಲಗೊಂಡಿದ್ದ ಕಟ್ಟಡಕ್ಕೆ ಎಂಟು ವರ್ಷದ ಹಿಂದೆ ನವೀಕರಣ ಮಾಡಲಾಗಿತ್ತು. ಕಳಪೆ ಕಾಮಗಾರಿ ಕಾರಣ ಚಾವಣಿ ತಳಪದರ ಕುಸಿದಿದೆ’ ಎಂದು ಸ್ಥಳೀಯರು ಆರೋಪಿಸಿದರು.


ಅಂಗನವಾಡಿ ಚಾವಣಿ ತಳಪದರ ಕಳಚಿ ಬಿದ್ದಿದೆ



ಪ್ರಶಸ್ತಿ ಸಂಭ್ರಮ

ಕರ್ನಾಟಕ ಚಿತ್ರಕಲಾ ಪರಿಷತ್ತು ಬೆಂಗಳೂರಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಐವರು ಚಿತ್ರ ಕಲಾವಿದರಿಗೆ ‘ಚಿತ್ರಕಲಾ ಸಮ್ಮಾನ್’ ಪ್ರಶಸ್ತಿ ಪ್ರದಾನ ಮಾಡಲಾಯಿತು. (ಕುಳಿತವರು ಎಡದಿಂದ) ಜಿ.ಎಲ್. ಭಟ್(ವೈ. ಸುಬ್ರಮಣ್ಯರಾಜು ಪ್ರಶಸ್ತಿ), ಎ. ರಾಮಕೃಷ್ಣಪ್ಪ(ಕೆ.ಎಸ್. ನಾಗರತ್ನಮ್ಮ ಪ್ರಶಸ್ತಿ), ಎಂ.ಎಸ್. ಮೂರ್ತಿ(ಡಿ. ದೇವರಾಜು ಅರಸು ಪ್ರಶಸ್ತಿ), ಸೂರ್ಯಪ್ರಕಾಶ್ ಗೌಡ (ಎಚ್.ಕೆ. ಕೇಜ್ರಿವಾಲ್ ಪ್ರಶಸ್ತಿ) ಹಾಗೂ ಸಿ.ಎಸ್. ನಿರ್ಮಲಾ ಕುಮಾರಿ(ಎಂ. ಆರ್ಯಮೂರ್ತಿ ಪ್ರಶಸ್ತಿ) ನೀಡಿ ಗೌರವಿಸಲಾಯಿತು. ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಕಾನೂನು ಸಚಿವ ಎಚ್.ಕೆ. ಪಾಟೀಲ, ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯದ (ಎನ್‌ಜಿಎಂಎ) ಮಹಾನಿರ್ದೇಶಕ ಸಂಜೀವ್ ಕಿಶೋರ್ ಗೌತಮ್ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ಪ್ರಶಸ್ತಿಗಳು ತಲಾ ₹50 ಸಾವಿರ ನಗದು, ಫಲಕ ಒಳಗೊಂಡಿವೆ

ಪ್ರಜಾವಾಣಿ ಚಿತ್ರ

‘ಕಲ್ಯಾಣ’ದಲ್ಲಿ ಶೀತಗಾಳಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದಲ್ಲಿ ಕಳೆದ ಎರಡು ದಿನಗಳಿಂದ ತಾಪಮಾನ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿದ್ದು, ಶೀತಗಾಳಿ ಮತ್ತು ಮಂಜಿನಿಂದಾಗಿ ಚಳಿ ಹೆಚ್ಚಾಗಿ ಜನರು ನಡುಗುತ್ತಿದ್ದಾರೆ.

ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ವರದಿ ಪ್ರಕಾರ, ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಬೀದರ್‌ನಲ್ಲಿ ಕನಿಷ್ಠ 11.5 ಡಿ.ಸೆ. ದಾಖಲಾಗಿದೆ. ನಂತರದ ಸ್ಥಾನದಲ್ಲಿ 11.8 ಡಿಗ್ರಿ ಸೆಲ್ಸಿಯಸ್ ನೊಂದಿಗೆ ಕೋಲಾರ ಜಿಲ್ಲೆ ಇದೆ.

ಕಲಬುರಗಿಯಲ್ಲಿ 12.1, ರಾಯಚೂರಲ್ಲಿ 14.1, ವಿಜಯನಗರದಲ್ಲಿ 14.5, ಯಾದಗಿರಿ ಮತ್ತು ಕೊಪ್ಪಳದಲ್ಲಿ ತಲಾ 14.8 ಹಾಗೂ ಬಳ್ಳಾರಿಯಲ್ಲಿ 16.1 ಡಿಗ್ರಿ ಸೆಲ್ಸಿಯಸ್ ತಾಪಮಾನ ಕಂಡುಬಂದಿದೆ.

ಸಂಗೀತ ವಿ.ವಿ: ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ನಡೆಸಿದ್ದ 2023–24ನೇ ಸಾಲಿನ ವಿಶೇಷ ಸಂಗೀತ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿದ್ದು, ಶೇ 90ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

‘ವಿಶೇಷ ಸಂಗೀತ, ನೃತ್ಯ, ತಾಳವಾದ್ಯ ಸೇರಿ ಒಟ್ಟು 9 ವಿಭಾಗಗಳಲ್ಲಿ 17,788 ವಿದ್ಯಾರ್ಥಿಗಳು ಹಾಗೂ 3,500 ಶಿಕ್ಷಕರು ನೋಂದಾಯಿಸಿಕೊಂಡಿದ್ದರು. ರಾಜ್ಯದ 18 ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ಆಯೋಜಿಸಲಾಗಿತ್ತು’ ಎಂದು ಕುಲಪತಿ ಪ್ರೊ. ನಾಗೇಶ್ ಬೆಟ್ಟಕೋಟೆ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ನಾಗೇಶ್ ವಿ.

‘ಮೊದಲ ಬಾರಿಗೆ ವಿಶ್ವವಿದ್ಯಾಲಯವು ಪರೀಕ್ಷೆ ಗಳನ್ನು ಆಯೋಜಿಸಿತ್ತು. ಫಲಿತಾಂಶ ವೀಕ್ಷಿಸಲು ವಿಶ್ವವಿದ್ಯಾಲಯದ ವೆಬ್‌ಸೈಟ್ ನೋಡಬಹುದು. ಜನವರಿ 18ರಂದು ಘಟಿಕೋತ್ಸವ ನಡೆಯಲಿದ್ದು, ನಂತರ, ಪ್ರತ್ಯೇಕ ಘಟಿಕೋತ್ಸವದ ಮೂಲಕ ಎಲ್ಲರಿಗೂ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು’ ಎಂದು ಹೇಳಿದರು.

‘ಪ್ರತಿ ಅಭ್ಯರ್ಥಿಯನ್ನೂ ಖುದ್ದಾಗಿ ಪ್ರಾಯೋಗಿಕ ಪರೀಕ್ಷೆ ನಡೆಸಿ ವ್ಯವಸ್ಥಿತವಾಗಿ ಫಲಿತಾಂಶ ನೀಡಲಾಗಿದೆ. 100ಕ್ಕಿಂತ ಹೆಚ್ಚು ವಿದ್ಯಾರ್ಥಿಗಳುಳ್ಳ ವಿಭಾಗಕ್ಕೆ 3 ಅಗ್ರ ರ‍್ಯಾಂಕ್ ಹಾಗೂ 100ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದ ವಿಭಾಗಕ್ಕೆ 1 ರ‍್ಯಾಂಕ್ ನೀಡಲಾಗಿದೆ’ ಎಂದರು.

‘2024–25ನೇ ಸಾಲಿಗೆ ನೋಂದಣಿ ಪ್ರಕ್ರಿಯೆಯು ಜನವರಿ 16ರಿಂದ ಆರಂಭ ಆಗಲಿದೆ. ಕಳೆದ ವರ್ಷ ಪರೀಕ್ಷೆ ಆಯೋಜನೆಯಲ್ಲಿ ಕೆಲವು ಗೊಂದಲಗಳಾಗಿದ್ದವು. ಈ ವರ್ಷ ಏಪ್ರಿಲ್–ಮೇನಲ್ಲಿಯೇ ಪರೀಕ್ಷೆ ಆಯೋಜಿಸಲಾಗುವುದು’ ಎಂದರು.

‘ಬಾಂಬೆ, ಚೆನ್ನೈ, ಕುವೈತ್, ದುಬೈನಲ್ಲೂ ಪರೀಕ್ಷಾ ಕೇಂದ್ರಗಳನ್ನು ತೆರೆಯುವಂತೆ ಬೇಡಿಕೆ ಬಂದಿದೆ. ಆದರೆ ಯುಜಿಸಿ ನಿಯಮದಂತೆ ರಾಜ್ಯ ವ್ಯಾಪ್ತಿಯಲ್ಲಿ ಮಾತ್ರ ವಿಶ್ವವಿದ್ಯಾಲಯವು ಕಾರ್ಯ ನಿರ್ವಹಿಸುತ್ತಿದ್ದು, ಹೊರ ರಾಜ್ಯ ಹಾಗೂ ದೇಶಗಳಲ್ಲೂ ಪರೀಕ್ಷಾ ಕೇಂದ್ರ ಸ್ಥಾಪನೆ ಹಾಗೂ ಆನ್‌ಲೈನ್ ಪರೀಕ್ಷೆ ಆಯೋಜನೆಗೆ ಪ್ರಸ್ತಾವ ಸಲ್ಲಿಸಲಾಗುತ್ತಿದೆ’ ಎಂದು ಹೇಳಿದರು.

ಕುಲಸಚಿವ ಎಂ.ಜಿ. ಮಂಜುನಾಥ್ ಜೊತೆಗಿದ್ದರು.

ಲೇಖಕ ಮುಜಾಫರ್ ಅಸ್ಸಾದಿ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜಕೀಯ ಹಾಗೂ ಸಾಮಾಜಿಕ ಚಿಂತಕ, ಲೇಖಕ ಪ್ರೊ.ಮುಜಾಫರ್ ಅಸ್ಸಾದಿ (63) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ಮುಂಜಾನೆ ಬಹು ಅಂಗಾಂಗ ವೈಫಲ್ಯದಿಂದ ನಿಧನರಾದರು. ಶುಕ್ರವಾರವಷ್ಟೇ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆದಿತ್ತು. ಅವರಿಗೆ ಪತ್ನಿ, ತಾಯಿ, ಪುತ್ರ, ಪುತ್ರಿ ಇದ್ದಾರೆ.



ಸರಸ್ವತಿಪುರಂನ ನಿವಾಸ ಹಾಗೂ ನ್ಯೂ ಮುಸ್ಲಿಂ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು, ಲೇಖಕರು, ವಿವಿಧ ಸಂಘಟನೆಗಳ ಹೋರಾಟಗಾರರು ಹಾಗೂ ಜನಪ್ರತಿನಿಧಿಗಳು ಅಂತಿಮ ದರ್ಶನ ಪಡೆದರು. ಬನ್ನಿಮಂಟಪದ ಎಲ್‌ಐಸಿ ವೃತ್ತದ ಬಳಿಯಿರುವ ಖಬ್ರಸ್ತಾನದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

ಉಡುಪಿ ಜಿಲ್ಲೆಯ ಶಿರ್ವ ಗ್ರಾಮದಲ್ಲಿ 1961, ಆ.28ರಂದು ಜನಿಸಿದ್ದ ಅವರು, ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪದವಿ, ಸ್ನಾತಕೋತ್ತರ ಪದವಿ, ದೆಹಲಿಯ ಜವಾಹರಲಾಲ್ ನೆಹರೂ ವಿ.ವಿ.ಯಿಂದ ಎಂ.ಫಿಲ್, ಪಿಎಚ್‌ಡಿ ಹಾಗೂ ಷಿಕಾಗೊ ವಿಶ್ವವಿದ್ಯಾಲಯದಲ್ಲಿ ಪೋಸ್ಟ್ ಡಾಕ್ಟೊರಲ್ ಪದವಿ ಪಡೆದಿದ್ದರು.

ಮಂಗಳೂರು ಹಾಗೂ ಗೋವಾ ವಿಶ್ವವಿದ್ಯಾಲಯಗಳಲ್ಲಿ ರಾಜ್ಯಶಾಸ್ತ್ರ ಅಧ್ಯಾಪಕರಾಗಿದ್ದ ಅವರು, 1994ರಿಂದ ಮೈಸೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕ, ಮುಖ್ಯಸ್ಥ ಹಾಗೂ ವಿಶ್ವವಿದ್ಯಾಲಯದ ಕಲಾನಿಕಾಯದ ಡೀನ್ ಆಗಿದ್ದರು. 2022ರಲ್ಲಿ ಹಂಗಾಮಿ ಕುಲಪತಿಯಾಗಿ ನಿವೃತ್ತರಾಗಿದ್ದರು.


‘ಕರ್ನಾಟಕದಲ್ಲಿ ಬಹುರೂಪಿ ಸ್ತ್ರೀವಾದ ಕಥನಗಳು ಮತ್ತು ಚಳವಳಿ’, ‘ಅಸ್ಮಿತೆ, ರಾಜಕಾರಣ ಮತ್ತು ಮೂಲಭೂತವಾದ’, ‘ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ’. ‘ಕಲೊನಿಯಲ್ ಆ್ಯಂಡ್ ಪೋಸ್ಟ್ ಕಲೊನಿಯಲ್ ಐಡೆಂಟಿಟಿ ಪಾಲಿಟಿಕ್ಸ್ ಇನ್ ಸೌತ್ ಏಷ್ಯಾ’, ‘ಗಾಂಧಿಯ ಹಿಂದ್ ಸ್ವರಾಜ್’ ಸೇರಿದಂತೆ 15ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದ ಅವರು, ನೂರಾರು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದರು.

2011, 2021ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ ದೊರೆತ್ತಿತ್ತು. ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನಲ್ಲಿ ನೂರಾರು ಅಂಕಣಬರಹಗಳನ್ನು ಬರೆದಿದ್ದರು. ದೇಶ– ವಿದೇಶದ ಜರ್ನಲ್‌ಗಳಲ್ಲಿ 200ಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿದ್ದವು.

2005ರಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಬುಡಕಟ್ಟು ಸಮುದಾಯಗಳ ಸ್ಥಳಾಂತರ ಕುರಿತ ಹೈಕೋರ್ಟ್ ಸಮಿತಿಯ ಮುಖ್ಯಸ್ಥರಾಗಿ ವರದಿ ತಯಾರಿಸಿದ್ದರು. ರಾಜ್ಯ ಸರ್ಕಾರ ಅದನ್ನು ಇನ್ನೂ ಅನುಷ್ಠಾನಗೊಳಿಸಿಲ್ಲ.

ಕಥಕ್ ನೃತ್ಯ ಕಲಾವಿದೆ ಚಿತ್ರಾ ನಿಧನ

ಬೆಂಗಳೂರು: ಕಥಕ್ ನೃತ್ಯ ಕಲಾವಿದೆ ಹಾಗೂ ನೃತ್ಯ ಗುರು ಚಿತ್ರಾ ವೇಣುಗೋಪಾಲ್ (88) ಅವರು ಶುಕ್ರವಾರ ನಿಧನರಾದರು.



ಮೃತರಿಗೆ ಪುತ್ರಿ, ಪುತ್ರ ಇದ್ದಾರೆ. ಚಿತ್ರಾ ಅವರು ಕಥಕ್ ಗುರು ಮಾಯಾರಾವ್ ಅವರ ಸಹೋದರಿ. ಹರಿಶ್ಚಂದ್ರ ಘಾಟ್ ಚಿತಾಗಾರದಲ್ಲಿ ಶನಿವಾರ ಚಿತ್ರಾ ಅವರ ಅಂತ್ಯಸಂಸ್ಕಾರ ನೆರವೇರಿತು.

ಉಡುಪಿ ಜಿಲ್ಲೆಯ ಹಟ್ಟಿಯಂಗಡಿ ಗ್ರಾಮದ ಚಿತ್ರಾ ಅವರು, ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆಯಿಂದ ಫೆಲೋಷಿಪ್ ಪಡೆದು ರಷ್ಯಾದ ಬ್ಯಾಲೆ ಪ್ರಕಾರದಲ್ಲಿ ಪರಿಣತಿ ಪಡೆದಿದ್ದರು.

ರೈತ ಮುಖಂಡ ಬಯ್ಯಾರೆಡ್ಡಿ ನಿಧನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಹಾಗೂ ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಸಿ. ಬಯ್ಯಾರೆಡ್ಡಿ (65) ಶನಿವಾರ ಬೆಳಗಿನ ಜಾವ ನಿಧನರಾದರು.



ಕೆಲವು ವರ್ಷಗಳಿಂದ ಉಸಿರಾಟ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಪಡೆದು ಬೆಂಗಳೂರಿನ ಮನೆಗೆ ಹಿಂದಿರುಗಿದ್ದರು. ಬೆಂಗಳೂರಿನ ಸಿಪಿಎಂ ರಾಜ್ಯ ಕಚೇರಿಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಬಯ್ಯಾರೆಡ್ಡಿ ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆ ಚೇಳೂರು ತಾಲ್ಲೂಕಿನ ಸ್ವಗ್ರಾಮ ಗಡಿಗವಾರಹಳ್ಳಿಯಲ್ಲಿ ಭಾನುವಾರ ಬೆಳಗ್ಗೆ 10ಕ್ಕೆ ಅಂತ್ಯಕ್ರಿಯೆ ನಡೆಯಲಿದೆ.

ಗಡಿಗವಾರಹಳ್ಳಿ ಚೌಡಪ್ಪ ಬಯ್ಯಾರೆಡ್ಡಿ ಅವರು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಮೂಲಕ ಸಾರ್ವಜನಿಕ ರಂಗ ಪ್ರವೇಶಿಸಿದ್ದರು. ಎಸ್‌ಎಫ್‌ಐ ಅವಿಭಜಿತ ಕೋಲಾರ ಜಿಲ್ಲೆಯ ಅಧ್ಯಕ್ಷರಾಗಿ, ನಂತರ ರಾಜ್ಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. 1999ರ ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಸಿಪಿಎಂನಿಂದ ಸ್ಪರ್ಧಿಸಿದ್ದರು.

ಬಗರ್ ಹುಕುಂ ಸಾಗುವಳಿ ರೈತರ ಹೋರಾಟ, ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಮೀಟರ್ ಅಳವಡಿಕೆ ವಿರೋಧಿ ಚಳವಳಿ, ಬಯಲು ಸೀಮೆಗೆ ಶಾಶ್ವತ ನೀರಾವರಿ ಜಾರಿ ಹೋರಾಟ ಸೇರಿದಂತೆ ರೈತ, ಕಾರ್ಮಿಕ, ದುಡಿಯುವ ವರ್ಗಗಳ ಪರವಾಗಿ ರಾಜ್ಯದಾದ್ಯಂತ ಹೋರಾಟ ರೂಪಿಸುವಲ್ಲಿ ಬಯ್ಯಾರೆಡ್ಡಿ ಪ್ರಮುಖ ಪಾತ್ರವಹಿಸಿದ್ದರು.

ವಿಶೇಷವಾಗಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಿಪಿಎಂ ಹಾಗೂ ಅದರ ಅಂಗ ಸಂಸ್ಥೆಗಳು ಸಂಘಟಿಸುತ್ತಿದ್ದ ಹೋರಾಟಗಳ ನಾಯಕತ್ವ ವಹಿಸುತ್ತಿದ್ದರು.

ಕೇಂದ್ರ ಸರ್ಕಾರದ ಕೃಷಿ ಕಾಯ್ದೆ ತಿದ್ದುಪಡಿ ವಿರೋಧಿಸಿ ನವದೆಹಲಿಯಲ್ಲಿ ನಡೆದ ರೈತ ಹೋರಾಟದ ವೇಳೆ ರಾಜ್ಯದ ಬಹಳಷ್ಟು ರೈತ ಸಂಘಟನೆಗಳನ್ನು ಒಂದೇ ವೇದಿಕೆಗೆ ತಂದರು. ಈ ‘ಸಂಯುಕ್ತ ಹೋರಾಟ– ಕರ್ನಾಟಕ’ ಸಮಿತಿಯ ಸಂಚಾಲಕರಾಗಿ ಕೆಲಸ ಮಾಡಿದರು.

2017ರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದರು. ಸೈದ್ಧಾಂತಿಕ ಬದ್ಧತೆಗೆ ಹೆಸರಾದ ಅವರು ತಮ್ಮ ಅನಾರೋಗ್ಯದ ನಡುವೆಯೂ ಚಳವಳಿಗಳಲ್ಲಿ ಭಾಗಿ ಆಗುತ್ತಿದ್ದರು.

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ರೈತರು ಭೂ ಸ್ವಾಧೀನ ವಿರೋಧಿಸಿ ನಡೆಸುತ್ತಿರುವ ಹೋರಾಟದಲ್ಲಿ ಇತ್ತೀಚಿನವರೆಗೂ ಅವರು ಸಕ್ರಿಯವಾಗಿದ್ದರು. ಇದು ಅವರ ಹೋರಾಟ ಮನೋಭಾವಕ್ಕೆ ಒಂದು ನಿದರ್ಶನ.

ನೇಪಾಳಕ್ಕೆ ಗೋಧಿ ರಫ್ತಿಗೆ ಅನುಮತಿ



ನವದೆಹಲಿ (ಪಿಟಿಐ): ನೆರೆಯ ನೇಪಾಳಕ್ಕೆ 2 ಲಕ್ಷ ಟನ್ ಗೋಧಿ ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಕೇಂದ್ರದ ಏಜೆನ್ಸಿಯಾದ ನ್ಯಾಷನಲ್ ಕೋ ಆಪರೇಟಿವ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ (ಎನ್‌ಸಿಇಎಲ್) ಮೂಲಕ ಗೋಧಿ ರಫ್ತು ಮಾಡಲು ಕ್ರಮವಹಿಸಲಾಗಿದೆ ಎಂದು ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ದೇಶೀಯ ಬೇಡಿಕೆಯನ್ನು ಸರಿದೂಗಿಸುವ ನಿಟ್ಟಿನಲ್ಲಿ ಗೋಧಿ ರಫ್ತಿಗೆ ನಿರ್ಬಂಧ ಹೇರಲಾಗಿದೆ. ಆದರೆ, ಕೆಲವು ರಾಷ್ಟ್ರಗಳ ಕೋರಿಕೆ ಹಾಗೂ ಆ ದೇಶಗಳ ಆಹಾರ ಭದ್ರತೆಯ ದೃಷ್ಟಿಯಿಂದ ರಫ್ತಿಗೆ ಸರ್ಕಾರವು ಅನುಮತಿ ನೀಡುತ್ತದೆ.

ದೇಶಕ್ಕೆ ಅಮೂಲ್‌ನಂತಹ ಐದಾರು ಸಂಸ್ಥೆಗಳು ಬೇಕಿದೆ: ಮೋದಿ ಪ್ರತಿಪಾದನೆ

ಹಾಲು ಉತ್ಪಾದನೆ ವರದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೇಶದಲ್ಲಿ ಅಮೂಲ್ ನಂತಹ ಇನ್ನೂ 5ರಿಂದ 6 ದೊಡ್ಡ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸುವ ಅಗತ್ಯವಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಇಲ್ಲಿ ಶನಿವಾರ ಆರಂಭವಾದ ಗ್ರಾಮೀಣ ಭಾರತ ಮಹೋತ್ಸವದಲ್ಲಿ ಮಾತನಾಡಿದ ಅವರು, 'ಹಾಲು ಉತ್ಪಾದನೆಯು ರೈತರ ಆದಾಯವನ್ನು ಹೆಚ್ಚಿಸಿದೆ. ಹಾಗಾಗಿ, ದೇಶದಾದ್ಯಂತ ತನ್ನ ಅಸ್ತಿತ್ವ ಹೊಂದಿರುವ ಅಮೂಲ್‌ನಂತಹ ಸಂಸ್ಥೆಗಳನ್ನು ಸ್ಥಾಪಿಸಬೇಕಿದೆ' ಎಂದರು.

ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟಕ್ಕೆ (ಜಿಸಿಎಂಎಂಎಫ್) ಸೇರಿದ ಅಮೂಲ್ ಜಾಗತಿಕ ಮಟ್ಟದಲ್ಲಿ ಆಹಾರ ಮತ್ತು ಹೈನು ಉತ್ಪನ್ನಗಳನ್ನು ತಯಾರಿಸುವ ಪ್ರಸಿದ್ಧ ಬ್ರ್ಯಾಂಡ್ ಆಗಿ ರೂಪುಗೊಂಡಿದೆ. 2023–24ರಲ್ಲಿ ಈ ಒಕ್ಕೂಟದ ವಹಿವಾಟು ₹80 ಸಾವಿರ ಕೋಟಿ ದಾಟಿದೆ.



ನವದೆಹಲಿಯಲ್ಲಿ ಶನಿವಾರ ಆರಂಭವಾದ ಗ್ರಾಮೀಣ ಭಾರತ ಮಹೋತ್ಸವದ ಮಳಿಗೆಯೊಂದಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದರು –ಪಿಟಿಐ ಚಿತ್ರ

'ಕಳೆದ ಹತ್ತು ವರ್ಷಗಳಲ್ಲಿ ದೇಶದ 25 ಕೋಟಿ ಜನರು ಬಡತನ ರೇಖೆಯಿಂದ ಹೊರಬಂದಿದ್ದಾರೆ. ಈ ಪೈಕಿ ಗ್ರಾಮೀಣರ ಸಂಖ್ಯೆ ಹೆಚ್ಚಿದೆ' ಎಂದು ಮೋದಿ ಹೇಳಿದರು.

'2012ರಲ್ಲಿ ಶೇ 26ರಷ್ಟಿದ್ದ ಗ್ರಾಮೀಣ ಬಡತನ ಪ್ರಮಾಣವು ಶೇ 5ಕ್ಕೆ ಇಳಿದಿದೆ' ಎಂದರು.

> **ರೈತ ಉತ್ಪಾದಕ ಸಂಸ್ಥೆಗಳಿಂದ ಕೃಷಿ ಹುಟ್ಟುವಳಿಗೆ ಉತ್ತಮ ಬೆಲೆ ದೊರೆಯುತ್ತದೆ. ಹಾಗಾಗಿ, ದೇಶದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಈ ಸಂಸ್ಥೆಗಳನ್ನು ಸ್ಥಾಪಿಸಬೇಕಿದೆ**
> **ನರೇಂದ್ರ ಮೋದಿ,** ಪ್ರಧಾನಿ

ಗ್ರಾಮೀಣ ಭಾರತದಲ್ಲಿನ ಬಳಕೆಯ ವೆಚ್ಚ ಕಡಿಮೆಯಾಗಿರುವುದೇ ಬಡತನದ ಪ್ರಮಾಣ ಇಳಿಕೆಗೆ ಕಾರಣ. ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ ಗ್ರಾಮೀಣ ಪ್ರದೇಶದಲ್ಲಿ ಆಹಾರ ಪದಾರ್ಥಗಳ ಬಳಕೆ ಮೇಲಿನ ವೆಚ್ಚವು ಶೇ 50ಕ್ಕಿಂತ ಕಡಿಮೆಯಾಗಿದೆ ಎಂದು ಹೇಳಿದರು.

ಹಣಕಾಸು ಸೇವೆಗಳ ಇಲಾಖೆ ಮತ್ತು ನಬಾರ್ಡ್‌ನಿಂದ ಆಯೋಜಿಸಿರುವ ಗ್ರಾಮೀಣ ಭಾರತ ಮಹೋತ್ಸವವು ಆರು ದಿನಗಳವರೆಗೆ ನಡೆಯಲಿದೆ.

'ಸಮಾಜದಲ್ಲಿ ಜಾತಿ ಹೆಸರಲ್ಲಿ ವಿಷ ಹರಡಲು ಯತ್ನ'

ನವದೆಹಲಿ (ಪಿಟಿಐ): 'ಸಮಾಜದಲ್ಲಿ ಕೆಲವರು ಜಾತಿ ಹೆಸರಿನಲ್ಲಿ ವಿಷ ಹರಡಲು ಯತ್ನಿಸುತ್ತಿದ್ದಾರೆ. ಗ್ರಾಮಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ ಇಂತಹ ಷಡ್ಯಂತ್ರಗಳನ್ನು ವಿಫಲಗೊಳಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಇಲ್ಲಿ ಆರಂಭಗೊಂಡ 'ಗ್ರಾಮೀಣ ಭಾರತ ಮಹೋತ್ಸವ'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು 2014ರಿಂದ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದು, 2047ರ ವೇಳೆಗೆ ವಿಕಸಿತ ಭಾರತ ನಿರ್ಮಾಣಕ್ಕೆ ಗ್ರಾಮಗಳೇ ಪ್ರಮುಖ ಪಾತ್ರ ವಹಿಸಲಿವೆ' ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಇಂಡಿಯಾ ಒಕ್ಕೂಟದ ನಾಯಕರ ಹೆಸರನ್ನು ಉಲ್ಲೇಖಿಸದೇ ಮಾತನಾಡಿದ ಅವರು, 'ಕೆಲವರು ಜಾತಿ ಹೆಸರಿನಲ್ಲಿ ವಿಷ ಹರಡಿ ಸಮಾಜದ ರಚನೆಯನ್ನೇ ದುರ್ಬಲಗೊಳಿಸಲು ಯತ್ನಿಸುತ್ತಿದ್ದಾರೆ. ಇಂತಹ ಷಡ್ಯಂತ್ರಗಳನ್ನು ವಿಫಲಗೊಳಿಸಬೇಕು' ಎಂದು ಒತ್ತಿ ಹೇಳಿದರು.

ಸರ್ಕಾರವು ಗ್ರಾಮಗಳ ಅಭಿವೃದ್ಧಿಗೆ ನಿರಂತರವಾಗಿ ಶ್ರಮ ವಹಿಸುತ್ತಿದೆ ಎಂದು ಹೇಳಿದರು.

ಸರಕು ಸಾಗಣೆ ಸಾಧನೆ ಸೂಚ್ಯಂಕ ಬಿಡುಗಡೆ

ಕರ್ನಾಟಕಕ್ಕೆ 'ಸಾಧಕ' ಸ್ಥಾನ

ನವದೆಹಲಿ (ಪಿಟಿಐ): ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ದೇಶದ ಸರಕು ಸಾಗಣೆ ವಲಯಕ್ಕೆ ಸಂಬಂಧಿಸಿದಂತೆ ಬಿಡುಗಡೆಗೊಳಿಸಿರುವ 13 ಸಾಧಕ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯಲ್ಲಿ ಕರ್ನಾಟಕ ಕೂಡ ಸ್ಥಾನ ಪಡೆದಿದೆ.

ಸಚಿವಾಲಯವು ಸರಕು ಸಾಗಣೆ ಸಾಧನೆ ಸೂಚ್ಯಂಕ–2024 ಅನ್ನು ಬಿಡುಗಡೆ ಮಾಡಿದೆ. ಈ ಸೂಚ್ಯಂಕವು ದೇಶದ ವ್ಯಾಪಾರ ರಫ್ತು ಹಾಗೂ ಆರ್ಥಿಕ ಬೆಳವಣಿಗೆಗೆ ಒತ್ತು ನೀಡಲು ಅಗತ್ಯವಾದ ಸರಕು ಸಾಗಣೆ ಸೇವೆಯ ಸೂಚಕವಾಗಿದೆ.

ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) ಈ ವರದಿ ಸಿದ್ಧಪಡಿಸಿದೆ. 2023ರಲ್ಲಿಯೂ ಈ ಪಟ್ಟಿ ಬಿಡುಗಡೆ ಮಾಡಲಾಗಿತ್ತು.

ಸರಕು ಸಾಗಣೆ ಸೇವಾ ಜಾಲದಲ್ಲಿ ಎದುರಾದ ಸಮಸ್ಯೆಗಳು ಹಾಗೂ ಆಯಾ ರಾಜ್ಯಗಳಲ್ಲಿನ ಸರಕು ಸಾಗಣೆ ವ್ಯವಸ್ಥೆಯನ್ನು ಮಾನದಂಡವಾಗಿಟ್ಟುಕೊಂಡು ಈ ವರದಿ ಸಿದ್ಧಪಡಿಸಲಾಗಿದೆ.

2023ರಲ್ಲಿ ವೇಗವಾಗಿ ಬೆಳವಣಿಗೆ ಸಾಧಿಸುತ್ತಿರುವ ಮತ್ತು ಆಕಾಂಕ್ಷಿ ಪಟ್ಟಿಯಲ್ಲಿದ್ದ ಮಹಾರಾಷ್ಟ್ರ, ಒಡಿಶಾ, ಉತ್ತರಾಖಂಡ, ಅರುಣಾಚಲ ಪ್ರದೇಶದಲ್ಲಿ ಸರಕು ಸಾಗಣೆ ವ್ಯವಸ್ಥೆ ಸುಧಾರಣೆ ಕಂಡಿದ್ದು 'ಸಾಧಕ' ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಪಂಜಾಬ್ ಒಂದು ಸ್ಥಾನ ಕಳೆಗಿಳಿದಿದ್ದು, ವೇಗವಾಗಿ ಬೆಳವಣಿಗೆ ಸಾಧಿಸುತ್ತಿರುವ ಪಟ್ಟಿಗೆ ಸೇರ್ಪಡೆಗೊಂಡಿದೆ.

ಸಾಧಕ ಪಟ್ಟಿ

ಗುಜರಾತ್, ಕರ್ನಾಟಕ, ಮಹಾರಾಷ್ಟ್ರ, ಒಡಿಶಾ, ತಮಿಳುನಾಡು, ದೆಹಲಿ, ಚಂಡೀಗಢ, ಹರಿಯಾಣ, ತೆಲಂಗಾಣ, ಉತ್ತರ ಪ್ರದೇಶ, ಉತ್ತರಾಖಂಡ, ಅಸ್ಸಾಂ ಮತ್ತು ಅರುಣಾಚಲ ಪ್ರದೇಶ

ವೇಗವಾಗಿ ಬೆಳವಣಿಗೆ ಸಾಧನೆ ಪಟ್ಟಿ

ಆಂಧ್ರಪ್ರದೇಶ, ಗೋವಾ, ಬಿಹಾರ, ಹಿಮಾಚಲ ಪ್ರದೇಶ, ಪಂಜಾಬ್, ರಾಜಸ್ಥಾನ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ದಾದ್ರಾ ಮತ್ತು ನಗರ್ ಹವೇಲಿ, ದಮನ್ ಮತ್ತು ಡಿಯು, ಜಮ್ಮು ಮತ್ತು ಕಾಶ್ಮೀರ, ಲಕ್ಷದ್ವೀಪ, ಪುದುಚೇರಿ

ಆಕಾಂಕ್ಷಿ ಪಟ್ಟಿ

ಕೇರಳ, ಪಶ್ಚಿಮ ಬಂಗಾಳ ಛತ್ತೀಸಗಢ, ಜಾರ್ಖಂಡ್, ಅಂಡಮಾನ್ ಮತ್ತು ನಿಕೋಬಾರ್, ಲಡಾಖ್

ಸರಕು ಸಾಗಣೆಗೆ ಸಂಬಂಧಿಸಿದ ಮೂಲಸೌಕರ್ಯ, ಸೇವೆ, ಕಾರ್ಯಾಚರಣೆ, ನಿಯಂತ್ರಣ ವ್ಯವಸ್ಥೆ ಹಾಗೂ ಸುಸ್ಥಿರ ಸಾಗಣೆ ಆಧಾರದ ಮೇಲೆ ಈ ವರದಿ ಸಿದ್ಧಪಡಿಸಲಾಗಿದೆ.

'ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಈ ಸೂಚ್ಯಂಕದಡಿ ಸೇರ್ಪಡೆಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ಮತ್ತಷ್ಟು ಬಿಗಿಗೊಳಿಸಲು ಡಿಪಿಐಐಟಿ ಮುಂದಾಗಬೇಕು' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಸೂಚಿಸಿದ್ದಾರೆ.

ಸರಕು ಸಾಗಣೆ ವಲಯದಲ್ಲಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಅಭಿವೃದ್ಧಿಗೆ ಕ್ರಮವಹಿಸಲು ಸಚಿವಾಲಯ ನಿರ್ಧರಿಸಿದೆ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಹಸಿರು ಹೈಡ್ರೋಜನ್ ಉತ್ಪಾದನೆಗೆ ಒತ್ತು: ಜೋಶಿ

ಖಾಂಡ್ವಾ (ಪಿಟಿಐ): 'ಹಸಿರು ಹೈಡ್ರೋಜನ್ ಇಂಧನ ಉತ್ಪಾದನೆಯಲ್ಲಿ ಭಾರತವು ವಿಶ್ವದ ಇತರೆ ರಾಷ್ಟ್ರಗಳಿಗಿಂತ ಮುಂದಿದೆ' ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಮಧ್ಯಪ್ರದೇಶದ ಖಾಂಡ್ವಾ ಜಿಲ್ಲೆಯ ಓಂಕಾರೇಶ್ವರ ಜಲಾಶಯದಲ್ಲಿ ಅಳವಡಿಸಿರುವ ತೇಲುವ ಸೌರ ಶಕ್ತಿ ಉತ್ಪಾದನಾ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಸಮುದ್ರದಲ್ಲಿ ಬೀಸುವ ಗಾಳಿಯ ಬಲದಿಂದ ಪವನ ಶಕ್ತಿ ಉತ್ಪಾದನೆ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಸಮುದ್ರದಲ್ಲಿ ಗಾಳಿ ಯಂತ್ರಗಳ ಅಳವಡಿಕೆ ಎಂಬುದು ಇದರರ್ಥ. ಇದಕ್ಕಾಗಿ ಬಂದರುಗಳು ಮತ್ತು ವಿದ್ಯುತ್ ಪ್ರಸರಣ ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸಬೇಕಿದೆ' ಎಂದರು.

ಭೂಶಾಖ ಶಕ್ತಿ ಸ್ಥಾವರಗಳಿಂದ ಶಕ್ತಿ ಪಡೆಯುವ ಬಗ್ಗೆ (ಜಿಯೊಥರ್ಮಲ್) ಚಿಂತನೆ ನಡೆದಿದೆ. ಇದು ಇನ್ನೂ ಪ್ರಾಥಮಿಕ ಹಂತದಲ್ಲಿದೆ ಎಂದು ಹೇಳಿದರು.

ಭಾರತವು ಸೌರಶಕ್ತಿ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ನವೀಕರಿಸಬಹುದಾದ ಇಂಧನ ಉತ್ಪಾದನಾ ವಲಯದಲ್ಲಿಯೂ ಅಗ್ರಸ್ಥಾನ ಕಾಯ್ದುಕೊಳ್ಳಲಿದೆ ಎಂದರು.



ಕೃಷಿ ಯೋಜನೆ ಪರಾಮರ್ಶೆ


ನವದೆಹಲಿ (ಪಿಟಿಐ): ಬಜೆಟ್ ಅಂಗವಾಗಿ ಶನಿವಾರ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು, ವರ್ಚುವಲ್ ಸಭೆಯ ಮೂಲಕ ಕೃಷಿ ಯೋಜನೆಗಳ ಬಗ್ಗೆ ಪರಾಮರ್ಶೆ ನಡೆಸಿದರು.

ಹಾಲಿ ಇರುವ ಯೋಜನೆಗಳು ಮತ್ತು ಬಜೆಟ್‌ನಲ್ಲಿ ಕೃಷಿಗೆ ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ವಿವಿಧ ರಾಜ್ಯಗಳ ಕೃಷಿ ಸಚಿವರಿಂದ ಸಲಹೆ ಪಡೆದರು.

ಸರ್ಕಾರವು ಕೃಷಿ ವಲಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಆರು ಅಂಶಗಳ ಕಾರ್ಯತಂತ್ರ ರೂಪಿಸಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಹೊಸ ತಳಿ ಬೀಜಗಳನ್ನು ಅಭಿವೃದ್ಧಿಪಡಿಸಿದೆ. ಇವುಗಳ ಬಳಕೆ ಮೂಲಕ ಹೆಕ್ಟೇರ್‌ವಾರು ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಳಕ್ಕೆ ಕ್ರಮವಹಿಸಲಿದೆ ಎಂದು ಹೇಳಿದರು.

ಕೃಷಿ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಸರ್ಕಾರ ಕ್ರಮಕೈಗೊಂಡಿದೆ. ಸೂಕ್ಷ್ಮ ನೀರಾವರಿ, ಹೊಸ ತಂತ್ರಜ್ಞಾನ ಮತ್ತು ಕೃಷಿ ವಿಧಾನ ಅಳವಡಿಕೆಗೆ ಮುಂದಾಗಿದೆ ಎಂದು ಹೇಳಿದರು.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹448-630
ದ್ವಿತಳಿ (ಬಿ.ವಿ)	₹282-800

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹180
ಗುಡ್ ಲಾಟ್	₹174

(ಪ್ರತಿ ಕೆ.ಜಿಗೆ)

ಠೇವಣಿ ಆಕರ್ಷಣೆಗೆ ಎಸ್‌ಬಿಐ ಸಜ್ಜು

2 ಹೊಸ ಯೋಜನೆ ಜಾರಿ: ಹಿರಿಯ ನಾಗರಿಕರಿಗೆ ಸೌಲಭ್ಯ

ನವದೆಹಲಿ (ಪಿಟಿಐ): ಗ್ರಾಹಕರಿಂದ ಠೇವಣಿ ಆಕರ್ಷಿಸಲು ಸಜ್ಜಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ), 'ಹರ್ ಘರ್ ಲಖ್ಪತಿ' ಹಾಗೂ 'ಎಸ್‌ಬಿಐ ಪೆಟ್ರನ್' ಹೆಸರಿನ ಹೊಸ ಠೇವಣಿ ಯೋಜನೆಗಳನ್ನು ಜಾರಿಗೊಳಿಸಿದೆ.

ಗ್ರಾಹಕರಿಗೆ ಹೆಚ್ಚಿನ ಆರ್ಥಿಕ ಭದ್ರತೆ ಒದಗಿಸುವುದು ಈ ಯೋಜನೆಗಳ ಗುರಿಯಾಗಿದೆ. ಅಲ್ಲದೆ, ಅವರಲ್ಲಿ ಉಳಿತಾಯ ಮನೋಭಾವಕ್ಕೆ ಉತ್ತೇಜನ ನೀಡುವ ಗುರಿಯನ್ನೂ ಹೊಂದಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

'ಹರ್ ಘರ್ ಲಕ್ಪತಿ'ಯು ನಿಶ್ಚಿತ ಠೇವಣಿಯಾಗಿದ್ದು, ಗ್ರಾಹಕರು ₹1 ಲಕ್ಷ ಮೊತ್ತ ಸಂಗ್ರಹಿಸಲು ನೆರವಾಗುವಂತೆ ವಿನ್ಯಾಸಗೊಳಿಸಲಾಗಿದೆ ಎಂದು ಹೇಳಿದೆ.

'ಎಸ್‌ಬಿಐ ಪೆಟ್ರನ್' ಅವಧಿ ಠೇವಣಿಯಾಗಿದೆ. 80 ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರಿಗೆ ಇದನ್ನು ರೂಪಿಸಲಾಗಿದೆ. ದೀರ್ಘಕಾಲದಿಂದ ಬ್ಯಾಂಕ್‌ನೊಂದಿಗೆ ವ್ಯವಹಾರ ಹೊಂದಿರುವ ಹಿರಿಯ ನಾಗರಿಕರಿಗೆ ಅನುಕೂಲ ಕಲ್ಪಿಸುವುದು ಈ ಯೋಜನೆಯ ಗುರಿಯಾಗಿದೆ. ಹಾಲಿ ಇರುವ ಹಾಗೂ ಹೊಸ ಅವಧಿ ಠೇವಣಿ ಯೋಜನೆಯಡಿಯೂ ಈ ಸೌಲಭ್ಯ ದೊರೆಯಲಿದೆ ಎಂದು ವಿವರಿಸಿದೆ.

ಇದರಡಿ ಠೇವಣಿದಾರರಿಗೆ ಹಿರಿಯ ನಾಗರಿಕರಿಗೆ ಹಾಲಿ ಇರುವ ಬಡ್ಡಿದರಕ್ಕಿಂತ ಹೆಚ್ಚುವರಿಯಾಗಿ ಶೇ 0.10ರಷ್ಟು ಬಡ್ಡಿ ಸಿಗಲಿದೆ.

ನಿಶ್ಚಿತ ಠೇವಣಿ ಮೇಲಿನ ಬಡ್ಡಿದರವು ಸ್ಥಿರ ಠೇವಣಿ ಮೇಲಿನ ದರದಂತೆಯೇ ಇರಲಿದೆ. ಪ್ರಸ್ತುತ ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯ ಸ್ಥಿರ ಠೇವಣಿಗೆ ಶೇ 6.80, ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗೆ ಶೇ 7, ಮೂರು ವರ್ಷಕ್ಕಿಂತ ಹೆಚ್ಚು ಹಾಗೂ ಐದು ವರ್ಷಕ್ಕಿಂತ ಕಡಿಮೆ ಅವಧಿಯ ಠೇವಣಿಗೆ ಶೇ 6.75, ಐದರಿಂದ ಹತ್ತು ವರ್ಷದ ಠೇವಣಿಗೆ ಶೇ 6.5ರಷ್ಟು ಬಡ್ಡಿದರ ನಿಗದಿಪಡಿಸಲಾಗಿದೆ.

ಈ ನಿಶ್ಚಿತ ಠೇವಣಿ ಅವಧಿಯು ಕನಿಷ್ಠ 12 ತಿಂಗಳು ಹಾಗೂ ಗರಿಷ್ಠ 120 ತಿಂಗಳಾಗಿವೆ (10 ವರ್ಷ).

'ಈ ಹೊಸ ಠೇವಣಿ ಯೋಜನೆಗಳು ಗ್ರಾಹಕರಿಗೆ ಹಣಕಾಸಿನ ಗಳಿಕೆಯಷ್ಟೇ ನೀಡುವುದಿಲ್ಲ. ಭವಿಷ್ಯದಲ್ಲಿ ಅವರ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ನೆರವಾಗುವಂತೆ ವಿನ್ಯಾಸಗೊಳಿಸಲಾಗಿದೆ. ಸಾಂಪ್ರದಾಯಿಕ ಬ್ಯಾಂಕಿಂಗ್ ವ್ಯವಸ್ಥೆಗೆ ಮತ್ತಷ್ಟು ಉತ್ತೇಜನ ನೀಡಲು ಕ್ರಮವಹಿಸಿದ್ದೇವೆ' ಎಂದು ಬ್ಯಾಂಕ್ ಅಧ್ಯಕ್ಷ ಸಿ.ಎಸ್. ಸೆಟ್ಟಿ ಹೇಳಿದ್ದಾರೆ.

ಕೇಂದ್ರ ಸರ್ಕಾರವು 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ರೂಪಿಸಲು ಮುಂದಾಗಿದೆ. ಇದಕ್ಕೆ ಪೂರಕವಾಗಿ ಹೊಸ ಅನ್ವೇಷಣೆ ಹಾಗೂ ತಂತ್ರಜ್ಞಾನದ ನೆರವು ಕಲ್ಪಿಸುವ ಮೂಲಕ ಪ್ರತಿಯೊಬ್ಬ ಗ್ರಾಹಕರನ್ನು ಸಜ್ಜುಗೊಳಿಸಲು ಬದ್ಧವಾಗಿದ್ದೇವೆ ಎಂದು ಬ್ಯಾಂಕ್ ತಿಳಿಸಿದೆ.

ಎರಡನೇ ದಿನವೂ ಆವರಿಸಿದ ದಟ್ಟ ಮಂಜು

400 ವಿಮಾನ ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರ ರಾಜಧಾನಿ ಮತ್ತು ಸುತ್ತಮುತ್ತಲಿನಲ್ಲಿ ಪ್ರದೇಶಗಳಲ್ಲಿ ಶನಿವಾರ ಅತ್ಯಂತ ದೀರ್ಘ ಅವಧಿಯವರೆಗೆ ದಟ್ಟ ಮಂಜು ಕವಿದಿತ್ತು. ದೆಹಲಿ ವಿಮಾನ ನಿಲ್ದಾಣದಲ್ಲಿ ಒಂಬತ್ತು ತಾಸು ಶೂನ್ಯ ಗೋಚರತೆ ಉಂಟಾಯಿತು.

ದೆಹಲಿಯಲ್ಲಿ ಸತತ ಎರಡನೇ ದಿನವೂ ಕವಿದ ದಟ್ಟ ಮಂಜಿನ ಕಾರಣಕ್ಕೆ 19 ವಿಮಾನಗಳ ಮಾರ್ಗವನ್ನು ಬದಲಿಸಲಾಯಿತು. 400ಕ್ಕೂ ಹೆಚ್ಚು ವಿಮಾನಗಳ ಸಂಚಾರ ವಿಳಂಬವಾಗಿದೆ. ಅಲ್ಲದೆ 81 ರೈಲುಗಳ ಸಂಚಾರದಲ್ಲೂ ವಿಳಂಬ ಆಗಿದೆ.

'ದೆಹಲಿ ವಿಮಾನ ನಿಲ್ದಾಣದಲ್ಲಿ ಶೂನ್ಯ ಗೋಚರತೆಯು ರಾತ್ರಿ 11.30ರಿಂದ ಬೆಳಿಗ್ಗೆ 8.30ರವರೆಗೆ ಇತ್ತು. ಇದು ಈ ಋತುವಿನ ಅತಿ ದೀರ್ಘಾವಧಿಯ ಶೂನ್ಯ ಗೋಚರತೆ. ಸಫ್ದರ್‌ಜಂಗ್‌ನಲ್ಲಿ ಎಂಟು ತಾಸು ಶೂನ್ಯ ಗೋಚರತೆ ಇತ್ತು' ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ದೆಹಲಿ ವಿಮಾನ ನಿಲ್ದಾಣದಲ್ಲಿ ಶನಿವಾರ ವಿಮಾನಗಳ ವೇಳಾಪಟ್ಟಿ ಪ್ರಯಾಣಿಕರು ವೀಕ್ಷಿಸಿದರು ಪಿಟಿಐ ಚಿತ್ರ

ಶನಿವಾರ ಬೆಳಿಗ್ಗೆ ಅಮೃತಸರ, ಆಗ್ರಾ, ಹಿಂಡನ್, ಚಂಡೀಗಢ ಮತ್ತು ಗ್ವಾಲಿಯರ್, ಪಟ್ನಾ ಮತ್ತು ಶ್ರೀನಗರ ವಿಮಾನ ನಿಲ್ದಾಣಗಳಲ್ಲಿ ಶೂನ್ಯ ಗೋಚರತೆ ಇತ್ತು. ಜಮ್ಮು ಕಾಶ್ಮೀರದ ಹಲವು ಭಾಗಗಳಲ್ಲಿ ಕನಿಷ್ಠ ತಾಪಮಾನವು 0 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆಯಿದೆ.

ವಾಯವ್ಯ ಭಾರತ ಮತ್ತು ಗಂಗಾ ಬಯಲು ಪ್ರದೇಶದಲ್ಲಿ ಭಾನುವಾರ ಕೂಡ ಇದೇ ರೀತಿಯ ಹವಾಮಾನ ಇರಲಿದೆ ಎಂದು ಹವಾಮಾನ ತಜ್ಞರು ಎಚ್ಚರಿಸಿದ್ದಾರೆ.

ಮುಂದಿನ ಎರಡು ದಿನಗಳ ಕಾಲ, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ಭಾರಿ ಮಳೆ/ ಹಿಮ ಬೀಳುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹22900
ಎಸಿ	₹11800
ಆರ್‌ಪಿ	₹19100
ಆರ್‌ಸಿ	₹10530

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹540
12 ಕ್ಕೆ	₹72
ಮೈಸೂರು	
100ಕ್ಕೆ	₹543

ಆರು ಭಾರತೀಯ ಅಮೆರಿಕನ್ನರ ಪ್ರಮಾಣ ವಚನ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನ ಸದಸ್ಯರಾಗಿ ಆರು ಭಾರತೀಯ–ಅಮೆರಿಕನ್ನರು ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ಅಮೆರಿಕದಲ್ಲಿ ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನಾಂಗೀಯ ಅಲ್ಪಸಂಖ್ಯಾತ ಸಮುದಾಯದವರು ಆಯ್ಕೆಯಾಗಿದ್ದಾರೆ. ಡಾ.ಅಮಿ ಬೆರಾ, ಸುಹಾಸ್ ಸುಬ್ರಹ್ಮಣ್ಯಂ, ಶ್ರೀ ಠಾಣೆದಾರ್, ರಾಜಾ ಕೃಷ್ಣಮೂರ್ತಿ, ರೋ ಖನ್ನಾ, ಪ್ರಮೀಳಾ ಜಯಪಾಲ್ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಭಾರತೀಯ–ಅಮೆರಿಕನ್ನರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆ ಆಗಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಅಮಿ ಬೆರಾ ಅವರು, '12 ವರ್ಷಗಳ ಹಿಂದೆ ನಾನು ಮೊದಲ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದ್ದೆ. ಆಗ ಕಾಂಗ್ರೆಸ್‌ನಲ್ಲಿದ್ದ ಏಕೈಕ ಭಾರತೀಯ ಅಮೆರಿಕನ್ ಸದಸ್ಯನಾಗಿದ್ದೆ' ಎಂದು ಹೇಳಿದ್ದಾರೆ.

ಕೊಬ್ಬರಿ ಧಾರಣೆ




(ಕ್ವಿಂಟಲ್‌ಗೆ)

ಅರಸೀಕೆರೆ	₹14550-14550
ಬೆಂಗಳೂರು	₹20000-25000
ತುರುವೇಕೆರೆ	₹14000-14500

10ರಂದು ಡೊನಾಲ್ಡ್ ಟ್ರಂಪ್ ವಿರುದ್ಧ ಶಿಕ್ಷೆ ಪ್ರಕಟ

ನ್ಯೂಯಾರ್ಕ್ (ಎಪಿ): ನೀಲಿ ಚಿತ್ರತಾರೆಗೆ ರಹಸ್ಯವಾಗಿ ಹಣ ವರ್ಗಾಯಿಸಿದ್ದ ಪ್ರಕರಣದಲ್ಲಿ ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ನ್ಯಾಯಾಧೀಶರು ಜನವರಿ 10ರಂದು ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಲಿದ್ದಾರೆ.



ಈ ಮೂಲಕ ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸುವ ಮುನ್ನವೇ ಟ್ರಂಪ್ ಅವರಿಗೆ ಸಂಕಷ್ಟ ಎದುರಾಗಿದೆ.

ಪ್ರಕರಣದಲ್ಲಿ ಟ್ರಂಪ್ ಅವರನ್ನು ಜೈಲಿಗೆ ಕಳುಹಿಸುವ ಸಾಧ್ಯತೆ ಇಲ್ಲ ಎಂದು ನ್ಯಾಯಾಧೀಶರು ಸೂಚ್ಯವಾಗಿ ಹೇಳಿದ್ದಾರೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಜುವಾನ್ ಎಂ.ಮೆರ್ಷಾನ್ ಅವರು, 'ಭವಿಷ್ಯದ ಅಧ್ಯಕ್ಷರನ್ನು ಷರತ್ತುಬದ್ಧ ಬಿಡುಗಡೆಗೆ ಒಳಪಡಿಸಿ, ಶಿಕ್ಷೆ ಪ್ರಮಾಣ ಪ್ರಕಟಿಸಲಾಗುವುದು' ಎಂದು ಲಿಖಿತ ಆದೇಶದಲ್ಲಿ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಪ್ರಕರಣವನ್ನು ವಜಾಗೊಳಿಸಲು ಕೋರಿದ್ದ ಟ್ರಂಪ್ ಅವರ ಅರ್ಜಿಯನ್ನು ತಿರಸ್ಕರಿಸಿ, 'ಪ್ರಕರಣದಲ್ಲಿ ಟ್ರಂಪ್ ಅವರಿಗೆ ಶಿಕ್ಷೆ ವಿಧಿಸಲು ಯಾವುದೇ ಕಾನೂನಾತ್ಮಕ ಅಡ್ಡಿ ಇಲ್ಲ' ಎಂದು ಹೇಳಿದರು.

ಡೊನಾಲ್ಡ್ ಟ್ರಂಪ್ ಜನವರಿ 20ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಮಣಿಪುರ: ರಾಜಭವನದಲ್ಲಿ ಹಿರಿಯ ಅಧಿಕಾರಿಗಳ ಸಭೆ

ಭದ್ರತಾ ಸ್ಥಿತಿ ಪರಿಶೀಲಿಸಿದ ರಾಜ್ಯಪಾಲ

ಇಂಫಾಲ್ (ಪಿಟಿಐ): ಮಣಿಪುರ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ರಾಜಭವನದಲ್ಲಿ ಪೊಲೀಸ್, ಸಿಆರ್‌ಪಿಎಫ್, ಬಿಎಸ್‌ಎಫ್, ಅಸ್ಸಾಂ ರೈಫಲ್ಸ್‌ನ ಹಿರಿಯ ಅಧಿಕಾರಿಗಳೊಂದಿಗೆ ಶನಿವಾರ ಸಭೆ ನಡೆಸಿದರು. ರಾಜ್ಯದ ಭದ್ರತಾ ಸ್ಥಿತಿಗತಿಯ ಬಗ್ಗೆ ಸಮಗ್ರ ಮಾಹಿತಿ ಪಡೆದರು ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಭದ್ರತಾ ಪರಿಕರಗಳು ಮತ್ತು ಅವುಗಳ ನಿಯೋಜನೆಯನ್ನು ಪರಿಶೀಲಿಸಿದರು' ಎಂದು ಹೇಳಿಕೆ ತಿಳಿಸಿದೆ.

ರಾಜ್ಯದ ಜನರ ಸುರಕ್ಷತೆ ಮತ್ತು ರಕ್ಷಣೆಗೆ ಆದ್ಯತೆ ನೀಡಬೇಕೆಂದು ಡಿಜಿಪಿ ಅವರಿಗೆ ಸೂಚಿಸಿದರು. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಆಡಳಿತಕ್ಕೆ ಸಂಪೂರ್ಣ ಸಹಕಾರ ನೀಡಬೇಕು ಎಂದು ಸೇನೆ ಮತ್ತು ಅರೆಸೇನಾ ಪಡೆಯ ಅಧಿಕಾರಿಗಳಿಗೆ ಮನವಿ ಮಾಡಿದರು.



ಮಣಿಪುರ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ರಾಜಭವನದಲ್ಲಿ ಪೊಲೀಸ್, ಸಿಆರ್‌ಪಿಎಫ್, ಬಿಎಸ್‌ಎಫ್, ಅಸ್ಸಾಂ ರೈಫಲ್ಸ್‌ನ ಹಿರಿಯ ಅಧಿಕಾರಿಗಳೊಂದಿಗೆ ಶನಿವಾರ ಸಭೆ ನಡೆಸಿದರು –ಪಿಟಿಐ ಚಿತ್ರ

ಸರ್ಕಾರದ ಭದ್ರತಾ ಸಲಹೆಗಾರ ಕುಲದೀಪ್ ಸಿಂಗ್, ಡಿಜಿಪಿ ರಾಜೀವ್ ಸಿಂಗ್, ಐಜಿಎಆರ್ (ದಕ್ಷಿಣ) ಮೇಜರ್ ಜನರಲ್ ರಾವ್‌ರೂಪ್ ಸಿಂಗ್ ಮತ್ತಿತರ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

'ಹೊಣೆಯಿಂದ ತಪ್ಪಿಸಿಕೊಳ್ಳಲಾಗದು'

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಸಂಭವಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಟೀಕಾಪ್ರಹಾರ ನಡೆಸಿರುವ ಕಾಂಗ್ರೆಸ್, ರಾಜಧರ್ಮವನ್ನು ಪಾಲಿಸದ ಸಾಂವಿಧಾನಿಕ ಹೊಣೆಗಾರಿಕೆಯಿಂದ ಅವರು ತಪ್ಪಿಸಿಕೊಳ್ಳಲು ಆಗುವುದಿಲ್ಲ ಎಂದು ಹೇಳಿದೆ.

ಮಣಿಪುರದಲ್ಲಿ ಸಂಘರ್ಷ ಮುಂದುವರಿಯುವಂತೆ ನೋಡಿಕೊಳ್ಳುವಲ್ಲಿ ಬಿಜೆಪಿಗೆ ಸ್ವಹಿತಾಸಕ್ತಿ ಇದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ದೆಹಲಿ ವಿಧಾನಸಭಾ ಚುನಾವಣೆ: ಬಿಜೆಪಿ ಮೊದಲ ಪಟ್ಟಿ ಪ್ರಕಟ • ಪಕ್ಷಾಂತರಿಗಳಿಗೂ ಮಣೆ

ಕೇಜ್ರಿವಾಲ್ ವಿರುದ್ಧ ಪರ್ವೇಶ್ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ವಿಧಾನಸಭಾ ಚುನಾವಣೆಗೆ ಬಿಜೆಪಿಯು 29 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಶನಿವಾರ ಪ್ರಕಟಿಸಿದೆ. ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹಾಗೂ ಮುಖ್ಯಮಂತ್ರಿ ಆತಿಶಿ ವಿರುದ್ಧ ಮಾಜಿ ಸಂಸದರಾದ ಪರ್ವೇಶ್ ವರ್ಮಾ ಹಾಗೂ ರಮೇಶ್ ಬಿಧೂಢಿ ಅವರನ್ನು ಕಣಕ್ಕಿಳಿಸಿದೆ. ಪಕ್ಷಾಂತರಿಗಳಿಗೆ ಮೊದಲ ಪಟ್ಟಿಯಲ್ಲಿ ಮಣೆ ಹಾಕಲಾಗಿದೆ.

ಕಾಂಗ್ರೆಸ್‌ನಿಂದ 2022ರಲ್ಲಿ ಬಿಜೆಪಿಗೆ ಜಿಗಿದಿರುವ ಹಿರಿಯ ನಾಯಕ ತರ್ವಿಂದರ್ ಸಿಂಗ್ ಮರ್ವಾಹ್ ಅವರು ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಎದುರಿಸಲಿದ್ದಾರೆ.

ಎಎಪಿಯ ಪ್ರಮುಖ ನಾಯಕರು ಸ್ಪರ್ಧಿಸುತ್ತಿರುವ ನವದೆಹಲಿ, ಕಲ್ಕಾಜಿ ಮತ್ತು ಜಂಗ್‌ಪುರ ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಹಿರಿಯ ಹಾಗೂ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ.

ಕಳೆದ ಚುನಾವಣೆಯಲ್ಲಿ ಬಿಜೆಪಿ ಎಂಟು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಈ ಪೈಕಿ, ಏಳು ಶಾಸಕರಿಗೆ ಈ ಸಲ ಟಿಕೆಟ್ ನೀಡಲಾಗಿದೆ. ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಪಕ್ಷಕ್ಕೆ ಸೇರಿದ್ದ ದೆಹಲಿ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಅರವಿಂದರ್ ಸಿಂಗ್ ಲವ್ಲಿ ಅವರಿಗೆ ಅವಕಾಶ ನೀಡುವ ಸಲುವಾಗಿ ಶಾಸಕರೊಬ್ಬರಿಗೆ ಟಿಕೆಟ್ ನಿರಾಕರಿಸಲಾಗಿದೆ. ಈ ಹಿಂದೆ ಶಾಸಕರಾಗಿದ್ದ ರಾಮ್‌ವೀರ್ ಸಿಂಗ್ ಬಿಧೂಢಿ ಅವರು ಸಂಸದರಾಗಿ ಆಯ್ಕೆಯಾಗಿದ್ದರು. ಅವರು ಪ್ರತಿನಿಧಿಸಿದ್ದ ಕ್ಷೇತ್ರದಲ್ಲಿ ಬೇರೆಯವರಿಗೆ ಅವಕಾಶ ನೀಡಲಾಗಿದೆ. ರೋಹಿಣಿ ಕ್ಷೇತ್ರದಿಂದ ವಿಪಕ್ಷ ನಾಯಕ ವಿಜೆಂದರ್ ಗುಪ್ತ ಮತ್ತೆ ಕಣಕ್ಕಿಳಿಯಲಿದ್ದಾರೆ.

ಪಕ್ಷಾಂತರಿಗಳಿಗೆ ಆದ್ಯತೆ: ಎಎಪಿಯಿಂದ ಬಂದಿರುವ ಮಾಜಿ ಸಚಿವ ಕೈಲಾಶ್ ಗೆಹಲೋತ್ ಅವರು ಬಿಜ್ವಾಸನ್ ಕ್ಷೇತ್ರದಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಎಎಪಿಯಿಂದ ಬಂದಿರುವ ರಾಜ್ ಕುಮಾರ್ ಆನಂದ್ ಅವರು ಪಟೇಲ್ ನಗರದಿಂದ ಹಾಗೂ ಕರ್ತಾರ್ ಸಿಂಗ್ ತನ್ವರ್ ಅವರು ಕಳೆದ ಬಾರಿ ಗೆದ್ದಿದ್ದ ಚತ್ತರ್‌ಪುರದಿಂದ ಕಣಕ್ಕಿಳಿದಿದ್ದಾರೆ.

ಲವ್ಲಿ ಜೊತೆಗೆ ಬಿಜೆಪಿ ಸೇರಿದ್ದ ಕಾಂಗ್ರೆಸ್‌ನ ರಾಜ್‌ಕುಮಾರ್ ಚೌಹಾಣ್ ಅವರು ಈ ಹಿಂದೆ ಗೆದ್ದಿದ್ದ ಮಂಗೋಲ್‌ಪುರಿ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. 2013ರಿಂದ ಈ ಕ್ಷೇತ್ರ ಎಎಪಿ ತೆಕ್ಕೆಯಲ್ಲಿದೆ.

ದ್ವೇಷಭಾಷಣ ಮಾಡಿದವರಿಗೆ ಮಣೆ



ಪರ್ವೇಶ್ ವರ್ಮಾ ಹಾಗೂ ರಮೇಶ್ ಬಿಧೂಢಿ ಅವರು 10 ವರ್ಷಗಳ ಕಾಲ ಪಶ್ಚಿಮ ದೆಹಲಿ ಮತ್ತು ದಕ್ಷಿಣ ದೆಹಲಿ ಕ್ಷೇತ್ರಗಳ ಸಂಸದರಾಗಿದ್ದರು. 2024ರ ಲೋಕಸಭಾ ಚುನಾವಣೆಯಲ್ಲಿ ಇಬ್ಬರಿಗೂ ಟಿಕೆಟ್ ನಿರಾಕರಿಸಲಾಗಿತ್ತು. ಇಬ್ಬರೂ ನಾಯಕರು ದ್ವೇಷ ಭಾಷಣದಿಂದಲೇ ಹೆಚ್ಚು ಸುದ್ದಿಯಲ್ಲಿದ್ದವರು.

ನವದೆಹಲಿ ಕ್ಷೇತ್ರದ ಮತದಾರರಿಗೆ ಹಣ ಹಂಚಿದ ಆರೋಪಕ್ಕೆ ವರ್ಮಾ ಇತ್ತೀಚೆಗೆ ತುತ್ತಾಗಿದ್ದರು. 2020ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಅವರು ದ್ವೇಷ ಭಾಷಣಗಳನ್ನು ಮಾಡಿದ್ದರು. ಶಾಹೀನ್ ಬಾಗ್ ಪ್ರತಿಭಟನಾನಿರತರನ್ನು ಅತ್ಯಾಚಾರಿಗಳು ಹಾಗೂ ಕೊಲೆಗಾರರು ಎಂದು ಜರಿದಿದ್ದರು. ಕೇಜ್ರಿವಾಲ್ ಅವರನ್ನು ಭಯೋತ್ಪಾದಕ ಎಂದು ನಿಂದಿಸಿದ್ದರು. ಮುಸ್ಲಿಮರನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕು ಎಂದು 2022ರಲ್ಲಿ ಹೇಳಿಕೆ ನೀಡಿದ್ದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಇಂದಿರಾ ಗಾಂಧಿ ಅವರಿಗಾದ ಗತಿಯೇ ಆಗಲಿದೆ ಎಂದು ತರ್ವಿಂದರ್ ಸಿಂಗ್ ಮರ್ವಾಹ್ ಹೇಳಿದ್ದರು.

ರಮೇಶ್ ಬಿಧೂಢಿ ಅವರು ಸಂಸತ್ತಿನಲ್ಲಿಯೇ ಕೋಮು ದ್ವೇಷದ ಮಾತುಗಳನ್ನು ಆಡಿದ್ದರು. 2023ರಲ್ಲಿ ಲೋಕಸಭೆಯ ಚಳಿಗಾಲದ ಅಧಿವೇಶನದಲ್ಲಿ ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು.

ಪಾಲಿಕೆ ಸದಸ್ಯ ರವಿಂದರ್ ಸಿಂಗ್ ನೇಗಿ ಅವರನ್ನು ಪಕ್ಷ ಹುರಿಯಾಳುವನ್ನಾಗಿ ಮಾಡಿದೆ. ಮಾರುಕಟ್ಟೆಯಲ್ಲಿ ಮುಸ್ಲಿಂ ವ್ಯಾಪಾರಿಗಳು ತಮ್ಮ ಹೆಸರುಗಳನ್ನು ಪ್ರದರ್ಶಿಸಬೇಕು ಎಂದು ನೇಗಿ ಹೇಳಿಕೆ ನೀಡಿದ್ದರು.

‘ನೀರಿನ ದುಬಾರಿ ಬಿಲ್ ಮನ್ನಾ’

ಎಎಪಿ ನಾಯಕನ ವಿರುದ್ಧ ಗೃಹ ಸಚಿವ ಶಾ ವಾಗ್ದಾಳಿ



ಅರವಿಂದ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಎಎಪಿ ಮತ್ತೆ ಅಧಿಕಾರಕ್ಕೆ ಬಂದರೆ ‘ದುಬಾರಿ’ ನೀರಿನ ಬಿಲ್ ಮನ್ನಾ ಮಾಡಲಾಗುತ್ತದೆ ಎಂದು ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಶನಿವಾರ ಭರವಸೆ ನೀಡಿದರು.

ದೆಹಲಿ ಜಲ ಮಂಡಳಿಯು ಸಾವಿರ, ಲಕ್ಷಗಳ ಮೊತ್ತದ ನೀರಿನ ಬಿಲ್ ಕಳುಹಿಸಿದ್ದನ್ನು ನೋಡಿ ಜನ ಸಂಕಟಪಡುತ್ತಿದ್ದಾರೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ತಾವು ಜೈಲಿಗೆ ಹೋದ ನಂತರದಲ್ಲಿ ಈ ರೀತಿಯ ಬಿಲ್‌ಗಳು ಬರುವುದು ಆರಂಭವಾಯಿತು ಎಂದ ಅವರು, ಆ ಬಿಲ್ ಶುಲ್ಕವನ್ನು ಪಾವತಿಸಬಾರದು ಎಂದು ಜನರನ್ನು ಒತ್ತಾಯಿಸಿದರು.

ಅಮಿತ್ ಶಾ ವಾಗ್ದಾಳಿ: ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಮೂಲಸೌಕರ್ಯ ನಿರ್ಮಿಸುವ ಬದಲು ಕೇಜ್ರಿವಾಲ್ ಅವರು ತಮಗಾಗಿ ‘ಶೀಷ ಮಹಲ್’ ನಿರ್ಮಿಸಿಕೊಂಡರು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಾಗ್ದಾಳಿ ನಡೆಸಿದರು.

‘ಬಿಜೆಪಿ, ಎಎಪಿಗೆ ಆರ್‌ಎಸ್‌ಎಸ್ ತಾಯಿ ಇದ್ದಂತೆ’



ಹೈದರಾಬಾದ್ (ಪಿಟಿಐ): ಬಿಜೆಪಿ ಮತ್ತು ಎಎಪಿ ಸೈದ್ಧಾಂತಿಕವಾಗಿ ಒಂದಾಗಿದ್ದು, ಆರ್‌ಎಸ್‌ಎಸ್ ಇವೆರಡೂ ಪಕ್ಷಗಳ ತಾಯಿ ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರು ಟೀಕಿಸಿದ್ದಾರೆ.

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಎಎಪಿ ಹಿಂದುತ್ವ ರಾಜಕಾರಣ ಮಾಡುತ್ತಿವೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಒವೈಸಿ, ‘ಬಿಜೆಪಿ ಮತ್ತು ಎಎಪಿ ನಡುವೆ ವ್ಯತ್ಯಾಸಗಳಿಲ್ಲ. ಎರಡೂ ಪಕ್ಷಗಳು ಹಿಂದುತ್ವವನ್ನು ಅನುಸರಿಸುತ್ತವೆ’ ಎಂದರು.

ಮತ್ತೊಮ್ಮೆ ರಾಜಕೀಯ ಪ್ರವೇಶಿಸಿದ ಮಾಯಾ ಕೊಡ್ನಾನಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಕೆಲವು ವರ್ಷ ರಾಜಕೀಯದಿಂದ ದೂರ ಉಳಿದಿದ್ದ 2002ರ ಗೋಧ್ರಾ ಹತ್ಯಾಕಾಂಡ ಪ್ರಕರಣದಲ್ಲಿ ಖುಲಾಸೆಗೊಂಡಿರುವ ಬಿಜೆಪಿ ನಾಯಕಿ ಮಾಯಾ ಕೊಡ್ನಾನಿ ಅವರು ಈಗ ಮತ್ತೊಮ್ಮೆ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದ್ದಾರೆ. ಗುಜರಾತ್‌ನ ಬಿಜೆಪಿಯಲ್ಲಿ ಹಲವು ಮುಖ್ಯ ಸ್ಥಾನಗಳನ್ನು ಮಾಯಾ ಅವರಿಗೆ ನೀಡಲಾಗಿದೆ. ರಾಜ್‌ಕೋಟ್ ಜಿಲ್ಲೆಯ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳಿಗೆ ಮುಖ್ಯಸ್ಥರನ್ನು ನೇಮಿಸುವ ಜವಾಬ್ದಾರಿಯನ್ನು ಪಕ್ಷ ನೀಡಿದೆ



ರಥೋತ್ಸವ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಹಾರಕೂಡದಲ್ಲಿ ಶನಿವಾರ ಚನ್ನಬಸವ ಶಿವಯೋಗಿಗಳ ಜಾತ್ರೆ ಅಂಗವಾಗಿ ನಡೆದ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಕಂದಕಕ್ಕೆ ವಾಹನ: ನಾಲ್ವರು ಯೋಧರ ಸಾವು

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಬಂಡಿಪೊರಾ ಜಿಲ್ಲೆಯಲ್ಲಿ ಸೇನಾ ವಾಹನವೊಂದು ಕಂದಕಕ್ಕೆ ಉರುಳಿಬಿದ್ದ ಪರಿಣಾಮ ನಾಲ್ವರು ಯೋಧರು ಮೃತಪಟ್ಟಿದ್ದು, ಒಬ್ಬರು ಗಾಯಗೊಂಡಿದ್ದಾರೆ.

ಉತ್ತರ ಕಾಶ್ಮೀರದ ಎಸ್.ಕೆ ಪಾಯೆನ್ ಬಳಿ ಸೇನಾ ವಾಹನದ ನಿಯಂತ್ರಣ ತಪ್ಪಿದ್ದು, ಪಕ್ಕದಲ್ಲೇ ಇದ್ದ ಕಂದಕಕ್ಕೆ ಬಿದ್ದಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ‘ಪ್ರತಿಕೂಲ ಹವಾಮಾನ ಮತ್ತು ದಟ್ಟ ಮಂಜು ಕವಿದಿದ್ದ ಪರಿಣಾಮ ಅಪಘಾತ ಸಂಭವಿಸಿದೆ’ ಎಂದು ಸೇನೆಯು ‘ಎಕ್ಸ್’ ಮೂಲಕ ತಿಳಿಸಿದೆ.



ಜಮ್ಮು–ಕಾಶ್ಮೀರದ ಬಂಡಿಪೊರಾ ಜಿಲ್ಲೆಯಲ್ಲಿ ಸೇನಾ ವಾಹನವೊಂದು ಕಂದಕಕ್ಕೆ ಉರುಳಿಬಿದ್ದಿತ್ತು – ಪಿಟಿಐ ಚಿತ್ರ


ಪಟಾಕಿ ಕಾರ್ಖಾನೆ ಸ್ಫೋಟ: 6 ಸಾವು

ವಿರುಧುನಗರ(ಪಿಟಿಐ): ಪಟಾಕಿ ತಯಾರಿಕಾ ಕಾರ್ಖಾನೆಯೊಂದರಲ್ಲಿ ಸ್ಫೋಟ ಸಂಭವಿಸಿದ ಪರಿಣಾಮ 6 ಕಾರ್ಮಿಕರು ಮೃತಪಟ್ಟಿರುವ ಘಟನೆ ತಮಿಳುನಾಡಿನ ವಿರುಧುನಗರದಲ್ಲಿ ಶನಿವಾರ ನಡೆದಿದೆ.

ಕಾರ್ಮಿಕರು ಬೆಳಿಗ್ಗೆ ರಾಸಾಯನಿಕಗಳ ಮಿಶ್ರಣ ಮಾಡುತ್ತಿದ್ದ ವೇಳೆ ಸ್ಫೋಟ ಸಂಭವಿಸಿದೆ. ಸ್ಫೋಟದ ಪರಿಣಾಮ ನಾಲ್ವರು ಪುರುಷ ಕಾರ್ಮಿಕರು ಮೃತಪಟ್ಟಿದ್ದಾರೆ ಮತ್ತು ಕಾರ್ಖಾನೆಯ ನಾಲ್ಕು ಕೊಠಡಿಗಳು ನೆಲಸಮವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒಬ್ಬ ಕಾರ್ಮಿಕನಿಗೆ ಗಾಯಗಳಾಗಿದ್ದು, ಅವರನ್ನು ಮಧುರೈನ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಕಾರ್ಖಾನೆಯಲ್ಲಿ ಸ್ಫೋಟ: ವ್ಯಕ್ತಿ ಸಾವು



ಹೈದರಾಬಾದ್: ತೆಲಂಗಾಣದ ಯಾದಾದ್ರಿ ಭುವನಗಿರಿ ಜಿಲ್ಲೆಯಲ್ಲಿರುವ ಸ್ಫೋಟಕ ವಸ್ತು ತಯಾರಿಕೆಯ ಕಾರ್ಖಾನೆಯಲ್ಲಿ ಶನಿವಾರ ಸ್ಫೋಟ ಸಂಭವಿಸಿ ಒಬ್ಬ ವ್ಯಕ್ತಿ ಮೃತಪಟ್ಟು, ಎಂಟು ಮಂದಿ ಗಾಯಗೊಂಡಿದ್ದಾರೆ.

ಪೆದ್ದ ಕಂದುಕುರ್‌ನಲ್ಲಿರುವ ಪ್ರೀಮಿಯರ್ ಎಕ್ಸ್‌ಪ್ಲೋಸಿವ್ಸ್ ಲಿಮಿಟೆಡ್ (ಪಿಇಎಲ್)ನಲ್ಲಿ ಈ ಸ್ಫೋಟ ಸಂಭವಿಸಿದೆ. ಕೈಗಾರಿಕಾ ಉದ್ದೇಶಕ್ಕೆ ಬಳಸುವ ಸ್ಫೋಟಕಗಳನ್ನು ಮತ್ತು ಡಿಟೊನೇಟರ್‌ಗಳನ್ನು ಪಿಇಎಲ್‌ನಲ್ಲಿ ತಯಾರಿಸಲಾಗುತ್ತಿತ್ತು.

‘ಮಕರವಿಳಕ್ಕು’ಗೆ ಶಬರಿಮಲೆ ಸಜ್ಜು



ಶಬರಿಮಲೆ (ಪಿಟಿಐ): ಜ.15ರಂದು ನಡೆಯುವ ‘ಮಕರವಿಳಕ್ಕು’ ಉತ್ಸವಕ್ಕಾಗಿ ಶಬರಿಮಲೆ ಅಯ್ಯಪ್ಪ ದೇವಾಲಯದಲ್ಲಿ ಸಿದ್ಧತೆಗಳು ಅಂತಿಮ ಹಂತದಲ್ಲಿವೆ’ ಎಂದು ದೇವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

‘ಮಕರವಿಳಕ್ಕು’ ಉತ್ಸವ ದಿನ ಶಬರಿಮಲೆಗೆ ಭೇಟಿ ನೀಡುವ ಪ್ರತಿ ಯಾತ್ರಾರ್ಥಿಗೂ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುವುದು’ ಎಂದು ಶಬರಿಮಲೆ ಆಡಳಿತಾತ್ಮಕ ಜಿಲ್ಲೆಯ ಮ್ಯಾಜಿಸ್ಟ್ರೇಟ್ ಅರುಣ್.ಎಸ್.ನಾಯರ್ ತಿಳಿಸಿದರು.

‘ಸದ್ಯ, ದೇವಾಲಯದಲ್ಲಿ ಹೆಚ್ಚಿನ ದಟ್ಟಣೆ ಇದ್ದು, ಪ್ರತಿ ದಿನವೂ 90 ಸಾವಿರಕ್ಕೂ ಅಧಿಕ ಮಂದಿ ಭಕ್ತರು ಭೇಟಿ ನೀಡುತ್ತಿದ್ದಾರೆ’ ಎಂದರು.

ಉತ್ಸವಕ್ಕೂ ಮುನ್ನ ದೇವಾಲಯದಿಂದ ಸುಮಾರು 85 ಕಿಲೋಮೀಟರ್ ದೂರದಲ್ಲಿರುವ ಪಂದಳಂ ಅರಮನೆಯಿಂದ ತಿರುವಾಭರಣ (ಪವಿತ್ರ ಆಭರಣ) ತರುವ ಕಾರ್ಯಕ್ರಮಗಳಿಗೂ ಸಿದ್ಧತೆಗಳು ಆರಂಭಗೊಂಡಿದೆ.

‘ಸುಗಮ ಹಾಗೂ ವ್ಯವಸ್ಥಿತವಾಗಿ ಉತ್ಸವ ನಡೆಸಲು ಸರ್ಕಾರದ ಎಲ್ಲ ಇಲಾಖೆಗಳು ಕೂಡ ಈಗಾಗಲೇ ಕಾರ್ಯೋನ್ಮುಖವಾಗಿವೆ. ಜ.10ರ ಒಳಗಾಗಿ, ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಲಾಗಿದೆ’ ಎಂದು ನಾಯರ್ ತಿಳಿಸಿದರು.

ಭೌತ ವಿಜ್ಞಾನಿ ಚಿದಂಬರಂ ಇನ್ನಿಲ್ಲ

ಪಿಟಿಐ/ಪ್ರಜಾವಾಣಿ ವಾರ್ತೆ


ನವದೆಹಲಿ: ಹೆಸರಾಂತ ಭೌತ ವಿಜ್ಞಾನಿ, ಭಾರತದ ‘ಪರಮಾಣು ಶಕ್ತಿ ಸಜ್ಜಿತ ಶಸ್ತ್ರಾಸ್ತ್ರ ಕಾರ್ಯಕ್ರಮ’ಗಳ ರೂವಾರಿ ಡಾ.ರಾಜಗೋಪಾಲ ಚಿದಂಬರಂ(88) ಶನಿವಾರ ಮುಂಬೈನಲ್ಲಿ ನಿಧನರಾದರು.

ಅವರಿಗೆ ಪತ್ನಿ ಚೆಲ್ಲಾ, ಪುತ್ರಿಯರಾದ ನಿರ್ಮಲಾ, ನಿತ್ಯಾ ಇದ್ದಾರೆ. ಕೆಲವು ದಿನಗಳಿಂದ ಅವರು ಅಸ್ವಸ್ಥರಾಗಿದ್ದರು. ಮುಂಬೈನ ಜಸ್‌ಲೋಕ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿಯೇ ಬೆಳಿಗ್ಗೆ ಮೃತಪಟ್ಟರು.

ಭಾರತವು ಪರಮಾಣು ಶಕ್ತಿ ಪರೀಕ್ಷೆ ನಡೆಸಿದ್ದ ಪೋಖ್ರಾನ್–1 ಮತ್ತು ಪೋಖ್ರಾನ್–2 ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿದ್ದ ಭೌತವಿಜ್ಞಾನಿ ಚಿದಂಬರಂ.

ಭಾಭಾ ಅಣುಶಕ್ತಿ ಸಂಶೋಧನಾ ಕೇಂದ್ರ (ಬಿಎಆರ್‌ಸಿ) ಸೇರಿದ್ದ ಅವರು, ಅದರ ನಿರ್ದೇಶಕ ಸ್ಥಾನದವರೆಗೂ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸಿದ್ದರು.

ಕೇಂದ್ರ ಸರ್ಕಾರ ಅವರಿಗೆ 1975ರಲ್ಲಿ ಪದ್ಮಶ್ರೀ ಹಾಗೂ 1999ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ನೀಡಿ ಪುರಸ್ಕರಿಸಿತ್ತು.



ವಿಮಾನ ನಿಲ್ದಾಣದಲ್ಲಿ ಸಿಐಎಸ್‌ಎಫ್ ಯೋಧ ಆತ್ಮಹತ್ಯೆ

ಸೂರತ್ (ಪಿಟಿಐ): ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಯೋಧರೊಬ್ಬರು ಸೂರತ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ರಾಜಸ್ಥಾನದ ಜೈಪುರ ಮೂಲದ ಕಿಶನ್ ಸಿಂಗ್(32) ಆತ್ಮಹತ್ಯೆ ಮಾಡಿಕೊಂಡ ಯೋಧ. ಇವರು ವಿಮಾನ ನಿಲ್ದಾಣದ ಶೌಚಾಲಯದಲ್ಲಿ ಶನಿವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ತಮ್ಮ ಹೊಟ್ಟೆಗೆ ಗುಂಡು ಹಾರಿಸಿಕೊಂಡು ಮೃತಪಟ್ಟಿದ್ದಾರೆ. ಅವರ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣ ತಿಳಿದುಬಂದಿಲ್ಲ.

ಸಂಕ್ಷಿಪ್ತ ಸುದ್ದಿ

ಕಾಂಗ್ರೆಸ್‌ನಿಂದ ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ’ ಅಭಿಯಾನ

ನವದೆಹಲಿ (ಪಿಟಿಐ): ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರನ್ನು ‘ಅವಮಾನಿಸಿದ’ ಕಾರಣ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಪಕ್ಷವು, ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ’ ಅಭಿಯಾನವನ್ನು ಆರಂಭಿಸಿದೆ.

‘ಈ ಅಭಿಯಾನದಲ್ಲಿ ಪಕ್ಷದ ನಾಯಕರು ಪ್ರತಿ ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಿ, ಬಿಜೆಪಿ–ಆರ್‌ಎಸ್‌ಎಸ್ ಅಂಬೇಡ್ಕರ್ ಮತ್ತು ಸಂವಿಧಾನವನ್ನು ಹೇಗೆ ಅವಮಾನಿಸುತ್ತಿವೆ ಎಂದು ಜನರಿಗೆ ತಿಳಿಸಲಿದ್ದಾರೆ’ ಎಂದು ಪಕ್ಷದ ನಾಯಕ ಪವನ್ ಖೇರಾ ತಿಳಿಸಿದರು.

‘ಜನವರಿ 3ರಂದು ಅಭಿಯಾನ ಆರಂಭಿಸಿದ್ದೇವೆ. ಜನವರಿ 26ರಂದು ಅಂಬೇಡ್ಕರ್ ಜನ್ಮಸ್ಥಳ ಮಧ್ಯಪ್ರದೇಶದ ಮಹೂನಲ್ಲಿ ಬೃಹತ್ ರ‍್ಯಾಲಿ ಆಯೋಜಿಸಿ ಅಭಿಯಾನವನ್ನು ಸಮಾಪ್ತಿಗೊಳಿಸುತ್ತೇವೆ’ ಎಂದರು.

ಎಚ್‌ಎಂಪಿವಿ: ಐಸಿಎಂಆರ್ ತೀವ್ರ ನಿಗಾ


ನವದೆಹಲಿ (ಪಿಟಿಐ): ಹ್ಯೂಮನ್ ಮೆಟಾನ್ಯುಮೊವೈರಸ್ (ಎಚ್‌ಎಂಪಿವಿ) ವೇಗವಾಗಿ ಹರಡುತ್ತಿವೆ ಎನ್ನುವ ವರದಿಗಳು ಪ್ರಕಟವಾಗುತ್ತಿರುವ ಕಾರಣಕ್ಕೆ ಪರಿಸ್ಥಿತಿಯ ಮೇಲೆ ತೀವ್ರ ನಿಗಾ ಇರಿಸಿರುವುದಾಗಿ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಶನಿವಾರ ತಿಳಿಸಿದೆ. ಪರಿಸ್ಥಿತಿಯ ಕುರಿತು ಆಗಾಗ ಮಾಹಿತಿ ಒದಗಿಸುವಂತೆ ವಿಶ್ವ ಆರೋಗ್ಯ ಸಂಸ್ಥೆಯನ್ನೂ ಕೇಳಿಕೊಂಡಿರುವುದಾಗಿ ಹೇಳಿದೆ.

ಅಲ್ಲು ಜಾಮೀನು ಪ್ರಕ್ರಿಯೆ ಪೂರ್ಣ

ಹೈದರಾಬಾದ್ (ಪಿಟಿಐ): ‘ಪುಷ್ಪ–2’ ಚಿತ್ರಪ್ರದರ್ಶನದ ವೇಳೆ ಸಂಭವಿಸಿದ್ದ ಕಾಲ್ತುಳಿತದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿ ನೀಡಲಾಗಿರುವ ಜಾಮೀನಿನ ಷರತ್ತುಗಳ ಅನ್ವಯ ನಟ ಅಲ್ಲು ಅರ್ಜುನ್ ಅವರು ಶ್ಯೂರಿಟಿ ಮತ್ತು ಬಾಂಡ್‌ಗಳನ್ನು ಸ್ಥಳೀಯ ನ್ಯಾಯಾಲಯಕ್ಕೆ ಶನಿವಾರ ಸಲ್ಲಿಸಿದರು.



50ರ ಸಂಭ್ರಮದಲ್ಲಿ ಸಾಲಿಗ್ರಾಮ ಮಕ್ಕಳ ಮೇಳ 11



ಗಡಿನಾಡಿನಲ್ಲಿ ಕನ್ನಡ ಕಟ್ಟಿದ ಶ್ರೀಕೃಷ್ಣ ಭಟ್ 12



13 ಮೊಗಸಾಲೆಗಳಲ್ಲಿ ಅಸ್ಸಾಮಿಗರ ಬದುಕು ಅನಾವರಣ 13



ಬೆಳ್ ಬೆಳ್‌ಗೆ ಬಿರಿಯಾನಿ...!

ಯುವಜನಾಂಗಕ್ಕೆ ವಿನಾಕಾರಣ ಏನೇನೋ ಇಷ್ಟವಾಗಿಬಿಡುತ್ತದೆ. ರಾತ್ರಿ ಸಿಟಿ ರೌಂಡ್ಸ್, ಮುಂಜಾನೆಯ ಚುಮುಚುಮು ಚಳಿಯಲ್ಲಿ ಹಬೆಯಾಡುವ ಬಿರಿಯಾನಿ... ಬೆಂಗಳೂರು ಸಮೀಪದ ಹೊಸಕೋಟೆ ದಮ್ ಬಿರಿಯಾನಿ ಪರಿಮಳ, ರುಚಿಗೆ ಮನಸೋತವರ ಕಥೆ ಇದು.

ಅಬ್ದುಲ್ ರಹಿಮಾನ್

ತಡರಾತ್ರಿ 2.30

ಅರೆಬರೆ ನಿದ್ದೆ, ಮೈ ಪೂರ್ತಿ ಆವರಿಸಿಕೊಂಡಿದ್ದ ಚಳಿಯನ್ನು ಒದ್ದು ಮೂರು ಬೈಕ್‌ಗಳಲ್ಲಿ ನಾವು ಆರು ಮಂದಿ ಹೊರಟು ನಿಂತಾಗ ಗಂಟೆ ಮೂರಾಗಿತ್ತು. ಚಂದಿರ ಪ್ರಕಾಶಮಾನವಾಗಿದ್ದ. ಬೆಂಗಳೂರಿನ ರಸ್ತೆಗಳಲ್ಲಿ ವಾಹನ ಸಂಚಾರ ವಿರಳವಾಗಿತ್ತು. ಸಿಗ್ನಲ್ ಲೈಟ್‌ಗಳು ವಿಶ್ರಾಂತಿಯಲ್ಲಿದ್ದವು. ಬೈಕರ್‌ಗಳ ಗುಂಪೊಂದು ಮೆರವಣಿಗೆ ಹೊರಟಿತ್ತು. ಟೋಲ್‌ಗೇಟ್ ಬಳಿ ಸೈಕಲ್‌ನವ ಕೊಟ್ಟ ಫ್ಲಾಸ್ಕಿನಲ್ಲಿ ತುಂಬಿಸಿದ್ದ 'ಗರಂ ಚಾಯ್' ಜೊತೆಗೆ ಖಡಕ್ ಚಕ್ಕುಲಿ ದೇಹದ ಒಳಹೊಕ್ಕಾಗ ಏನೋ ಸಂಚಾರವಾದಂತಾಗಿ ಹೊಸ ಚೈತನ್ಯ ಮೂಡಿತು.

ಈ ಹೊತ್ತಿಗಾಗಲೇ ನಾಲ್ಕು ಗಂಟೆಗೆ ಇನ್ನೂ ಹತ್ತು ನಿಮಿಷ ಬಾಕಿ ಇತ್ತು.

ಅಲ್ಲಿ ಭಾರಿ ಜನ ದಟ್ಟಣೆ. ವಾಹನಗಳ ದಂಡೇ ರಸ್ತೆಯ ಇಕ್ಕೆಲಗಳಲ್ಲಿ ಸಾಲುಗಟ್ಟಿದ್ದವು. ಗುಂಪು ಗುಂಪಾಗಿ ನಿಂತಿದ್ದ ಜನ ಅದರ ನಿರೀಕ್ಷೆಯಲ್ಲಿದ್ದರು. ದೇವರ ದರ್ಶನಕ್ಕಿದ್ದಂತೆ ಉದ್ದನೆಯ ಸಾಲೂ ಇತ್ತು. ಭಕ್ತರಂತೆ ತಾಳ್ಮೆಯೂ ಇತ್ತು. ಆದರೆ ವಿಐಪಿ ಸಾಲು ಇರಲಿಲ್ಲ ಎನ್ನುವುದೇ ಸಮಾಧಾನ. ಚಳಿಯಿಂದ ಮೈನಡುಗುತ್ತಿದ್ದರೂ ಅಲ್ಲಿದ್ದವರ ಉತ್ಸಾಹ ಕಡಿಮೆಯಾಗಿರಲಿಲ್ಲ. ಪೇಲವ ಮೋರೆ ಹೊತ್ತುಕೊಂಡು, ನಿಂತಲ್ಲೇ ನಿದ್ದೆ ಮಾಡುತ್ತಿದ್ದವರು, ಉಮೇದಿನಿಂದ ಗಡಿಬಿಡಿ ಮಾಡುತ್ತಿದ್ದವರೂ ಇದ್ದರು. ಒಟ್ಟಿನಲ್ಲಿ ಹಳ್ಳಿಯ ಜಾತ್ರೆಯ ವಾತಾವರಣ ಅಲ್ಲಿತ್ತು. ಇದಕ್ಕಿದ್ದಂತೆಯೇ ಮಸಾಲೆಯಲ್ಲಿ ಬೆಂದ ಮಾಂಸದ ಹಾಗೂ ತುಪ್ಪದ ಪರಿಮಳ ಗಾಳಿಯಲ್ಲಿ ತೇಲಿ ಬಂದು ಅಲ್ಲಿದ್ದವರ ಮೂಗು ಅರಳಿಸಿತು. ಕಣ್ಣುಮುಚ್ಚಿ ಆ ಪರಿಮಳವನ್ನು ಆಸ್ವಾದಿಸಬೇಕು ಅನ್ನುವಷ್ಟರಲ್ಲಿ ಏನೋ ಗಲಿಬಿಲಿ, ತರಾತುರಿ.

ಇದು ಪ್ರತಿ ಭಾನುವಾರ ಮುಂಜಾನೆ ಬೆಂಗಳೂರಿನ ಹೊರವಲಯದ ಹೊಸಕೋಟೆಯಲ್ಲಿ ಕಂಡು ಬರುವ ಸಾಮಾನ್ಯ ದೃಶ್ಯಗಳು. 'ಹೊಸಕೋಟೆ ದಮ್ ಬಿರಿಯಾನಿ' ಅಂಗಡಿಗಳ ಮುಂದೆ ಆ ದಿನ ಇಂಥ ವಾತಾವರಣ ಇರುತ್ತದೆ. ಬಿರಿಯಾನಿ ಪ್ರಿಯರು ಮುಂಜಾನೆಯೇ 'ಬಾಡು' ಸವಿಯಲು ದೂರದ ಊರುಗಳಿಂದ ಬರುತ್ತಾರೆ. ಗಂಟೆಗಟ್ಟಲೆ ಕಾದು, ಉದ್ದದ ಸರತಿಯಲ್ಲಿ ನಿಂತು, ಜಾಗ ಸಿಕ್ಕಿದಲ್ಲೇ ನಿಂತೋ, ಕುಳಿತೋ ಬಿರಿಯಾನಿ ಸವಿಯುತ್ತಾರೆ. ಸೂರ್ಯ ಕಣ್ಣು ಬಿಡುವ ಮೊದಲೇ ಬಿರಿಯಾನಿಗಾಗಿ ಕಾದು ಕೂರುವ ವ್ಯಾಮೋಹ 'ಪೀಕ್ ಬೆಂಗಳೂರು' ಮೊಮೆಂಟ್‌ಗಳಲ್ಲಿ ಒಂದು. ಸಾಮಾಜಿಕ ಜಾಲತಾಣಗಳಲ್ಲಿ 'ಬೆಂಗಳೂರೂಸ್ ಫೇಮಸ್ ಫೋರ್ ಎಎಂ ಬಿರಿಯಾನಿ' ಎಂದೇ ಜನಜನಿತ.

ಹೊಸಕೋಟೆಯಿಂದ ಕೋಲಾರಕ್ಕೆ ಹೋಗುವ ರಸ್ತೆಯ ಎಡಬದಿಯಲ್ಲಿರುವ 'ಮಣಿ ದಮ್ ಬಿರಿಯಾನಿ'ಯಲ್ಲಿ ಮುಂಜಾನೆ ಬಿರಿಯಾನಿ ತಿನ್ನಬೇಕೆನ್ನುವ ಹಲವು ದಿನಗಳ ಪ್ಲಾನ್ ಸಾಕಾರಗೊಂಡಿತ್ತು. ನಾಲ್ಕೈದು ದೊಡ್ಡ ಹಂಡೆಗಳಲ್ಲಿ ಬಿರಿಯಾನಿ ತಯಾರಿಸಿ ಇಡಲಾಗಿತ್ತು. ತೆರೆದಿದ್ದ ಒಂದು ಹಂಡೆಯಿಂದ ಬರುತ್ತಿದ್ದ ಹಬೆ ಅದರ ತಾಜಾತನವನ್ನು ಸೂಚಿಸುತ್ತಿತ್ತು. ಅದರ ಸುವಾಸನೆಯನ್ನು ಆಘ್ರಾಣಿಸುತ್ತಲೇ, ಸವಿಯಲು ನಾ ಮುಂದು ತಾ ಮುಂದು ಎಂದು ಮುಂದಡಿ ಇಡುತ್ತಿದ್ದರು. ಕಬಾಬ್‌ಗಾಗಿ ಬೇರೆಯದೇ ಸರತಿ ಪಕ್ಕದಲ್ಲಿ ಇತ್ತು.



ಬಿಸಿಬಿಸಿ ಬಿರಿಯಾನಿ ಪಾರ್ಸೆಲ್...

ಎಲ್ಲೆಲ್ಲಿ ಇಂಥ ಟ್ರೆಂಡ್?

ಹೊಸಕೋಟೆ ಮಾತ್ರವಲ್ಲದೆ ರಾಜ್ಯದ ಬೇರೆಡೆ ಕೂಡ ಈಗ 'ಅರ್ಲಿ ಮಾರ್ನಿಂಗ್ ಬಿರಿಯಾನಿ' ಟ್ರೆಂಡ್ ಆರಂಭವಾಗಿದೆ. ತುಮಕೂರು ಜಿಲ್ಲೆಯ ಹುಳಿಯಾರಿನಲ್ಲಿ ತಡರಾತ್ರಿ 2 ಗಂಟೆಯವರೆಗೂ ಬಿರಿಯಾನಿ ಸಿಗುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯ ವಿಜಯಪುರಕ್ಕೆ ಭಾನುವಾರ, ಮಂಗಳವಾರ, ಶುಕ್ರವಾರ ಬೆಳಗ್ಗೆ 5 ಗಂಟೆಯಿಂದ ಬಿರಿಯಾನಿ ಹಾಗೂ ಕಾಲು ಸೂಪ್ ಸವಿಯಲು ಬೇರೆ ಬೇರೆ ಕಡೆಗಳಿಂದ ಗ್ರಾಹಕರು ಬರುತ್ತಾರೆ. ಹಾಸನದ ಚನ್ನರಾಯಪಟ್ಟಣದಲ್ಲಿ ಸಂಜೆಯಿಂದ ಬೆಳಗ್ಗೆವರೆಗೂ ಬಿರಿಯಾನಿಗಾಗಿ ಜನ ಕಾಯುತ್ತಾರೆ. ಬಳ್ಳಾರಿಯ ಕೌಲ್ ಬಜಾರ್‌ನಲ್ಲಿ ಅಜೀಮ್ ಬಿರಿಯಾನಿಗೆ ದೊಡ್ಡ ಅಭಿಮಾನಿ ಬಳಗವೇ ಇದೆ. ಬೆಂಗಳೂರು ನಗರದ ಹಲವೆಡೆ ಕೂಡ ಇಂತಹ ಬಿರಿಯಾನಿ ಪಾಯಿಂಟ್‌ಗಳಿವೆ. ತಡರಾತ್ರಿವರೆಗೂ ಸಿಗುವ ಅರೆಬಿಯನ್ ಶೈಲಿಯ 'ಮಂದಿ ಬಿರಿಯಾನಿ' ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಜನಜನಿತವಾಗಿದೆ. ಮೈಸೂರಿನ ಮಟನ್ ಪಲಾವ್, ದೊನ್ನೆ ಬಿರಿಯಾನಿ ಹೋಟೆಲ್‌ಗಳು ಆಹಾರ ಪ್ರಿಯರ ನೆಚ್ಚಿನ ತಾಣ. ಚೆನ್ನೈ, ಹೈದರಾಬಾದ್‌ನಲ್ಲೂ ಮುಂಜಾನೆ ಬಿರಿಯಾನಿ ಆರಂಭವಾಗಿವೆ.

ಹಂಡೆಯ ಸುತ್ತಲೂ ನಿಂತಿದ್ದ ಏಳೆಂಟು ಮಂದಿ ತಟ್ಟೆಗೆ ಬಡಿಸುವುದರಲ್ಲಿ, ಪಾರ್ಸೆಲ್ ಕಟ್ಟುವುದರಲ್ಲಿ ಬಿಡುವಿಲ್ಲದೆ ತೊಡಗಿಕೊಂಡಿದ್ದರು. ಟೋಕನ್ ಹಾಗೂ ವಿತರಣಾ ಕೌಂಟರ್‌ಗಳಲ್ಲಿ ಜನ ತಮ್ಮ ಸರತಿಗಾಗಿ ಉತ್ಸಾಹದಿಂದ ಕಾಯುತ್ತಿದ್ದರು. ತಕ್ಕ ಮಟ್ಟಿಗೆ ಶಿಸ್ತು ಪಾಲಿಸಿದ್ದರಿಂದ ಅಲ್ಲಿದ್ದ ಬೌನ್ಸರ್‌ಗಳಿಗೆ ಹೆಚ್ಚಿನ ಕೆಲಸ ಇರಲಿಲ್ಲ. ಜನರು ಸರತಿ ತಪ್ಪದಂತೆ ಅವರು ಹದ್ದಿನ ಕಣ್ಣಿಟ್ಟಿದ್ದರು. ತಟ್ಟೆ ತುಂಬಾ ಸಾಕಷ್ಟು ಮಾಂಸದ ತುಂಡುಗಳು ಹಾಗೂ ಬಿರಿಯಾನಿ ಸಿಕ್ಕವರ ಮುಖದಲ್ಲಿ ಹಬ್ಬದ ಕಳೆ, ತಿನ್ನುತ್ತಿದ್ದವರದ್ದೋ ಬೇರೆಯದೇ ಭಾವ. ಸ್ನೇಹಿತರೊಂದಿಗೆ, ಕುಟುಂಬದೊಂದಿಗೆ, ಸಂಗಾತಿಯೊಂದಿಗೆ ಬಂದಿದ್ದವರು ತಮ್ಮದೇ ಲೋಕ ಸೃಷ್ಟಿಸಿಕೊಂಡಿದ್ದರು.

'ಬೆಳಿಗ್ಗೆ 3.30ಕ್ಕೆ ಮನೆಯಿಂದ ಹೊರಟೆವು. ಮಲಗುವಾಗಲೇ ಗಂಟೆ ಹನ್ನೆರಡು ಕಳೆದಿತ್ತು. ರಾತ್ರಿಯ ಊಟವೇ ಜೀರ್ಣವಾಗಿಲ್ಲ. ಇನ್‌ಸ್ಟಾಗ್ರಾಮ್‌ನಲ್ಲಿ ನೋಡಿ, ಇಲ್ಲಿಗೆ ಬಂದೆವು. ಇಪ್ಪತ್ತು ನಿಮಿಷ ಕಾದ ಬಳಿಕ ಟೋಕನ್ ಸಿಕ್ಕಿತು. ಬಿರಿಯಾನಿಗಾಗಿ ಹತ್ತು ನಿಮಿಷ ಕಾದೆವು. ನಮ್ಮಲ್ಲೊಬ್ಬ ಕಬಾಬ್‌ಗಾಗಿ ಇನ್ನೊಂದು 'ಕ್ಯೂ'ನಲ್ಲಿ ಇಪ್ಪತ್ತು ನಿಮಿಷ ಕಾದಿದ್ದ. ಕುಳಿತುಕೊಳ್ಳಲೂ ಆಗದಷ್ಟು ಜನ ತುಂಬಿದ್ದಾರೆ. ನಿಂತುಕೊಂಡೇ ತಿನ್ನುತ್ತಿದ್ದೇವೆ. ಬಿಸಿಬಿಸಿ ಬಿರಿಯಾನಿ ಮುಂದೆ ಚಳಿ ಲೆಕ್ಕಕ್ಕೇ ಇಲ್ಲ' ಎಂದು ಬಾಣಸವಾಡಿಯ ನಿತಿನ್ ಹೇಳುವಾಗ ಐದುಗಂಟೆ ಇಪ್ಪತ್ತು ನಿಮಿಷವಾಗಿತ್ತು.

ಅಲ್ಲಿ ಇಟ್ಟಿರುವ ಮೇಜು, ಕುರ್ಚಿಗಳೆಲ್ಲ ತುಂಬಿದ್ದವು. ತಮ್ಮ ಗುಂಪಿನೊಂದಿಗೆ 'ಬಿರಿಯಾನಿ ಗೋಷ್ಠಿ' ನಡೆಸುತ್ತಿದ್ದವರು, ಬರುತ್ತೇನೆಂದು ಕೊನೆ ಕ್ಷಣದಲ್ಲಿ ಕೈಕೊಟ್ಟವರಿಗೆ ವಿಡಿಯೊ ಕಾಲ್ ಮಾಡುತ್ತಿದ್ದ ಗೆಳೆಯರು, ಫೋಟೊಗಳಿಗಾಗಿ ಬಿರಿಯಾನಿ ಪ್ಲೇಟುಗಳನ್ನು ಚೆಂದವಾಗಿ ಜೋಡಿಸಿ ಬೇರೆಯವರ ತಾಳ್ಮೆ ಪರೀಕ್ಷೆ ಮಾಡುತ್ತಿದ್ದವರು, ವಿವಿಧ ಭಂಗಿಗಳಲ್ಲಿ ಚಿತ್ರೀಕರಣ ಮಾಡುತ್ತಿದ್ದ ರೀಲ್ಸ್ ಪ್ರಿಯರು, ಜೋರಾಗಿ ಮಾತನಾಡುತ್ತ, ಜೋಕುಗಳನ್ನು ಸಿಡಿಸಿ ಬಿರಿಯಾನಿ ಸವಿಯುತ್ತಿದ್ದವರು, ಗುಂಪಿನಿಂದ ತುಸು ದೂರ ನಿಂತಿದ್ದ 'ನಾನು ಓನ್ಲಿ ವೆಜ್' ಗೆಳೆಯರು, ಮಟನ್ ಇಷ್ಟವಿಲ್ಲದೆ 'ಕುಷ್ಕ' ಮಾತ್ರ ತಿನ್ನುತ್ತಿದ್ದವರೂ ಇದ್ದರು. ಅಲ್ಲಿ ಚೇತೋಹಾರಿ ವಾತಾವರಣವಿತ್ತು.

'ನಾವು ಎಂಟು ಮಂದಿ ನಿನ್ನೆ ಸಂಜೆಯೇ ಚಿಕ್ಕಬಳ್ಳಾಪುರಕ್ಕೆ ಬಂದು ಸ್ನೇಹಿತನ ಮನೆಯಲ್ಲಿ ಉಳಿದುಕೊಂಡಿದ್ದೆವು. ಬೆಳಿಗ್ಗೆ 3 ಗಂಟೆಗೆ ಎದ್ದು 50 ಕಿಲೊಮೀಟರ್ ದಾರಿ ಕ್ರಮಿಸಿ ಇಲ್ಲಿಗೆ ಬಂದೆವು. ಇಲ್ಲಿನ ಜನಸಂದಣಿ ಅಚ್ಚರಿಯುಂಟು ಮಾಡಿತು. ಆಂಧ್ರ ಬಿರಿಯಾನಿಯಷ್ಟು ಖಾರ ಇರದಿದ್ದರೂ, ರುಚಿ ಬೇರೆ ಇದೆ. ಬಾಸ್ಮತಿ ಅಕ್ಕಿ ಇದ್ದರೆ ಚೆನ್ನಾಗಿರುತ್ತಿತ್ತು. ಮಾಂಸದ ಪ್ರಮಾಣ, ಬೇಯಿಸಿರುವ ಹದ ಎಲ್ಲವೂ ಅಚ್ಚುಕಟ್ಟು. ಒಂದು ಪ್ಲೇಟಿನಲ್ಲಿ ಇಬ್ಬರು ತಿನ್ನುವಷ್ಟು ಪ್ರಮಾಣ ಇದೆ. ಬೆಳ್ಳಂಬೆಳಗ್ಗೆ ಸ್ನೇಹಿತರೊಂದಿಗೆ ಬರುವುದು, ಬೆಂಗಳೂರಿನ ವಾತಾವರಣವನ್ನು ಆಸ್ವಾದಿಸುವುದು ಖುಷಿ' ಎಂದು ಆಂಧ್ರಪ್ರದೇಶದ ಅನಂತಪುರದ ದಿನೇಶ್ ಹೇಳಿದರು.

ಸೂರ್ಯ ಮೂಡುವ ಹೊತ್ತಿಗೆ 300-500 ಮಂದಿ ಬಿರಿಯಾನಿ ಸವಿದು ಜಾಗ ಖಾಲಿ ಮಾಡಿದ್ದರು.

ಮುಂಜಾನೆಯ ಬಿರಿಯಾನಿ ತಿನ್ನಲು ಬರುವವರ ಪೈಕಿ ಬಹುಪಾಲು ಮಂದಿ ಬೆಂಗಳೂರು ಹಾಗೂ ಅಕ್ಕಪಕ್ಕದ ಜಿಲ್ಲೆಯವರು. ಹೊರಗಿನವರಲ್ಲಿ ಬಹುಪಾಲು ಮಂದಿ ತೆಲುಗು ಮಾತನಾಡುವವರು. ಕೇರಳ ಹಾಗೂ ತಮಿಳುನಾಡಿನಿಂದ ಬಂದವರೂ ಮಾತಿಗೆ ಸಿಕ್ಕರು. ಐಟಿ ಉದ್ಯೋಗಿಗಳು, ರಾತ್ರಿ ಪಾಳಿ ಮುಗಿಸಿ ಬಂದ ಕೆಲಸಗಾರರು, ಡ್ರೈವರ್‌ಗಳು, ನೈಟ್ ಔಟಿಂಗ್ ತೆರಳಿದವರು, ಬೇರೆ ಊರುಗಳಿಗೆ ತೆರಳುವವರು, ಎಲ್ಲಿಂದಲೋ ನಗರದಲ್ಲಿ ಕೆಲಸಕ್ಕೆಂದು ಬರುವವರು, ಕ್ರಿಕೆಟ್ ಅಭ್ಯಾಸಕ್ಕೆಂದು ಕಿಟ್ ಹೊತ್ತುಕೊಂಡೇ ಬಂದವರು, ಹೊಸ ಉತ್ಪನ್ನಗಳ ಮಾರಾಟಕ್ಕೆಂದು ಬಂದವರು, ಏರ್‌ಪೋರ್ಟ್‌ನಿಂದ ಮನೆಗೆ ಹೋಗುವ ದಾರಿ ಮಧ್ಯೆ ಬಿರಿಯಾನಿಗಾಗಿಯೇ ಬಂದವರು... ಹೀಗೆ ಹಲವು ಮಂದಿ 'ಬಿರಿಯಾನಿ ಪ್ರಿಯರು' ಒಟ್ಟು ಸೇರಿದ್ದರು. ಕೇವಲ ಮಣಿ ದಮ್ ಬಿರಿಯಾನಿಯಲ್ಲಿ ಮಾತ್ರವಲ್ಲ, ಹೊಸಕೋಟೆಯ ಆನಂದ್, ಅಕ್ಷಯ್, ರಾಜ್, ಹರಿ ಹೀಗೆ ಹಲವು ಬಿರಿಯಾನಿ ಪಾಯಿಂಟ್‌ಗಳಲ್ಲಿ ಬಿರಿಯಾನಿ ಪ್ರಿಯರ ದಂಡೇ ಇತ್ತು.

ಮಣಿ ಹಾಗೂ ಆನಂದ್ ಹೊಸಕೋಟೆಯ ಪ್ರಮುಖ ಬಿರಿಯಾನಿಯ ಹೋಟೆಲ್‌ಗಳು. ಈ ಎರಡೂ ಹೋಟೆಲ್‌ಗಳು ಸುಮಾರು 25-30 ವರ್ಷ ಹಳೆಯವು.

12ನೇ ಪುಟಕ್ಕೆ...



ಕಟ್ಲೇರಿ ಬ್ಯಾಂಕ್‌ನಲ್ಲಿ ಸಂಧ್ಯಾ

ಪ್ಲಾಸ್ಟಿಕ್ ರೋಗಕ್ಕೆ ಕಟ್ಲೇರಿ ಬ್ಯಾಂಕ್ ಮದ್ದು

ಸಂಧ್ಯಾ ಹೆಗಡೆ

ಆರೆಂಟು ಸಾವಿರ ಜನರು ಸೇರುವ ಮೆರವಣಿಗೆಯೆಂದರೆ ಎಂಟು ಸಾವಿರ ಪ್ಲಾಸ್ಟಿಕ್ ಲೋಟಗಳಿದ್ದರೂ ಕಡಿಮೆಯೇ. ಮಜ್ಜಿಗೆ ಕುಡಿದು ಬಿಸಾಡುವ ಲೋಟಗಳನ್ನು ಸ್ವಯಂ ಸೇವಕರು ಹೆಕ್ಕಿ ತಂದು ಚೀಲಕ್ಕೆ ತುಂಬಿಸಿಟ್ಟರೆ, ಪೌರ ಕಾರ್ಮಿಕರು ಮರುದಿನ ಗಾಡಿಯಲ್ಲಿ ತುಂಬಿಸಿಕೊಂಡು ಹೋಗುತ್ತಿದ್ದರು. ಇದೇ ಕ್ರಮದಲ್ಲಿ ನಡೆದುಕೊಂಡು ಹೋಗುತ್ತಿದ್ದ ಮೂಡುಬಿದಿರೆ ಸಾರ್ವಜನಿಕ ಗಣೇಶೋತ್ಸವದ ಶೋಭಾಯಾತ್ರೆ ಕಳೆದ ವರ್ಷ ಬದಲಾವಣೆಯ ಪರ್ವಕ್ಕೆ ನಾಂದಿ ಹಾಡಿತು. ಕೇವಲ 350 ಸ್ಟೀಲ್ ಲೋಟಗಳನ್ನು ಬಳಸಿ ಇಡೀ ಜನಸ್ತೋಮದ ಬಾಯಾರಿಕೆ ನೀಗಿಸಿದ್ದೇ ಒಂದು ಸೋಜಿಗ ಎಂದು ನೇತಾಜಿ ಬ್ರಿಗೇಡ್ ಸ್ಥಾಪಕ ರಾಹುಲ್ ಕುಲಾಲ್ ಹೇಳುವಾಗ ಅವರ ಕಂಗಳಲ್ಲಿ ಮಾಲಿನ್ಯ ಮುಕ್ತ ಮೆರವಣಿಗೆ ನಡೆಸಿದ ಸಂತೃಪ್ತ ಭಾವವಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ಪಟ್ಟಣದಲ್ಲಿ ಉಪನ್ಯಾಸಕಿಯಾಗಿರುವ ಸಂಧ್ಯಾ ಎ ಅವರು ಪುಟ್ಟದಾದ 'ಕಲ್ಪವೃಕ್ಷ' ಕಟ್ಲೇರಿ ಬ್ಯಾಂಕ್ (ಸ್ಟೀಲ್ ಪಾತ್ರೆಗಳ ಭಂಡಾರ) ಮುನ್ನಡೆಸುತ್ತಿದ್ದಾರೆ. ಈ ಕಟ್ಲೇರಿ ಬ್ಯಾಂಕ್‌ನಲ್ಲಿರುವ ಸ್ಟೀಲ್ ಪಾತ್ರೆಗಳನ್ನು ಉಚಿತವಾಗಿ ಬಳಕೆಗೆ ಕೊಡುತ್ತಾರೆ. ಇದರಿಂದ ಪ್ರೇರಿತರಾಗಿ ನೇತಾಜಿ ಬ್ರಿಗೇಡ್‌ನಂತೆ, ಹಲವಾರು ಸಂಘ-ಸಂಸ್ಥೆಗಳು, ಶಾಲೆ- ಕಾಲೇಜುಗಳು, ಪರಿಸರ ಕಳಕಳಿ ಹೊಂದಿದವರು ವಿಶೇಷ ಕಾರ್ಯಕ್ರಮಗಳಿರುವಾಗೆಲ್ಲ ಕಟ್ಲೇರಿ ಬ್ಯಾಂಕ್ ಪಾತ್ರೆಗಳನ್ನೇ ಕೊಂಡೊಯ್ದು ಏಕಬಳಕೆಯ ಪ್ಲಾಸ್ಟಿಕ್ ರಹಿತ ಕಾರ್ಯಕ್ರಮ ನಡೆಸಿ ಬೀಗುತ್ತಾರೆ.!

ಗಣೇಶೋತ್ಸವದ ಶೋಭಾಯಾತ್ರೆಯು ನೇತಾಜಿ ಬ್ರಿಗೇಡ್ ತಂಡದಲ್ಲಿ ಪರಿವರ್ತನೆಯ ಮಿಂಚು ಮೂಡಿಸಿದೆ. ತಂಡದ ಸದಸ್ಯರ ಕೌಟುಂಬಿಕ ಸಂಭ್ರಮದಲ್ಲೂ ಏಕಬಳಕೆಯ ಪ್ಲಾಸ್ಟಿಕ್ ಇಣುಕುತ್ತಿಲ್ಲ. ಅತಿಥಿಗಳಿಗೆ ಪ್ಲಾಸ್ಟಿಕ್ ಕಪ್, ಪ್ಲೇಟ್‌ಗಳಲ್ಲಿ ಜ್ಯೂಸ್, ತಿನಿಸುಗಳನ್ನು ನೀಡುತ್ತಿದ್ದವರು ಈಗ, ಕಟ್ಲೇರಿ ಬ್ಯಾಂಕ್‌ನಲ್ಲಿ ಉಚಿತವಾಗಿ, ಶುಚಿಯಾಗಿ ಸಿಗುವ ಸ್ಟೀಲ್ ಲೋಟ, ತಟ್ಟೆಗಳನ್ನು ನೆಚ್ಚಿಕೊಂಡಿದ್ದಾರೆ. ಸ್ಟೀಲ್ ಲೋಟಗಳು, ಪ್ಲೇಟ್‌ಗಳು, ಚಮಚಗಳು ಊಟದ ಟೇಬಲ್‌ಗಳಲ್ಲಿ ಮಿನುಗುತ್ತಿವೆ. ಬಳಸಿ ಬಿಸಾಡುವ ಪ್ಲಾಸ್ಟಿಕ್ ಸಾಮಗ್ರಿ ಖರೀದಿಸುವ ಹಣ ಉಳಿತಾಯ, ಪ್ಲಾಸ್ಟಿಕ್ ಗುಡ್ಡ ಕರಗಿಸುವ ತಾಪತ್ರಯವೂ ಇಲ್ಲ ಎಂದು ರಾಹುಲ್ ಕುಲಾಲ್ ಮಾತು ಮುಂದುವರಿಸಿದರು.!

ದಂತವೈದ್ಯೆ ಅಕ್ಷತಾ ಅವರು ಕೂಡ, ಆಸ್ಪತ್ರೆಯಲ್ಲಿ ನಡೆಯುವ ಸಭೆ, ಆರೋಗ್ಯ ಶಿಬಿರಗಳಿಗೆ ಕಟ್ಲೇರಿ ಬ್ಯಾಂಕ್‌ನ ಊಟದ ತಟ್ಟೆ, ಲೋಟಗಳನ್ನು ತಪ್ಪದೇ ಕೊಂಡೊಯ್ಯುತ್ತಾರೆ.

'ಕೇಟರಿಂಗ್‌ನವರಿಗೆ ಊಟ ಹೇಳಿದರೆ, ಅವರು ಮಜ್ಜಿಗೆ ಕುಡಿಯಲು ತರುವುದು ಪ್ಲಾಸ್ಟಿಕ್ ಲೋಟಗಳನ್ನೇ. ಭೂತಾಯಿ ಒಡಲಿಗೆ ಭಾರವಾಗುವ ಪ್ಲಾಸ್ಟಿಕ್ ಕಂಡರೆ ಯಾವತ್ತಿಗೂ ಆಗಿಬರುವುದಿಲ್ಲ. ಏನು ಮಾಡಬಹುದೆಂಬ ಯೋಚನೆಯಲ್ಲಿದ್ದಾಗ ಸ್ಟೀಲ್ ಪಾತ್ರೆಗಳ ಭಂಡಾರ ಸಿಕ್ಕಿದ್ದು ಅದೃಷ್ಟ' ಎಂದು ಅಕ್ಷತಾ ನೆನಪಿಸಿಕೊಳ್ಳುತ್ತಾರೆ.!

ಸಂಧ್ಯಾ ಕನಸಿನ ಉಚಿತ ಸೇವೆ..?

ಕಂಪ್ಯೂಟರ್ ಸೈನ್ಸ್ ಉಪನ್ಯಾಸಕಿ ಸಂಧ್ಯಾ ಎ ಅವರು ಊರವರು, ದಾನಿಗಳ ಸಹಕಾರದಲ್ಲಿ ಈ 'ಕಟ್ಲೇರಿ ಬ್ಯಾಂಕ್' ಮುನ್ನಡೆಸುತ್ತಿದ್ದಾರೆ. 'ಸಮಾಜಮುಖಿಯಾಗಿದ್ದ ಅಪ್ಪ ತೀರಿಕೊಂಡಾಗ ಅವರ ನೆನಪಿನಲ್ಲಿ ಸಾರ್ಥಕ ಕೆಲಸ ಮಾಡುವ ಯೋಚನೆಯೇ 2022ರಲ್ಲಿ 'ಕಟ್ಲೇರಿ ಬ್ಯಾಂಕ್' ಸ್ಥಾಪನೆಗೆ ಕಾರಣವಾಯಿತು. ಆರಂಭದಲ್ಲಿ ಒಂದಿಷ್ಟು ಸ್ಟೀಲ್ ಲೋಟಗಳನ್ನು ಖರೀದಿಸಿ, ಊರಿನ ಶಾಲೆ, ಕಾಲೇಜು, ಆಚೀಚೆ ಮನೆಗಳಲ್ಲಿ ಕಾರ್ಯಕ್ರಮಗಳು ನಡೆದಾಗ ಇದನ್ನೇ ಬಳಸುವಂತೆ ವಿನಂತಿಸಿದೆ. ಸಹೃದಯರು ಮೆಚ್ಚುಗೆ ವ್ಯಕ್ತಪಡಿಸಿದ್ದಲ್ಲದೇ, ಭಂಡಾರಕ್ಕೆ ಇನ್ನಷ್ಟು ಪಾತ್ರೆಗಳ ಹೊಳಪು ತುಂಬಿದರು. ಸಂಗ್ರಹಿಸಿಡಲು ಜಾಗದ ತಲೆಬಿಸಿಯಾದಾಗ, ಪಕ್ಕದ ಕಲ್ಲುರ್ಟಿ ಕಾಳಮ್ಮ ದೈವಸ್ಥಾನದವರು ತಮ್ಮ ಗೋದಾಮನ್ನು ಉಚಿತವಾಗಿ ನೀಡಿದರು' ಎನ್ನುತ್ತಾರೆ ಸಂಧ್ಯಾ.

11ನೇ ಪುಟಕ್ಕೆ...

ಉಪನ್ಯಾಸವೇ ಪ್ರೇರಣೆ

ಜೈನ್ ಪಿಯು ಕಾಲೇಜಿನಲ್ಲಿ ಇಕೊ ಕ್ಲಬ್ ವತಿಯಿಂದ ಹಮ್ಮಿಕೊಂಡಿದ್ದ ಪ್ಲಾಸ್ಟಿಕ್ ಮುಕ್ತ ಕ್ಯಾಂಪಸ್ ಉಪನ್ಯಾಸ ಕಾರ್ಯಕ್ರಮವು ಈ 'ಕಟ್ಲೇರಿ ಬ್ಯಾಂಕ್' ಸ್ಥಾಪನೆಗೆ ಮೂಲ ಪ್ರೇರಣೆ. ಬೆಂಗಳೂರಿನ ವೇದನ್ ಟ್ರಸ್ಟ್‌ನ ಸುಹಾಸಿನಿ ಅವರ ಮನತಟ್ಟಿದ ಮಾತುಗಳಿಂದ ಇವೆಲ್ಲ ಸಾಧ್ಯವಾಯಿತು ಎಂದು ಇದೇ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಧ್ಯಾ ಸ್ಮರಿಸಿಕೊಳ್ಳುತ್ತಾರೆ.

ಕಾಸು ಕೊಡುವ ಕಣ್ಣಾರೆ

ಸ್ವರೂಪ್ ಕೊಟ್ಟೂರು

ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ರಾಮದುರ್ಗದ ಅಜ್ಜಪ್ಪರ ಅಜ್ಜಣ್ಣ ಒತ್ತಾರೆ ಹೊಲದೆಡೆ ಹೊರಟಿದ್ದರು. ವಾರದ ಹಿಂದೆಯಷ್ಟೇ ಪೈರನ್ನೆಲ್ಲ ಮಾರಿದ್ದನ್ನು ನೋಡಿದ್ದೆ. ಹೀಗಾಗಿ 'ಈಗ್ಯಾಕೆ ಹೊಲಕ್ಕೆ?' ಅಂದಿದ್ದಕ್ಕೆ, 'ಹೊಲ ಕಾಯೋಕೆ' ಅಂದರು!. 'ಬೆಳೆನೇ ಇಲ್ಲ, ಇನ್ನೇನು ಕಾಯ್ತಿಯಾ..?' ಮರು ಪ್ರಶ್ನಿಸಿದೆ. 'ಅದೃಷ್ಟಕ್ಕೆ ಈ ವರ್ಷ ಜಗ್ಗಿ ಕಣ್ಣಾರೆ ಹುಟ್ಯಾವೆ. ಅವುಗಳ ಮೇಲೆ ಅವರಿವರ, ಕುರಿಮಂದಿ ಕಣ್ಣು ಬಿದ್ರೆ ಕತೆ ಮುಗಿತು. ಈ ಸಲ ಮಳೆ ಹೆಚ್ಚಾಗಿ ಕೈಗೆ ಬಂದ ಬೆಳೆ ಬ್ಯಾರೆ ಬಾಯಿಗೆ ಬರಲಿಲ್ಲ. ಇದ್ನಾದ್ರು ಕಾದ್ರೆ ಆ ಲಾಸ್ ತುಂಬ್ಕೊಂಡು ನಾಲ್ಕ್ ಕಾಸಾದ್ರು ಸಿಗುತ್ತೆ...' ಅಂದರು. ಇದೇ ವೇಳೆ ಅವರ ಹಿಂದೆಮುಂದೆ ಹೊರಟವರಿಗೆಲ್ಲ ವಿಚಾರಿಸಿದೆ. ಕೆಲವೊಂದಿಷ್ಟು ಜನ ಕಣ್ಣಾರೆ ಗಿಡಗಳ ಹುಡುಕಿಕೊಂಡು, ಮತ್ತೊಂದಿಷ್ಟು ಜನ ತಮ್ಮ ಹೊಲಗಳಲ್ಲಿಯ ಈ ಗಿಡಗಳ ಕಾವಲಿಗೆ ಲಗುಬಗೆಯಲ್ಲಿ ಹೊರಟಿದ್ದರು. ಒಟ್ಟಿನಲ್ಲಿ ಇಡೀ ಊರೆಂಬ ಊರೇ ಬ್ರಹ್ಮಕಾಲಕ್ಕೇ ಕಣ್ಣಾರೆ ಗಿಡಗಳ ಬೆನ್ನತ್ತಿ ಊರಿಗೆ ಬೆನ್ನು ಮಾಡಿತ್ತು.



ಕಣ್ಣಾರೆ ಬೀಜ ಮಾರಿದ್ರೆ ನಾಲ್ಕು ಕಾಸಾದ್ರೂ ಸಿಗುತ್ತೆ...

ಕಣ್ಣಾರೆ, ಇದು ಕಳೆ ಗಿಡ. ಗುಡ್ಡಗಾಡು, ಕಲ್ಲುಮಿಶ್ರಿತ ಜಮೀನಿನಲ್ಲಿ, ಹೊಲಗಳ ಬದುಗಳಲ್ಲಿ, ರಸ್ತೆ, ಕಾಲುದಾರಿಯಲ್ಲಿ ಹೆಚ್ಚಾಗಿ ಇರುತ್ತವೆ. ಇಲ್ಲೆಲ್ಲ ರೈತರು ಅದರಲ್ಲೂ ಈ ಗಿಡದ ಮಹತ್ವ ಗೊತ್ತಿದ್ದವರು ಇತರೆ ಕಳೆ ಗಿಡಗಳಂತೆ ಇದನ್ನು ಕಿತ್ತು ಬಿಸಾಡಲ್ಲ. ಬದಲಾಗಿ ಮುಖ್ಯ ಬೆಳೆಯಷ್ಟೇ ಜೋಪಾನವಾಗಿ ಕಾಪಾಡುತ್ತಾರೆ. ಭಾಗಶಃ ಮಘಾ ಮಳೆಗೆ ಹುಟ್ಟುವ ಈ ಸಸ್ಯ ಚಿತ್ತ ಮಳೆಗೆ ಕಾಯಿ ಬಿಡಲು ಆರಂಭಿಸಿ ವಿಶಾಖ ಮಳೆಯವರೆಗೂ ಹೇರಳವಾಗಿ ಕಾಯಿ ಬಿಡುತ್ತದೆ. ಈ ಕಾಯಿ ಕುರಿ, ಆಡುಗಳಿಗೆ ಪಂಚಪ್ರಾಣ. ಜನರಿಗೆ ಆರ್ಥಿಕವಾಗಿ ಲಾಭ. ಈ ಕಾರಣಕ್ಕೆ ಇದು ಬೆಳೆದಷ್ಟೂ ಜನರ ಮೊಗದಲ್ಲಿ 'ಕಳೆ' ದ್ವಿಗುಣವಾಗುತ್ತದೆ.

ಕಣ್ಣಾರೆ ಅಲೆಮಾರಿಗಳು..!

ಈ ದಿನಗಳಲ್ಲಿ ಸಣ್ಣಪುಟ್ಟ ಕೃಷಿಕರು, ವಿಶೇಷವಾಗಿ ಕೃಷಿ ಕೂಲಿ ಕಾರ್ಮಿಕರು ಕುಟುಂಬ ಸಮೇತ ಈ ಕಣ್ಣಾರೆ ಗಿಡಗಳನ್ನು ಅರಸುತ್ತಾ ತಮ್ಮ ಊರು, ಜಿಲ್ಲೆ, ಅಷ್ಟೇಕೆ ರಾಜ್ಯದ ಸೀಮೋಲ್ಲಂಘನೆಯನ್ನೂ ಮಾಡುತ್ತಾರೆ!. ಮುಂಗಾರಿನ ಕೃಷಿ ಕೆಲಸಗಳೆಲ್ಲ ಬಹುತೇಕ ಮುಗಿಯುತ್ತಿದ್ದಂತೆ ಈ ಕಣ್ಣಾರೆ ಗಿಡಗಳು ಹೆಚ್ಚಾಗಿ ಕಂಡುಬರುವ ಜಾಗಗಳನ್ನು ಹುಡುಕುತ್ತಾ ಹೋಗುತ್ತಾರೆ. 'ಕಣ್ಣಾರೆ ಕಂಡಿರಾ? ಕಂಡಿರಾ?' ಅಂಥ ಸಿಕ್ಕವರನ್ನು ಕೇಳುತ್ತಾರೆ. ಗಿಡ, ಕಾಯಿ ಗುರುತು ಹೇಳಿ ಅದನ್ನು ಪತ್ತೆ ಹಚ್ಚುತ್ತಾರೆ. ಕಾಯಿ ಬಲಿಯುತ್ತಿದ್ದಂತೆ ಇಡೀ ಪರಿವಾರದೊಂದಿಗೆ ಕಾಯಿ ಹರಿಯಲಿಕ್ಕೆ ವಲಸೆ ಹೊರಡುತ್ತಾರೆ. ಹೋದ ಕಡೆ ಸಿಗುವ ಗುಡಿ ಗುಂಡಾರಗಳಲ್ಲಿ ವಾಸ್ತವ್ಯ ಹೂಡುತ್ತಾರೆ. ಕಾಯಿ ಭರ್ತಿ ಸಿಕ್ಕ ಮೇಲೆ ಊರಿಗೆ ಮರಳುತ್ತಾರೆ. ಬೀಜಗಳನ್ನು ಬೇರ್ಪಡಿಸಿ, ಮಾರಿ ಮತ್ತೆ ಕಾಯಿ ಸಂಗ್ರಹಿಸಲು ಹೊರಟು ನಿಲ್ಲುತ್ತಾರೆ.

ಜಾನುವಾರು ಈ ಬೀಜಗಳನ್ನು ಪಸರಿಸುತ್ತವೆ. ಇಲ್ಲಿಯವರೆಗೆ ಇದು ಪ್ರಕೃತಿದತ್ತವಾಗಿ ಬೆಳೆದ ಜಾಗಗಳಿಂದಷ್ಟೆ ಸಂಗ್ರಹಿಸಲಾಗುತ್ತಿತ್ತು. ಆದರೆ ಕೈ ತುಂಬಾ ಕಾಸು ನೀಡಿ, ಕಷ್ಟ ನೀಗಿಸುತ್ತಿರುವ ಕಾರಣ ಇದನ್ನೇ ಮುಖ್ಯ, ಮಿಶ್ರ ಬೆಳೆಯಾಗಿ ಬೆಳೆಯುವ ಪ್ರಯತ್ನಗಳು ಅಲ್ಲಲ್ಲಿ ನಡೆಯುತ್ತಿವೆ. ಕೂಡ್ಲಿಗಿ ತಾಲ್ಲೂಕಿನ ಕುಮತಿಯ ಮುತ್ತಪ್ಪ, ದೇವರಹಟ್ಟಿ ಸರಸಮ್ಮ ಇದರಲ್ಲಿ ಯಶಸ್ವಿಯಾಗಿ ಒಳ್ಳೆಯ ಹಣ ಗಳಿಸುತ್ತಿದ್ದಾರೆ. ಹವಾಮಾನ ವೈಪರೀತ್ಯದಿಂದ ಕಂಗೆಟ್ಟಿರುವ ರೈತರು ಭವಿಷ್ಯದಲ್ಲಿ ಇದನ್ನೇ ಮುಖ್ಯ ಬೆಳೆಯಾಗಿ ಆಯ್ಕೆ ಮಾಡಿಕೊಂಡರೂ ಅಚ್ಚರಿ ಇಲ್ಲ.



ಹೆಸರು ಹಲವು..

ಕ್ಯಾಸಿಯಾ ಅಬ್ಸಸ್ ಫ್ಯಾಬೇಸಿ ಕುಟುಂಬಕ್ಕೆ, ತೊಗರಿ ಜಾತಿಗೆ ಸೇರಿದ ಇದಕ್ಕೆ ಒಂದೊಂದೆಡೆ ಒಂದೊಂದು ಹೆಸರು. ಕನ್ನಡದಲ್ಲಿ ಕಣ್ಣಾರೆ, ಕಣ್ಣಾರಿ, ಅಡವಿ ಹುರುಳಿ, ಕಣ್ಣಪಾಲ್, ಕಣ್ಣುಬೀಜ ಅಂತಲೂ, ಹಿಂದಿಯಲ್ಲಿ ಆಂಕ್ ಕೀ ಬೀಜ್ ಅಂತಲೂ, ಇದನ್ನು ಖರೀದಿಸುವ ಮಾರ್ವಾಡಿಗಳು ಚಾಸ್ಕೋ ಎಂತಲೂ ಕರೆಯುತ್ತಾರೆ.

ಬಿಸಿಲೇರಿದಂತೆ ಇದರ ಬೀಜ ಸಿಡಿಯುವ ಕಾರಣ ತಂಪು ಹೊತ್ತಿನಲ್ಲೇ ಕಾಯಿ ಹರಿಯಬೇಕು. ಹೀಗಾಗಿ ಬೆಳ್ಳಂಬೆಳಗ್ಗೆ ಗಿಡಗಳಿರುವ ಜಾಗದಲ್ಲಿರಬೇಕು. ನಿದ್ದೆ, ನೀರಡಿಕೆ, ಹಸಿವು ಲೆಕ್ಕಿಸದೇ ಗಿಡಗಳನ್ನು ಹುಡುಕುತ್ತಾ ಹತ್ತಾರು ಕಿಲೊಮೀಟರ್ ಅಲೆಯಬೇಕು. ಪೊದೆ, ಹುಲ್ಲು, ಕಲ್ಲುಗಳ ಮಧ್ಯೆ ಹೆಚ್ಚಾಗಿಯೇ ಈ ಗಿಡಗಳಿರುವ ಕಾರಣ ಕಾಡುಪ್ರಾಣಿಗಳು, ಹುಳ ಉಪ್ಪಡಿಗಳ ಭಯ ಬೇರೆ. ಜೊತೆಗೆ ಬಹುತೇಕ ಗಿಡಗಳು ಗಿಡ್ಡವಾಗಿ ಬೆಳೆಯುವ ಕಾರಣ ನಡು ಬಗ್ಗಿಸಿಯೇ ಹರಿಯಬೇಕು. ಕೈಯೆಲ್ಲ ಅಂಟು ಅಂಟು. ಬಿಸಿಲಿಗೆ ಒಣಗಿಸಿ, ಬಡಿದು ಸಿಪ್ಪೆ ಬೇರ್ಪಡಿಸಿ, ಗಾಳಿಗೆ ತೂರಿ, ಜರಡಿ ಹಿಡಿದು ಜಟ್ಟು ಕಾಳುಗಳನ್ನು ಸ್ವಚ್ಛ ಮಾಡಬೇಕು. ಇವೆಲ್ಲ ಪ್ರಕ್ರಿಯೆ ಪೂರ್ಣವಾಗುವಷ್ಟರಲ್ಲಿ 50 ಕೆ.ಜಿ ಚೀಲದ ಕಾಯಿಗೆ ಸಿಗೋದೇ 8-10 ಸೇರು ಬೀಜ.

12ನೇ ಪುಟಕ್ಕೆ...

ಔಷಧಿ ಗುಣಗಳ ಆಗರ..

ಇದು ಕಾಡುಜಾತಿಯ ಗಿಡ. ಹೆಚ್ಚಿನ ಮಟ್ಟದ ಬರ ಸಹಿಷ್ಣುತೆಯನ್ನು ಹೊಂದಿದ್ದು, ಸಮಶೀತೋಷ್ಣ ಮತ್ತು ಉಷ್ಣವಲಯದಲ್ಲಿ ಸ್ವಾಭಾವಿಕವಾಗಿ ಕಂಡುಬರುತ್ತದೆ. ಬೀಜದಲ್ಲಿ ಹೆಚ್ಚಿನ ಪ್ರೋಟೀನ್ ಅಂಶವಿದೆ. ಈ ಬೀಜಗಳನ್ನು ರಕ್ತದಲ್ಲಿಯ ಗ್ಲೂಕೋಸ್ ಮಟ್ಟ ಕಾಪಾಡಲಿಕ್ಕೆ, ಸತ್ತ ಚರ್ಮದ ಕೋಶ ತೆಗೆದು ಹಾಕಲು, ಚರ್ಮದ ಸೋಂಕಿಗೆ, ಗಾಯದ ಮೇಲಿನ ಊರಿಯೂತದ ಶಮನಕ್ಕೆ, ಜಾನುವಾರುಗಳಲ್ಲಿ ಅತಿಸಾರವನ್ನು ನಿವಾರಿಸಲು, ಯಕೃತ್ ಮತ್ತು ಮೂತ್ರಪಿಂಡದ ಕಾಯಿಲೆಗೆ, ಅಜೀರ್ಣಕ್ಕೆ, ಅಧಿಕ ರಕ್ತದ ಒತ್ತಡ ಸಮಸ್ಯೆಗೆ ಬಳಸಲಾಗುತ್ತದೆ. ಅಲ್ಲದೆ ಜಾನುವಾರುಗಳಿಗೆ ಉತ್ತಮ ಆಹಾರವೂ ಕೂಡ.

> **ಈ ಬೀಜವನ್ನು ಏಷ್ಯಾ ಮತ್ತು ಆಫ್ರಿಕಾದಲ್ಲಿ ಸಾಂಪ್ರದಾಯಿಕ ಔಷಧದಲ್ಲಿ ಬಳಸಲಾಗುತ್ತದೆ. ಇದು ಅಲಕ್ಷಿತ ಸಸ್ಯವಾಗಿದ್ದು, ಬಹುತೇಕರಿಗೆ ಇದರ ಮಹತ್ವ ತಿಳಿದಿಲ್ಲ. ಈ ಬೀಜಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇದೆ. ಹೀಗಾಗಿ ಇದನ್ನು ಬೆಳೆಯಲು, ಅಧ್ಯಯನಕ್ಕೆ ಉತ್ತೇಜನ ನೀಡಬೇಕು. ಮಾರುಕಟ್ಟೆ ತೆರೆದು, ನ್ಯಾಯಯುತ ಬೆಲೆಗೆ ಖರೀದಿಸುವ ಅಗತ್ಯವಿದೆ**
>
> **ಸಂತೋಷ್ ಕುಮಾರ್ ಎಂ.,** ಸಹಾಯಕ ಪ್ರಾಧ್ಯಾಪಕ, ಜೀವರಸಾಯನಶಾಸ್ತ್ರ, ದಾವಣಗೆರೆ ವಿವಿ

> **ನಮ್ಮಿಂದಲೇ ಸೇರಿಗೆ ₹450-500 ಕೊಟ್ಟು ಖರೀದಿಸುತ್ತಾರೆ. ಇನ್ನು ಅವರಿಗೆ ಎಷ್ಟು ಲಾಭ ಇರಬೇಡಾ..? ಕಷ್ಟ ಬೀಳುವುದು ನಾವು, ನಮಗಿಂತ ಹೆಚ್ಚು ಲಾಭ ತಿನ್ನೋದು ಮತ್ಯಾರೋ? ಸರ್ಕಾರ ನಮ್ಮಿಂದ ಈ ಬೀಜಗಳನ್ನು ನೇರವಾಗಿ ಖರೀದಿಸಬೇಕು. ಆಗ ನಾವು ಆರ್ಥಿಕವಾಗಿ ಮತ್ತಷ್ಟು ಸದೃಢರಾಗುತ್ತೇವೆ**
>
> **ಬಂಡಿ ಈರಣ್ಣ ರಾಮದುರ್ಗ,** ವಿಜಯನಗರ ಜಿಲ್ಲೆ



ಹೊಲದಾಗ ಈ ಭಾರಿ ಚಲೋ ಕಣ್ಣಾರೆ ಬೆಳೆದೈತಿ...

50ರ ಸಂಭ್ರಮದಲ್ಲಿ ಸಾಲಿಗ್ರಾಮ

ಮಕ್ಕಳ ಮೇಳ

ಸುವರ್ಣ ಸಂಭ್ರಮದಲ್ಲಿರುವ ಸಾಲಿಗ್ರಾಮ ಮಕ್ಕಳ ಮೇಳ ಪ್ರಾರಂಭಗೊಂಡಿದ್ದು ಶ್ರೀಧರ ಹಂದೆಯವರ ಮನೆಯಂಗಳದಲ್ಲಿ. ನೂರಾರು ಮಕ್ಕಳಿಗೆ ಯಕ್ಷಶಿಕ್ಷಣ ನೀಡಿರುವುದರ ಜೊತೆಗೆ ದೇಶವಿದೇಶಗಳಲ್ಲಿ ಪ್ರದರ್ಶನ ಕೊಟ್ಟ ಹೆಗ್ಗಳಿಕೆಯೂ ಈ ಮೇಳಕ್ಕಿದೆ.




ಮಕ್ಕಳ ಯಕ್ಷಗಾನದ ದೃಶ್ಯ

ನವೀನ್ ಕುಮಾರ್ ಜಿ.

ಅದು 1975ರ ಕಾಲಘಟ್ಟ. ಶಾಲಾ ವಾರ್ಷಿಕೋತ್ಸವಕ್ಕಾಗಿ ಮಕ್ಕಳಿಗೆ ಯಕ್ಷಗಾನ ಕಲಿಸಲು ತೆರಳುತ್ತಿದ್ದ ಉಡುಪಿ ಜಿಲ್ಲೆಯ ಕೋಟ ಪರಿಸರದ ಇಬ್ಬರು ಶಿಕ್ಷಕರ ಮನಸ್ಸಿನಲ್ಲಿ ಮೂಡಿದ್ದ ಮೇಳ ಕಟ್ಟುವ ಚಿಂತನೆ, ಇಂದು ಸಾಲಿಗ್ರಾಮ ಮಕ್ಕಳ ಮೇಳ ಎಂಬ ಹೆಸರಿನಲ್ಲಿ ಹೆಮ್ಮರವಾಗಿ ಬೆಳೆದು ನಿಂತಿದೆ. ಮೇಳ ಕಟ್ಟುವ ಚಿಂತನೆ ಮೂಡಿದ್ದು ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಕಾರ್ಕಡ ಶ್ರೀನಿವಾಸ ಉಡುಪ ಮತ್ತು ಎಚ್. ಶ್ರೀಧರ ಹಂದೆ ಅವರಲ್ಲಿ.



ಶ್ರೀಧರ ಹಂದೆ



ದಿ. ಕಾರ್ಕಡ ಶ್ರೀನಿವಾಸ ಉಡುಪ

ಇದಕ್ಕೆ ವೇದಿಕೆ ಸಿದ್ಧಗೊಂಡಿದ್ದು ಶ್ರೀಧರ ಹಂದೆ ಅವರ ನಿವಾಸ ಕೋಟದ ಪಟೇಲರ ಮನೆಯಲ್ಲಿ. ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗದ ರೀತಿಯಲ್ಲಿ ಬಿಡುವಿನ ವೇಳೆಯಲ್ಲಿ ಈ ಮೇಳದ ಕಾರ್ಯಚಟುವಟಿಕೆಗಳು ಗರಿಗೆದರಿದವು.

ಹೀಗೆ ಆರಂಭವಾದ ಸಾಲಿಗ್ರಾಮ ಮಕ್ಕಳ ಮೇಳವು ಈಗ 50ರ ಸಂಭ್ರಮದಲ್ಲಿದೆ. ಮೇಳದ ಸ್ಥಾಪಕರಲ್ಲೊಬ್ಬರಾದ ಕಾರ್ಕಡ ಶ್ರೀನಿವಾಸ ಉಡುಪ ಅವರು ಈಗ ಬದುಕಿಲ್ಲ. ಇನ್ನೊಬ್ಬ ಸ್ಥಾಪಕರಾದ ಶ್ರೀಧರ ಹಂದೆ ಅವರು ಇಳಿ ವಯಸ್ಸಿನಲ್ಲೂ ಮಕ್ಕಳ ನಾಟ್ಯಾಭ್ಯಾಸವನ್ನು ಆಸ್ವಾದಿಸುತ್ತಾರೆ. ಈಗ ಈ ಮೇಳ ಹಾಗೂ ನಾಟ್ಯ ತರಬೇತಿಯ ಜವಾಬ್ದಾರಿ ಶ್ರೀಧರ ಹಂದೆ ಅವರ ಮಗ ಎಚ್.ಸುಜಯೀಂದ್ರ ಹಂದೆ ನಿರ್ವಹಿಸುತ್ತಿದ್ದಾರೆ.

ಈ ಮೇಳದಲ್ಲಿ ಧೀಂಗಿಣ ಕಲಿತಿರುವ ನೂರಾರು ವಿದ್ಯಾರ್ಥಿಗಳು ಸಮಾಜದ ನಾನಾ ಸ್ತರಗಳಲ್ಲಿ ಉತ್ತಮ ಭವಿಷ್ಯವನ್ನು ಕಟ್ಟಿಕೊಂಡಿದ್ದಾರೆ.

ಶಿಕ್ಷಕರಿಬ್ಬರ ಕಲಾ ಕೂಸಾದ ಈ ಮೇಳವು ತನ್ನ ಪ್ರಥಮ ಪ್ರದರ್ಶನವನ್ನು ಮಂಗಳೂರಿನ ಪಿ.ವಿ.ಎಸ್.ನ



ಶ್ರೀಧರ ಹಂದೆ ಅವರ ಮನೆಯಂಗಳದಲ್ಲಿ ಮಕ್ಕಳ ನಾಟ್ಯಾಭ್ಯಾಸ

ಕಲಾಕುಂಜದಲ್ಲಿ ನೀಡಿತ್ತು. ದಕ್ಷಿಣ ರೋಟರಿಯ ಅಧ್ಯಕ್ಷರಾಗಿದ್ದ ಮಧುಸೂದನ ಡಿ.ಕುಶೆ ಅವರ ಸಹಕಾರದಲ್ಲಿ ಆ ಪ್ರದರ್ಶನ ನಡೆದಿತ್ತು. ಸ್ಥಾಪನೆಯಾಗಿ ಮೂರೇ ವರ್ಷದಲ್ಲಿ ಅಂದರೆ 1978ರಲ್ಲಿ ಅಮೆರಿಕದ ಮಕ್ಕಳ ಉತ್ಸವದಲ್ಲಿ ಪಾಲ್ಗೊಳ್ಳುವ ಭಾರತದ ಏಕೈಕ ತಂಡವಾಗಿ ಆಯ್ಕೆಯಾಗಿದ್ದು ಈ ಮೇಳದ ಹಿರಿಮೆ. ಈ ಮೂಲಕ ಮೊತ್ತ ಮೊದಲಿಗೆ ಸೀಮೋಲ್ಲಂಘನೆ ಮಾಡಿದ ಯಕ್ಷಗಾನ ತಂಡ ಎಂಬ ಹೆಗ್ಗಳಿಕೆಯೂ ಇದರದ್ದಾಗಿದೆ.

ಅಮೆರಿಕದ ಅಟ್ಲಾಂಟ, ನ್ಯೂಯಾರ್ಕ್, ವಾಷಿಂಗ್ಟನ್ ಮೊದಲಾದ ನಗರಗಳಲ್ಲೂ ಯಕ್ಷಗಾನದ ಕಂಪನ್ನು ಮಕ್ಕಳ ಮೇಳವು ಪಸರಿಸಿದೆ. 1985ರಲ್ಲಿ ಬಹರೇನ್‌ನಲ್ಲಿ, 1988ರಲ್ಲಿ ಇಂಗ್ಲೆಂಡ್‌ನ ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲೂ ಈ ಮಕ್ಕಳ ಮೇಳವು ಪಾಲ್ಗೊಂಡು ವಿದೇಶಗಳಲ್ಲಿ ನೆಲೆಸಿರುವ ಯಕ್ಷಪ್ರೇಮಿಗಳಿಗೆ ಮುದ ನೀಡಿದೆ.

ಯಕ್ಷಗಾನದ ಬಡಗುತಿಟ್ಟಿನ ಆರಾಡಿ, ಮಟಪಾಡಿ ತಿಟ್ಟುಗಳ ಶ್ರೀಮಂತ ಪರಂಪರೆಯ ಸಾಂಪ್ರದಾಯಿಕ



ಎಚ್. ಸುಜಯೀಂದ್ರ ಹಂದೆ

ಕುಣಿತ, ವೇಷಭೂಷಣದ ಅನನ್ಯತೆಯನ್ನು ಮೇಳವು ಇಂದಿಗೂ ಜತನದಿಂದ ಕಾಪಾಡಿಕೊಂಡು ಬಂದಿದೆ.

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ನಡೆದ ರಾಷ್ಟ್ರೀಯ ಮಕ್ಕಳ ಕಲೋತ್ಸವದಲ್ಲಿ ಸತತ ಮೂರು ಬಾರಿ ಭಾಗವಹಿಸಿದ್ದ ಕೀರ್ತಿಯೂ ಈ ಮೇಳಕ್ಕಿದೆ. ಮುಂಬೈ, ಗೋವಾ, ಚೆನ್ನೈ, ತಿರುವನಂತಪುರ ಹೀಗೆ ದೇಶದಾದ್ಯಂತ ಯಕ್ಷಗಾನದ ಕಂಪನ್ನು ಪಸರಿಸಿರುವ ಈ ಮೇಳವು ರಾಜ್ಯದ ವಿವಿಧೆಡೆಯೂ ಪ್ರದರ್ಶನ ನೀಡಿ ಭೇಷ್ ಎನಿಸಿಕೊಂಡಿದೆ.

'ವೀರ ವೃಷಸೇನ, ದ್ರುಪದ ಬಂಧನ, ಕೃಷ್ಣಾರ್ಜುನ, ಬಬ್ರುವಾಹನ ಮೊದಲಾದ ಪೌರಾಣಿಕ ಪ್ರಸಂಗಗಳನ್ನು ಸೀಮಿತ ಅವಧಿಯಲ್ಲಿ ಪ್ರದರ್ಶಿಸಿ, ಪ್ರೇಕ್ಷಕರನ್ನು ಯಕ್ಷಲೋಕಕ್ಕೆ ಕೊಂಡೊಯ್ಯುವ ಈ ಮೇಳದ ಕಲಾವಿದರನ್ನು ಮೇರು ಸಾಹಿತಿ ಕೆ.ಶಿವರಾಮ ಕಾರಂತರು ಸೇರಿದಂತೆ ಅನೇಕರು ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದರು.

ಈಗ ಮೇಳವನ್ನು ಮುನ್ನಡೆಸುತ್ತಿರುವ ಸುಜಯೀಂದ್ರ ಹಂದೆ ಅವರು ಭಾಗವತರಾಗಿ, ಯಕ್ಷಗಾನ ಪ್ರಸಂಗಕರ್ತರಾಗಿ ಯಕ್ಷಗಾನದ ಹಿಮ್ಮೇಳ, ಮುಮ್ಮೇಳದಲ್ಲಿ ಪಳಗಿದವರಾಗಿದ್ದಾರೆ. ಇದೇ ಮಕ್ಕಳ ಮೇಳದ ಮೂಲಕ ಯಕ್ಷಗಾನ ರಂಗಕ್ಕೆ ಪದಾರ್ಪಣೆ ಮಾಡಿರುವ ಅವರಿಗೆ ತಂದೆ ಶ್ರೀಧರ ಹಂದೆ ಅವರೇ ಮೊದಲ ಗುರುಗಳಾಗಿದ್ದಾರೆ. ಇದೀಗ 50 ರ ಸಂಭ್ರಮದಲ್ಲಿ ಹೊಸ ಹುರುಪಿನೊಂದಿಗೆ ಮಕ್ಕಳ ಮೇಳವು ರಂಗ ಪಯಣವನ್ನು ಮುನ್ನಡೆಸಿದೆ.

'ಮಕ್ಕಳ ಮನಮುಟ್ಟುವ ಪ್ರಸಂಗ ಆಯ್ಕೆ'

'ಒಂದು ದಿನದ ಸ್ಕೂಲ್ ಡೇಗಾಗಿ ಯಕ್ಷಗಾನ ಕಲಿಸುವುದಕ್ಕಿಂತ ಮೇಳ ಕಟ್ಟುವುದು ಲೇಸೆಂಬ ಕಲ್ಪನೆಯಲ್ಲಿ ರೂಪುಗೊಂಡಿರುವ ಮೇಳ ಇದು. ನಮ್ಮ ಊರಿನ ಆಸುಪಾಸಿನ ಮಕ್ಕಳಿಗೆ ತರಬೇತಿ ನೀಡಿ, ರಜಾ ದಿನಗಳಲ್ಲೇ ಯಕ್ಷಗಾನ ಪ್ರದರ್ಶನಗಳು ನಡೆಯುತ್ತಿತ್ತು. ಈಗ ಈ ಮೇಳವನ್ನು ನಾನೇ ಮುನ್ನಡೆಸುತ್ತಿದ್ದೇನೆ. ಈಗ 15 ಮಕ್ಕಳು ಮೇಳದಲ್ಲಿದ್ದಾರೆ' ಎಂದು ವಿವರಿಸುತ್ತಾರೆ ಸುಜಯೀಂದ್ರ ಹಂದೆ.

'ನಾಲ್ಕನೇ ತರಗತಿಯಿಂದ ಪಿಯುಸಿ ವರೆಗಿನ ಮಕ್ಕಳು ಮೇಳದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಪಿಯುಸಿ ನಂತರ ಮಕ್ಕಳ ಧ್ವನಿಯಲ್ಲಿ ಬದಲಾವಣೆ ಉಂಟಾಗುವುದರಿಂದ ಅವರನ್ನು ಮೇಳದಲ್ಲಿ ಬಳಸಿಕೊಳ್ಳುವುದಿಲ್ಲ. ನಮ್ಮ ಮೇಳದಲ್ಲಿ ಹುಡುಗರಷ್ಟೇ ಇದ್ದಾರೆ' ಎನ್ನುತ್ತಾರೆ ಅವರು.

'ಮಕ್ಕಳ ಮೇಳವಾಗಿರುವುದರಿಂದ ಮಕ್ಕಳ ಮನಸ್ಸಿಗೆ ಮುಟ್ಟುವ ಪ್ರಸಂಗಗಳನ್ನು ಆಯ್ದುಕೊಂಡು ಅದನ್ನು ಅವರ ಮಟ್ಟಕ್ಕೆ ಇಳಿಸಿ, ಯಕ್ಷಗಾನ ಪ್ರಸಂಗ ಸಿದ್ಧಪಡಿಸಬೇಕಾಗುತ್ತದೆ' ಎಂದು ಪ್ರಸಂಗ ರೂಪುಗೊಳ್ಳುವ ಬಗೆಯನ್ನೂ ಅವರು ವಿವರಿಸಿದರು.

ಪ್ಲಾಸ್ಟಿಕ್ ರೋಗಕ್ಕೆ...



ಕಟ್ಲೇರಿ ಬ್ಯಾಂಕ್‌ನ ಲೋಟಗಳು

10ನೇ ಪುಟದಿಂದ...

ಈಗ 'ಕಲ್ಪವೃಕ್ಷ' ನೆರಳಿನಲ್ಲಿ 600 ಊಟದ ತಟ್ಟೆಗಳು, 500 ತಿಂಡಿ ಪ್ಲೇಟ್‌ಗಳು, 400 ದೊಡ್ಡ ಲೋಟಗಳು, 250 ಸಣ್ಣ ಲೋಟಗಳು, 500 ಚಮಚಗಳು, ಐಸ್‌ಕ್ರೀಮ್, ಜಾಮೂನು ಹಾಕಿ ತಿನ್ನಬಹುದಾದ 150ಕ್ಕೂ ಹೆಚ್ಚು ಸ್ಟೀಲ್ ಬೌಲ್‌ಗಳು ಇವೆ. ಬಿಡುವಾದಾಗ ಶಾಲೆ, ಕಾಲೇಜುಗಳಿಗೆ ಹೋಗಿ, ಏಕಬಳಕೆ ಪ್ಲಾಸ್ಟಿಕ್ ತ್ಯಜಿಸುವಂತೆ, ಉಚಿತವಾಗಿ ಸಿಗುವ ಮರುಬಳಕೆಯ ಸ್ಟೀಲ್ ಸಾಮಗ್ರಿ ಬಳಸುವಂತೆ ತಿಳಿ ಹೇಳಿದ್ದಕ್ಕೆ ಹಲವರು ಸ್ಪಂದಿಸಿದ್ದಾರೆ. 'ಝೀರೊ ವೇಸ್ಟ್ ಲೈಫ್‌ಸ್ಟೈಲ್' ವಾಟ್ಸ್‌ಆ್ಯಪ್ ಗ್ರೂಪ್‌ನ ಸದಸ್ಯರು, ಅನೇಕ ಪರಿಸರ ಕಾಳಜಿಯ ಒಡನಾಡಿಗಳು ಹೀಗೆ ಹಲವಾರು ಕೈಗಳು ಕಟ್ಲೆರಿ ಬ್ಯಾಂಕ್ ಅನ್ನು ಮುನ್ನಡೆಸುತ್ತಿವೆ ಎನ್ನುವಾಗ ಹಲವರ ಹೆಸರು ಅವರ ಮಾತಿನಲ್ಲಿ ಹಾದು ಹೋಯಿತು.

ಶೂನ್ಯ ತ್ಯಾಜ್ಯ ಮಾದರಿ ಕಾರ್ಯಕ್ರಮ ನಡೆಸುವ ಕನಸಿನಿಂದ ಇತ್ತೀಚೆಗೆ ಪಾಣೆಯೂರಿನವರೊಬ್ಬರು ಕಟ್ಲೆರಿ ಬ್ಯಾಂಕ್‌ನ 400 ಸ್ಟೀಲ್ ಲೋಟಗಳು ಕೊಂಡೊಯ್ಯಲು 40 ಕಿಲೊಮೀಟರ್ ಪ್ರಯಾಣಿಸಿದರು!

ಮೂಡುಬಿದಿರೆ ಪುರಸಭೆಯವರು ಕಟ್ಲೆರಿ ಬ್ಯಾಂಕ್‌ಗೆ ಬೆನ್ನೆಲುಬಾಗಿ ನಿಂತಿರುವುದು ವಿಶೇಷ. ಪುರಸಭೆ ಕಚೇರಿ ಎದುರಿನಲ್ಲೇ ಕಟ್ಲೆರಿ ಬ್ಯಾಂಕ್ ಪ್ರಚುರಗೊಳಿಸುವ ಬ್ಯಾನರ್ ನಿತ್ಯ ಭೇಟಿ ನೀಡುವವರ ಕಣ್ಸೆಳೆಯುತ್ತದೆ.

ಊರವರು, ಪುರಸಭೆಯವರು, ಪೌರ ಕಾರ್ಮಿಕರ ಸಹಕಾರವನ್ನು ಸ್ಮರಿಸಿಕೊಳ್ಳುವ ಸಂಧ್ಯಾ, ಒಂದು ಲೆಕ್ಕಾಚಾರದ ಪ್ರಕಾರ ಎರಡು ವರ್ಷಗಳಲ್ಲಿ ಸುಮಾರು 30 ಸಾವಿರ ಏಕಬಳಕೆಯ ಪ್ಲಾಸ್ಟಿಕ್ ಲೋಟ, ತಟ್ಟೆ ಭೂಮಿಯ ಒಡಲು ಮಲಿನಗೊಳಿಸುವುದನ್ನು ತಡೆದ ಸಾರ್ಥಕ ಭಾವವಿದೆ ಎನ್ನುತ್ತಾರೆ.

ಪಾತ್ರೆಗಳನ್ನು ಒಯ್ದವರು ಅದನ್ನು ತೊಳೆದು, ಒಣಗಿಸಿ ತಂದು ಕೊಡಬೇಕೆಂಬುದು 'ಕಲ್ಪವೃಕ್ಷ' ಕಟ್ಲೆರಿ ಬ್ಯಾಂಕ್‌ನ ನಿಯಮ. ಬಳಕೆದಾರರು ಇದನ್ನು ಖುಷಿಯಿಂದ ಸ್ವೀಕರಿಸಿದ್ದಾರೆ. 'ಕಲ್ಪವೃಕ್ಷ'ದಿಂದ ಪ್ರೇರಿತರಾದವರು ತಾವೂ ಕಟ್ಲೆರಿ ಬ್ಯಾಂಕ್ ಪ್ರಾರಂಭಿಸುವ ಹುಮ್ಮಸ್ಸಿನಲ್ಲಿದ್ದಾರೆ.

ಭೂಮಿಯನ್ನು ಇಂಚಿಂಚಾಗಿ ನುಂಗುವ ಏಕಬಳಕೆಯ ಪ್ಲಾಸ್ಟಿಕ್ ತಿರಸ್ಕರಿಸುವ ಕಿಚ್ಚು ಹೊತ್ತಿದೆ. ಅಲ್ಲಲ್ಲಿ ಪರಿವರ್ತನೆಯ ಗಾಳಿ ಹರಡಿದೆ. ಮೂಡುಬಿದಿರೆಯ ಗೋಪಾಲಕೃಷ್ಣ ದೇವಾಲಯದಲ್ಲಿ ಪ್ಲಾಸ್ಟಿಕ್ ಚೀಲಗಳಿಗೆ ಬದಲಾಗಿ ರವಿಕೆ ಕಣದ ಚೀಲ ತಯಾರಿಸಿ ಅದರಲ್ಲಿ ಪ್ರಸಾದ ಹಾಕಿ ಕೊಡುವ ಕ್ರಮ ಜಾರಿಗೆ ಬಂದಿದೆ. ಕಟೀಲು ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿಯ ಆರು ಮೇಳಗಳಲ್ಲಿ ಈ ವರ್ಷದ ತಿರುಗಾಟದಲ್ಲಿ ಕಲಾವಿದರು ಪ್ಲಾಸ್ಟಿಕ್ ನೀರಿನ ಬಾಟಲಿ ಬಳಸುವುದನ್ನು ನಿಯಂತ್ರಿಸಲು ನಿರ್ಧಾರವಾಗಿದೆ. ಇದಕ್ಕೆ ಪೂರಕವಾಗಿ ದಾನಿಯೊಬ್ಬರು ಕಲಾವಿದರಿಗೆ ಸ್ಟೀಲ್ ಫ್ಲಾಸ್ಕ್‌ಗಳನ್ನು ಒದಗಿಸಿದ್ದಾರೆ. ಇಂತಹ ಬೆಳವಣಿಗೆಗಳು ಆಶಾಭಾವ ಮೂಡಿಸಿವೆ.

'ನಾವು ಪರಿಸರಕ್ಕೆ ಪೂರಕವಾದ ಏನಾದರೂ ರಚನಾತ್ಮಕ ಕೆಲಸ ಮಾಡಬೇಕು ಎನ್ನುವ ಹಂಬಲವಿದೆ. ಆದರೆ ಏಕಾಂಗಿ ಏನು ಮಾಡಲು ಸಾಧ್ಯ' ಎಂದು ಕೇಳುವವರಿಗೆ ಸಂಧ್ಯಾ ಮಾದರಿಯಾಗಿದ್ದಾರೆ.



ಸರ್ವಾಧಿಕಾರಿಯ ದಟ್ಟ ವಿಡಂಬನೆ

ಭಂಗೀಹುಳ

ರಂಗಭೂಮಿ

ಕಿರಣ ಭಟ್, ಹೊನ್ನಾವರ

ಒಂದರ ದೇಹದೊಳಗೆ ಇನ್ನೊಂದು ಸೇರಿಕೊಂಡು ಅದು ಬೇರೆಯದೇ ಆಗಿಬಿಡುವ ಪ್ರಕ್ರಿಯೆ ನಮಗೇನೂ ಹೊಸತಲ್ಲ. ಪುರಾಣಗಳಿಂದ ಮೊದಲುಗೊಂಡು ಜಾನಪದ ಕತೆಗಳವರೆಗೂ ಇಂಥವುಗಳನ್ನು ನೋಡುತ್ತಲೇ ಬಂದಿದ್ದೇವೆ. ಕನ್ನಡದ ನಾಟಕಗಳಲ್ಲೂ ಇಂಥವು ಅಲ್ಲಲ್ಲಿ ಕಂಡುಬಂದಿದ್ದುಂಟು. ನಾಟಕವೆಂದರೇ ರೂಪಾಂತರವಾಗುವ ಕ್ರಿಯೆ. ಇಂಥದೇ ಒಂದು ಎಳೆಯನ್ನು ಹಿಡಿದುಕೊಂಡು ಕಟ್ಟಿದ ನಾಟಕ 'ಅಂಗವಿರದ ದೇಹದಲ್ಲಿ ಭಂಗೀಹುಳ'. ವ್ಯತ್ಯಾಸವೆಂದರೆ ಇಲ್ಲಿ ದೇಹದ ರೂಪ ಬದಲಾಗುವುದಿಲ್ಲ, ಬದಲಿಗೆ ಭಂಗೀಹುಳ ತಾನು ಹೊಕ್ಕ ದೇಹದ ಗುಣ ಲಕ್ಷಣಗಳನ್ನೇ ಬದಲಾಯಿಸಿಬಿಡುತ್ತದೆ. ಕೆ.ಟಿ.ಗಟ್ಟಿಯವರ ರೇಡಿಯೊ ನಾಟಕ 'ಮೃಗ' ವನ್ನು ಆಧಾರವಾಗಿಟ್ಟುಕೊಂಡು ನಿರ್ದೇಶಕ ಸುರೇಶ ಆನಗಳ್ಳಿ ರಂಗಕ್ಕೆ ಅಳವಡಿಸಿದ್ದಾರೆ. ಇದು ಬೆಂಗಳೂರಿನ 'ಅನೇಕ' ತಂಡದ ಪ್ರಸ್ತುತಿ.

ನಾಟಕ ಪ್ರಾರಂಭವಾಗುವುದು ರೈಲ್ವೆಯ ಸಿಗ್ನಲ್‌ಮ್ಯಾನ್ ಪ್ರವೇಶದೊಂದಿಗೆ. ರೈಲಿಗೆ ಹಸಿರು ನಿಶಾನೆ ತೋರಿಸುತ್ತ, ಕಾಲಿನಿಂದ ಅದೇನನ್ನೋ ಮೆಟ್ಟುತ್ತಿದ್ದಾನೆ, ಕಾಟ ಕೊಡುತ್ತಿರುವ ಅದೇನನ್ನೋ ಸಾಯಿಸುವಂತೆ. ಆತನ ಹಿಂದೆಯೇ ಪ್ರವೇಶಿಸುವ ಸೂಟುಧಾರಿಗಳಿಬ್ಬರು ರಂಗ ಸಜ್ಜಿಕೆಯ ಚೌಕಟ್ಟುಗಳಲ್ಲಿ ಅದೇನನ್ನೋ ಗೀಚುತ್ತಿದ್ದಾರೆ. ಹೀಗೆ ಒಂದಿಷ್ಟು ಅಸಂಗತ ಕ್ರಿಯೆಗಳೊಂದಿಗೆ ಪ್ರಾರಂಭವಾಗುವ ನಾಟಕ, ಜೀವರಸಾಯನಶಾಸ್ತ್ರದ ಪ್ರೊಫೆಸರ್ ಹಿಡಿದುಕೊಂಡು ಬರುವ ಹಗ್ಗದ ಎಳೆಯೊಂದಿಗೆ ರೂಪ ಪಡೆಯುತ್ತ ಹೋಗುತ್ತದೆ. ಇದೇ ನಾಟಕವನ್ನು ಪ್ರವೇಶಿಸಲು ಪ್ರೇಕ್ಷಕರಿಗೆ ಸಿಗುವ ಎಳೆಯೂ ಕೂಡ.

ಆತ ಹಿಡಿದ ಹಗ್ಗದ ಇನ್ನೊಂದು ತುದಿಗೆ ಪ್ರೊಫೆಸರ್‌ಗೆ ಲ್ಯಾಬ್‌ನಲ್ಲಿ ಸಿಕ್ಕ ನಿಗೂಢ ಪ್ರಾಣಿಯಿದೆ. ಆದರೆ ಅದು ಕಣ್ಣಿಗೆ ಗೋಚರಿಸುತ್ತಿಲ್ಲ. ರಂಗದ ಇನ್ನೊಂದು ತುದಿಗೆ ಮನುಷ್ಯನೊಬ್ಬ ಮಲಗಿದ್ದಾನೆ. ಹರಕು ಬಟ್ಟೆಯ ಬಗ್ಗಿದ ದೇಹದ ಹೆಸರೇ ಇಲ್ಲದವ ಆತ. ಅದೆಲ್ಲೋ ಬಿದ್ದ ಅವನನ್ನು ಆಸ್ಪತ್ರೆಗೆ ಸೇರಿಸಿಕೊಂಡು ಆತನ ಅಂಗಾಂಗವನ್ನೆಲ್ಲ ಕದ್ದುಬಿಟ್ಟಿದ್ದಾರೆ. ಹೃದಯ, ಕಿಡ್ನಿ, ಲಿವರ್, ಶ್ವಾಸಕೋಶ ಯಾವುದೂ ಈಗ ಈತನೊಳಗಿಲ್ಲ. ಅವನದು 'ಅಂಗವಿರದ ದೇಹ'. ಆತನ ದೇಹದೊಳಕ್ಕೆ ತಾನು ಎಳೆದು ತಂದ 'ಭಂಗೀಹುಳ'ವನ್ನು ಸೇರಿಸಿಬಿಡುತ್ತಾನೆ ಪ್ರೊಫೆಸರ್. ಹಗ್ಗ ಹಿಡಿದು ಬರುವ ಪೋಲೀಸರು, ಗಾರ್ಡುಗಳು, ಮಠಾಧೀಶರು, ಗನ್‌ಮ್ಯಾನ್‌ಗಳು ಆ ಮನುಷ್ಯನ ಖಾಲಿ ದೇಹವನ್ನು ಹೊಕ್ಕುಬಿಡುತ್ತಾರೆ. ಥಟ್ಟನೆ ಬದಲಾಗಿಬಿಡುತ್ತಾನೆ ಆತ. ಪ್ರೊಫೆಸರ್ ಆತನಿಗೆ 'ವಿಶ್ವಭೂಷಣ ಚಕ್ರವರ್ತಿ' ಅಂತ ನಾಮಕರಣವನ್ನೂ ಮಾಡಿಬಿಡುತ್ತಾನೆ. ಅಲ್ಲಿಂದಾಚೆಗೆ ನಡೆಯುವುದೇ ಈ ಚಕ್ರವರ್ತಿಯ ಆಟ.

> ಕೆ.ಟಿ.ಗಟ್ಟಿಯವರ ರೇಡಿಯೊ ನಾಟಕ 'ಮೃಗ' ವನ್ನು 'ಅಂಗವಿರದ ದೇಹದಲ್ಲಿ ಭಂಗೀಹುಳ' ನಾಟಕವಾಗಿ ಬೆಂಗಳೂರಿನ 'ಅನೇಕ' ತಂಡ ರಂಗದ ಮೇಲೆ ತಂದಿದೆ.

ಖಾಕಿ ಕಾವಿ ಕಾಸಿನ ಬಲದಿಂದ ಭೂಮಿಯನ್ನೆಲ್ಲ ತನ್ನದಾಗಿಸಿಕೊಳ್ಳುತ್ತ, ಜನರನ್ನ ಒಕ್ಕಲೆಬ್ಬಿಸುತ್ತ, ಯುರೇನಿಯಂಗಿಂತಲೂ ಅಪಾಯಕಾರಿಯಾದ 'ಎ.ಸಿ.ಡಿ' ಯ ಉತ್ಪನನಕ್ಕೂ ಆತ ಮುಂದಾಗುತ್ತಾನೆ. ಸರ್ವಾಧಿಕಾರಿಯಾಗುತ್ತಾನೆ. ಆತನ ನಡೆಯನ್ನು ವಿರೋಧಿಸಿದ ಚಳವಳಿಗಾರರನ್ನು ಮಟ್ಟ ಹಾಕುತ್ತಾನೆ. ಚಳವಳಿಯ ಮುಂಚೂಣಿಯಲ್ಲಿದ್ದ ಯುವಜೋಡಿಯೊಂದನ್ನು ಮುಗಿಸಿಬಿಡುತ್ತಾನೆ. ಪ್ರೊಫೆಸರ್‌ನ ಹೆಂಡತಿಗೂ ಹಣದ ಆಮಿಷ ತೋರಿಸಿ ತನ್ನ ಕಡೆಗೆ ಸೆಳೆದುಕೊಂಡುಬಿಡುತ್ತಾನೆ. ಭಸ್ಮಾಸುರನಂತೆ ಬೆಳೆಯುತ್ತಾನೆ. ಪರಿಸ್ಥಿತಿ ಕೈಮೀರಿ ಹೋಗುತ್ತಿರುವುದನ್ನು ಅರಿತ ಪ್ರೊಫೆಸರ್ ಔಷಧಿಯೊಂದನ್ನು ಕಂಡು ಹಿಡಿದು ವೈನ್‌ನಲ್ಲಿ ಬೆರೆಸಿ ಅದನ್ನು ಆತನಿಗೆ ಕುಡಿಸಿದರೂ ಅದು ಏನೇನೂ ಪರಿಣಾಮ ಬೀರದೆ ಕೊನೆಗೆ ಆ ಸರ್ವಾಧಿಕಾರಿ ಹೊಸ ಹುಟ್ಟು ಕೊಟ್ಟ ಪ್ರೊಫೆಸರ್‌ನನ್ನೇ ತನ್ನೊಳಕ್ಕೆ ಸೆಳೆದುಕೊಂಡುಬಿಡುವುದರೊಂದಿಗೆ ನಾಟಕದ ಅಂತ್ಯವಾಗುತ್ತದೆ.

ಭಂಗೀಹುಳವನ್ನೂ ಖಾಲಿ ದೇಹವನ್ನೂ ರೂಪಕವಾಗಿಟ್ಟುಕೊಂಡು ವ್ಯವಸ್ಥೆಯ ಅವನತಿಯ ಕತೆ ಹೇಳಹೊರಡುತ್ತಾರೆ ಸುರೇಶ ಆನಗಳ್ಳಿ. ನಾವೇ ಹುಟ್ಟುಹಾಕಿದ ವ್ಯವಸ್ಥೆಯೊಂದು ನಮ್ಮನ್ನೇ ಸರ್ವನಾಶಪಡಿಸುವ ಕತೆಯಿದು, ಪೊಳ್ಳು ಪೊಳ್ಳಾದ ನಾಯಕರು ದೇಹದೊಳಗೆ ಅಧಿಕಾರವೆಂಬ ಭಂಗೀಹುಳವನ್ನು ತುಂಬಿ ನಮ್ಮನ್ನು ನಾವೇ ದುರಂತಕ್ಕೆ ತಳ್ಳಿಕೊಳ್ಳುವ ಕತೆ. ಇದೆಲ್ಲೋ ನಮ್ಮದೇ ಕತೆ ಎನಿಸುವಷ್ಟು ನಾಟಕವನ್ನು ಸಮಕಾಲೀನಗೊಳಿಸುತ್ತಾರೆ. ಸರ್ವಾಧಿಕಾರಿಯ ಪ್ರವೇಶಕ್ಕೂ ಮೊದಲು ಬಂದು 'ಭೋ ಪರಾಕ್' ಹಾಕುವ ಮಾಧ್ಯಮಗಳ ಕುರಿತಂತೆ ಆತ ಆಡುವ 'ಕೋಳಿಗಳಿಗೊಂದಿಷ್ಟು ಕಾಳು ಹಾಕು' ಎನ್ನುವ ಮಾತಾಗಲೀ, ಬಂದೂಕು, ಮೂಸಿ ನೋಡುವ ನಾಯಿಗಳನ್ನು ಹಿಡಿದುಕೊಂಡು ಬಂದು ಜನಸಾಮಾನ್ಯರನ್ನು ಸುತ್ತುವರಿದು ಬೆದರಿಸುವ ಸರ್ವಾಧಿಕಾರಿಯ ಚೇಲಾಗಳು ಒದರುವ 'ಐ.ಡಿ. ಕಾರ್ಡ್ ತೋರಿಸಿ' ಎನ್ನುವ ಕೂಗಾಗಲೀ 'ಇನ್ನು ಮುಂದೆ ಎಲ್ಲ ತರಕಾರಿ ತಿನ್ನಿ' ಎಂದು ಹೊರಡಿಸುವ ಫರ್ಮಾನು...

'ಮಾಮು, ಕಾಕು' ಪಾತ್ರಗಳು ಎಲ್ಲ ಘಟನೆಗಳಿಗೂ ಸಾಕ್ಷಿಯಾಗುತ್ತ, ಪ್ರತಿಕ್ರಿಯಿಸುತ್ತವೆ. ಕೆಲವು ಬಾರಿ ಅಸಂಗತ ಎನಿಸಿದರೂ ವರ್ತಮಾನಕ್ಕೆ ಮುಖಾಮುಖಿಯಾಗುತ್ತ ರಂಗದ ಮೇಲೆ ನಡೆಯುವ ಘಟನೆಗಳನ್ನು ಪೋಣಿಸುತ್ತ ಹೋಗುತ್ತವೆ. ಜನತೆಯ ನೋವುಗಳಿಗೆ ಧ್ವನಿಯಾಗುತ್ತವೆ.

ಸರಳ ರಂಗ ಸಜ್ಜಿಕೆಯಲ್ಲಿ, ಮೂರು ಬೃಹತ್ ಚೌಕಟ್ಟುಗಳನ್ನಿಟ್ಟುಕೊಂಡು ನಾಟಕ ಕಟ್ಟುತ್ತಾರೆ ನಿರ್ದೇಶಕರು. ಪರಿಕರಗಳು ಕೂಡ ಅಷ್ಟೇ ಸರಳವಾದವು. ಹಾಗಾಗಿ ನಾಟಕ ನಿಲ್ಲಬೇಕಾದದ್ದು ಸಾಹಿತ್ಯ, ಅಭಿನಯ, ರಂಗ ವಿನ್ಯಾಸದ ಮೇಲೆಯೇ. ಕಲಾವಿದರು ಚೆನ್ನಾಗಿಯೇ ಅಭಿನಯಿಸಿದ್ದಾರೆ. ಮುಖ್ಯ ಪಾತ್ರ ಇನ್ನಷ್ಟು 'ಫೈನ್ ಟ್ಯೂನ್' ಆಗಬೇಕಿತ್ತು. ಈ ಮಧ್ಯೆಯೇ ಒಂದೆರಡು ದೃಶ್ಯಗಳನ್ನು ನಿರ್ದೇಶಕರು ತುಂಬ ಜಾಣತನದಿಂದ ಕಟ್ಟಿದ್ದಾರೆ. ಪರಿಸರ ಹೋರಾಟಗಾರ ಅಜಯ್‌ನ ಪ್ರೇಯಸಿಯನ್ನು ಸರ್ವಾಧಿಕಾರಿಯ ಚೇಲಾಗಳು ಎತ್ತುಕೊಂಡು ಹೋಗಿ, ಹಿಂಸೆಗೊಳಪಡಿಸಿ, ಬಾಯಿ ಮುಚ್ಚಿಸುವ ದೃಶ್ಯದಲ್ಲಿ ಹುಡುಗಿಯ ಪ್ರತಿಕೃತಿಯನ್ನು ಉಪಯೋಗಿಸಿಕೊಂಡು, ತೀವ್ರ ಪರಿಣಾಮಕಾರಿಯಾದ ದೃಶ್ಯ ಸಂಯೋಜನೆ ಮಾಡಿದ್ದಾರೆ. ಯಾವುದೇ ಚಮತ್ಕಾರಗಳಿಲ್ಲದೇ ಸರಳವಾದ ಬೆಳಕಿನಲ್ಲೇ ದೃಶ್ಯಗಳನ್ನು ಚಂದಗಾಣಿಸಿದ್ದು ಇಷ್ಟವಾಗುತ್ತದೆ. ಸಂಗೀತವೂ ಆಲಂಕಾರಿಕವಾಗದೇ ನಾಟಕದ ನಿರ್ಮಿತಿಗೆ ಪೂರಕವಾಗಿದೆ. ಅದರಲ್ಲೂ ಹುಳದ ಝೇಂಕಾರದ ಧ್ವನಿಯನ್ನು ವಿಸ್ತರಿಸುತ್ತ, ನಾಟಕೀಯವಾಗಿಸಿ ಬಳಸಿಕೊಳಡಿದ್ದು, ಕಿವಿಗೆ ಮೊರೆಯುವಂತೆ ಮತ್ತೆ ಮತ್ತೆ ಅನುರಣಿಸುವ ಸಾಂಕೇತಿಕ ಭಾಷಣಗಳು ತುಂಬ ಪ್ರಭಾವ ಬೀರುತ್ತವೆ. ಪ್ರಸ್ತುತ ಸಂದರ್ಭದಲ್ಲಿ ನಮ್ಮ ಸುತ್ತಲಿನ ಘಟನೆ ಗಳನ್ನು ಗಮನಿಸುತ್ತ ಸದಾ ಎಚ್ಚರದಿಂದಿರುವಂತೆ ನಾಟಕ ಪ್ರೇರೇಪಿಸುತ್ತದೆ.

ಮುನ್ನೋಟ 05-01-2025 ರಿಂದ 11-01-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಶಕ್ತಿಯನ್ನು ನಿಮಗಾಗಿ ಬಳಸಿಕೊಳ್ಳಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಸ್ಥಿರಾಸ್ತಿ ವ್ಯವಹಾರದಲ್ಲಿ ಸಾಕಷ್ಟು ಪ್ರಗತಿ ಇರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಕಾಲ. ಹೊಟ್ಟೆ ಸಂಬಂಧಿತ ಸಮಸ್ಯೆಗಳು ಕಾಣಿಸಬಹುದು. ಸಂಗಾತಿಯು ನಿಮ್ಮೆಲ್ಲ ಕೆಲಸಗಳಿಗೆ ಬೆಂಗಾವಲಾಗಿ ನಿಲ್ಲುವರು. ವಿದೇಶದಲ್ಲಿರುವವರಿಗೆ ಕೆಲಸ ಕಾರ್ಯಗಳಲ್ಲಿ ಸ್ವಲ್ಪ ಹಿನ್ನಡೆಯಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಗೌರವಾನ್ವಿತವಾಗಿ ನಡೆದುಕೊಳ್ಳುವಿರಿ. ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು. ಬಂಧುಗಳು ನಿಮಗೆ ಸಹಕಾರ ನೀಡುವುದಿಲ್ಲ. ಆಸ್ತಿ ವ್ಯವಹಾರಗಳಲ್ಲಿ ಸ್ವಲ್ಪ ತಕರಾರುಗಳು ಬರಬಹುದು. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರ ವಹಿಸಿ. ಹಿರಿಯರ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಬಹುದು. ವೃತ್ತಿಯಲ್ಲಿ ಸ್ವಲ್ಪ ಕಸಿವಿಸಿಯಾದರೂ, ತೊಂದರೆ ಇರುವುದಿಲ್ಲ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ದೇಹ ಸೌಂದರ್ಯದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಆದಾಯವು ಕಡಿಮೆ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಫಲಿತಾಂಶವಿರುತ್ತದೆ. ಪಾಲುದಾರಿಕೆಯ ವ್ಯವಹಾರಗಳಲ್ಲಿ ಪ್ರಗತಿ ಇರುವುದಿಲ್ಲ. ನಿಮ್ಮ ಸಂಗಾತಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಕೃಷಿ ಉತ್ಪನ್ನಗಳನ್ನು ಮಾರುವವರಿಗೆ ಲಾಭವಿರುತ್ತದೆ. ವಿದೇಶದಲ್ಲಿ ಉದ್ಯೋಗ ಅರಸುತ್ತಿರುವವರಿಗೆ ಉದ್ಯೋಗ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಸರ್ಕಾರದಿಂದ ಬರಬೇಕಾಗಿದ್ದ ಬಾಕಿ ಹಣ ಈಗ ಬರುತ್ತದೆ. ಸರ್ಕಾರಿ ಸಂಸ್ಥೆಗಳ ಜೊತೆಗೆ ಭೂಮಿಯ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ವಿವಿಧ ರೀತಿಯಲ್ಲಿ ಅಭಿವೃದ್ಧಿ ಅವಕಾಶ ದೊರೆಯುತ್ತದೆ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯನ್ನು ಕಾಣಬಹುದು. ರಾಜಕಾರಣಿಗಳಿಗೆ ಅನಿರೀಕ್ಷಿತ ಅಪವಾದದ ಸಾಧ್ಯತೆ ಇದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಕೆಲಸಗಳಲ್ಲಿ ನೀವು ಮುಳುಗಿರುವಿರಿ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ಬಂಧುಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲು ಹೋಗುವುದಿಲ್ಲ. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚು ಅನುಕೂಲವಿದೆ. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ಬದಲಾವಣೆಯನ್ನು ಕಾಣಬಹುದು. ವಿದೇಶಿ ವ್ಯವಹಾರ ಮಾಡುವವರಿಗೆ ವ್ಯವಹಾರ ವೃದ್ಧಿಸುತ್ತದೆ. ವೃತ್ತಿಯಲ್ಲಿದ್ದ ಗೊಂದಲಗಳು ಬಗೆಹರಿಯುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಧಾರ್ಮಿಕತೆಯನ್ನು ಬಳಸಿಕೊಂಡು ನಿಮ್ಮ ವ್ಯವಹಾರ ಅಭಿವೃದ್ಧಿ ಮಾಡಲು ಯತ್ನಿಸುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳ ನಡುವೆ ವಿಶ್ವಾಸವನ್ನು ಬೆಳೆಸಿಕೊಳ್ಳಲು ಪ್ರಯತ್ನಪಡುವಿರಿ. ಸ್ಥಿರಾಸ್ತಿ ಪಡೆಯಲು ಹಣ ಒಟ್ಟು ಮಾಡುವಿರಿ. ತೈಲ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ. ಸರ್ಕಾರಿ ಕೆಲಸಗಳಲ್ಲಿ ನಿಧಾನ ಗತಿಯನ್ನು ಕಾಣಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಅತಿಯಾದ ಆತ್ಮಗೌರವ ತುಂಬಿರುತ್ತದೆ. ಆದಾಯವು ಸ್ವಲ್ಪ ಚೇತರಿಕೆಯನ್ನು ಕಾಣುತ್ತದೆ. ಕೃಷಿಯಲ್ಲಿ ಅಭಿವೃದ್ಧಿ ಇರುತ್ತದೆ. ಕೃಷಿಭೂಮಿಯನ್ನು ಕೊಳ್ಳಲು ಪ್ರಯತ್ನ ಪಡುವಿರಿ. ಹಳೆಯ ಚರ್ಮರೋಗಗಳು ಮರುಕಳಿಸುವ ಸಾಧ್ಯತೆಗಳಿವೆ. ಸಂಗಾತಿಗೆ ಉದ್ಯೋಗ ದೊರೆಯುವ ಸಾಧ್ಯತೆಯಿದೆ. ವೃತ್ತಿಯಲ್ಲಿ ಸ್ವಲ್ಪ ಏಳಿಗೆ ಇರುತ್ತದೆ. ಧಾರ್ಮಿಕ ಕಾರ್ಯಗಳನ್ನು ಮಾಡುತ್ತಿರುವವರಿಗೆ ಸಂಪಾದನೆ ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆತ್ಮವಿಶ್ವಾಸವನ್ನು ವೃದ್ಧಿ ಮಾಡಿಕೊಳ್ಳುವಿರಿ. ಆದಾಯದ ಒಳಹರಿವು ಸ್ವಲ್ಪ ಸರಿದಾರಿಗೆ ಬರುತ್ತದೆ. ಬಂಧುಗಳ ವಿಶ್ವಾಸವು ಕಡಿಮೆಯಾಗಬಹುದು. ಹಿರಿಯರ ಸಹಕಾರದಿಂದ ಕೃಷಿಯಲ್ಲಿ ಆದಾಯ ಹೆಚ್ಚುತ್ತದೆ. ಉದ್ಯೋಗದಲ್ಲಿ ಸಾಮಾನ್ಯ ಪ್ರಗತಿ ಇರುತ್ತದೆ. ಸರ್ಕಾರಿ ಕೆಲಸ, ಕಾರ್ಯಗಳಲ್ಲಿ ಅಡೆತಡೆಗಳನ್ನು ಕಾಣಬಹುದು. ಹಿರಿಯರ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಹಿರಿಯರ ಜೊತೆ ಆಲೋಚನೆ ಮಾಡುವುದು ಒಳ್ಳೆಯದು. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಸ್ವಪ್ರಯತ್ನಗಳಿಂದ ಆದಾಯ ವೃದ್ಧಿ ಮಾಡಿಕೊಳ್ಳಬಹುದು. ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಧಾರ್ಮಿಕ ಮುಖಂಡರುಗಳಿಗೆ ಗೌರವ ದೊರೆಯುತ್ತದೆ. ಬುದ್ಧಿವಂತಿಕೆಯಿಂದ ಹಿತಶತ್ರುಗಳ ಕಾಟವನ್ನು ಪರಿಹಾರ ಮಾಡಿಕೊಳ್ಳುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ತಾಳ್ಮೆಯಿಂದ ಇರುವುದನ್ನು ಕಲಿಯುವಿರಿ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಶ್ರಮದಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳುವಿರಿ. ಬಂಧುಗಳ ವಿರೋಧದ ನಡುವೆಯೂ ಹಿಡಿದ ಕೆಲಸವನ್ನು ಸಾಧಿಸುವಿರಿ. ಕೃಷಿಯಲ್ಲಿ ಅಭಿವೃದ್ಧಿಯನ್ನು ಕಾಣುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ. ವ್ಯತ್ಯಾಸವಾಗಿದ್ದ ಆರೋಗ್ಯವು ಈಗ ಸುಧಾರಿಸುತ್ತದೆ. ಸಂಗಾತಿಯಿಂದ ಸಹಕಾರ ನಿರೀಕ್ಷೆ ಮಾಡಬಹುದು.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿರಿಯರ ಜ್ಞಾನಕ್ಕೆ ಬೆಲೆ ಸಿಗುತ್ತದೆ. ನಿಮ್ಮ ಚಟುವಟಿಕೆಗಳಿಗೆ ಸಹೋದರರಿಂದ ಅಡ್ಡಿಯಾಗಬಹುದು. ಭೂಮಾಪನ ಮಾಡುವವರ ಆದಾಯ ಹೆಚ್ಚುತ್ತದೆ. ಸ್ಥಿರಾಸ್ತಿಯನ್ನು ಕೊಳ್ಳುವ ಬಗ್ಗೆ ಈಗ ಆಲೋಚನೆಮಾಡಬಹುದು. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಂಡು ವೃತ್ತಿಯಲ್ಲಿ ಮೇಲ್ದರ್ಜೆಗೆ ಏರಬಹುದು. ಹರಿತವಾದ ವಸ್ತುಗಳನ್ನು ಬಳಸುವಾಗ ಎಚ್ಚರದಿಂದ ಬಳಸಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ದ್ವಂದ್ವ ನಿರ್ಧಾರಗಳು ನಿಮಗೆ ಮುಜುಗರವನ್ನು ತರಬಹುದು. ಕೃಷಿಯಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಹರಿತವಾದ ಮಾತಿನಿಂದ ಕೆಲವು ಅವಕಾಶಗಳನ್ನು ಕಳೆದುಕೊಳ್ಳುವಿರಿ. ಆದಾಯವು ಸಾಮಾನ್ಯವಾಗಿರುತ್ತದೆ. ಭೂಮಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಸರ್ಕಾರಿ ಸಾಲಗಳು ಬಹಳ ಭಾರವಾಗಬಹುದು. ಧರ್ಮ ಕಾರ್ಯಗಳಿಂದ ಹಣ ಗಳಿಸಬಹುದು.

ಪದಬಂಧ 2873



ಮೇಲಿನಿಂದ ಕೆಳಕ್ಕೆ

1. ಕವಿನುಡಿಯಾದ ಕರ್ನಾಟಕ ಜಲಪಾತ ವೈಭವ 5
2. ಕನಸು ಪಡೆವ ನಿಜರೂಪ 3
3. ಬರಹಗಾರನಿಗೆ ಪತ್ರಿಕೆಯಲ್ಲಿ ಸಿಗುವ ಸ್ಥಳ 3
4. ಲಟ್ಟಣಿಗೆ ಮತ್ತು ಕತ್ತಿನ ಪಟ್ಟಿ ಹಿಡಿದು ಮಾಡುವ ಜಗಳ 4
9. ಬದುಕಲು ಬೀಡು ಬಿಟ್ಟ ಸ್ಥಳ 4
10. ಕಾಡನ್ನು ಕಾಪಾಡುವ ರಕ್ಷಕ 5
12. ಮನಸ್ಸಿನ ಹೀಚುತನ ಸ್ಫೋಟ ಗೊಂಡಾಗ ತೋರುವ ಕೋಪ 4
14. ಪುರದಲ್ಲಿ ದಾಸ ವರೇಣ್ಯ 4
16. ಕರುಣಾ ಹಸ್ತವನ್ನು ಚಾಚುವವ 4
19. ಕಿಂಕಿಣಿಯ ಸದ್ದಿನೊಂದಿಗೆ ನರ್ತನ 5
21. ಚಿತ್ರನಟ ಮತ್ತು ಚಿತ್ರಕಾರ ಇಬ್ಬರೂ ಕಲೆಯನ್ನು ಆಶ್ರಯಿಸಿದವರು 4
24. ಒಳ್ಳೆಯ ನಾಲ್ಕು ಮೊಳದ ಅಂದಾಜು 3
25. ವಾರ್ತೆಗಳನ್ನು ಜನರಿಗೆ ಮುಟ್ಟಿಸುವ ನಿಯತಕಾಲಿಕ 3

ಎಡದಿಂದ ಬಲಕ್ಕೆ

1. ಜೋಗುಳದಿಂದ ಶುರುವಾಗುವ ಜಾಗರೂಕತೆ 3
3. ಚಲದಲ್ಲಿ ಕೊನೆಗೊಂಡ ಸೆರಗಿನ ಅಂಚು 3
5. ತಾರಾ ಪ್ರಪಂಚಕ್ಕೊಂದು ಪರ್ಯಾಯ 5
6. 'ಟಾಕಿ'ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರ 3
7. ಸಿಕ್ಕಿ ಉಳಿಯುವಂತೆ ಮಾಡು 3
8. ಅಧಿಕಾರದ ಪಟ್ಟ ಪಡೆದ ನಗರ ಹಿಂದುಮುಂದಾಗಿದೆ 3
9. ಇದು ಕಲ್ಪನೆಯಲ್ಲ, ಕನಸಲ್ಲ, ನಿಜರೂಪ 3
11. ಚಿಗುರೊಡೆದ ಚಿಕ್ಕ ರೆಂಬೆ 3
13. ಶತ್ರುವಿನ ಸರ್ವನಾಶ 4
15. ಮದವಿಲ್ಲದೆ ಹರಿವ ಬೆಚ್ಚಗಿನ ನದಿ 3
17. ಕುಲರಹಿತ ಪಾಂಡವನೇ ಇವ? 3
18. ಶಿವಪೂಜೆಯಲ್ಲಿ ಬಿಟ್ಟು ಬರಬಹುದಾದ ಲಿಂಗಪೆಟ್ಟಿಗೆ 4
20. ಅಪರೂಪವಾದ ರಾಮನಾಮ ಜಪ 3
22. ಸತ್ಯವನ್ನು ಒಪ್ಪುವುದು ಕಷ್ಟವಾದರೆ ಕಿವಿಗೆ ಹೀಗನಿಸುತ್ತದೆ 3
23. ಯಶೋಧೆಯ ತೆರದಿ ಮಗುವನ್ನಾಡಿಸು 3
25. ತೆಲುಗಿನಲ್ಲಿ ಆಡಿದ ಮಾತು 3
26. ಶಂಭುವಿನ ಸತಿಗೆ ಒಪ್ಪುವ ಹೆಸರು 3
27. ಕೇವಲ ಮನಸ್ಸಿನಿಂದ ಹುಟ್ಟಿದ ಮಗಳು 5
28. ರಾಜ ನಡೆಸುವ ಕಾರುಬಾರು 3
29. ನವೆಯಾದಾಗ ಇದು ಉಂಟಾಗುತ್ತದೆ 3

ಪದಬಂಧ ಉತ್ತರ -2872

ಮೇಲಿಂದ ಕೆಳಕ್ಕೆ

1.ಅನುಕಂಪ 2.ಕರಪತ್ರ 3.ಆನಂದಮಯ 4.ವಚನಭಾರತ 6.ಕರಡುಪ್ರತಿ 9.ವಿಚಿತ್ರ 11.ಆಟ 12.ಮಿಶ್ರಸ್ವಭಾವ 13.ಕೂಡಲಸಂಗಮ 14.ಸತಿ 15.ವಸಿಷ್ಠ 16.ಜಾತವೇದಸ 18.ಅಸಮಾನ 19.ಕಮಲೇಶ

ಎಡದಿಂದ ಬಲಕ್ಕೆ

1.ಅಡಕ 3.ಆಶಾಭಾವ 5.ಚರಕ 7.ಪದಚ್ಛೇದ 8.ಪವಿತ್ರ 10.ಮಧುಮಾಸಾ 11.ಆಲಯ 12.ಮಿತ್ರಕೂಟ 14.ಸತ್ಯವತಿ 16.ಜಾಗೃತಿ 17.ಲಕ್ಷ್ಮೀಕಾಂತ 18. ಅಷ್ಟಕ 20.ವೇದವ್ಯಾಸ 21.ವಜ್ರಾಂಗ 22.ಮನೋಲ್ಲಾಸ 23.ನವಾಂಶ


ಗಡಿನಾಡಿನಲ್ಲಿ ಕನ್ನಡ ಕಟ್ಟಿದ ಶ್ರೀಕೃಷ್ಣ ಭಟ್

ಧನಂಜಯ ಕುಂಬ್ಳೆ

ಕಾಸರಗೋಡು ಕನ್ನಡ ಚಳವಳಿಗೆ ಎರಡು ಧಾರೆಗಳು. ಒಂದು ಭಾಷಾವಾರು ಪ್ರಾಂತ್ಯ ರಚನೆಯ ಸಂದರ್ಭದಲ್ಲಿ ಕೇರಳದ ಪಾಲಾದ ಕಾಸರಗೋಡನ್ನು ಮರಳಿ ತಾಯಿನಾಡು ಕರ್ನಾಟಕದ ಭಾಗವಾಗಿಸಬೇಕೆಂಬ ಹೋರಾಟ. ಇನ್ನೊಂದು ಕಾಸರಗೋಡಿನಲ್ಲಿ ಕನ್ನಡ ನಾಡು ನುಡಿ ಸಂಸ್ಕೃತಿಯ ನೆಲೆಗಳನ್ನು ಗಟ್ಟಿಗೊಳಿಸುವ ಕನ್ನಡ ಸಂವರ್ಧನೆಯ ನೆಲೆ. ಮೊದಲ ಧಾರೆಯಲ್ಲಿ ಕಳ್ಳಿಗೆ ಮಹಾಬಲ ಭಂಡಾರಿ, ಕಯ್ಯಾರ ಕಿಂಞಣ್ಣ ರೈ, ಯು.ಪಿ ಕುಣಿಕುಳ್ಳಾಯ ಮೊದಲಾದವರು ಕ್ರಿಯಾಶೀಲರಾದರೆ, ಎರಡನೆಯ ಕನ್ನಡ ಸಂವರ್ಧನೆಯ ಧಾರೆಯಲ್ಲಿ ಸದ್ದಿಲ್ಲದೇ ದುಡಿದ ಕಾಸರಗೋಡು ಸರ್ಕಾರಿ ಕಾಲೇಜಿನ ಪ್ರೊ. ಬಿ.ಕೆ ತಿಮ್ಮಪ್ಪ, ಪ್ರೊ.ಸುಬ್ರಾಯ ಭಟ್ ಅವರ ಮುಂದುವರಿಕೆಯಾಗಿ ಕಾಸರಗೋಡಲ್ಲಿ ಕನ್ನಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ವಿದ್ವಾಂಸರು ಪ್ರೊ.ಪಿ.ಶ್ರೀಕೃಷ್ಣ ಭಟ್.

'ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ' ಎಂದು ವಿಷಾದದಿಂದ ಹಾಡಿದ ಕಯ್ಯಾರರು ಬದುಕಿನುದ್ದಕ್ಕೂ ತಮ್ಮ ನೇತೃತ್ವದಲ್ಲಿ ಕನ್ನಡದ ಹೋರಾಟದ ಕಾವನ್ನು ಉಳಿಸಿಕೊಂಡರಾದರೂ ಮಹಾಜನ ವರದಿಯು ಕೇಂದ್ರದಲ್ಲಿ ಧೂಳು ತಿನ್ನುತ್ತಾ ಕೂತಾಗ ಕಾಸರಗೋಡು ಕರ್ನಾಟಕದ ಭಾಗವಾಗುವ ಎಲ್ಲ ಭರವಸೆಗಳು ಮಂಕಾದವು. ಆದರೆ ಶ್ರೀಕೃಷ್ಣ ಭಟ್ಟರು ಮತ್ತು ಕಾಸರಗೋಡಿನ ಕನ್ನಡ ವಿಭಾಗ ಶೈಕ್ಷಣಿಕವಾಗಿ ಕನ್ನಡವನ್ನು ಈ ಪ್ರದೇಶದಲ್ಲಿ ಜೀವಂತವಾಗಿಡುವ ಪ್ರಯತ್ನವನ್ನು ಮಾಡುತ್ತಾ ಬಂದಿತು.

ಕಾಸರಗೋಡು ಸರ್ಕಾರಿ ಕಾಲೇಜು ಅಲ್ಲಿನ ಕನ್ನಡಿಗರ ಉನ್ನತ ಶಿಕ್ಷಣದ ಕನಸಿಗೆ ನೀರೆರೆದು ಪೋಷಿಸಿದ ಸಂಸ್ಥೆ. ಕೇರಳ ಸರ್ಕಾರದ ಮಲಯಾಳೀಕರಣದ ಆಕ್ರಮಣವನ್ನು ಧೈರ್ಯವಾಗಿ ಪ್ರತಿಭಟಿಸಿ ಭಾಷಾ ಅಲ್ಪಸಂಖ್ಯಾತರ ನಿಯಮದಡಿ ಕನ್ನಡದ ರಕ್ಷಣೆಗೆ ಯಾವತ್ತೂ ಮುಂಚೂಣಿಯಲ್ಲಿರುವುದು ಇಲ್ಲಿನ ಕನ್ನಡ ವಿದ್ಯಾರ್ಥಿಗಳೇ. ಕೆ.ವಿ ತಿರುಮಲೇಶ್, ಎಂ. ವ್ಯಾಸ, ಯು. ಮಹೇಶ್ವರಿ, ವೇಣುಗೋಪಾಲ ಕಾಸರಗೋಡು, ವರದರಾಜ ಚಂದ್ರಗಿರಿ ಮೊದಲಾದ ಕನ್ನಡದ ಅನೇಕ ಬರಹಗಾರರನ್ನು ರೂಪಿಸಿದ ಸಂಸ್ಥೆಯಿದು. 1970ರಲ್ಲಿ ಇಲ್ಲಿಗೆ ಉಪನ್ಯಾಸಕರಾಗಿ ಬಂದ ಶ್ರೀಕೃಷ್ಣ ಭಟ್ಟರು ಒಳ್ಳೆಯ ಅಧ್ಯಾಪಕರಾಗಿ ವಿದ್ಯಾರ್ಥಿಗಳ ವ್ಯಾಕರಣ, ಭಾಷಾಶುದ್ಧಿಗೆ ವಿಶೇಷ ಗಮನಕೊಟ್ಟರು. ಸುಬ್ರಾಯ ಭಟ್ ಮತ್ತು ಬಿ.ಕೆ.ತಿಮ್ಮಪ್ಪರ ನಿವೃತ್ತಿಯ ನಂತರ ವಿಭಾಗದ ಅಧ್ಯಕ್ಷರಾಗಿ ವಿವಿಧ ಯೋಜನೆಗಳ ಮೂಲಕ ಕನ್ನಡದ ಕೆಲಸವನ್ನು ನಿಷ್ಠೆಯಿಂದ ಮಾಡಿದರು. ಸರ್ಕಾರಿ ಕಾಲೇಜಿನ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ಸಂಶೋಧನ ಕೇಂದ್ರವಾಗಿ ಕಾರ್ಯಪ್ರವೃತ್ತಗೊಳಿಸಿದ್ದು, ಕನ್ನಡ ಬಳಗವನ್ನು ಕಟ್ಟಿ ಅದರಡಿಯಲ್ಲಿ ಯುಜಿಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಮೊದಲಾದವುಗಳ ಸಹಕಾರದಿಂದ ನಿರಂತರ ಕನ್ನಡದ ಚಟುವಟಿಕೆಗಳನ್ನು ನಡೆಸಿದ್ದು, ಕನ್ನಡ ವಿದ್ಯಾರ್ಥಿ ಸಂಘಟನೆ ಸ್ನೇಹರಂಗ, ವಿದ್ಯಾರ್ಥಿ ಪತ್ರಿಕೆ 'ಕನ್ನಡ ಧ್ವನಿ'ಗಳ ಹುಟ್ಟು ಮತ್ತು ಬೆಳವಣಿಗೆಗೆ ಪ್ರೋತ್ಸಾಹ, ಗೋವಿಂದ ಪೈ, ಮಾಸ್ತಿ, ಬೇಂದ್ರೆ, ಮುಳಿಯ ತಿಮ್ಮಪ್ಪಯ್ಯ ಮೊದಲಾದ ಹಲವು ಸಾಹಿತಿಗಳ ಜನ್ಮಶತಮಾನೋತ್ಸವ ಆಚರಣೆ ಹೀಗೆ ನಿತ್ಯ ಕಾರ್ಯಕ್ರಮಗಳನ್ನು ನಡೆಸುತ್ತಾ ಕನ್ನಡವನ್ನು ಗಡಿನಾಡಿನಲ್ಲಿ ಜೀವಂತವಾಗಿಟ್ಟವರು ಶ್ರೀಕೃಷ್ಣ ಭಟ್ ಮತ್ತು ವಿಭಾಗದ ಅಧ್ಯಾಪಕರು. ಇದರಿಂದಾಗಿ ಕನ್ನಡದ ಧೀಮಂತ ಸಾಹಿತಿಗಳು, ವಿದ್ವಾಂಸರು ಕಾಸರಗೋಡಿಗೆ ಬಂದರು. ತನ್ಮೂಲಕ ಅಖಿಲ ಕರ್ನಾಟಕ ವ್ಯಾಪ್ತಿಯಲ್ಲಿ ಕಾಸರಗೋಡಿನ ಕನ್ನಡ ಸ್ಥಿತಿಗತಿಯು ತಿಳಿಯುವಂತಾಯಿತು.



ಶ್ರೀಕೃಷ್ಣ ಭಟ್

ಕಾಸರಗೋಡು ಪಂಡಿತ ಪರಂಪರೆಗೆ ಹೆಸರಾದ ನಾಡು, ಆ ಪರಂಪರೆಯ ಮುಂದುವರಿದ ಕೊಂಡಿಯಾಗಿ ಬೆಳೆದು ನಿಂತವರು ಶ್ರೀಕೃಷ್ಣ ಭಟ್. ಧಾರವಾಡದ ಕರ್ನಾಟಕ ವಿವಿಯಲ್ಲಿ ಕನ್ನಡ ಎಂ.ಎ ಮಾಡುತ್ತಿದ್ದಾಗ ಆರ್.ಸಿ ಹಿರೇಮಠ, ಎಂ.ಎಸ್ ಸುಂಕಾಪುರ, ವೃಷಭೇಂದ್ರಸ್ವಾಮಿ, ಎಂ.ಎಂ. ಕಲ್ಬುರ್ಗಿಯವರಂತಹ ಹಿರಿಯರ ಮಾರ್ಗದರ್ಶನ ಬಳಿಕ, ಮೈಸೂರು ವಿವಿಯಲ್ಲಿ ಪಿಎಚ್.ಡಿ ಸಂಶೋಧನೆಯಲ್ಲಿ ತೊಡಗಿಕೊಂಡಾಗ ದೊರಕಿದ ಪ್ರೊ. ಮರಿಯಪ್ಪ ಭಟ್ಟ ಮತ್ತು ಹಾ.ಮಾ.ನಾಯಕರ ಮಾರ್ಗದರ್ಶನ ಹಳೆಗನ್ನಡ ಕಾವ್ಯ ಮತ್ತು ಶಾಸ್ತ್ರ ಸಾಹಿತ್ಯದ ಕಡೆಗೆ ಒಲವನ್ನು ಹೆಚ್ಚಿಸಿತು. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಶಾಸನಗಳು ಮತ್ತು ವೀರಗಲ್ಲುಗಳು' ಕೃತಿ, ಪಿಎಚ್.ಡಿ ಮಹಾಪ್ರಬಂಧ 'ಕನ್ನಡ ವ್ಯಾಕರಣದ ಮೇಲೆ ಸಂಸ್ಕೃತದ ಪ್ರಭಾವ', ಸಂಶೋಧನ ಲೇಖನಗಳ ಕೃತಿಗಳಾದ 'ಶಾಸ್ತ್ರ ಸಾಹಿತ್ಯ ವಿಹಾರ', 'ಕನ್ನಡ ಸಾಂಪ್ರದಾಯಿಕ ವ್ಯಾಕರಣಗಳು' ಮೊದಲಾದವು ಅವರ ಮುಖ್ಯ ಕೃತಿಗಳು. ಕಾಸರಗೋಡಿನ ಕನ್ನಡ ಹೋರಾಟಗಾರರಾದ ಕಳ್ಳಿಗೆ ಮಹಾಬಲ ಭಂಡಾರಿ, ಪ್ರೊ.ಪಿ. ಸುಬ್ರಾಯ ಭಟ್ಟರ ಬಗೆಗೆ ಅವರು ಬರೆದ ಕೃತಿಗಳಲ್ಲಿ ಕಾಸರಗೋಡಿನ ಕನ್ನಡದ ಕಥೆ-ವ್ಯಥೆ ಚಿತ್ರಣಗೊಂಡಿದೆ. ಡಿವಿಜಿ ದರ್ಶನ, ಚಂದ್ರಗಿರಿ, ಪೊಂಗದಿರು, ಗಡಿನಾಡ ದೀಪ ಮೊದಲಾದವು ಅವರ ಮಹತ್ವದ ಸಂಪಾದನ ಕೃತಿಗಳು.


ಕೇರಳ ಕನ್ನಡ ಪಠ್ಯಪುಸ್ತಕಗಳನ್ನು ರೂಪಿಸುವಲ್ಲಿ ಭಟ್ಟರ ಕೊಡುಗೆ ಸ್ಮರಣೀಯ. 1956ರ ವರೆಗೆ ಮದ್ರಾಸ್ ಸಂಸ್ಥಾನದಡಿ ಕನ್ನಡಕ್ಕೆ ನಿಶ್ಚಿತ ಪಠ್ಯಪುಸ್ತಕ ಎಂದಿರಲಿಲ್ಲ. ಖಾಸಗಿಯವರು ತಯಾರಿಸಿದ ಪಠ್ಯಗಳನ್ನು ಮದ್ರಾಸ್ ಸರ್ಕಾರ ಅಂಗೀಕರಿಸುತ್ತಿತ್ತು. 56ರ ಬಳಿಕ ಮೈಸೂರು ಸಂಸ್ಥಾನದ ಸಹಕಾರದೊಂದಿಗೆ ಎಚ್. ದೇವೀರಪ್ಪ ನೇತೃತ್ವದಲ್ಲಿ ತಯಾರಾದ ಕನ್ನಡ ಪಠ್ಯಗಳನ್ನು ಕಾಸರಗೋಡಿನಲ್ಲಿ ಓದಿಸಲಾಗುತ್ತಿತ್ತು. ಆದರೆ ಅದರಲ್ಲಿ ಸ್ಥಳೀಯ ಕನ್ನಡ ಪಂಡಿತರಿಗೆ ಅವಕಾಶವಿಲ್ಲ ಎಂಬ ಕೂಗು ಹೆಚ್ಚಾದಾಗ ಕೇರಳ ಸರ್ಕಾರ ನೇಮಿಸಿದ ಸುಬ್ರಾಯ ಭಟ್, ಖಂಡಿಗೆ ಶ್ಯಾಮ್ ಭಟ್, ವೆಂಕಟರಾಜ ಪುಣಿಂಚತ್ತಾಯ ಮೊದಲಾದವರ ತಂಡದ ಭಾಗವಾದ ಶ್ರೀಕೃಷ್ಣ ಭಟ್ಟರು 1987ರಿಂದ ಮುಂದೆ ನಿರಂತರ ಕೇರಳದ ಪಠ್ಯಪುಸ್ತಕಗಳ ತಯಾರಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪಠ್ಯಗಳ ಬಗೆಗಿನ ಟಿಪ್ಪಣಿ, ಭಾಷೆ, ವ್ಯಾಕರಣ ಶುದ್ಧಿ ಇತ್ಯಾದಿಗಳ ಬಗೆಗೆ ಅವರು ನೀಡಿರುವ ಪ್ರಾಮುಖ್ಯತೆ ಕರ್ನಾಟಕದ ಪಠ್ಯ ತಯಾರಿಗೂ ಮಾದರಿಯಾಗಬಲ್ಲದು.

ನಿವೃತ್ತಿಯ ನಂತರ ಕಣ್ಣೂರು ವಿವಿಯ ಭಾರತೀಯ ಭಾಷಾ ಅಧ್ಯಯನಾಂಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಕನ್ನಡ ಸೇವೆಗೆ ಪುತ್ತೂರಿನ ಶಂಕರ ಸಾಹಿತ್ಯ ಪ್ರಶಸ್ತಿ, ಮಣಿಪಾಲದ ರಾಷ್ಟ್ರಕವಿ ಎಂ.ಗೋವಿಂದ ಪೈ ಕೇಂದ್ರದ ಕೇಶವ ಪ್ರಶಸ್ತಿ, ಬೆಂಗಳೂರಿನ ಬುದ್ಧ ಬಸವ ಗಾಂಧಿ ಟ್ರಸ್ಟಿನ ಶಾಸ್ತ್ರ ಸಾಧಕ ಸನ್ಮಾನ, ಸೇಡಿಯಾಪು ಪ್ರಶಸ್ತಿ, ಕಾಸರಗೋಡು ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಗಳು ಸಂದಿವೆ.

ಗಡಿನಾಡಿನಲ್ಲಿ ಬೇರುಬಿಟ್ಟು ಕನ್ನಡ ವೃಕ್ಷಕ್ಕೆ ಶ್ರದ್ಧೆಯಿಂದ ನೀರೆರೆದು ಪೋಷಿಸಿದ ಗುರು, ಕನ್ನಡ ಶಾಸ್ತ್ರ ಸಾಹಿತ್ಯ ಸಂಶೋಧನೆಯ ಹೆಗ್ಗುರುತು, ಕೇರಳದ ಕನ್ನಡ ಪಠ್ಯಕ್ಕೆ ಗೌರವ ತಂದುಕೊಟ್ಟ ತಜ್ಞ, ಎಲ್ಲಕ್ಕಿಂತ ಮಿಗಿಲಾಗಿ ಇಂದು ಕರ್ನಾಟಕದ ಉದ್ದಗಲಕ್ಕೂ ಹೆಸರು ಮಾಡಿದ ಅನೇಕ ಕನ್ನಡ ಶಿಕ್ಷಕರನ್ನು ರೂಪಿಸಿದ ಪ್ರಾಧ್ಯಾಪಕ ಪ್ರೊ. ಪಿ ಶ್ರೀಕೃಷ್ಣ ಭಟ್ಟರಿಗೆ ಇಂದು (ಜನವರಿ 5) ಕಾಸರಗೋಡು ಸಮೀಪದ ನೀರ್ಚಾಲ್ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಅಭಿನಂದನ ಸಮಾರಂಭ ನಡೆಯುತ್ತಿದೆ. 'ಶ್ರೀಪಥ' ಎಂಬ ಅಭಿನಂದನ ಗ್ರಂಥ ಹಾಗೂ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡಿದ ವಿದ್ಯಾರ್ಥಿಗಳ ಸಂಶೋಧನೆಯ ಸಾರವನ್ನು ಹೊಂದಿರುವ 'ಅರಿವಿನ ನೆಲೆ ಹುಡುಕಿ' ಬೃಹತ್ ಸಂಪುಟವನ್ನು ವಿದ್ಯಾರ್ಥಿಗಳು ಸಮರ್ಪಿಸುತಿದ್ದಾರೆ.

ಮೊದಲ ಓದು

ಮುದ್ದಣನ ಸಮಗ್ರ ಪರಿಚಯ



ಮುದ್ದಣ ಕೃತಿ ಕರಜನ
ಸಂ: ಎ.ವಿ.ನಾವಡ
ಪ್ರ:ಶೋಧನ ಪ್ರಕಾಶನ
ಸಂ:9449839988
ಪು: 640 ₹1000


ಕನ್ನಡ ಸಾಹಿತ್ಯ ಜಗತ್ತಿಗೆ ಮುದ್ದಣ ಕವಿಯ ಕೊಡುಗೆ ಅಪಾರ. ಭಿನ್ನ ಕಾವ್ಯನಾಮದ ಮೂಲಕ ತನ್ನ ಕೃತಿಗಳನ್ನು ಪ್ರಕಟಿಸುತ್ತಿದ್ದ ನಂದಳಿಕೆ ಲಕ್ಷ್ಮಿನಾರಾಯಣಯ್ಯ ಅವರ ಬದುಕು, ಕೃತಿ, ಕಾವ್ಯ ಜಗತ್ತನ್ನು ಸಮಗ್ರವಾಗಿ ಕಟ್ಟಿಕೊಡುವ ಕೃತಿ 'ಮುದ್ದಣ ಕೃತಿ ಕರಜನ'. ಹನ್ನೊಂದು ಅಧ್ಯಾಯಗಳಿದ್ದು, ಮುದ್ದಣ ಕವಿ ಯಾರು? ಆತನ ಮೂಲವೆಲ್ಲಿ ಎಂಬಿತ್ಯಾದಿ ವಿವರಗಳನ್ನು ಮೊದಲ ಅಧ್ಯಾಯದಲ್ಲಿ ಪ್ರೊ.ಎಸ್.ವಿ.ಪರಮೇಶ್ವರ ಭಟ್ಟರು ದಾಖಲಿಸಿದ್ದಾರೆ.

'ಕನ್ನಡ ಸಾಹಿತ್ಯದಲ್ಲಿ ಮುದ್ದಣನ ಪ್ರತ್ಯೇಕತೆ-ವಿಶಿಷ್ಟತೆ-ಹೊಸದಾರಿ ಏನೆಂಬುದನ್ನು ಕನ್ನಡ ಸಾಹಿತ್ಯಜ್ಞರು ಬಲ್ಲರು. ಅವನ ಕೃತಿಗಳು ಪಠ್ಯವಾಗಿ ಕೂಡ ಜನಪ್ರಿಯತೆಯನ್ನು ಗಳಿಸಿವೆ. ಆತನ ಎಲ್ಲ ಕೃತಿಗಳನ್ನು ಪೂರಕ ವಿಷಯಗಳೊಡನೆ ಪ್ರತ್ಯೇಕ ಪ್ರಸ್ತಾವನೆಗಳ ಸಹಿತವಾಗಿ ಸಂಪಾದಿಸಿ ಸಂಪುಟವಾಗಿಸಿ ಸಾಹಿತ್ಯಲೋಕಕ್ಕೆ ಪ್ರೊ.ನಾವಡರು ಹೊಸದಾಗಿ ನೀಡಿದ್ದಾರೆ' ಎಂದು ಪಾದೇಕಲ್ಲು ವಿಷ್ಣುಭಟ್ಟರು ಕೃತಿಯ ಬೆನ್ನುಡಿಯಲ್ಲಿ ಬರೆದಿದ್ದಾರೆ.

'ಕರಜನ' ಎಂಬುದು ತುಳುಪದ. ಈ ಪದಕ್ಕೆ ಬಂಗಾರವಿಡುವ ಪೆಟ್ಟಿಗೆ ಎಂದರ್ಥವಿದೆ. ಇಡೀ ಪುಸ್ತಕದ ವೈಶಿಷ್ಟ್ಯವೇನು? ಇದರ ಮಹತ್ವವೇನು ಎಂಬುದನ್ನು ಎರಡನೇ ಅಧ್ಯಾಯದಲ್ಲಿ ಬಸವರಾಜ ಕಲ್ಗುಡಿ ವಿವರಿಸಿದ್ದಾರೆ.

ಕೃತಿಯ ಒಳಗೇನಿದೆ ಎಂಬುದಕ್ಕೆ ಪೀಠಿಕೆಯಂತಿದೆ 'ಕರಜನ ತೆಗೆಯುವ ಮೊದಲು' ಅಧ್ಯಾಯ. 'ಪ್ರಸ್ತಾವನೆ'ಯಲ್ಲಿ ಮುದ್ದಣನ ಕೃತಿಗಳ ಹೂರಣವಿದೆ. ಮುದ್ದಣನ 'ರತ್ನಾವತಿ ಕಲ್ಯಾಣ', 'ಕುಮಾರ ವಿಜಯ', 'ಅದ್ಭುತ ರಾಮಾಯಣಂ', 'ಶ್ರೀರಾಮಪಟ್ಟಾಭಿಷೇಕಂ', 'ರಾಮಾಶ್ವಮೇಧಂ' ಕೃತಿಗಳನ್ನು ಸೂಕ್ತ ವಿವರಣೆಯೊಂದಿಗೆ ನೀಡಲಾಗಿದೆ. ಹಳಗನ್ನಡದಲ್ಲಿರುವ ಮುದ್ದಣನ ಕೃತಿಗೆ ವಿವರಣೆ ಮತ್ತು ಪದಗಳ ಅರ್ಥವನ್ನು ಇದರಲ್ಲಿ ನೀಡಲಾಗಿದೆ. ಹಳಗನ್ನಡ ಬಾರದವರಿಗೂ ಮುದ್ದಣನ ಸಾಹಿತ್ಯವನ್ನು ಅರ್ಥ ಮಾಡಿಸುವ ಯತ್ನವಿಲ್ಲಿ ಕಾಣಿಸುತ್ತದೆ. ಮುದ್ದಣನ ಕುರಿತು ಅಧ್ಯಯನ ಮಾಡುವ ಆಸಕ್ತಿ ಹೊಂದಿರುವವರಿಗೆ ಆತನ ಬಗ್ಗೆ ಸಮಗ್ರ ಮಾಹಿತಿ ಒದಗಿಸುವ ಕೃತಿಯಿದು.

ಗೋಪಾಲ ಗೌಡರ ಬದುಕಿನ ಚಿತ್ರಣ



ಗೋಪಾಲಗೌಡ ಶಾಂತವೇರಿ: ಅಂತರಂಗ-ಬಹಿರಂಗ
ಸಂ: ಡಾ. ಎಚ್.ಸಿ. ವಿಷ್ಣುಮೂರ್ತಿ
ಪ್ರ: ಅನನ್ಯ ಪ್ರಕಾಶನ, ಧಾರವಾಡ
ಸಂ: 9448861604
ಪು: 684 ₹800

ಸಾಹಿತ್ಯ-ಸಂಗೀತ ಅಭಿರುಚಿಯ ಗೋಪಾಲಗೌಡ ಶಾಂತವೇರಿ ಅವರ ಖಾಸಗಿ ಡೈರಿ, ಸಾಮಾಜಿಕ ಹೋರಾಟಗಾರ, ಪತ್ರಕರ್ತ, ರಾಜಕಾರಣಿಯೂ ಆಗಿದ್ದ ಅವರ ಸಾರ್ವಜನಿಕ ಬದುಕಿನ ವಿವರಗಳುಳ್ಳ 'ಗೋಪಾಲಗೌಡ ಶಾಂತವೇರಿ: ಅಂತರಂಗ-ಬಹಿರಂಗ' ಕೃತಿಯನ್ನು ಸಂಪಾದಕ ಎಚ್.ಸಿ. ವಿಷ್ಣುಮೂರ್ತಿ ಸಂಕಲಿಸಿದ್ದಾರೆ.

'ಅಂತರಂಗ-ಬಹಿರಂಗ' ಅಡಿ ಬರಹ ಸಂಕೇತಿಸುವಂತೆ ಗೋಪಾಲಗೌಡರ ಮನವನ್ನು ತೆರೆದು ಪುಸ್ತಕದಲ್ಲಿ ಅನಾವರಣ ಮಾಡಿದಂತೆ ಗೋಚರಿಸುತ್ತದೆ. ಇದು ಅಪರೂಪದ ಚಿತ್ರಪಟಗಳನ್ನು ಒಳಗೊಂಡಿದೆ.


ಫೆಬ್ರುವರಿ 15, 1960ರಿಂದ ನವೆಂಬರ್ 23, 1971ರವರೆಗಿನ ಅವರ ಡೈರಿಯಲ್ಲಿರುವ ದಿನಚರಿ ವಿವರ, ಖಾಸಗಿ, ಸಂಘಟನೆ, ಸಾರ್ವಜನಿಕ ವಿಷಯಕ್ಕೆ ಸಬಂಧಿಸಿದ 175 ಪತ್ರಗಳು, ಆರು ಭಿನ್ನ ಲೇಖನಗಳು, ಶಾಸಕರಾಗಿ ಸದನದಲ್ಲಿ ಮಾಡಿದ ಭಾಷಣಗಳು, ಸಾರ್ವಜನಿಕ ಭಾಷಣ ಮತ್ತು ಸಂದರ್ಶನಗಳುಈ ಕೃತಿಯಲ್ಲಿವೆ.

ಬಹುಮುಖ ವ್ಯಕ್ತಿತ್ವದ ಗೋಪಾಲಗೌಡರ ವ್ಯಕ್ತಿತ್ವವನ್ನು ಬಹು ಆಯಾಮಗಳಲ್ಲಿ ಕಟ್ಟಿಕೊಡುವ ಶ್ರಮ ಈ ಕೃತಿಯ ಹಿಂದಿದೆ. 1960ರಲ್ಲಿ ಗೌಡರು ಸಮಾಜವಾದಿ ಪಕ್ಷದ ಮುಖವಾಣಿಯಾಗಿ 'ಮಾರ್ಗದರ್ಶಿ' ಎಂಬ ವಾರಪತ್ರಿಕೆಯನ್ನು ಪ್ರಕಟಿಸುತ್ತಾರೆ. ಅದಕ್ಕಾಗಿ ಹಣಸಂಗ್ರಹ ಖರ್ಚು-ವೆಚ್ಚಗಳ ವಿವರ ಡೈರಿ ಭಾಗದಲ್ಲಿ ಬರುತ್ತದೆ. ಪತ್ರಿಕೆಗೆ ಬಂದ ವಂತಿಗೆ, ತಮ್ಮ ಊಟ ವಸತಿಯ ವಿವರವುಳ್ಳ ಒಂದೊಂದು ರೂಪಾಯಿಯೂ ಇಲ್ಲಿ ಮೌಲೀಕರಣಗೊಂಡಿದೆ. ಪತ್ರಿಕೆಯನ್ನು ಭೂಸುಧಾರಣೆ ಮತ್ತು ತೆರಿಗೆ ರದ್ಧತಿಗೆ ಸಂಬಂಧಿಸಿದಂತೆ ರೂಪಿಸಿದ್ದ ವಿವರವೂ ಸೇರಿ, ಕಾರ್ಮಿಕ ಚಟುವಟಿಕೆಗೂ ವೇದಿಕೆಯನ್ನಾಗಿ ರೂಪಿಸಿದ್ದರು. ಬಿನ್ನಿ ಮಿಲ್, ಮಿನರ್ವ್ ಮಿಲ್ ಕಾರ್ಮಿಕರನ್ನು ಸಂಘಟಿಸಿ ಸತ್ಯಾಗ್ರಹ ಮಾಡಿದ್ದು, ಶರಾವತಿ ಮುಳುಗಡೆಯಲ್ಲಿ ವಸತಿಹೀನರ ಪುನರ್ವಸತಿಗೆ ಸಂಬಂಧಿಸಿದ ಮಾಹಿತಿಯನ್ನು ಡೈರಿ ಭಾಗದಲ್ಲಿ ಇವೆ. ಇಲ್ಲಿ ಸಮಾಜವಾದಿ ಚಿಂತನೆಯ ಫರ್ನಾಂಡಿಸ್, ಜೆ.ಎಚ್. ಪಟೇಲ್, ಕಡಿದಾಳು ಮಂಜಪ್ಪ, ಕಾಗೋಡು ತಿಮ್ಮಪ್ಪ, ಲೋಹಿಯಾ, ಲಂಕೇಶ್, ಪೊನ್ನಂಮ್ಮಾಳ್ ಮೊದಲಾದವರ ಒಡನಾಟದ ವಿವರವೂ ಇದೆ.

ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು, ಖಾಸಗಿ ಸಂಬಂಧಿಗಳಿಗೆ ಬರೆದ ಪತ್ರಗಳಿವೆ. ಅದರಲ್ಲಿ ಸಮಾಜವಾದಿ ಪಕ್ಷದ ಸಂಘಟನೆ, ಕರಪತ್ರ, ಬಹಿರಂಗ ಸಭೆ, ಸಂಘಟನೆಗಾಗಿ ರಾಜ್ಯ ಸುತ್ತಾಡಿದ ವಿವರಗಳು ಇವೆ. ಅದರಲ್ಲಿ ಅವರ ಪತ್ನಿ ಸೋನಾ ಮೇ 20, 1966ರಂದು ಧಾರವಾಡದಿಂದ ಬರೆದ ಒಂದು ಪತ್ರ ಕುತೂಹಲದಿಂದ ಕೂಡಿದೆ.

ಎಚ್.ಸಿ. ವಿಷ್ಣುಮೂರ್ತಿ ಅವರ 'ಗೋಪಾಲಗೌಡ ಶಾಂತವೇರಿ' ಎಂಬ ವಿವರವಾದ ದೀರ್ಘ ಲೇಖನವೂ ಇದೆ.

ಬೆಳ್ ಬೆಳ್‌ಗೆ ಬಿರಿಯಾನಿ...!



ದಮ್‌ಗೆ ಇಟ್ಟ ಬಿರಿಯಾನಿ



ಬಿರಿಯಾನಿ ನಿರೀಕ್ಷೆಯಲ್ಲಿ...

10ನೇ ಪುಟದಿಂದ...

ಮೊದಲಿಗೆ ಸಸ್ಯಾಹಾರ ಕ್ಯಾಂಟಿನ್ ಆಗಿದ್ದ ಇವುಗಳಿಗೆ ಲಾರಿ, ಟ್ಯಾಂಕರ್ ಚಾಲಕರೇ ನಿತ್ಯದ ಗ್ರಾಹಕರಾಗಿದ್ದರು. ಅವರ ವಿನಂತಿಯ ಮೇರೆಗೆ ಆರಂಭವಾದ ಮಾಂಸಹಾರ ಈಗ 'ಅರ್ಲಿ ಮಾರ್ನಿಂಗ್ ಬಿರಿಯಾನಿ' ಸ್ಪಾಟ್ ಆಗಿ ಮಾರ್ಪಟ್ಟಿದೆ. ಕೋವಿಡ್ ಬಳಿಕ ಸಾಮಾಜಿಕ ಜಾಲತಾಣಗಳ ಅಬ್ಬರ ಶುರುವಾದಾಗಿನಿಂದ 'ಮುಂಜಾನೆ ಬಿರಿಯಾನಿ' ಶುರುವಾಯಿತು ಎಂದು ಹೇಳಿದರು ಆನಂದ್ ದಮ್ ಬಿರಿಯಾನಿ ಮಾಲೀಕರಾದ ಆನಂದ್.

ಎರಡೂ ಹೋಟೆಲ್‌ಗಳಲ್ಲಿ ಬಳಸುವ ಮಸಾಲೆ, ಅಕ್ಕಿ, ತಯಾರಿ ವಿಧಾನ ಬೇರೆಯಾಗಿದ್ದರಿಂದ ರುಚಿ, ಬಣ್ಣ ವಿಭಿನ್ನವಾಗಿದೆ. ಬೇಯಿಸಲು ಹೊಂಗೆಮರದ ಸೌದೆಗೆ ಆದ್ಯತೆ. ಮಾಂಸಕ್ಕೆ ಕುರಿಗಳ ಆಯ್ಕೆಯಲ್ಲಿ ವಿಶೇಷ ಕಾಳಜಿ, ವಸ್ತುಗಳ ಆಯ್ಕೆ, ಮಸಾಲೆ ಮಿಶ್ರಣದಲ್ಲಿ ಮುತುವರ್ಜಿ ವಹಿಸುತ್ತಾರೆ. ನಂದಿನಿ ತುಪ್ಪ, ಸೂರ್ಯಕಾಂತಿ ಎಣ್ಣೆ ಬಳಸುತ್ತಾರೆ. ಭಾನುವಾರದಂದು ಸುಮಾರು 900 ಕೆ.ಜಿ. ಕುರಿ ಮಾಂಸದ ಬಿರಿಯಾನಿ ಬಿಕರಿಯಾಗುತ್ತವೆ. 600 ಕೆ.ಜಿ ಅಕ್ಕಿ ಬೇಯಿಸುತ್ತಾರೆ.

ಸೋಮವಾರ, ಗುರುವಾರ ಹಾಗೂ ಶನಿವಾರದಂದು ಮಾಂಸ ತ್ಯಜಿಸುವವರು ಇರುವುದರಿಂದ ಆ ದಿನ ಈ ಹೋಟೆಲ್‌ಗಳಿಗೆ ರಜೆ. ಮಂಗಳವಾರ, ಶುಕ್ರವಾರ ಮುಂಜಾನೆ 4.30ಕ್ಕೆ ಶುರುವಾದರೆ ಭಾನುವಾರ ಮುಂಜಾನೆ 3.30ರಿಂದಲೇ ಜನಸಂದಣಿ ಇರುತ್ತದೆ. ಬೆಳಿಗ್ಗೆ 9 ಗಂಟೆಗೆ ಖಾಲಿ ಖಾಲಿ. ಕಾರ್ತಿಕ, ಶ್ರಾವಣ ಮಾಸದಲ್ಲಿ, ಲಾಂಗ್ ವೀಕೆಂಡ್‌ನಲ್ಲಿ ಗ್ರಾಹಕರ ಸಂಖ್ಯೆ ಕಡಿಮೆ.

ಹೊಸಕೋಟೆಯಲ್ಲಿ ಎಲ್ಲೆಲ್ಲಿ ಬಿರಿಯಾನಿ

ಹೊಸಕೋಟೆಯ ಮಾಲೂರು ರಸ್ತೆಯಲ್ಲಿರುವ ಮಣಿ ದಮ್ ಬಿರಿಯಾನಿ, ಟೋಲ್‌ಗೇಟ್ ಬಳಿ ಇರುವ ಆನಂದ್ ದಮ್ ಬಿರಿಯಾನಿ, ಕೆ.ಎಚ್.ಬಿ. ಕಾಲೋನಿಯಲ್ಲಿರುವ ರಾಜ್ ದಮ್ ಬಿರಿಯಾನಿ, ಹರಿ ದಮ್ ಬಿರಿಯಾನಿ, ಆರ್.ವಿ ದಮ್ ಬಿರಿಯಾನಿ ಸೇರಿ ಹಲವು ಬಿರಿಯಾನಿ ಸೆಂಟರ್‌ಗಳು ಇವೆ. ಬಹುತೇಕ ಕಡೆ ಭಾನುವಾರ, ಮಂಗಳವಾರ ಹಾಗೂ ಶುಕ್ರವಾರ ಮಾತ್ರ ತೆರೆದಿರುತ್ತವೆ. ಕೆಲವು ಹೋಟೆಲ್‌ಗಳು ವಾರದ ಎಲ್ಲ ದಿನಗಳಲ್ಲಿಯೂ ತೆರೆದಿರುತ್ತವೆ. ಹೊಸಕೋಟೆ ದಮ್ ಬಿರಿಯಾನಿ ಬ್ರ್ಯಾಂಡ್‌ನಂತಾಗಿದೆ. ಬೇರೆ ಕಡೆಗಳಲ್ಲೂ ಹೊಸಕೋಟೆ ದಮ್ ಬಿರಿಯಾನಿ ಹೋಟೆಲ್‌ಗಳಿವೆ. ಅಷ್ಟರ ಮಟ್ಟಿಗೆ ಹೊಸಕೋಟೆ ಬಿರಿಯಾನಿ ಘಮಲು ಹರಡಿದೆ.

ಕಾಸು ಕೊಡುವ ಕಣ್ಣಾರೆ



ಕಣ್ಣಾರೆ ಗಿಡ

10ನೇ ಪುಟದಿಂದ...

ಬೇಕಿದೆ ಮಾರುಕಟ್ಟೆ..

ಐದಾರು ದಶಕಗಳಿಂದ ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ವಿಜಯನಗರ ಜಿಲ್ಲೆಗಳ ಸಾವಿರಾರು ಜನರು ಹತ್ತಾರು ಜಿಲ್ಲೆ, ಆಂಧ್ರಪ್ರದೇಶದಲ್ಲೂ ತಿರುಗಾಡಿ ಬೀಜ ಸಂಗ್ರಹಿಸುತ್ತಿದ್ದಾರೆ. ಗಾಢ ನೇರಳೆ ಬಣ್ಣದ ಈ ಬೀಜಕ್ಕೆ ಸಿಕ್ಕಾಪಟ್ಟೆ ಬೇಡಿಕೆ. ಇದು ಮುಂಬೈ ಮಾರುಕಟ್ಟೆಗೆ ಹೋಗುತ್ತದೆ ಎನ್ನಲಾಗುತ್ತಿದ್ದು, ಸೀಜನ್‌ನಲ್ಲಿ ಸಾವಿರಾರು ಟನ್ ಸಂಗ್ರಹವಾಗಿ, ಕೋಟ್ಯಂತರ ರೂಪಾಯಿ ವಹಿವಾಟು ನಡೆಯುತ್ತದೆ. ಕಣ್ಣಾರೆ ಬೀಜ ಖರೀದಿಗೆ ಖರೀದಿದಾರರು ದಂಡು ದಂಡಾಗಿ ಊರೂರು ತಿರುಗುತ್ತಾರೆ. ಒಂದು ಸೇರಿಗೆ ₹ 450-500 ಬೆಲೆ ಇದೆ. ಆದರೆ ಕಾಯಿ ಹರಿಯುವವರಿಗೆ, ಸ್ಥಳೀಯವಾಗಿ ಖರೀದಿಸುವವರಿಗೆ ಇದನ್ನು ಯಾತಕ್ಕೆ ಖರೀದಿಸುತ್ತಾರೆ? ಎಂಬುವುದರ ಬಗ್ಗೆ ಸ್ಪಷ್ಟ ಮಾಹಿತಿಯೇ ಇಲ್ಲ. ಅಷ್ಟೊಂದು ನಿಗೂಢವಾಗಿ ನಡೆಯುತ್ತದೆ ಈ ವ್ಯಾಪಾರ. ಹಾಗಾಗಿ ಇದನ್ನು ನೇರವಾಗಿ ಖರೀದಿಸಲು ಮಾರುಕಟ್ಟೆಯ ಅವಶ್ಯಕತೆ ಇದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ನಲ್ದಾಣ

ನಲ್ದಾಣ (ನಾ). ಒಳ್ಳೆಯ ನೆಲೆ, ಆಶ್ರಯ
(ನಲ್ + ತಾಣ)

ರಾಮಸೀತೆ ಲಕ್ಷ್ಮಣರು ಭಯಂಕರ ಕಾಡಿನಲ್ಲಿ ಅಲೆದಾಡುತ್ತ ಅದರ ಮಧ್ಯದಲ್ಲಿ ರಮ್ಯ ಅಗಸ್ತ್ಯ ಆಶ್ರಮವನ್ನು ಕಂಡರು. ಆ ಮುನಿಯು ಅತಿಥಿಯಾದ ಕಾರಣಪುರುಷನನ್ನು ಗುರುತಿಸಿದನು. ಮಣಿದ ಮೂವರನ್ನು ಸತ್ಕರಿಸಿದನು. ಅವರು ಕೆಲಕಾಲ ಗುರು ಸನ್ನಿಧಿಯಲ್ಲಿದ್ದರು. ಮುಂದಿನ ಅವಧಿಯ ವನವಾಸವನ್ನು ಕಳೆಯಲು ಸೂಕ್ತ ಸ್ಥಳವನ್ನು ತಿಳಿಸಲು ಋಷಿಯನ್ನು ಕೇಳಿಕೊಂಡರು.

ಆಗ ಕವಿಯು ಅಂತಹ ನೆಲೆಯನ್ನು 'ನೆಮ್ಮದಿಯ ನಲ್ದಾಣ' ಎಂದು ರಾಮನ ಶಾಂತ ಭಾವನೆಗೆ ಪದ ಹೆಣೆದಿದ್ದಾರೆ. 'ನಲ್ದಾಣ' ಕವಿ ಹೊಸತಾಗಿ ಕಲ್ಪಿಸಿರುವ ಕನ್ನಡ ನುಡಿಯ ನೆಲೆ; ಒಳ್ಳೆಯ ಸುಂದರ ಮನೋಹರ ತಾಣ. ಆಗ ಅಗಸ್ತ್ಯರು ಅವರಿಗೆ ಅಷ್ಟು ದೂರವಲ್ಲದ 'ಪಂಚವಟಿ'ಯನ್ನು ಸೂಕ್ತ 'ನಲ್ದಾಣ' ಎಂದು ತಿಳಿಸುತ್ತಾರೆ.

ಕೆಲಕಾಲಮಲ್ಲಿ ಗುರುವರನ
ಸನ್ನಿಧಿಯೊಳಿರ್ದು, ತೆಂಕಣನಾಡ ಸೊಬಗಂ
ಸವಿದುಮರಿತುಮಲ್ಲಿಂದೆ ಮುಂದೆ ತೆರಳಲ್ಕೆಳಸಿ
ಬೇಡಿನಗಸ್ತ್ಯನಂ, ಮುಂದಣಾವಧಿಯ ವನದ
ವಾಸಮಂ ಕಳೆಯೆ ನೆಮ್ಮದಿಯ ನಲ್ದಾಣಮೊಂದಂ
ಕೃಪೆಯಿಂ ಬೆಸಸಿಮೆಂದು.

ಪಣೆಮಣಿ

ಪಣೆಮಣಿ(ಕ್ರಿ).
(ನಮಸ್ಕಾರಾರ್ಥವಾಗಿ)
ಹಣೆಯನ್ನು ಬಾಗಿಸು; ತಲೆಬಾಗು
(ಪಣೆ + ಮಣಿ)

ಯುದ್ಧದಲ್ಲಿ ರಾಮಚಂದ್ರನಿಂದ ರಾಕ್ಷಸ ರಾವಣನು ಹತನಾಗುವನು. ಆ ಸುದ್ದಿ ಕೇಳಿ ಸೀತೆಯು, ತನ್ನನ್ನು ಕರೆದೊಯ್ಯಲು ರಾಮದೂತರು ಬರುವರೆಂಬ ನಿರೀಕ್ಷೆಯಲ್ಲಿರುತ್ತಾಳೆ. ಆಗ ಅಲ್ಲಿಗೆ ಅನಲೆಯೊಡನೆ ಆಂಜನೇಯ ಮತ್ತು ವಿಭೀಷಣರು ಕೈ ಮುಗಿದು ಬರುತ್ತಾರೆ. ಮಾರುತಿಯು ವಿಭೀಷಣನಿಗೆ 'ಪ್ರಭುವಿನ ಆಣತಿಯಂತೆ ಲೋಕ ಮಾನ್ಯೆಗೆ ಶಿರಸ್ನಾನ ಮಾಡಿಸಿ ಶೀಘ್ರದಿಂದ ಕರೆದು ತಾ' ಎಂದು ಹೇಳುವನು.

ಮತ್ತೆ ಮೈಥಿಲಿಗೆ ತಲೆಬಾಗಿಸಿ ನಮಸ್ಕರಿಸುವನು. ಕವಿಯು ಆ ಭಾವಕ್ಕೆ ಸಮನಾದ ಹೊಸಪದ 'ಪಣೆಮಣಿ' ನೂತು ಕಾವ್ಯ ಹೆಣೆದಿದ್ದಾರೆ.

ಮತ್ತೆ ಮೈಥಿಲಿಗೆ
ಪಣೆಮಣಿದು ಕೈಮುಗಿದು
ಬೀಳ್ಕೊಂಟ್ಟನಂಜನಾ
ನಂದನಂ ಪ್ರತಿವಂದನಂಗೆಯ್ದಳಂ, ಪೂಜ್ಯೆ
ರಘೂನಂದನಾನಂದೆಯಂ.

13 ಮೊಗಸಾಲೆಗಳಲ್ಲಿ ಅಸ್ಸಾಮಿಗರ ಬದುಕು ಅನಾವರಣ

ಪ್ರವಾಸ

ಕೆ.ಆರ್.ಉಮಾದೇವಿ ಉರಾಳ್


ಈಶಾನ್ಯ ಭಾರತದ ರಾಜ್ಯಗಳ ಪ್ರವೇಶ ದ್ವಾರ ಎನಿಸಿಕೊಳ್ಳುವ ಅಸ್ಸಾಮಿನ ಪ್ರಮುಖ ನಗರ ಗುವಾಹಟಿಯು ನೀಲಾಚಲ ಪರ್ವತ ಶ್ರೇಣಿಗಳೆಡೆಯಲ್ಲಿ ಬ್ರಹ್ಮಪುತ್ರ ನದಿಯ ದಡದಲ್ಲಿರುವ ಸುಂದರ ನಗರ. ಪರ್ವತ ಶ್ರೇಣಿಯ ಹಸಿರು ಹೊದ್ದ ಗಿರಿ ಶಿಖರಗಳು ನಗರಕ್ಕೆ ಘನತೆಯ ಸೌಂದರ್ಯ ನೀಡಿವೆ. ವಿಶಾಲ ಪಾತ್ರದಲ್ಲಿ ಸಮುದ್ರದೋಪಾದಿಯಲ್ಲಿ ತುಂಬಿ ಹರಿವ ಬ್ರಹ್ಮಪುತ್ರ ನದಿ ಚೆಲುವಿಗೆ ಕುಂದಣವಿಟ್ಟಂತೆ ಇದೆ. ದಿಘಾಲಿ ಪುಖುರಿ, ಜೊರ್ ಪುಖುರಿ ಮುಂತಾದ ಕೊಳಗಳು ಗುವಾಹಟಿಯ ಸೌಂದರ್ಯಕ್ಕೆ ಸೊಬಗಿನ ಮೆರುಗು ತುಂಬಿವೆ.

> ಗುವಾಹಟಿಯಲ್ಲಿರುವ 'ಅಸ್ಸಾಂ ಸ್ಟೇಟ್ ಮ್ಯೂಸಿಯಂ' ಆ ರಾಜ್ಯದ ಹಲವು ಶತಮಾನಗಳ ನೆನಪುಗಳ, ಘಟನೆಗಳ ಸಾಕ್ಷ್ಯಗಳನ್ನು ಹೊಂದಿದೆ. ಈ ವಸ್ತುಸಂಗ್ರಹಾಲಯವನ್ನು ಪೂರ್ಣ ಪ್ರಮಾಣದಲ್ಲಿ ನೋಡಲು ಇಡೀ ದಿನ ಬೇಕು.

ಗುವಾಹಟಿಯಲ್ಲಿ ಪ್ರಸಿದ್ಧವಾದ ದಿಘಾಲಿ ಪುಖುರಿ ಕೊಳ, ಅದನ್ನು ಸುತ್ತುವರಿದ ಉದ್ಯಾನ ಹಾಗೂ ಅದರ ಮುಂಭಾಗದ ಯುದ್ಧ ಸ್ಮಾರಕವನ್ನು ಹಾದು ಹೋಗುತ್ತಲೇ ಈ ಕೊಳದ ಮುಂಭಾಗದಲ್ಲಿ ಸಿಗುತ್ತದೆ ಅಸ್ಸಾಮಿನ ಹೈಕೋರ್ಟ್. ಈ ಹೈಕೋರ್ಟ್ ಕಟ್ಟಡದ ಅತಿ ಸಮೀಪದಲ್ಲೇ ಅಸ್ಸಾಂ ಸ್ಟೇಟ್ ಮ್ಯೂಸಿಯಂ ಇದೆ. 1940 ರಲ್ಲಿ 'ಕಾಮರೂಪ (ಅಸ್ಸಾಮಿನ ಹಿಂದಿನ ಹೆಸರು) ಅನುಸಂಧಾನ ಸಮಿತಿ' ಇದನ್ನು ಸ್ಥಾಪಿಸಿತು. ಮುಂದೆ ಸಾರ್ವಜನಿಕರ, ಶ್ರೀಮಂತರ ದೇಣಿಗೆಯಿಂದ ಅಭಿವೃದ್ಧಿ ಹೊಂದಿದ ಇದು, 1953 ರಲ್ಲಿ ರಾಜ್ಯ ಸರ್ಕಾರದ ಸುಪರ್ದಿಗೆ ಒಳಗಾಯಿತು. ಈಗ ಇದು ಅಸ್ಸಾಮಿನ ನೋಡಲೇಬೇಕಾದ ತಾಣ ಎನ್ನುವಂತಾಗಿದೆ. ಹದಿಮೂರು ಮೊಗಸಾಲೆಗಳಲ್ಲಿ ಹರಡಿಕೊಂಡಿರುವ ಇದರ ಸಂಪೂರ್ಣ ವೀಕ್ಷಣೆಗೆ ಇಡೀ ದಿನವೇ ಬೇಕಾಗುತ್ತದೆ.

ಕೆಳಭಾಗದ ಮೊದಲ ಗ್ಯಾಲರಿ ಸ್ವಾತಂತ್ರ್ಯ ಹೋರಾಟಗಾರರಿಗೆ ಸಂಬಂಧಿಸಿದ್ದು. ಮಹಾತ್ಮಾ ಗಾಂಧಿ ಮತ್ತು ಅವರ ಅನುಯಾಯಿಗಳ ಜೀವನ, ಹೋರಾಟಕ್ಕೆ ಸಂಬಂಧಿಸಿದ ಫೋಟೊಗಳು, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಹುತಾತ್ಮರಾದ ಅಸ್ಸಾಮಿನ ಹೋರಾಟಗಾರರ ಫೋಟೊಗಳು ಇಲ್ಲಿವೆ. ಮುಂದಿನದು ಆಧುನಿಕ ಚಿತ್ರ ಕಲಾವಿದರ ಕಲಾಕೃತಿಗಳನ್ನು ಪ್ರದರ್ಶಿಸುವ ಮೊಗಸಾಲೆ.

ಮೂರನೇ ವಿಭಾಗದಲ್ಲಿ ಅಸ್ಸಾಮಿನ ಬುಡಕಟ್ಟು ಜನರಾದ ಬೋಡೋ ಮಿಷಿಂಗ್ ಕುಕಿ ಕರ್ಬಿ ರಭ್ಸ.ತಿವ ಮುಂತಾದ ಜನರ ದೈನಂದಿನ ಜೀವನದ ಉಪಕರಣಗಳು, ಅವರ ಉಡುಗೆಗಳು, ಮಣ್ಣಿನಿಂದ ತಯಾರಿಸಿದ ಕೊಳಲಿನಂತಹ ಸಂಗೀತ ವಾದ್ಯಗಳು, ಆಭರಣಗಳು, ಇತ್ಯಾದಿಗಳು ಪ್ರದರ್ಶಿಸಲಾಗಿದೆ. ಅಸ್ಸಾಮಿನ ಗ್ರಾಮೀಣ ಜನರ ಜೀವನ ಪ್ರದರ್ಶಿಸುವ ವಿಭಾಗದಲ್ಲಿ ಅಸ್ಸಾಮಿನ ದೈನಂದಿನ ಗೃಹಬಳಕೆಯ ಜೀವನದ ಮಾದರಿಗಳನ್ನು ನೈಜ ಪ್ರತಿಕೃತಿಯಂತೆ ನಿರ್ದಿಷ್ಟ ಪ್ರಮಾಣದಲ್ಲಿ ಕುಗ್ಗಿಸಿ ಪ್ರದರ್ಶಿಸಲಾಗಿದೆ. ಇದು ಅಸ್ಸಾಂ ಗ್ರಾಮೀಣರ ಸಹಜ ಜೀವನವನ್ನು ನೋಡುತ್ತಿರುವ ಭಾವವನ್ನು ಸಂದರ್ಶಕರಲ್ಲಿ ಉಂಟುಮಾಡುತ್ತದೆ. ಹಳ್ಳಿಗರ ಗುಡಿ ಕೈಗಾರಿಕೆ, ಮೀನುಗಾರಿಕೆ, ಕೃಷಿ, ಕೃಷಿ ಉಪಕರಣಗಳೊಂದಿಗೆ ಬೀಸುವ ಕುಟ್ಟುವ ಬೇಯಿಸುವ ಅವರ ಜನಜೀವನದ ದೃಶ್ಯಗಳು ಅತ್ಯಾಕರ್ಷಕವಾಗಿ ನೋಡುಗರನ್ನು ಸೆರೆಹಿಡಿದಿಡುವಂತೆ ಬಿಂಬಿತವಾಗಿವೆ.



ಅಸ್ಸಾಂನ ಬುಡಕಟ್ಟು ಜನರ ಹಬ್ಬದ ವಾತಾವರಣವನ್ನು ಬಿಂಬಿಸುವ ಕುಬ್ಜ ಮಾದರಿ


ಚಿತ್ರಗಳು:ಕೆ.ಎನ್.ಉರಾಳ್

ಮರದ ಕರಕುಶಲತೆಯ ಗ್ಯಾಲರಿಯಲ್ಲಿ ಅಸ್ಸಾಮಿನ ಸಾಂಪ್ರದಾಯಿಕ 'ವೈಷ್ಣವ ಸತ್ರ' ಸಂಸ್ಕೃತಿಯನ್ನು ಕಾಣಬಹುದು. ಶಿಲ್ಪಕಲಾ ಗ್ಯಾಲರಿಯಲ್ಲಿ ಅಸ್ಸಾಮನ್ನು ಆಳಿದ್ದ ಅಹೋಂ ವಂಶದವರಿಗಿಂತ ಪೂರ್ವಕಾಲದ ಅಂದರೆ ಆರರಿಂದ ಹದಿಮೂರನೇ ಶತಮಾನದವರೆಗಿನ ರಾಜರುಗಳ ಕಾಲದ ಶಿಲ್ಪಗಳು ಪ್ರದರ್ಶಿಸಲಾಗಿದೆ. ಹಸ್ತಪ್ರತಿ ವಿಭಾಗದಲ್ಲಿ ಮಧ್ಯಯುಗದ ಅರಸರ ಕಾಲದ ತಾಳೆಗರಿ, ಅಗರ್ ಮರದ ತೊಗಟೆಗಳ ಮೇಲೆ ಬರೆದ ಹಸ್ತಪ್ರತಿಗಳನ್ನು ಸಂರಕ್ಷಿಸಿ ಪ್ರದರ್ಶಿಸಲಾಗಿದೆ.


ಮಹಿಷಮರ್ದಿನಿ, ವಿಷ್ಣು ಬುದ್ಧ ರಾವಣ ನಟರಾಜ ಮುಂತಾದವರ ಲೋಹದ ವಿಗ್ರಹಗಳ ಪ್ರದರ್ಶನ ಗ್ಯಾಲರಿ ಇದೆ. ಅಹೋಮರಿಂದ ಮೊಘಲರ ಕಾಲದವರೆಗಿನ ಸಾವಿರಾರು ನಾಣ್ಯಗಳ ಪ್ರದರ್ಶನ ನೋಡಬಹುದು. ಅಸ್ಸಾಮಿನ ಪ್ರಾಚೀನ ವಸ್ತ್ರ ವಿನ್ಯಾಸದ ಕೀರ್ತಿ ಚೀನಾದವರೆಗೂ ಹಬ್ಬಿತ್ತು. ಅಂತಹ ಮಧ್ಯಯುಗದ ಉಡುಗೆಗಳ ಪ್ರದರ್ಶನ ಇದೆ.

ಶಸ್ತ್ರಾಸ್ತ್ರಗಳ ವಿಭಾಗದಲ್ಲಿ ಅಹೋಂ ಅರಸರ ಕಾಲದಿಂದ ತೊಡಗಿ ಎರಡನೇ ಮಹಾಯುದ್ಧದಲ್ಲಿ ಮಣಿಪುರ ನಾಗಾಲ್ಯಾಂಡ್‌ಗಳ ಮೇಲಿನ ಜಪಾನ್ ದಾಳಿಯ ಸಂದರ್ಭದ ಯುದ್ಧೋಪಕರಣಗಳ ಪ್ರದರ್ಶನವಿದೆ. ಶಿಲಾ ಮತ್ತು ತಾಮ್ರ ಶಾಸನಗಳ ಇನ್ನೊಂದು ವಿಭಾಗದಲ್ಲಿ ಐದರಿಂದ ಹದಿನೆಂಟನೇ ಶತಮಾನದವರೆಗಿನ ರಾಜರುಗಳ ಯುದ್ಧ ವಿಜಯಗಳ ಶಾಸನಗಳು, ದೇವಾಲಯಗಳಿಗೆ ದತ್ತಿ ಭೂಮಿ ನೀಡಿದ ಶಾಸನಗಳು ಮುಂತಾದವನ್ನು ಅಚ್ಚುಕಟ್ಟಾಗಿ ಜೋಡಿಸಿ ಪ್ರದರ್ಶಿಸಿರುವುದು ಗಮನ ಸೆಳೆಯುತ್ತದೆ.

ಈ ವಸ್ತುಸಂಗ್ರಹಾಲಯ ಹೊರಗಿನಿಂದ ನೋಡುವಾಗ ಸಾಧಾರಣ ಗಾತ್ರದ್ದಾಗಿ ಚಿಕ್ಕದೆಂಬಂತೆ ಕಾಣುತ್ತದೆ. ಆದರೆ ಒಳಹೊಕ್ಕಾಗ ಹಲವು ಅಂತಸ್ತುಗಳಲ್ಲಿ ಹರಡಿಕೊಂಡು ಗಾತ್ರದಲ್ಲಿ ವಿಶಾಲವಾಗಿಯೇ ಇದೆ. 'ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು' ಎಂಬ ಅಲ್ಲಮನ ಮಾತಿನಂತೆ ಅಸ್ಸಾಮಿನ ಇತಿಹಾಸದ ದಾಖಲೆಗಳನ್ನು ಮುಂದಿನ ಪೀಳಿಗೆಗಾಗಿ ಸಂಗ್ರಹಿಸಿ ಸಂರಕ್ಷಿಸಿ ಶಿಸ್ತುಬದ್ಧವಾಗಿ ಪ್ರದರ್ಶಿಸಿರುವುದು ಅಸ್ಸಾಮಿ ಜನರ ಜೀವನಶ್ರದ್ಧೆಯ ದ್ಯೋತಕದಂತೆ ಭಾಸವಾಗುತ್ತದೆ. ನಮ್ಮ ಪ್ರವಾಸಿ ತಂಡದ ಯೋಜನೆಯಲ್ಲಿ ಇದರ ವೀಕ್ಷಣೆಗೆ ಅವಕಾಶ ಇರಲಿಲ್ಲ. ಆದರೂ ಇಪ್ಪತ್ಮೂರು ದಿನಗಳ ಈಶಾನ್ಯ ಪ್ರವಾಸದ ಕೊನೆಯ ದಿನ ಊರಿಗೆ ಹೊರಡುವ ವಿಮಾನಯಾನಕ್ಕಿದ್ದ ಸಾಕಷ್ಟೇ ಸಮಯವನ್ನು ಬಳಸಿಕೊಂಡು ನಾವು ದಂಪತಿ ಇಲ್ಲಿಗೆ ಧಾವಿಸಿ ಹೋಗಿ ವೀಕ್ಷಿಸಿ ಸಾರ್ಥಕತೆಯ ಸಂತೃಪ್ತ ಭಾವ ಮನ ತುಂಬಿಕೊಂಡೆವು.



ಹಾರುವ ವನದೇವತೆಯ ಶಿಲ್ಪಕಲಾಕೃತಿ



ಸಂಗ್ರಹಾಲಯದೊಳಗೆ ಇರುವ ಶಿಲ್ಪಕಲಾಕೃತಿ






ಅಸ್ಸಾಂ ರಾಜ್ಯ ವಸ್ತುಸಂಗ್ರಹಾಲಯ

ಮಜ ಮಜ ಮಜಕೂರ


• ಎಂ.ಎಸ್.ಪೂಜಾರ



ಡಗ್ಗು ಚಿಕ್ಕು ಕೀಳ್ರುಪ್ಪು ಕಥೆಯ — ಗಾಳಿಯಲ್ಲಿ ಗುಂಡ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಡ್ರೋನ್ ಜೊತೆ ಆಟವಾಡುತ್ತಿದ್ದ. ಡ್ರೋನ್ ರಿಮೋಟ್‌ಗೆ ಬ್ಯಾಟರಿ ಹಾಕಿ ಅದನ್ನು ಆನ್ ಮಾಡಿದ. ಡ್ರೋನ್ ಜೋರಾಗಿ ಸದ್ದು ಮಾಡುತ್ತಾ ತಿರುಗತೊಡಗಿತು. ಕೆಲ ಕ್ಷಣದಲ್ಲಿ ಅದರಿಂದ ಬೀಸುವ ಗಾಳಿ ಹೆಚ್ಚಾಯಿತು. ಆ ಗಾಳಿಯ ವೇಗಕ್ಕೆ ಗುಂಡ ತೇಲುತ್ತಾ ಕೊಂಚ ಮೇಲಕ್ಕೆ ಹೋದ.



ಜಾಣಪದಾಕ್ಷರ ಆಟ

ಇಲ್ಲಿ ಕೊಟ್ಟಿರುವ 'ವಳಿ' ಅಕ್ಷರಗಳ ಹಿಂದೆ ಎರಡಕ್ಷರ ಆಯ್ದು ತುಂಬಿ ನಾಲ್ಕಕ್ಷರದ ಪದ ಮಾಡಿ.


ಅಕ್ಷರ ಪಟ್ಟಿ				
ಸಾ	ಪ್ರ	ತ್ರಾ	ಖಾ	ಚಿ
ರ್ಕಾ	ದ್ರ	ರಾ	ಅ	ಶಾ
ಪಾ	ಲಾ	ಳ	ಕ	ನಾ
ಚ	ಶ್ಯಾ	ದೀ	ಭಾ	ವಂ

1			ವ	ಳಿ
2			ವ	ಳಿ
3			ವ	ಳಿ
4			ವ	ಳಿ
5			ವ	ಳಿ
6			ವ	ಳಿ
7			ವ	ಳಿ
8			ವ	ಳಿ
9			ವ	ಳಿ
10			ವ	ಳಿ


ಗಣಿತದಲ್ಲಿ ಗರ್ದಿ ಗಮ್ಮತ್ತು

ಮ್ಯಾಜಿಕ್!

1. ಇಲ್ಲಿರುವ 7 ಬೆಂಕಿಕಡ್ಡಿಗಳಿಂದ 8 ಮಾಡಿ



2. 9 ಬೆಂಕಿಕಡ್ಡಿಗಳಿಂದ 10 ಮಾಡಿ



ಪದಶೋಧ

ಇಲ್ಲಿರುವ ಪದಗಳಿಂದ ಒಂದು ಅಕ್ಷರ ಆಯ್ಕೆ ಮಾಡಿಕೊಂಡು ಓರ್ವ ಚೆಸ್ ಗ್ರ್ಯಾಂಡ್ ಮಾಸ್ಟರ್ ಹೆಸರನ್ನು ಹುಡುಕಿ.

1.ಕೋಲಾಟ
2.ನೇಹಿಗ
3.ರುಜುವಾತು
4.ಹಂಗಾಮಿ
5.ಪಿತ್ರಾರ್ಜಿತ

ಉತ್ತರ:..........................

ಪ್ರಾಸ ಪದ ಬಂಧ

ಅಕ್ಷರ ಪಟ್ಟಿ			
ಗಿ	ಕೊ	ತಿ	ಒ
ಉ	ಜ	ಭೈ	ಚಿ
ಬ	ತೋ	ಸ	ಕಾ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರ ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

1

	ರು	ಳು
	ರು	ಳು

2

	ಳ	ಗ
	ಳ	ಗ

3

	ರ	ಣ
	ರ	ಣ

4

	ರ	ವಿ
	ರ	ವಿ

5

	ಲು	ಮೆ
	ಲು	ಮೆ

6

	ವಾ	ರಿ
	ವಾ	ರಿ

ಕೊಂಚತಂತ್ರ

ಜ್ಞಾನಪೀಠ ಪುರಸ್ಕೃತ ಶಿವರಾಮ ಕಾರಂತರು ಬರೆದ ಒಟ್ಟು ಕಾದಂಬರಿಗಳೆಷ್ಟು?

ಉತ್ತರ: 47

ಇದನ್ನು ನಮಗೆ ಸ್ವಾತಂತ್ರ್ಯ ದೊರಕಿದ ವರ್ಷವನ್ನು ನೆನಪಿಡುವ ಮೂಲಕ ಉತ್ತರಿಸಬಹುದು. ಇದೇ 47ರ ನಡುವೆ 2 ಸೇರಿಸಿದರೆ 427. ಇದು ಶಿವರಾಮ ಕಾರಂತರು ಬರೆದ ಒಟ್ಟು ಕೃತಿಗಳ ಸಂಖ್ಯೆ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in



ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಕೂರಿಗೆ–ಸಾರಿಗೆ 2.ಅರಳು–ಕೊರಳು 3.ತೂರಿಸು–ತೋರಿಸು 4.ಮುಗಿಲು–ದಿಗಿಲು 5.ಕನಲು–ಹೊನಲು 6.ಜವಾರಿ–ಸವಾರಿ

ಮೋಜಿನ ಇಂಗ್ಲಿಷ್: 1.BIND 2.FIND 3.KIND 4.MIND 5.SINK 6.WIND 7.FINE 8.SING 9.ZINK 10.LINK

ಜಾಣಪದ: 1.ಉಡದಾರ 2.ಚಳವಳಿ 3.ಜನಮನ 4.ವರದಾನ 5.ಕಳವಳ 6.ಸುಕುಮಾರಿ 7.ಸಂವಿಧಾನ 8.ಕಲ್ಲಡಿಗೆ 9.ನೆರವಾಗು 10.ತಳಹದಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಲಕ್ಷ ಎಂ.ವಿ., ಚೇಳೂರು



ಜ್ಞಾನವಿ ಎಸ್. ಗುಬ್ಬಿ




ಇಂದ್ರಧನುಷ್ ಎಂ.ಎಸ್. ಚಾಮರಾಜನಗರ



ಆಧ್ಯಾ ಡಿ.ಎಂ. ಗೌರಿ ಚಿತ್ರದುರ್ಗ



ಅಭಿಷೇಕ್ ಸಿ. ಹಾವೇರಿ



ಗೌತಮ್ ಆರ್.ಪಿ. ದಾವಣಗೆರೆ

ಎರಡನೇ ದಿನ 15 ವಿಕೆಟ್ ಪತನ • ಪಂತ್ ಮಿಂಚಿನ ಅರ್ಧ ಶತಕ • ಮೂರೇ ದಿನಕ್ಕೆ ಪಂದ್ಯ ಮುಗಿಯುವ ಸಾಧ್ಯತೆ

ರೋಚಕ ಸ್ಥಿತಿಯತ್ತ ಅಂತಿಮ ಟೆಸ್ಟ್

• ಮಧು ಜವಳಿ

ಸಿಡ್ನಿ: ಪ್ರೇಕ್ಷಕರಿಂದ ಕಿಕ್ಕಿರಿದಿದ್ದ ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಐದನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದ ಎರಡನೇ ದಿನವಾದ ಶನಿವಾರ ಚೆಂಡು ಮತ್ತು ಬ್ಯಾಟಿನ ಮಧ್ಯೆ ಕುತೂಹಲಕರ ಹೋರಾಟ ನಡೆದು 15 ವಿಕೆಟ್‌ಗಳು ಪತನಗೊಂಡವು. ವೇಗದ ಬೌಲರ್‌ಗಳಿಗೆ ಸ್ನೇಹಿಯಾಗಿರುವ ಈ ಪಿಚ್ ಅದೃಷ್ಟದ ಏರಿಳಿತ ಕಂಡಿದ್ದು, ಪಂದ್ಯ ಈಗ ಕುತೂಹಲದ ಸ್ಥಿತಿಗೆ ತಲುಪಿದೆ.

ಮೂರನೇ ದಿನವೇ ಪಂದ್ಯ ಮುಗಿಯುವ ಸಾಧ್ಯತೆ ಹೆಚ್ಚಾಗಿದೆ. ಭಾರತದ 185 ರನ್‌ಗಳಿಗೆ ಉತ್ತರವಾಗಿ ಮೊದಲ ದಿನದಾಟದ ಕೊನೆಗೆ 1 ವಿಕೆಟ್‌ಗೆ 9 ರನ್ ಗಳಿಸಿದ್ದ ಆತಿಥೇಯ ತಂಡವು, ಭಾರತದ ಕರಾರುವಾಕ್ ಬೌಲಿಂಗ್ ದಾಳಿಯೆದುರು 181 ರನ್‌ಗಳಿಗೆ ಆಲೌಟ್ ಆಯಿತು. ಆದರೆ ತಿರುಗೇಟು ನೀಡಿದ ಕಮಿನ್ಸ್ ಬಳಗ ಎರಡನೇ ಇನಿಂಗ್ಸ್‌ನಲ್ಲಿ ಭಾರತವನ್ನು 6 ವಿಕೆಟ್‌ಗೆ 141 ರನ್‌ಗಳಿಗೆ ಸೀಮಿತಗೊಳಿಸಿದೆ. ಒಟ್ಟಾರೆ ಮುನ್ನಡೆ 145 ರನ್ ಮಾತ್ರ. ರವೀಂದ್ರ ಜಡೇಜ (ಬ್ಯಾಟಿಂಗ್ 8) ಮತ್ತು ವಾಷಿಂಗ್ಟನ್ ಸುಂದರ್ (ಬ್ಯಾಟಿಂಗ್ 4) ಕ್ರೀಸ್‌ನಲ್ಲಿದ್ದಾರೆ.

ಮೂರನೇ ದಿನದಾಟಕ್ಕೆ ನಾಯಕ ಜಸ್‌ಪ್ರೀತ್ ಬೂಮ್ರಾ ಅವರ ಲಭ್ಯತೆ ಖಚಿತವಾಗಿಲ್ಲದಿರುವ ಕಾರಣ ಭಾರತ ಹೆಚ್ಚಿನ ಮೊತ್ತ ಕಲೆಹಾಕಬೇಕಾಗಿದೆ. ಅದಕ್ಕೆ, ಕ್ರೀಸ್‌ನಲ್ಲಿರುವ ತಂಡದ ಕೊನೆಯ ಪರಿಣತ ಬ್ಯಾಟರ್‌ಗಳ ಜೋಡಿಯಾಗಿರುವ ಜಡೇಜ ಮತ್ತು ವಾಷಿಂಗ್ಟನ್ ಅವರು ಸಾಧ್ಯವಾದಷ್ಟು ಹೆಚ್ಚು ರನ್ ಗಳಿಸಬೇಕಾಗುತ್ತದೆ.

ಪಂತ್ ಮಿಂಚು: ಭಾರತ ಎರಡನೇ ಇನಿಂಗ್ಸ್‌ನಲ್ಲಿ ಈ ಮೊತ್ತ ತಲುಪಲು ರಿಷಭ್ ಪಂತ್ ಅವರ ಸರಾಗ ಬ್ಯಾಟಿಂಗ್ ಕಾರಣವಾಯಿತು. ಟೀಕೆಗಳ ಕಾರಣ ಮೊದಲ ಇನಿಂಗ್ಸ್‌ನಲ್ಲಿ ಎಚ್ಚರಿಕೆಯ ಆಟವಾಡಿದ್ದ ಅವರು ಈ ಬಾರಿ ತಮ್ಮ ಮೂಲಶೈಲಿಯ ಆಟ ಪ್ರದರ್ಶಿಸಿದರು. ಅಸ್ಥಿರತೆಯ ಸವಾಲೊಡ್ಡುತ್ತಿದ್ದ ಪಿಚ್‌ನಲ್ಲಿ ಅವರು ಆಸ್ಟ್ರೇಲಿಯಾದ ಆಕ್ರಮಣಕ್ಕೆ ಪ್ರತ್ಯಾಕ್ರಮಣದ ಆಟವಾಡಿ, ಚೆಂಡನ್ನು ಮೈದಾನದ ಮೂಲೆಮೂಲೆಗಟ್ಟಿದರು.


ನಾಲ್ಕು ವಿಕೆಟ್ ಪಡೆದ ಸ್ಕಾಟ್ ಬೋಲ್ಯಾಂಡ್

ಎಡಗೈ ಆಟಗಾರನ ಈ ತಂತ್ರ ಫಲ ನೀಡಿತು. ಎದುರಾಳಿ ನಾಯಕ ಪ್ಯಾಟ್ ಕಮಿನ್ಸ್ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಳ್ಳುವ ಮುನ್ನ ಅವರು ಕೇವಲ 33 ಎಸೆತಗಳಲ್ಲಿ ಆರು ಬೌಂಡರಿ, ನಾಲ್ಕು ಸಿಕ್ಸರ್‌ಗಳಿದ್ದ 61 ರನ್ ಸಿಡಿಸಿದರು.

ವಿರಾಟ್‌ಗೆ ಕರತಾಡನ: ಆಸ್ಟ್ರೇಲಿಯಾದ ನೆಲದಲ್ಲಿ ವಿರಾಟ್ ಕೊಹ್ಲಿ (6) ಅವರ ಬಹುತೇಕ ಕೊನೆಯ ಇನಿಂಗ್ಸ್ ಕೂಡ ನಿರಾಸೆ ಮೂಡಿಸಿತು. ಆದರೆ, ಅವರು ಪೆವಿಲಿಯನ್‌ನತ್ತ ಹೆಜ್ಜೆ ಹಾಕುತ್ತಿದ್ದಂತೆ ಪ್ರೇಕ್ಷಕರು ಎದ್ದುನಿಂತು ಕರತಾಡನದ ಅಭಿನಂದನೆ ಸಲ್ಲಿಸಿದರು.

ಹಂಗಾಮಿ ನಾಯಕ ಬೂಮ್ರಾ ಅವರ ಅನುಪಸ್ಥಿತಿಯಲ್ಲಿ ಭಾರತ ತಂಡ ತಣ್ಣಗೆ ಕುಗ್ಗಿದಂತೆ ಕಾಣಲಿಲ್ಲ. ಅವರು ಲಂಚ್ ನಂತರ ಕೇವಲ ಒಂದು ಓವರ್ ಬೌಲ್ ಮಾಡಿ ಬೆನ್ನು ನೋವಿನಿಂದಾಗಿ ಮೈದಾನದಿಂದ ನಿರ್ಗಮಿಸಿ ಆಸ್ಪತ್ರೆಗೆ ತೆರಳಿದರು. ಸ್ಕ್ಯಾನಿಂಗ್ ವರದಿಗೆ ಕಾಯಲಾಗುತ್ತಿದ್ದು, ಈ ಪ್ರಮುಖ ಬೌಲರ್ ಮೂರನೇ ದಿನ ಲಭ್ಯರಾಗುವರೇ ಇಲ್ಲವೇ ಎಂಬ ಅನಿಶ್ಚಿತ ಭಾರತದ ಆತಂಕಕ್ಕೆ ಕಾರಣವಾಗಿದೆ. ಸರಣಿ ಸಮಗೊಳಿಸಬೇಕಾದರೆ ಅವರ ಬೌಲಿಂಗ್ ಭಾರತದ ಪಾಲಿಗೆ ಪ್ರಮುಖವಾಗಿದೆ.

ಶುಕ್ರವಾರದ ಕೊನೆಯಲ್ಲಿ ಬೂಮ್ರಾ ಅವರನ್ನು ಆಸ್ಟ್ರೇಲಿಯಾದ ಕಾನ್‌ಸ್ಟಸ್ ಕೆಣಕಿದ್ದರು. ಅದೇ ಓವರ್‌ನ ಕೊನೆಯ ಎಸೆತದಲ್ಲಿ ಬೂಮ್ರಾ, ಉಸ್ಮಾನ್ ಖ್ವಾಜಾ ಅವರ ವಿಕೆಟ್ ಪಡೆದಿದ್ದರು. ಶನಿವಾರ ಅಂಗಣಕ್ಕಿಳಿದ ಭಾರತ ಆ ಗುಂಗಿನಿಂದ ಹೊರಬಂದಿರಲಿಲ್ಲ. ಬೂಮ್ರಾ ಅವರ ಬೌಲಿಂಗ್‌ನಲ್ಲಿ ಕಾನ್‌ಸ್ಟಸ್ ಬಚಾವಾದರೂ, ಸಿರಾಜ್ ಅವರ ಬೌಲಿಂಗ್‌ನಲ್ಲಿ ಗಲಿಯಲ್ಲಿ ಕ್ಯಾಚಿತ್ತು ಹಿಂತಿರುಗಿದರು. ಆಕ್ರಮಣಕಾರಿ ಆಟಕ್ಕೆ ಹೆಸರಾದ ಆಪತ್ಬಾಂಧವ ಟ್ರಾವಿಸ್ ಹೆಡ್ ಅವರ ವಿಕೆಟ್ ಕೂಡ ಸಿರಾಜ್ ಪಾಲಾಯಿತು. ಇದಕ್ಕೆ ಮೊದಲು ಲಾಬುಷೇನ್ ಅವರ ವಿಕೆಟ್ ಅನ್ನು ಬೂಮ್ರಾ ಪಡೆದಿದ್ದರು. ಆಗ ಆಸ್ಟ್ರೇಲಿಯಾದ ಮೊತ್ತ 4 ವಿಕೆಟ್‌ಗೆ 37.

ಬೂಮ್ರಾ ಮೈದಾನದಿಂದ ನಿರ್ಗಮಿಸುತ್ತಿದ್ದಂತೆ ಗಮನ ಇತರ ಬೌಲರ್‌ಗಳ ಮೇಲೆ ಹರಿಯಿತು. ಪ್ರಸಿದ್ಧ ಕೃಷ್ಣ (42ಕ್ಕೆ3) ಸಂದರ್ಭಕ್ಕೆ ಸ್ಪಂದಿಸಿದರು. ತಮ್ಮ ಮೊದಲ ಎಸೆತದಲ್ಲೇ ಸ್ಟೀವ್ ಸ್ಮಿತ್ ಅವರನ್ನು ಅಚ್ಚರಿಯಲ್ಲಿ ಕೆಡವಿ ಎರಡನೇ ಸ್ಲಿಪ್‌ನಲ್ಲಿ ಕ್ಯಾಚ್ ಕೊಡಿಸಿದರು. ಸ್ಮಿತ್ ಮತ್ತು ಪದಾರ್ಪಣೆ ಮಾಡಿದ ಬ್ಯೂ ವೆಬ್‌ಸ್ಟರ್ (57, 105ಎ, 4x5) ಐದನೇ ವಿಕೆಟ್‌ಗೆ 57 ರನ್ ಸ್ಥಿರತೆ ನೀಡುವಂತೆ ಕಂಡಾಗ ಲಂಚ್‌ಗೆ ಸ್ವಲ್ಪ ಮೊದಲು ಪ್ರಸಿದ್ಧ ಈ ವಿಕೆಟ್ ಪಡೆದರು.

ವೆಬ್‌ಸ್ಟರ್ ಅವರು ವಿಶ್ವಾಸದಿಂದ ಆಡತೊಡಗಿದರು. ಸ್ಮಿತ್ ನಂತರ ಅವರು ಅಲೆಕ್ಸ್ ಕ್ಯಾರಿ ಜೊತೆಗೆ 41 ರನ್ ಸೇರಿಸಿ ಆಸ್ಟ್ರೇಲಿಯಾ ಅಲ್ಪಮೊತ್ತಕ್ಕೆ ಕುಸಿಯದಂತೆ ನೋಡಿಕೊಂಡರು. ಈ ಹಂತದಲ್ಲಿ ಕ್ಯಾರಿ ಅವರ ರಕ್ಷಣೆ ಭೇದಿಸಿದ ಪ್ರಸಿದ್ಧ ಮತ್ತೊಮ್ಮೆ ಈ ಜೊತೆಯಾಟವನ್ನು ಮುರಿದರು. ಅವರ ಮೂರು ವಿಕೆಟ್‌ಗಳ ಜೊತೆ ನಿತೀಶ್ ರೆಡ್ಡಿ ಕೊನೆಗಳಿಗೆಯಲ್ಲಿ ಎರಡು ವಿಕೆಟ್ ಪಡೆದಿದ್ದರಿಂದ ಆಸ್ಟ್ರೇಲಿಯಾ 181 ರನ್‌ಗಳಿಗೆ ಆಟ ಮುಗಿಸಿತು. ಭಾರತಕ್ಕೆ ಮನೋಬಲ ಹೆಚ್ಚಿಸುವ ನಾಲ್ಕು ರನ್‌ಗಳ ಅಲ್ಪ ಮುನ್ನಡೆ ದೊರೆಯಿತು.

ಲಂಚ್‌ಗೆ ಮೊದಲಿನ ಅವಧಿಯಲ್ಲಿ ಸಾಕಷ್ಟು ರನ್ ನೀಡಿದ್ದ ನಿತೀಶ್ ಕುಮಾರ್ ರೆಡ್ಡಿ, ಎರಡನೇ ಅವಧಿಯಲ್ಲಿ ಪರಿಣಾಮಕಾರಿಯಾಗಿ ಬೌಲ್ ಮಾಡಿದರು. ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಅವರನ್ನು ತಮ್ಮ ಓವರ್‌ನ ಕೊನೆಯ ಎಸೆತದಲ್ಲಿ ಔಟ್ ಪಡೆದ ಅವರು ಮುಂದಿನ ಓವರ್‌ನ ಮೊದಲ ಎಸೆತದಲ್ಲಿ ಮಿಚೆಲ್ ಸ್ಟಾರ್ಕ್ ಅವರ ವಿಕೆಟ್ ಪಡೆದು ಹ್ಯಾಟ್ರಿಕ್ ಅವಕಾಶವನ್ನೂ ಪಡೆದಿದ್ದರು. ಬೂಮ್ರಾ ಗೈರಿನಲ್ಲಿ ಅವರು ಸಿರಾಜ್ ಮತ್ತು ಪ್ರಸಿದ್ಧ ಅವರಿಗೆ ಬೆಂಬಲ ನೀಡಿದರು.



ರಿಷಭ್ ಪಂತ್ ಬ್ಯಾಟಿಂಗ್ ವೈಖರಿ

ಆಸ್ಟ್ರೇಲಿಯಾ ನೆಲದಲ್ಲಿ ಪಂತ್ ದಾಖಲೆ

ಸಿಡ್ನಿ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ ರಿಷಭ್ ಪಂತ್ ಕೇವಲ 29 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಟೆಸ್ಟ್‌ನಲ್ಲಿ ಇದು ಭಾರತದ ಆಟಗಾರನೊಬ್ಬನ ಎರಡನೇ ಅತಿ ವೇಗದ ಅರ್ಧಶತಕವಾಗಿದೆ. ಅತಿ ವೇಗದ ಅರ್ಧಶತಕ ಕೂಡಾ ಅವರ ಹೆಸರಿನಲ್ಲೇ ದಾಖಲಾಗಿದೆ. 2022ರಲ್ಲಿ ಶ್ರೀಲಂಕಾ ವಿರುದ್ಧ 28 ಎಸೆತಗಳಲ್ಲಿ ಅರ್ಧ ಶತಕ ಬಾರಿಸಿದ್ದಾರೆ.

ಅಲ್ಲದೆ, ಆಸ್ಟ್ರೇಲಿಯಾ ನೆಲದಲ್ಲಿ ವಿದೇಶಿ ಬ್ಯಾಟರ್ ಬಾರಿಸಿದ ವೇಗದ ಅರ್ಧಶತಕ ಇದಾಗಿದೆ. ಈ ಹಿಂದೆ ಇಂಗ್ಲೆಂಡ್‌ನ ಜಾನ್ ಬ್ರೌನ್ (ಮೆಲ್ಬರ್ನ್, 1895) ಹಾಗೂ ವೆಸ್ಟ್ ಇಂಡೀಸ್‌ನ ರಾಯ್ ಫ್ರೆಡ್ರಿಕ್ಸ್ (ಪರ್ತ್ 1975) ಅವರು 33 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ್ದು ಈವರೆಗಿನ ದಾಖಲೆಯಾಗಿತ್ತು.

ಟೆಸ್ಟ್‌ನಲ್ಲಿ ಭಾರತ ಪರ 30ಕ್ಕಿಂತ ಕಡಿಮೆ ಎಸೆತಗಳಲ್ಲಿ ಅರ್ಧಶತಕ ಗಳಿಸಿದ ಏಕೈಕ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೂ ಪಂತ್ ಪಾತ್ರವಾಗಿದ್ದಾರೆ.

ವೇಗದ ಅರ್ಧಶತಕದ ದಾಖಲೆ ಪಾಕಿಸ್ತಾನದ ಮಿಸ್ಬಾ ಉಲ್ ಹಕ್ ಹೆಸರಿನಲ್ಲಿದೆ. ಅವರು ಅಬುದಾಬಿಯಲ್ಲಿ 2014ರಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 21 ಎಸೆತಗಳಲ್ಲಿ ಈ ಸಾಧನೆ ಮಾಡಿದ್ದಾರೆ.


ಮೊಹಮ್ಮದ್ ಸಿರಾಜ್ ಮತ್ತು ವಿರಾಟ್ ಕೊಹ್ಲಿ –ಎಎಫ್‌ಪಿ/ಎಪಿ/ಪಿಟಿಐ ಚಿತ್ರಗಳು

ಟೆಸ್ಟ್‌ನಲ್ಲಿ ವೇಗದ ಅರ್ಧಶತಕ ಗಳಿಸಿದ ಭಾರತೀಯರು

ಆಟಗಾರ	ಎಸೆತ	ಎದುರಾಳಿ	ಸ್ಥಳ	ವರ್ಷ
ರಿಷಭ್ ಪಂತ್	28	ಶ್ರೀಲಂಕಾ	ಬೆಂಗಳೂರು	2022
ರಿಷಭ್ ಪಂತ್	29	ಆಸ್ಟ್ರೇಲಿಯಾ	ಸಿಡ್ನಿ	2025
ಕಪಿಲ್ ದೇವ್	30	ಪಾಕಿಸ್ತಾನ	ಕರಾಚಿ	1982
ಶಾರ್ದೂಲ್ ಠಾಕೂರ್	31	ಇಂಗ್ಲೆಂಡ್	ಓವಲ್	2021
ಯಶಸ್ವಿ ಜೈಸ್ವಾಲ್	31	ಬಾಂಗ್ಲಾದೇಶ	ಕಾನ್ಪುರ	2024

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 185 (72.2 ಓವರ್‌ಗಳಲ್ಲಿ). ಆಸ್ಟ್ರೇಲಿಯಾ 181 (51 ಓವರ್‌ಗಳಲ್ಲಿ)
(ಶುಕ್ರವಾರ: ಆಸ್ಟ್ರೇಲಿಯಾ 1ಕ್ಕೆ 9)
ಕಾನ್‌ಸ್ಟಸ್ ಸಿ ಜೈಸ್ವಾಲ್ ಬಿ ಸಿರಾಜ್ 23 (38ಎ, 4x3)
ಲಾಬುಷೇನ್ ಸಿ ಪಂತ್ ಬಿ ಬೂಮ್ರಾ 2 (8ಎ)
ಸ್ಮಿತ್ ಸಿ ರಾಹುಲ್ ಬಿ ಪ್ರಸಿದ್ಧ 33 (57ಎ, 4x4, 6x1)
ಹೆಡ್ ಸಿ ರಾಹುಲ್ ಬಿ ಸಿರಾಜ್ 4 (3ಎ, 4x1)
ವೆಬ್‌ಸ್ಟರ್ ಸಿ ಜೈಸ್ವಾಲ್ ಬಿ ಪ್ರಸಿದ್ಧ 57 (105ಎ, 4x5)
ಕ್ಯಾರಿ ಬಿ ಪ್ರಸಿದ್ಧ 21 (36ಎ, 4x4)
ಕಮಿನ್ಸ್ ಸಿ ಕೊಹ್ಲಿ ಬಿ ನಿತೀಶ್ 10 (20ಎ, 4x1)
ಸ್ಟಾರ್ಕ್ ಸಿ ರಾಹುಲ್ ಬಿ ನಿತೀಶ್ 1 (4ಎ)
ಲಯನ್ ಔಟಾಗದೆ 7 (17ಎ)
ಬೋಲ್ಯಾಂಡ್ ಬಿ ಸಿರಾಜ್ 9 (9ಎ, 4x2)
ಇತರೆ: 12 (ಬೈ 9, ಲೆಗ್‌ಬೈ 2, ನೋಬಾಲ್ 1)
ವಿಕೆಟ್ ಪತನ: 2–15 (ಮಾರ್ನಸ್ ಲಾಬುಷೇನ್,6.2), 3–35 (ಸ್ಯಾಮ್ ಕಾನ್‌ಸ್ಟಸ್, 11.2), 4–39 (ಟ್ರಾವಿಸ್ ಹೆಡ್, 11.5), 5–96 (ಸ್ಟೀವನ್ ಸ್ಮಿತ್, 27.1), 6–137 (ಅಲೆಕ್ಸ್ ಕ್ಯಾರಿ, 37.5), 7–162 (ಪ್ಯಾಟ್ ಕಮಿನ್ಸ್, 44.6), 8–164 (ಮಿಚೆಲ್ ಸ್ಟಾರ್ಕ್, 46.1), 9–166 (ಬ್ಯೂ ವೆಬ್‌ಸ್ಟರ್, 47.2), 10–181 (ಸ್ಕಾಟ್ ಬೋಲ್ಯಾಂಡ್ 50.6)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–1–33–2; ಮೊಹಮ್ಮದ್ ಸಿರಾಜ್ 16–2–51–3; ಪ್ರಸಿದ್ಧ ಕೃಷ್ಣ 15–3–42–3; ನಿತೀಶ್ ಕುಮಾರ್ ರೆಡ್ಡಿ 7–0–32–2; ರವೀಂದ್ರ ಜಡೇಜ 3–0–12–0

ಎರಡನೇ ಇನಿಂಗ್ಸ್: ಭಾರತ 6ಕ್ಕೆ 141 (32 ಓವರ್‌ಗಳಲ್ಲಿ)
ಜೈಸ್ವಾಲ್ ಬಿ ಬೋಲ್ಯಾಂಡ್ 22 (35ಎ, 4x4)
ರಾಹುಲ್ ಬಿ ಬೋಲ್ಯಾಂಡ್ 13 (15ಎ, 4x2)
ಗಿಲ್ ಸಿ ಕ್ಯಾರಿ ಬಿ ವೆಬ್‌ಸ್ಟರ್ 13 (15ಎ, 4x2)
ಕೊಹ್ಲಿ ಸಿ ಸ್ಮಿತ್ ಬಿ ಬೋಲ್ಯಾಂಡ್ 6 (12ಎ, 4x1)
ಪಂತ್ ಸಿ ಕ್ಯಾರಿ ಬಿ ಕಮಿನ್ಸ್ 61 (33ಎ, 4x6, 6x4)
ಜಡೇಜ ಔಟಾಗದೆ 8 (39ಎ, 4x1)
ನಿತೀಶ್ ಸಿ ಕಮಿನ್ಸ್ ಬಿ ಬೋಲ್ಯಾಂಡ್ 4 (21ಎ)
ಸುಂದರ್ ಔಟಾಗದೆ 6 (17ಎ)
ಇತರೆ: 8 (ಬೈ4, ಲೆಗ್‌ಬೈ 4)
ವಿಕೆಟ್ ಪತನ: 1–42 (ಕೆ.ಎಲ್. ರಾಹುಲ್, 7.3), 2–47 (ಯಶಸ್ವಿ ಜೈಸ್ವಾಲ್, 9.5), 3–59 (ವಿರಾಟ್ ಕೊಹ್ಲಿ, 13.1), 4–78 (ಶುಭಮನ್ ಗಿಲ್, 15.2), 5–124 (ರಿಷಭ್ ಪಂತ್, 22.2), 6–129 (ನಿತೀಶ್ ಕುಮಾರ್ ರೆಡ್ಡಿ, 27.3)
ಬೌಲಿಂಗ್: ಸ್ಟಾರ್ಕ್ 4–0–36–0; ಕಮಿನ್ಸ್ 11–4–31–1; ಬೋಲ್ಯಾಂಡ್ 13–3–42–4; ವೆಬ್‌ಸ್ಟರ್ 4–1–24–1

ನಿವೃತ್ತನಾಗುತ್ತಿಲ್ಲ: ರೋಹಿತ್ ಸ್ಪಷ್ಟನೆ

ಸಿಡ್ನಿ (ಎಎಫ್‌ಪಿ): 'ಕಳಪೆ ಫಾರ್ಮ್‌ನಿಂದಾಗಿ ಟೆಸ್ಟ್ ಸರಣಿಯ ಅಂತಿಮ ಪಂದ್ಯದಿಂದ ಹಿಂದೆಸರಿದಿದ್ದೇನೆ. ಇದರರ್ಥ ನಿವೃತ್ತಿ ಪಡೆಯುತ್ತಿದ್ದೇನೆ ಎಂದಲ್ಲ' ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ.

'ಈ ಆಟಕ್ಕೆ ನಾನು ಯಾವಾಗ ವಿದಾಯ ಹೇಳಬೇಕು ಎಂಬುದನ್ನು ನಿರ್ಧರಿಸುವುದು ಟೀಕಾಕಾರರಲ್ಲ' ಎಂದೂ 37 ವರ್ಷ ವಯಸ್ಸಿನ ರೋಹಿತ್ ಕಟುಮಾತುಗಳಲ್ಲಿ ಹೇಳಿದ್ದಾರೆ.

ರೋಹಿತ್ ಈ ಸರಣಿಯ ಐದು ಇನಿಂಗ್ಸ್‌ಗಳಲ್ಲಿ ಕೇವಲ 31 ರನ್ ಗಳಿಸಿದ್ದರು. ಅವರ ಗೈರಿನಲ್ಲಿ ಉಪನಾಯಕ ಜಸ್‌ಪ್ರೀತ್ ಬೂಮ್ರಾ ಮೊದಲ ಟೆಸ್ಟ್‌ನಲ್ಲಿ ನಾಯಕರಾಗಿದ್ದರು. ಈಗ ಕೊನೆಯ ಟೆಸ್ಟ್‌ನಲ್ಲೂ ತಂಡವನ್ನು ಮುನ್ನಡೆಸುತ್ತಿದ್ದಾರೆ.

ಟೆಸ್ಟ್ ಪಂದ್ಯಗಳ ತಮ್ಮ ಕೊನೆಯ 15 ಇನಿಂಗ್ಸ್‌ಗಳಲ್ಲಿ ರೋಹಿತ್ ಒಂದು ಅರ್ಧ ಶತಕ ಮಾತ್ರ ಗಳಿಸಿದ್ದಾರೆ. ಹತ್ತು ಬಾರಿ ಒಂದಂಕಿ ಮೊತ್ತಕ್ಕೆ ನಿರ್ಗಮಿಸಿದ್ದಾರೆ.



'ನಾನು ಮೊದಲಿನಂತೆ ರನ್‌ಗಳನ್ನು ಗಳಿಸುತ್ತಿಲ್ಲ. ಹೀಗಾಗಿ ಈ ಪಂದ್ಯಕ್ಕೆ ವಿಶ್ರಾಂತಿ ಪಡೆದೆ. ಇನ್ನು ಎರಡು ಅಥವಾ ಐದು ತಿಂಗಳ ಅವಧಿಯಲ್ಲಿ ಮತ್ತೆ ರನ್‌ಗಳನ್ನು ಗಳಿಸಲಾರೆ ಎಂಬ ಗ್ಯಾರಂಟಿಯೇನೂ ಇಲ್ಲ' ಎಂದು ಅವರು ಶನಿವಾರ ಸ್ಟಾರ್ ಸ್ಪೋರ್ಟ್ಸ್ ವಾಹಿನಿಗೆ ತಿಳಿಸಿದ್ದಾರೆ.

'ಪರಿಸ್ಥಿತಿ ಬದಲಾಗಬಹುದೆಂಬ ನಂಬಿಕೆಯಿದೆ. ಮೈಕ್ ಮುಂದೆ ಕುಳಿತು ಮಾತನಾಡುವವರಿಂದ ಅಥವಾ ಪೆನ್ನು, ಲ್ಯಾಪ್‌ಟಾಪ್ ಬಳಸಿ ಬರೆಯುವವರಿಂದ ಬದುಕು ಬದಲಾಗದು. ನಾನು ವರ್ಷಗಟ್ಟಲೆ ಆಡಿದ್ದೇನೆ' ಎಂದು ರೋಹಿತ್ ಮಾಧ್ಯಮದರಿಗೂ ತಿವಿದರು.

'ಯಾವಾಗ ನಿವೃತ್ತನಾಗಬೇಕು, ಯಾವಾಗ ಹಿಂದೆಸರಿಯಬೇಕು, ಯಾವಾಗ ನಾಯಕನಾಗಬೇಕು ಎಂದು ನಿರ್ಧರಿಸುವುದು ಅವರಲ್ಲ. ನಾನು ವಿವೇಚನೆ, ಪ್ರಬುದ್ಧತೆ ಹೊಂದಿರುವ ಆಟಗಾರ. ಇಬ್ಬರು ಮಕ್ಕಳ ತಂದೆ' ಎಂದರು.

ಲಯದಲ್ಲಿಲ್ಲ: 'ಆಯ್ಕೆಗಾರರೊಂದಿಗೆ ಮತ್ತು ಕೋಚ್ ಗೌತಮ್ ಗಂಭೀರ್ ಜೊತೆ ಚರ್ಚಿಸಿದ ನಂತರ ಹಿಂದೆಸರಿದೆ' ಎಂದು ರೋಹಿತ್ ಹೇಳಿದರು. ಪಂದ್ಯದ ಮುನ್ನಾದಿನದವರೆಗೂ ರೋಹಿತ್ ಆಡುವ ಬಗ್ಗೆ ಗಂಭೀರ್ ಖಚಿತಪಡಿಸಿರಲಿಲ್ಲ.

'ನಾನು ಕೋಚ್ ಮತ್ತು ಆಯ್ಕೆಗಾರರ ಜೊತೆ ನಡೆಸಿದ ಮಾತುಕತೆ ಸರಳವಾಗಿತ್ತು. ನನ್ನ ಬ್ಯಾಟ್ ರನ್ ಹರಿಸುತ್ತಿಲ್ಲ. ನಾನು ಲಯದಲ್ಲಿ ಇಲ್ಲ. ಇದು ಮಹತ್ವದ ಪಂದ್ಯ. ಲಯದಲ್ಲಿರುವ ಆಟಗಾರರ ಅಗತ್ಯ ನಮಗೆ ಇದೆ' ಎಂದು ರೋಹಿತ್ ಹೇಳಿದರು.

ಸವಾಲಿಗೆ ಸಜ್ಜಾದ ಪ್ರಸಿದ್ಧ ಕೃಷ್ಣ



ಸಿಡ್ನಿ: ಸುಮಾರು ಒಂದು ತಿಂಗಳಿಂದ ಆಸ್ಟ್ರೇಲಿಯಾ ಪ್ರವಾಸದಲ್ಲಿ ವೇಗದ ಬೌಲರ್ ಪ್ರಸಿದ್ಧ ಕೃಷ್ಣ ಅವರು ಪ್ರತಿಯೊಂದು ಟೆಸ್ಟ್ ತಾಣದಲ್ಲಿ ನೆಟ್ಸ್ ವೇಳೆ ಭಾರತ ತಂಡದ ಆಟಗಾರರೊಂದಿಗೆ ಶ್ರದ್ಧೆಯಿಂದ ತಾಲೀಮಿನಲ್ಲಿ ತೊಡಗಿದ್ದರು.

ಯುವ ಬೌಲರ್ ಹರ್ಷಿತ್ ರಾಣಾ ಅವರಿಗೆ ಬೇಗ ಅವಕಾಶ ದೊರೆಯಿತು. ಕೆಂಪು ಚೆಂಡಿನಲ್ಲಿ ತಮಗಿರುವ ಕೌಶಲದಿಂದ ಆಕಾಶ್ ದೀಪ್ ಸ್ಥಾನ ಪಡೆದರು. ಪ್ರಸಿದ್ಧ ಅವರು ಮಾತ್ರ ಹಿನ್ನೆಲೆಯಲ್ಲಿದ್ದು ತಮ್ಮ ಅವಕಾಶಕ್ಕಾಗಿ ಎದುರು ನೋಡುತ್ತಿದ್ದರು.

ರಾಣಾ ಭರವಸೆ ಮೂಡಿಸಿದರೂ, ಕೊನೆಗೆ ಪರದಾಡಿದರು. ಆಕಾಶ್ ದೀಪ್ ಅವರಿಗೆ ಬೆನ್ನುನೋವು ಕಾಡಿದ ಪರಿಣಾಮ ಪ್ರಸಿದ್ಧ ಅವರಿಗೆ ಕೊನೆಗೂ ಅಂತಿಮ ಟೆಸ್ಟ್‌ನಲ್ಲಿ ಅವಕಾಶ ಒಲಿಯಿತು. ಈ ಹೋರಾಟದ ಪಂದ್ಯದಲ್ಲಿ ಮೂರು ವಿಕೆಟ್ ಪಡೆಯುವ ಮೂಲಕ ಎದುರಾಳಿ ತಂಡದ ಮಧ್ಯಮ ಕ್ರಮಾಂಕಕ್ಕೆ ಪೆಟ್ಟು ನೀಡಿದರು.

ಪ್ರಸಿದ್ಧ ಅವರಿಗೆ ಲಯ ಕಂಡುಕೊಳ್ಳಲು ಕೆಲ ಓವರ್‌ಗಳು ಬೇಕಾದವು. ನಂತರ ಸ್ಟೀವ್ ಸ್ಮಿತ್, ಬ್ಯೂ ವೆಬ್‌ಸ್ಟರ್ ಮತ್ತು ಅಲೆಕ್ಸ್ ಕ್ಯಾರಿ ಅವರಿಗೆ ಪೆವಿಲಿಯನ್ ದಾರಿ ತೋರಿಸಿದರು. ಆಸ್ಟ್ರೇಲಿಯಾದ ನಾಲ್ಕು ಅಗ್ರ ಬ್ಯಾಟರ್‌ಗಳ ಪೈಕಿ ಮೂವರ ವಿಕೆಟ್ ಪಡೆದು ಸಂಭ್ರಮಿಸಿದರು. ಪ್ರಮುಖ ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಗೈರಿನಲ್ಲಿ ಗಮನ ಸೆಳೆಯುವ ಪ್ರದರ್ಶನ ನೀಡಿ, ತಮ್ಮ ಅವಕಾಶವನ್ನು ಸಮರ್ಥಿಸಿಕೊಂಡರು.

'ನಾನು ಎಲ್ಲಿ ಬೌಲ್ ಮಾಡುತ್ತಿದ್ದೆ, ನನ್ನ ಲೆಂಗ್ತ್ ಸರಿಯಾಗಿದೆಯೇ ಎಂದು ಊಟಕ್ಕೆ ಹೋಗುವಾಗ ಯೋಚಿಸಿದ್ದೆ. ಲಂಚ್ ವೇಳೆ ಅನಾಲಿಸ್ಟ್ ಜೊತೆ ಕುಳಿತು ಚರ್ಚಿಸಿದೆ. ನಾನು ಎಲ್ಲಿ ಬೌಲ್ ಮಾಡಬೇಕೆಂದಿದ್ದೆ ಎಂಬುದನ್ನು ತಿಳಿದುಕೊಂಡು, ನಂತರ ತಿದ್ದಿಕೊಂಡಿದ್ದು ಫಲ ನೀಡಿತು' ಎಂದು ಪತ್ರಿಕಾಗೋಷ್ಠಿಯಲ್ಲಿ ಪ್ರಸಿದ್ಧ ಹೇಳಿದರು.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ

ಕರ್ನಾಟಕಕ್ಕೆ ನಾಗಾಲ್ಯಾಂಡ್ ಸವಾಲು

ಅಹಮದಾಬಾದ್: ಮಯಂಕ್ ಅಗರವಾಲ್ ಸಾರಥ್ಯದ ಕರ್ನಾಟಕ ತಂಡವು ಭಾನುವಾರ ವಿಜಯ್ ಹಜಾರೆ ಟ್ರೋಫಿ ಟೂರ್ನಿಯ 'ಸಿ' ಗುಂಪಿನ ಕೊನೆಯ ಪಂದ್ಯದಲ್ಲಿ ನಾಗಾಲ್ಯಾಂಡ್ ತಂಡದ ಸವಾಲನ್ನು ಎದುರಿಸಲಿದೆ.

ಕರ್ನಾಟಕ ಟೂರ್ನಿಯಲ್ಲಿ ಆಡಿರುವ 6 ಪಂದ್ಯಗಳ ಪೈಕಿ ಐದನ್ನು ಗೆದ್ದಿದೆ. ಸತತ ನಾಲ್ಕು ಪಂದ್ಯಗಳನ್ನು ಗೆದ್ದಿದ್ದ ಮಯಂಕ್ ಪಡೆ ಹೈದರಾಬಾದ್ ವಿರುದ್ಧ ಮಾತ್ರ ಪರಾಭವಗೊಂಡಿತ್ತು. ಕಳೆದ ಪಂದ್ಯದಲ್ಲಿ ಸೌರಾಷ್ಟ್ರ ತಂಡವನ್ನು 60 ರನ್‌ಗಳಿಂದ ಮಣಿಸಿತ್ತು.

ಕೊನೆಯ ಪಂದ್ಯವನ್ನು ಗೆದ್ದು ಗುಂಪು ಹಂತದ ವ್ಯವಹಾರವನ್ನು ಅಗ್ರಸ್ಥಾನದೊಂದಿಗೆ ಮುಗಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸುವತ್ತ ಕರ್ನಾಟಕ ತಂಡ ಚಿತ್ತ ಹರಿಸಿದೆ. ಒಟ್ಟು 20 ಅಂಕಗಳೊಂದಿಗೆ ತಂಡವು ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ.

ಅಷ್ಟೇ ಅಂಕ ಗಳಿಸಿರುವ ಪಂಜಾಬ್ ತಂಡವು ಹೆಚ್ಚು ನೆಟ್ ರನ್ ರೇಟ್ ಹೊಂದಿ ಮೊದಲ ಸ್ಥಾನದಲ್ಲಿದೆ. ಪಂಜಾಬ್ ತಂಡವು ಭಾನುವಾರ ಪುದುಚೇರಿ ತಂಡವನ್ನು ಎದುರಿಸಲಿದೆ. ಶ್ರೇಯಸ್ ಅಯ್ಯರ್ ನಾಯಕತ್ವದ ಮುಂಬೈ ತಂಡವು 16 ಅಂಕಗಳೊಂದಿಗೆ ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದೆ.


ಮಯಂಕ್ ಅಗರವಾಲ್

ಉತ್ತಮ ಲಯದಲ್ಲಿರುವ ಮಯಂಕ್ ಟೂರ್ನಿಯಲ್ಲಿ ಒಟ್ಟು 497 ರನ್ ಕಲೆ ಹಾಕಿ, ಎರಡನೇ ಗರಿಷ್ಠ ಸ್ಕೋರರ್ ಎನಿಸಿಕೊಂಡಿದ್ದಾರೆ. ಒಂದು ಅರ್ಧಶತಕ ಮತ್ತು ಮೂರು ಶತಕಗಳು ಅದರಲ್ಲಿವೆ. ವಿದರ್ಭ ತಂಡದ ಕರುಣ್ ನಾಯರ್ (542 ರನ್) ಅಗ್ರಸ್ಥಾನದಲ್ಲಿದ್ದಾರೆ.

ತಲಾ ಒಂದು ಶತಕ ಹೊಡೆದಿರುವ ಕರ್ನಾಟಕದ ಆರ್. ಸ್ಮರಣ್ ಹಾಗೂ ಕೆ.ಎಲ್. ಶ್ರೀಜಿತ್ ಕೂಡಾ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಕೆ.ವಿ. ಅನೀಶ್ ಕಳೆದ ಪಂದ್ಯದಲ್ಲಿ 92 ರನ್ ಗಳಿಸಿ ಮಿಂಚಿದ್ದಾರೆ. ಬೌಲಿಂಗ್‌ನಲ್ಲಿ ವಿ. ಕೌಶಿಕ್ ಮತ್ತು ಶ್ರೇಯಸ್ ಗೋಪಾಲ್ ಉತ್ತಮ ಲಯದಲ್ಲಿದ್ದಾರೆ.

ನಾಗಾಲ್ಯಾಂಡ್ ತಂಡವು ಆಡಿರುವ ಆರು ಪಂದ್ಯಗಳಲ್ಲಿ ಕೇವಲ ಒಂದನ್ನು ಮಾತ್ರ ಗೆದ್ದಿದೆ.

ಪಂದ್ಯ ಆರಂಭ: ಬೆಳಿಗ್ಗೆ 9
ಮಾಹಿತಿ: ಬಿಸಿಸಿಐ.ಟಿವಿ

ಬಿಸಿಸಿಐ ಕಾರ್ಯದರ್ಶಿ ಸ್ಥಾನ ವಹಿಸಲು ಸಜ್ಜಾದ ಸೈಕಿಯಾ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಕಾರ್ಯದರ್ಶಿ ಸ್ಥಾನಕ್ಕೆ ದೇವಜಿತ್ ಸೈಕಿಯಾ ಅವರು ಶನಿವಾರ ನಾಮಪತ್ರ ಸಲ್ಲಿಸಿದರು. ಇದೇ ವೇಳೆ ಪ್ರಭತೇಜ್ ಭಾಟಿಯಾ ಅವರು ಖಜಾಂಚಿ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಸ್ಥಾನಗಳಿಗೆ ಇವರಿಬ್ಬರನ್ನು ಬಿಟ್ಟು ಬೇರೆ ನಾಮಪತ್ರ ಸಲ್ಲಿಕೆಯಾಗಿಲ್ಲ.

ಮಹಾರಾಷ್ಟ್ರದ ನೂತನ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ಸಚಿವ ರಾಗಿರುವ ಕಾರಣ ಆಶಿಷ್ ಶೆಲ್ಲಾರ್ ಅವರು ಬಿಸಿಸಿಐ ಖಜಾಂಚಿ ಸ್ಥಾನಕ್ಕೆ ತ್ಯಾಗ ಪತ್ರ ನೀಡಿದ್ದರು. ತೆರವಾದ ಈ ಸ್ಥಾನಕ್ಕೆ ಛತ್ತೀಸಗಢ ರಾಜ್ಯ ಕ್ರಿಕೆಟ್ ಸಂಘದ ಭಾಟಿಯಾ ನಾಮಪತ್ರ ಸಲ್ಲಿಸಿದ್ದಾರೆ.

ಜಯ್ ಶಾ ಅವರು ಡಿಸೆಂಬರ್ ಒಂದರಂದು ಐಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಬಿಸಿಸಿಐ ಕಾರ್ಯದರ್ಶಿ ಸ್ಥಾನ ತೆರವಾಗಿದ್ದು, ಸೈಕಿಯಾ ಅವರು ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರು ಸೈಕಿಯಾ ಅವರನ್ನು ಹಂಗಾಮಿ ಕಾರ್ಯದರ್ಶಿ ಸ್ಥಾನಕ್ಕೆ ನಾಮನಿರ್ದೇಶನ ಮಾಡಿದ್ದರು.


ದೇವಜಿತ್ ಸೈಕಿಯಾ

ಬಿಸಿಸಿಐ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿರುವ ಚುನಾವಣಾ ವೇಳಾಪಟ್ಟಿಯ ಪ್ರಕಾರ ಈ ಎರಡು ಸ್ಥಾನಗಳಿಗೆ ನಾಮಪತ್ರ ಸಲ್ಲಿಸಲು ಶನಿವಾರ ಸಂಜೆ 4 ಗಂಟೆಯವರೆಗೆ ಅವಕಾಶವಿತ್ತು. ಮೂಲಗಳು ಪ್ರಕಾರ ಬೇರೆ ಯಾರೂ ನಾಮಪತ್ರ ಸಲ್ಲಿಸಿಲ್ಲ.

ರಯಾನ್ ದ್ವಿಶತಕ: ದಕ್ಷಿಣ ಆಫ್ರಿಕಾ ಬೃಹತ್ ಮೊತ್ತ

ಕೇಪ್‌ಟೌನ್ (ಎಎಫ್‌ಪಿ): ರಯಾನ್ ರಿಕೆಲ್ಟನ್ (259; 343ಎ) ಅವರ ದ್ವಿಶತಕದ ನೆರವಿನಿಂದ ಆತಿಥೇಯ ದಕ್ಷಿಣ ಆಫ್ರಿಕಾ ತಂಡವು ಪಾಕಿಸ್ತಾನ ವಿರುದ್ಧದ ಎರಡನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ 615 ರನ್‌ಗಳ ಬೃಹತ್ ಮೊತ್ತ ಕಲೆಹಾಕಿದೆ.

ಮೊದಲ ದಿನ ಶತಕ ದಾಖಲಿಸಿ ಅಜೇಯವಾಗಿದ್ದ ಆರಂಭಿಕ ಆಟಗಾರ ರಿಕೆಲ್ಟನ್, ಎರಡನೇ ದಿನವಾದ ಶನಿವಾರ ಚೊಚ್ಚಲ ದ್ವಿಶತಕ ಪೂರೈಸಿದರು. ಅವರ ಇನಿಂಗ್ಸ್ 29 ಬೌಂಡರಿ ಮತ್ತು 3 ಸಿಕ್ಸರ್ ಒಳಗೊಂಡಿತ್ತು. ಉಳಿದಂತೆ ನಾಯಕ ತೆಂಬಾ ಬವುಮಾ (106;179ಎ) ಮತ್ತು ಕೈಲ್ ವೆರೆಯನ್ (100;147ಎ) ಶತಕ ದಾಖಲಿಸಿದರು.


ದ್ವಿಶತಕ ಗಳಿಸಿದ ರಯಾನ್ ರಿಕೆಲ್ಟನ್

ಪಾಕಿಸ್ತಾನ ತಂಡ 21 ಓವರ್‌ಗಳಲ್ಲಿ 3 ವಿಕೆಟ್‌ಗೆ 64 ರನ್ ಗಳಿಸಿದ್ದು, ಸಂಕಷ್ಟದ ಹಾದಿಯಲ್ಲಿದೆ.

ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ: 141.3 ಓವರ್‌ಗಳಲ್ಲಿ 615 (ರಯಾನ್ ರಿಕೆಲ್ಟನ್ 259, ತೆಂಬಾ ಬವುಮಾ 106, ಕೈಲ್ ವೆರೆಯನ್ 100, ಮಾರ್ಕೊ ಯಾನ್ಸನ್ 62; ಮೊಹಮ್ಮದ್ ಅಬ್ಬಾಸ್ 94ಕ್ಕೆ 3, ಸಲ್ಮಾನ್ ಅಘಾ 148ಕ್ಕೆ 3). ಪಾಕಿಸ್ತಾನ: 21 ಓವರ್‌ಗಳಲ್ಲಿ 3 ವಿಕೆಟ್‌ಗೆ 64 (ಬಾಬರ್ ಅಜಂ ಔಟಾಗದೇ 31; ಕಗಿಸೊ ರಬಾಡ 9ಕ್ಕೆ 2).



ಓಕ್ಸ್ ರೇಸ್
ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ ಬೆಂಗಳೂರು ಓಕ್ಸ್ ಗ್ರೇಡ್-2 ರೇಸ್‌ನ ವಿಜೇತ 'ಕ್ವೀನ್ ಆಫ್ ಕಿಂಗ್ಸ್' ಕುದುರೆಯ ಮಾಲೀಕ ರಾಜೇಶ್ ನರೇಡು ಅವರಿಗೆ ಬೆಂಗಳೂರು ಬುಕ್‌ಮೇಕರ್ಸ್ ಅಸೋಸಿಯೇಷನ್‌ನ ಪ್ರತಿನಿಧಿ ಹರೀಶ್ ಅವರು ಟ್ರೋಫಿಯನ್ನು ಪ್ರದಾನ ಮಾಡಿದರು. ಬಿಟಿಸಿ ಅಧ್ಯಕ್ಷ ಮತ್ತು ಹಿರಿಯ ಸ್ಟೀವರ್ಡ್ ಮಂಜುನಾಥ್ ರಮೇಶ್, ವ್ಯವಸ್ಥಾಪನಾ ಸಮಿತಿ ಸದಸ್ಯ ಹರೀಶ್ ನಾಯಕ್, ಸಿ.ಎ. ಪ್ರಶಾಂತ್ ಚಿತ್ರದಲ್ಲಿದ್ದಾರೆ ಪ್ರಜಾವಾಣಿ ಚಿತ್ರ:ಎಸ್.ಕೆ. ದಿನೇಶ್

ಬ್ರಿಸ್ಬೇನ್ ಟೆನಿಸ್: ಫೈನಲ್‌ಗೆ ಅರಿನಾ ಸಬಲೆಂಕಾ

ಬ್ರಿಸ್ಬೇನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬ ಲೆಂಕಾ ಅವರು ರಷ್ಯಾದ ಉದಯೋನ್ಮುಖ ತಾರೆ ಮೀರಾ ಅಂದ್ರಯೇವಾ ಅವರ ಸವಾಲನ್ನು ನೇರ ಸೆಟ್‌ಗಳಿಂದ ಬದಿಗೊತ್ತಿ, ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟರು. ಪುರುಷರ ವಿಭಾಗ ದಲ್ಲಿ ಹಾಲಿ ಚಾಂಪಿಯನ್ ಗ್ರಿಗೊರ್ ಡಿಮಿ ಟ್ರೊಫ್ ಅವರು ಪೃಷ್ಠದ ನೋವಿನಿಂದ ಸೆಮಿಫೈನಲ್ ಪಂದ್ಯದ ಅರ್ಧದಲ್ಲೇ ಹಿಂದೆಸರಿದರು.

ಆಸ್ಟ್ರೇಲಿಯಾ ಓಪನ್‌ಗೆ ಸುಮಾರು ಒಂದು ವಾರ ಉಳಿದಿರುವಂತೆ, ಬೆಲಾರಸ್‌ನ ಆಟಗಾರ್ತಿ 6–3, 6–2 ರಿಂದ ಜಯಗಳಿಸಿ ತಮ್ಮ ಸಿದ್ಧತೆಯ ಪರಿಚಯ ನೀಡಿದರು. ಕಳೆದ ವರ್ಷ ಈ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿದ್ದ ಸಬಲೆಂಕಾ ಮೊದಲ ಸೆಟ್‌ನಲ್ಲಿ ಒಮ್ಮೆ, ಎರಡನೇ ಸೆಟ್‌ನಲ್ಲಿ ಎರಡು ಬಾರಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು.

ಸಬಲೆಂಕಾ ಫೈನಲ್‌ನಲ್ಲಿ ರಷ್ಯಾದ ಕ್ವಾಲಿಫೈಯರ್ ಪೊಲಿನಾ ಕುದೆರ್ ಮೆಟೊವಾ ಅವರನ್ನು ಎದುರಿಸಲಿದ್ದಾರೆ. ರಷ್ಯನ್ ಆಟಗಾರ್ತಿ ಟೂರ್ನಿಯಲ್ಲಿ ಅಮೋಘ ಓಟವನ್ನು ಮುಂದುವರಿಸಿ ಉಕ್ರೇನಿನ ಅನ್ಹೆಲಿನಾ ಕಲಿನಿನಾ ಅವರನ್ನು 6–4, 6–3 ರಿಂದ ಸೋಲಿಸಿದರು.

ಬೆನ್ನಿನ ಕೆಳಭಾಗದ ತೀವ್ರ ನೋವಿನಿಂದಾಗಿ ಬಲ್ಗೇರಿಯಾದ ದಿಮಿ ಟ್ರೊಫ್ ಅವರು ಪುರುಷರ ವಿಭಾ ಗದ ಸಿಂಗಲ್ಸ್ ಸೆಮಿಫೈನಲ್ ಪಂದ್ಯದಲ್ಲಿ ನಿವೃತ್ತರಾದರು. ಆಗ ಝೆಕ್ ಗಣರಾಜ್ಯದ ಅವರ ಎದುರಾಳಿ, ಶ್ರೇಯಾಂಕರಹಿತ ಆಟಗಾರ ಇರ್ಝಿ ಲೆಹೆಸ್ಕಾ 6–4, 4–4ರಲ್ಲಿ ಮುಂದಿದ್ದರು. ದಿಮಿಟ್ರೊಫ್ ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿದ್ದಾರೆ. ಲೆಹೆಸ್ಕಾ ಭಾನುವಾರ ನಡೆಯುವ ಫೈನಲ್‌ನಲ್ಲಿ ಅಮೆರಿಕದ ಅಜಾನುಬಾಹು ಆಟಗಾರ ರೀಲಿ ಒಪೆಲ್ಕಾ ಅವರನ್ನು ಎದುರಿಸಲಿದ್ದಾರೆ.

ಮಹಿಳಾ ಕ್ರಿಕೆಟ್: ಕರ್ನಾಟಕಕ್ಕೆ ಸೋಲು

ಬೆಂಗಳೂರು: ಲಾವಣ್ಯಾ ಚಲನಾ (97;143ಎ) ಮೂರು ರನ್‌ಗಳಿಂದ ಶತಕ ವಂಚಿತರಾದರು. ಆದರೆ, ಅವರ ಉತ್ತಮ ಬ್ಯಾಟಿಂಗ್ ಹೊರತಾಗಿಯೂ ಕರ್ನಾಟಕ ಮಹಿಳಾ ತಂಡ ಬಿಸಿಸಿಐ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಮಹಾರಾಷ್ಟ್ರ ತಂಡದ ಎದುರು 4 ವಿಕೆಟ್‌ಗಳಿಂದ ಸೋಲು ಅನುಭವಿಸಿತು.

ಸೂರತ್‌ನ ವಿಶಾಲ್ ಕ್ರಿಕೆಟ್ ಮೈದಾನದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕರ್ನಾಟಕ ತಂಡ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್‌ಗೆ 217 ರನ್ ಗಳಿಸಿತು. ಮಹಾರಾಷ್ಟ್ರ 45.2 ಓವರ್‌ಗಳಲ್ಲಿ 6 ವಿಕೆಟ್‌ಗೆ 220 ರನ್ ಗಳಿಸಿ ಜಯ ಸಾಧಿಸಿತು. ಮಹಾರಾಷ್ಟ್ರ ತಂಡದ ಶಾಲ್ಮಲಿ ಕ್ಷತ್ರಿಯ ಔಟಾಗದೇ 78 ರನ್ ಹೊಡೆದು ಗೆಲುವಿನ ರೂವಾರಿಯಾದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 50 ಓವರ್‌ಗಳಲ್ಲಿ 8ಕ್ಕೆ 217 (ಎಚ್. ಭಾವಿಕಾ ರೆಡ್ಡಿ 35, ಲಾವಣ್ಯಾ ಚಲನಾ 97, ಕಾರ್ಣಿಕಾ ಕಾರ್ತಿಕ್ 47, ಜಾನ್ವವಿ ವಿರ್ಕಿರ್ 15ಕ್ಕೆ 2, ಶೃತಿ ಎಂ. 46ಕ್ಕೆ 2). ಮಹಾರಾಷ್ಟ್ರ 45.2 ಓವರ್‌ಗಳಲ್ಲಿ 6ಕ್ಕೆ 220 (ಶಾಲ್ಮಲಿ ಕ್ಷತ್ರಿಯ ಔಟಾಗದೇ 78, ಪ್ರಿಯಾ ಎಸ್. ಚೌಹಾಣ್ 45ಕ್ಕೆ 2, ವಂದಿತಾ ಕೆ.ರಾವ್ 31ಕ್ಕೆ 2). ಫಲಿತಾಂಶ: ಮಹಾರಾಷ್ಟ್ರಕ್ಕೆ 4 ವಿಕೆಟ್‌ಗಳ ಜಯ

ಜಮ್‌ಷೆಡ್‌ಪುರಕ್ಕೆ ಮಣಿದ ಬಿಎಫ್‌ಸಿ

ಜಮ್‌ಷೆಡ್‌ಪುರ (ಪಿಟಿಐ): ಕೊನೆಯ ಕ್ಷಣದಲ್ಲಿ ಗಳಿಸಿದ ಗೋಲುಗಳ ನೆರವಿನಿಂದ ಜಮ್‌ಷೆಡ್‌ಪುರ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ 2–1 ಗೋಲುಗಳಿಂದ ಬೆಂಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಇಲ್ಲಿನ ಜೆಆರ್‌ಡಿ ಟಾಟಾ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ಶನಿವಾರ ನಡೆದ ಪಂದ್ಯದ ಮಧ್ಯಂತರದ ವೇಳೆ ಬಿಎಫ್‌ಸಿ ತಂಡವು 1–0 ಮುನ್ನಡೆ ಪಡೆದಿತ್ತು. ಆದರೆ, ಉತ್ತರಾರ್ಧದಲ್ಲಿ ಚುರುಕಿನ ಆಟವಾಡಿದ ಆತಿಥೇಯರು ಎರಡು ಗೋಲು ಗಳಿಸಿ ಜಯಭೇರಿ ಬಾರಿಸಿದರು.

ಜಮ್‌ಷೆಡ್‌ಪುರ ತಂಡದ ಪರ ಜೋರ್ಡಾನ್ ಮರ್ರೆ (84ನೇ ನಿಮಿಷ) ಮತ್ತು ಮುಹಮ್ಮದ್ ಒವೈಸ್ (90ನೇ ನಿಮಿಷ) ಗೋಲು ಹೊಡೆದರು. ಬೆಂಗಳೂರು ತಂಡದ ಪರ ಅಲ್ಬಿನೊ ನೊಗುಯೆರಾ (19ನೇ ನಿಮಿಷ) ಏಕೈಕ ಗೋಲು ತಂದಿತ್ತರು.


ಗೋಲು ಗಳಿಸಿದ ಸಂಭ್ರಮದಲ್ಲಿ ಜಮ್‌ಷೆಡ್‌ಪುರ ತಂಡದ ಆಟಗಾರರು

ಈ ಗೆಲುವಿನೊಂದಿಗೆ ಜಮ್‌ಷೆಡ್‌ಪುರ ತಂಡವು 24 ಅಂಕಗಳೊಂದಿಗೆ ನಾಲ್ಕನೇ ಸ್ಥಾನಕ್ಕೆ ಏರಿದೆ. ಬಿಎಫ್‌ಸಿ ತಂಡವು 27 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿ ಮುಂದುವರಿದಿದೆ.

ದಿನದ ಮತ್ತೊಂದು ಪಂದ್ಯದಲ್ಲಿ ಗೋವಾ ಎಫ್‌ಸಿ ತಂಡವು 4–2 ಗೋಲುಗಳಿಂದ ಒಡಿಶಾ ಎಫ್‌ಸಿ ತಂಡವನ್ನು ಸೋಲಿಸಿತು.